ಶನಿವಾರ, ನವೆಂಬರ್ 1, 2025 | ₹ 7.00
prajavani.net prajavani
www.prajavani.net
ಪ್ರಜಾ ವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಅಭಿಷೇಕ್ ಅರ್ಧಶತಕ

ಭಾರತದ ಅಭಿಷೇಕ್ ಶರ್ಮಾ (68 ರನ್) ಶುಕ್ರವಾರ ಆಸ್ಟ್ರೇಲಿಯಾ ವಿರುದ್ಧ 2ನೇ ಟಿ20 ಪಂದ್ಯದಲ್ಲಿ ಅರ್ಧಶತಕ ದಾಖಲಿಸಿದರು. ಆಸ್ಟ್ರೇಲಿಯಾ 4 ವಿಕೆಟ್‌ಗಳಿಂದ ಜಯ ಸಾಧಿಸಿತು





ಪ್ರಾರ್ಥನೆ

ಟಿಬೆಟಿಯನ್ ಧರ್ಮಗುರು ದಲೈಲಾಮಾ ಅವರ ದೀರ್ಘಾಯುಷ್ಯಕ್ಕಾಗಿ ಹಿಮಾಚಲ ಪ್ರದೇಶದ ಧರ್ಮಶಾಲಾದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಲಾಯಿತು

ಚಿಟಿಕೆ ಸುದ್ದಿ

ಹುಲಿ ದಾಳಿ: ಮತ್ತೊಬ್ಬ ರೈತ ಬಲಿ


ದೊಡ್ಡನಿಂಗಯ್ಯ

ಸರಗೂರು (ಮೈಸೂರು ಜಿಲ್ಲೆ): ತಾಲ್ಲೂಕಿನ ಮೊಳೆಯೂರು ವಲಯ ಅರಣ್ಯ ವ್ಯಾಪ್ತಿಯಲ್ಲಿ ಶುಕ್ರವಾರ ಹುಲಿ ದಾಳಿಯಿಂದ ತಾಲ್ಲೂಕಿನ ಕೂಡಿಗಿ ಗ್ರಾಮದ ರೈತ ದೊಡ್ಡನಿಂಗಯ್ಯ (65) ಮೃತಪಟ್ಟಿದ್ದಾರೆ. ಇದು ವಾರದ ಅಂತರದಲ್ಲಿ ನಡೆದಿರುವ 2ನೇ ಘಟನೆಯಾಗಿದೆ.

ಅರಣ್ಯದಂಚಿನ ಕುರ್ಣೇಗಾಲದ ಜಮೀನಿನಲ್ಲಿ ಹಸು ಮೇಯಿಸುತ್ತಿದ್ದ ರೈತನ ಮೇಲೆ ದಾಳಿ ನಡೆಸಿರುವ ಹುಲಿ, ದೇಹವನ್ನು ಎಳೆದುಕೊಂಡು ಆನೆ ಕಂದಕದಲ್ಲಿ ಬಿಟ್ಟಿದೆ. ತಾಲ್ಲೂಕಿನಲ್ಲಿ ತಿಂಗಳಲ್ಲಿ ಹುಲಿ ದಾಳಿ ನಡೆಸಿದ ಮೂರನೇ ಪ್ರಕರಣ ಇದಾಗಿದೆ. ಹುಲಿಗಳನ್ನು ಸೆರೆ ಹಿಡಿಯಬೇಕು ಎಂದೂ ಆಗ್ರಹಪಡಿಸಿದ್ದಾರೆ.


ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಮೃತಪಟ್ಟ ಕಾಡೆಮ್ಮೆ

ಉಸಿರಾಟ ಸಮಸ್ಯೆ ಕಾಡೆಮ್ಮೆ ಸಾವು

ಆನೇಕಲ್: ಪ್ರಾಣಿ ವಿನಿಮಯ ಯೋಜನೆಯಡಿ ಬನ್ನೇರುಘಟ್ಟ ಜೈವಿಕ ಉದ್ಯಾನದಿಂದ ಹೈದರಾಬಾದ್ ನೆಹರೂ ಜೈವಿಕ ಉದ್ಯಾನಕ್ಕೆ ಸ್ಥಳಾಂತರಿಸಲು ಕ್ವಾರೆಂಟೈನ್‌ಗೆ ಸಾಗಿಸುವ ವೇಳೆ ಹೆಣ್ಣು ಕಾಡೆಮ್ಮೆ (ಗೌರ್) ಶುಕ್ರವಾರ ಮೃತಪಟ್ಟಿದೆ.

ಪ್ರಾಥಮಿಕ ಹಂತದಲ್ಲಿ ಕಾಡೆಮ್ಮೆಯನ್ನು ಕ್ವಾರೆಂಟೈನ್ ಮಾಡಿ ಆರೋಗ್ಯ ತಪಾಸಣೆಗೆ ನಡೆಸಬೇಕಿತ್ತು. ಅದಕ್ಕಾಗಿ ಕ್ರೇನ್ ಮೂಲಕ ಸಾಗಿಸುವಾಗ ಬೆಲ್ಟ್ ಹಾಕುವ ಸಮಯದಲ್ಲಿ ಗಾಬರಿ ಮತ್ತು ಉಸಿರಾಟದ ಸಮಸ್ಯೆಯಿಂದ ಮೃತಪಟ್ಟಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ ತಿಳಿಸಿದ್ದಾರೆ.

ಲಘು ಭೂಕಂಪನ

ಹುಮನಾಬಾದ್ (ಬೀದರ್ ಜಿಲ್ಲೆ): ತಾಲ್ಲೂಕಿನ ಹಳ್ಳಿಖೇಡ್ (ಕೆ) ಹಾಗೂ ಇಟಗಾ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಲಘು ಭೂಕಂಪನ ಸಂಭವಿಸಿದೆ. ಇಟಗಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುದ್ನಾಳ ಗ್ರಾಮದಲ್ಲಿ ಶುಕ್ರವಾರ ನಸುಕಿನ 5:47ಕ್ಕೆ ಭೂಮಿ ಕಂಪಿಸಿದ್ದು, ರಿಕ್ಟರ್ ಮಾಪಕದಲ್ಲಿ 3.0 ತೀವ್ರತೆ ದಾಖಲಾಗಿದೆ. ಗುರುವಾರ ರಾತ್ರಿ 9.03ಕ್ಕೆ ಹಳ್ಳಿಖೇಡ್ (ಕೆ) ಗ್ರಾಮದಲ್ಲಿ ಭೂಮಿ ಕಂಪಿಸಿದ ಅನುಭವವಾಗಿದೆ.

‘ಎಸ್‌ಐಟಿ ತನಿಖೆ ತಾತ್ಕಾಲಿಕ ಸ್ಥಗಿತ’

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಪ್ರಕರಣಗಳ ಕುರಿತು ನಡೆಸುತ್ತಿದ್ದ ತನಿಖೆಯನ್ನು ಎಸ್‌ಐಟಿ ಸ್ಥಗಿತಗೊಳಿಸಿದೆ. ಹೈಕೋರ್ಟ್ ಮಧ್ಯಂತರ ತಡೆ ನೀಡಿರುವ ಕಾರಣ ನಿಲ್ಲಿಸಲಾಗಿದೆ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

‘ನಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಮತ್ತು ಸಂಬಂಧಿಸಿದ ವಿಚಾರಣೆಯನ್ನು ಸಮಾಪ್ತಿಗೊಳಿಸಲು ಆದೇಶಿಸಬೇಕು’ ಎಂದು ಗಿರೀಶ ಮಟ್ಟೆಣ್ಣವರ, ಮಹೇಶ್ ಶೆಟ್ಟಿ ತಿಮರೋಡಿ, ಜಯಂತ್ ಟಿ. ಮತ್ತು ವಿಠ್ಠಲ ಗೌಡ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.


‘ಕೋರ್ಟ್ ಆದೇಶವು ತನಿಖೆಗೆ ಹಿನ್ನಡೆಯಾಗುವುದಿಲ್ಲ. ಇದು ತಾತ್ಕಾಲಿಕ ವಿರಾಮವಾಗಿದೆ. ಎಸ್‌ಐಟಿ ಕೋರ್ಟ್ ಎದುರು ತನ್ನ ವಾದ ಮಂಡಿಸಿಲ್ಲ. ಈ ಬೆಳವಣಿಗೆಯು ನಿರ್ಣಾಯಕ ಹಂತ ಎಂದು ಪರಿಗಣಿತವಾಗುವುದಿಲ್ಲ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಅಲೆಮಾರಿಗಳಿಗೆ ಶೇ 1 ಒಳಮೀಸಲು’

ಸಾಮಾಜಿಕ ನ್ಯಾಯ ಕಲ್ಪಿಸಲು ಬದ್ಧ: ನಿಯೋಗಕ್ಕೆ ಸಿ.ಎಂ ಸಿದ್ದರಾಮಯ್ಯ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಲೆಮಾರಿ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಕಲ್ಪಿಸಲು ಸರ್ಕಾರ ಬದ್ಧವಾಗಿದೆ. ಯಾವ ರೀತಿಯಲ್ಲಿ ಶೇ 1 ರಷ್ಟು ಒಳಮೀಸಲಾತಿ ಕಲ್ಪಿಸಬಹುದು ಎಂಬ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದು ಕೊಳ್ಳುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.



ಒಳ ಮೀಸಲಾತಿ ಕುರಿತು ಅಲೆಮಾರಿ ಒಕ್ಕೂಟದ ಪದಾಧಿಕಾರಿಗಳ ನಿಯೋಗದ ಮನವಿಯನ್ನು ಶುಕ್ರವಾರ ಸ್ವೀಕರಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಈ ಬಗ್ಗೆ ಕಾನೂನು ತಜ್ಞರ ಜತೆ ಚರ್ಚೆ ನಡೆಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು’ ಎಂದರು.

‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸುಧಾರಣೆಗೆ ಎಸ್‌ಸಿಎಸ್‌ಪಿ ಟಿಎಸ್‌ಪಿ ಕಾರ್ಯಕ್ರಮ ಜಾರಿಗೊಳಿಸಿದ್ದೇ ನಮ್ಮ ಸರ್ಕಾರ. ಪ್ರತಿಯೊಂದಕ್ಕೂ ಪರಿಹಾರ ಸಿಗಲಿ ಎನ್ನುವುದೇ ಸರ್ಕಾರದ ಉದ್ದೇಶ. ಯಾವುದೇ ಜಾತಿಯೊಳಗೆ ಇನ್ನೊಂದು ಜಾತಿ ಸೇರಿಸುವ, ಯಾವುದೇ ಸಮುದಾಯಕ್ಕೆ ಅನ್ಯಾಯ ಮಾಡುವ ಉದ್ದೇಶ ಸರ್ಕಾರಕ್ಕಿಲ್ಲ. ನಿಮ್ಮ ಸಮಸ್ಯೆಗೂ ಪರಿಹಾರ ಹುಡುಕಿ, ನ್ಯಾಯ ಒದಗಿಸುತ್ತೇವೆ’ ಎಂದು ಹೇಳಿದರು.

‘ಒಳಮೀಸಲಾತಿ ಕಲ್ಪಿಸಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಿದೆ. ಈಗ ಉಂಟಾಗಿರುವ ಗೊಂದಲಗಳಿಗೆ ಆದ್ಯತೆ ಮೇರೆಗೆ ಪರಿಹಾರ ಕಂಡುಕೊಳ್ಳಲು ಸರ್ಕಾರ ಬದ್ಧವಾಗಿದೆ’ ಎಂದೂ ಸಿದ್ದರಾಮಯ್ಯ ತಿಳಿಸಿದರು.

ಅಲೆಮಾಗಳ ಬೇಡಿಕೆ: ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗದ ಶಿಫಾರಸಿನಂತೆ ಒಳಮೀಸಲಾತಿಯಲ್ಲಿ ಅಲೆಮಾರಿ ಸಮುದಾಯಕ್ಕೆ ಎ ಪ್ರವರ್ಗದಡಿ ಪ್ರತ್ಯೇಕ ಶೇ 1 ರಷ್ಟು ಮೀಸಲಾತಿ ನೀಡಬೇಕು. ಅಲೆಮಾರಿ ಸಮುದಾಯಗಳ ಅಭಿವೃದ್ಧಿಗೆ ಪ್ರತ್ಯೇಕ ನಿಗಮ ರಚನೆ ಹಾಗೂ ಅಲೆಮಾರಿ ಸಮುದಾಯಗಳಿಗೆ ವಿಶೇಷ ಆರ್ಥಿಕ ಪ್ಯಾಕೇಜ್ ನೀಡಬೇಕು ಎಂದು ಮನವಿ ಮಾಡಿದ್ದಾಗಿ ಅಸ್ಪೃಶ್ಯ ಅಲೆಮಾರಿ ಸಮುದಾಯಗಳ ಮಹಾ ಒಕ್ಕೂಟದ ಶೇಷಪ್ಪ ಮತ್ತು ಸಾಮಾಜಿಕ ಹೋರಾಟಗಾರ ನೂರ್ ಶ್ರೀಧರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ನೀವು ಇಟ್ಟಿರುವ ಹಕ್ಕೊತ್ತಾಯಗಳಿಗೆ ನಮ್ಮ ತಾತ್ವಿಕ ಒಪ್ಪಿಗೆ ಇದೆ. ನೀವು ಹೇಳಿದಂತೆ ಪ್ರತ್ಯೇಕ ನಿಗಮ, ವಿಶೇಷ ಆರ್ಥಿಕ ಪ್ಯಾಕೇಜ್ ನೀಡಬಹುದು. ಅದು ನಮ್ಮ ಕರ್ತವ್ಯವೂ ಆಗಿದೆ. ಈಗ ಆಗಿರುವ ಒಳ ಮೀಸಲಾತಿ ವರ್ಗೀಕರಣ ಸಂತಸದಿಂದ ಮಾಡಿದ್ದಲ್ಲ. ಈ ಸಮಸ್ಯೆ ಬಗೆಹರಿಸಲು ಒಂದು ಇಕ್ಕಟ್ಟಿನ ಸಂದರ್ಭದಲ್ಲಿ ನಾವು ಮಾಡಿದ ತಾತ್ಕಾಲಿಕ ತೀರ್ಮಾನ. ಅದನ್ನು ಶಾಶ್ವತ ಆಯೋಗದ ಮುಂದೆ ಇಟ್ಟು ಚರ್ಚಿಸಿ ಸೂಕ್ತವಾದ ಬದಲಾವಣೆ ಮಾಡಬೇಕು ಎನ್ನುವುದು ಸರ್ಕಾರದ ನಿಲುವು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅವರು ನಿಯೋಗಕ್ಕೆ ತಿಳಿಸಿದ್ದಾಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಈ ವಿಚಾರವಾಗಿ ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿಯನ್ನು ಹಿಂದಕ್ಕೆ ಪಡೆಯಬೇಕು’ ಎಂದು ಮುಖ್ಯಮಂತ್ರಿ ಮನವಿ ಮಾಡಿದರು. ‘ಇದನ್ನು ಸಕಾರಾತ್ಮಕವಾಗಿ ಪರಿಗಣಿಸುತ್ತೇವೆ. ಆದರೆ ಅಲ್ಲಿಯವರೆಗೆ ಯಾವುದೇ ರೀತಿಯಲ್ಲಿ ಉದ್ಯೋಗ ಭರ್ತಿ ಮಾಡಬಾರದು ಎಂದು ಅವರಿಗೆ ಮನವಿ ಮಾಡಿದ್ದಾಗಿ’ ಅವರು ಹೇಳಿದ್ದಾರೆ.


ಅಲೆಮಾರಿ ಒಕ್ಕೂಟದ ಪದಾಧಿಕಾರಿಗಳ ನಿಯೋಗದ ಜತೆ ಸಿದ್ದರಾಮಯ್ಯ ಮಾತುಕತೆ ನಡೆಸಿದರು. ಎಚ್‌.ಸಿ.ಮಹದೇವಪ್ಪ ಪಾಲ್ಗೊಂಡಿದ್ದರು


ಎಂ.ಕೆ. ತಮ್ಮಯ್ಯ | ಮಧುಕುಮಾರ್ | ರಮೇಶ್ | ಕಲ್ಲಪ್ಪ | ಶ್ರೀಶೈಲ | ದೀಪಕ್ | ಗುರುರಾಜ್ | ಪ್ರಕಾಶ್ ರಾಥೋಡ್

8 ಪೊಲೀಸರಿಗೆ ದಕ್ಷತಾ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಕರಣಗಳ ತನಿಖೆ ಹಾಗೂ ಗುಪ್ತದಳ ವಿಭಾಗದಲ್ಲಿ ಉತ್ತಮವಾಗಿ ಕೆಲಸ ಮಾಡಿದ ರಾಜ್ಯದ ಎಂಟು ಮಂದಿ ಪೊಲೀಸರು, 2025ನೇ ಸಾಲಿನ ಕೇಂದ್ರ ಗೃಹ ಸಚಿವಾಲಯದ ದಕ್ಷತಾ ಪದಕಕ್ಕೆ ಭಾಜನರಾಗಿದ್ದಾರೆ.

ಪದಕಕ್ಕೆ ಭಾಜನರಾದ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಹೆಸರನ್ನು ಶುಕ್ರವಾರ ಪ್ರಕಟಿಸಲಾಗಿದೆ. ಪದಕ ಲಭಿಸಿದ ಅಧಿಕಾರಿಗಳು ಹಾಗೂ ಸಿಬ್ಬಂದಿಯ ವಿವರ ಇಲ್ಲಿದೆ.

ತನಿಖಾ ವಿಭಾಗ

- **ಎಂ.ಕೆ.ತಮ್ಮಯ್ಯ,** ಹೆಚ್ಚುವರಿ ಜಿಲ್ಲಾ ಎಸ್‌ಪಿ, ಹಾಸನ
- **ಪ್ರಕಾಶ್ ರಾಥೋಡ್,** ಎಸಿಪಿ, ಕೆ.ಜಿ ಹಳ್ಳಿ ಉಪ ವಿಭಾಗ, ಬೆಂಗಳೂರು ನಗರ
- **ಗುರುರಾಜ್ ಈಶ್ವರ್ ಕಲ್ಯಾಣಶೆಟ್ಟಿ,** ಪೊಲೀಸ್ ಇನ್‌ಸ್ಪೆಕ್ಟರ್, ಸಿಸಿಆರ್‌ಬಿ, ಬೆಳಗಾವಿ ನಗರ
- **ಶ್ರೀಶೈಲ ಕೆ. ಬ್ಯಾಕೋಡ್,** ಸಿಪಿಐ, ಮೂಡಲಗಿ ಪೊಲೀಸ್ ಠಾಣೆ, ಬೆಳಗಾವಿ ಜಿಲ್ಲೆ
- **ರಮೇಶ್ ಛಾಯಗೋಳ್,** ಇನ್‌ಸ್ಪೆಕ್ಟರ್, ಸುದ್ದಗುಂಟೆಪಾಳ್ಯ ಠಾಣೆ, ಬೆಂಗಳೂರು

ಗುಪ್ತದಳ ವಿಭಾಗ

- **ಸಿ.ವಿ.ದೀಪಕ್,** ಡಿವೈಎಸ್‌ಪಿ, ರಾಜ್ಯಗುಪ್ತದಳ, ಬೆಂಗಳೂರು
- **ಕಲ್ಲಪ್ಪ ಎಚ್. ಅತನೂರು,** ಪಿಎಸ್‌ಐ, ರಾಜ್ಯಗುಪ್ತದಳ, ಬೆಂಗಳೂರು
- **ಟಿ.ಎಂ.ಮಧುಕುಮಾರ್,** ಸಿಎಚ್‌ಸಿ, ಎಎನ್‌ಎಫ್, ಕಾರ್ಕಳ

ಟೊಮೆಟೊ ಬೀದಿ ಪಾಲು

ಪಿಟಿಐ ಚಿತ್ರ:


ಮಳೆಯಿಂದ ಬೆಳೆ ಹಾನಿಯಾಗಿದ್ದು, ಹಿಂದೆಯೇ ದರವು ಕುಸಿದ ಕಾರಣದಿಂದ ಚಿಕ್ಕಮಗಳೂರಿನಲ್ಲಿ ಕೃಷಿಕರು ಟೊಮೆಟೊವನ್ನು ಟ್ರ್ಯಾಕ್ಟರ್‌ನಲ್ಲಿ ತಂದು ಬಯಲಲ್ಲಿ ಸುರಿದರು

ವಿಎಚ್‌ಪಿ ಮುಖಂಡನ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಮಂಗಳೂರು: ಸಾಮಾಜಿಕ ಜಾಲತಾಣದಲ್ಲಿ ಪ್ರಚೋದನಕಾರಿ ಪೋಸ್ಟ್ ಶೇರ್ ಮಾಡಿರುವ ಆರೋಪದ ಮೇಲೆ ವಿಶ್ವ ಹಿಂದೂ ಪರಿಷತ್ ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪ್‌ವೆಲ್ ವಿರುದ್ಧ ಪ್ರಕರಣ ದಾಖಲಾಗಿದೆ.

‘ಆರ್‌ಎಸ್‌ಎಸ್ ಮುಖಂಡರೊಬ್ಬರ ಭಾಷಣದ ವಿಡಿಯೊವನ್ನು ಅವರು ಫೇಸ್‌ಬುಕ್‌ನಲ್ಲಿ ಶೇರ್ ಮಾಡಿದ್ದರು. ಈ ಕಾರಣಕ್ಕೆ ಅವರನ್ನು ಕದ್ರಿ ಠಾಣೆ ಪೊಲೀಸರು ಶುಕ್ರವಾರ ವಶಕ್ಕೆ ಪಡೆದು ವಿಚಾರಣೆ ನಡೆಸಿದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ‘ಪೋಸ್ಟ್ ಅನ್ನು ಅವರು ತೆಗೆದು ಹಾಕಿದ್ದು, ಎಫ್‌ಐಆರ್ ದಾಖಲಾಗಿದ್ದು ತಿಳಿದು, ಠಾಣೆಗೆ ಬಂದಿದ್ದರು. ಸೋಮವಾರ ವಿಚಾರಣೆಗೆ ಬರುವಂತೆ ನೋಟಿಸ್ ನೀಡಲಾಗಿದೆ’ ಎಂದು ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ಮಾಹಿತಿ ನೀಡಿದ್ದಾರೆ.


ಶರಣ್ ಪಂಪ್‌ವೆಲ್

‘ಪೊಲೀಸರು ನೋಟಿಸ್ ನೀಡದೆ ಬಂಧಿಸಲು ಮುಂದಾಗಿದ್ದಾರೆ. ರಾಜ್ಯ ಸರ್ಕಾರ ಅಭಿವ್ಯಕ್ತಿ ಸ್ವಾತಂತ್ರ್ಯ ಕಿತ್ತುಕೊಳ್ಳಲು ಹೊರಟಿದೆ’ ಎಂದು ಶರಣ್ ಪ್ರತಿಕ್ರಿಯಿಸಿದ್ದಾರೆ.

ಆರ್‌ಎಸ್‌ಎಸ್ ನಿಷೇಧಿಸಿ: ಖರ್ಗೆ

ನವದೆಹಲಿ (ಪಿಟಿಐ): ಬಿಜೆಪಿ, ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದಲೇ ದೇಶದಲ್ಲಿ ಕಾನೂನು ಸುವ್ಯವಸ್ಥೆಯ ಸಮಸ್ಯೆ ಉದ್ಭವಿಸುತ್ತಿರುವುದರಿಂದ, ಆರ್‌ಎಸ್‌ಎಸ್ ನಿಷೇಧಿಸಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶುಕ್ರವಾರ ಹೇಳಿದ್ದಾರೆ.


ಮಲ್ಲಿಕಾರ್ಜುನ ಖರ್ಗೆ

ಸರ್ದಾರ್ ವಲ್ಲಭಭಾಯಿ ಪಟೇಲ್ ಜನ್ಮದಿನದಂದು ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಬೆನ್ನಿಗೆ ಖರ್ಗೆ ತಿರುಗೇಟು ನೀಡಿದ್ದಾರೆ.

ಮಹಾತ್ಮ ಗಾಂಧಿ ಅವರ ಹತ್ಯೆಯ ಬಳಿಕ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು (ಆರ್‌ಎಸ್‌ಎಸ್) ಟೀಕಿಸಿದ್ದ ಪಟೇಲ್ ಅವರ ಹೇಳಿಕೆಗಳನ್ನು ಉಲ್ಲೇಖಿಸಿದ್ದಾರೆ.

ಆರ್‌ಎಸ್‌ಎಸ್ ನಿಷೇಧ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಖರ್ಗೆ, ‘ನಿಷೇಧಿಸಬೇಕು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ’ ಎಂದಿದ್ದಾರೆ. ‘ಇಂದು ಸರ್ದಾರ್ ವಲ್ಲಭಭಾಯಿ ಪಟೇಲ್ ಜನ್ಮದಿನ ಹಾಗೂ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಪುಣ್ಯತಿಥಿ. ‘ಉಕ್ಕಿನ ಮನುಷ್ಯ’ ಮತ್ತು ‘ಉಕ್ಕಿನ ಮಹಿಳೆ’ ದೇಶಕ್ಕೆ ಅಪಾರ ಕೊಡುಗೆ ನೀಡಿದ್ದು, ಏಕತೆ ಕಾಪಾಡಿಕೊಳ್ಳಲು ಶ್ರಮಿಸಿದ್ದಾರೆ. ಇದು ಕಾಂಗ್ರೆಸ್‌ನ ಐತಿಹ್ಯ ಮತ್ತು ಕಾಣಿಕೆ’ ಎಂದು ಹೇಳಿದರು.

‘ಮಹಾತ್ಮ ಗಾಂಧಿ ಅವರ ಹತ್ಯೆಯ ದುರಂತಕ್ಕೆ ಕಾರಣವಾದ ವಾತಾವರಣವನ್ನು ಆರ್‌ಎಸ್‌ಎಸ್ ಸೃಷ್ಟಿಸಿದೆ’ ಎಂದು ಶ್ಯಾಮಾ ಪ್ರಸಾದ್ ಮುಖರ್ಜಿ ಅವರಿಗೆ ಆಗಿನ ಗೃಹ ಸಚಿವ ಪಟೇಲ್ ಅವರು ಬರೆದ ಪತ್ರವನ್ನು ಖರ್ಗೆ ಉಲ್ಲೇಖಿಸಿದ್ದಾರೆ.

‘ಸರ್ಕಾರದವರೇನು ಆಳು ಮಕ್ಕಳಾ?’

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಆರ್‌ಎಸ್‌ಎಸ್‌ನವರು ಪಥಸಂಚಲನ ನಡೆಸುವ ಬಗ್ಗೆ ಮಾಹಿತಿ ನೀಡಿದ್ದಾರೆ, ಅನುಮತಿ ಕೇಳಿಲ್ಲ. ಮಾಹಿತಿ ಕೊಟ್ಟ ತಕ್ಷಣ ಹೋಗಿ ರಕ್ಷಣೆ ಕೊಡಲು ಗೃಹ ಇಲಾಖೆ, ಸರ್ಕಾರದವರೇನು ಅವರ ಆಳು ಮಕ್ಕಳಾ? ಎಂದು ಸಚಿವ ಪ್ರಿಯಾಂಕ್ ಖರ್ಗೆ ಇಲ್ಲಿ ಪ್ರಶ್ನಿಸಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಚಿತ್ತಾಪುರ ಯುವಕರ ಭವಿಷ್ಯದ ಪ್ರಶ್ನೆ ಬಂದಾಗ ಕಾನೂನು ಕ್ರಮ ಜರುಗಿಸಲಾಗಿದೆ. ನೋಂದಣಿಯಾಗದ ಒಂದು ಸಂಸ್ಥೆಯ ಕಾರ್ಯಕರ್ತರು ಲಾಠಿ ಹಿಡಿದು ಪಥಸಂಚಲನ ಮಾಡಿದರೆ, ಜನರಲ್ಲಿ ಭೀತಿ ಮೂಡುವುದಿಲ್ಲವೇ? ಹೆಚ್ಚುಕಮ್ಮಿ ಆದರೆ ಯಾರು ಹೊಣೆ’ ಎಂದು ಪ್ರಶ್ನಿಸಿದರು.

‘ಆರ್‌ಎಸ್‌ಎಸ್‌ನವರು ಚಿತ್ತಾಪುರದಲ್ಲಿ ಪಥಸಂಚಲನ ನಡೆಸುವ ವಿಚಾರ ಪ್ರತಿಷ್ಠೆ ಮಾಡಿಕೊಂಡಿದ್ದಾರೆ. ಅವರು ಮಾಹಿತಿ ಕೊಡುವುದನ್ನು ಬಿಟ್ಟು, ಅನುಮತಿ ಕೇಳಿದರೆ, ಪರಿಸ್ಥಿತಿ ನೋಡಿಕೊಂಡು ಸ್ಥಳೀಯ ಆಡಳಿತವೇ ನಿರ್ಧಾರ ಕೈಗೊಳ್ಳುತ್ತದೆ’ ಎಂದರು.

‘ಆರ್‌ಎಸ್‌ಎಸ್ ನೋಂದಣಿ ಪತ್ರದ ವಿಚಾರ ಕುರಿತು ಹೈಕೋರ್ಟ್‌ನಲ್ಲಿ ಸಕಾಲದಲ್ಲಿ ಪ್ರಶ್ನಿಸಲಾಗುವುದು. ಈಗ ಪಥಸಂಚಲನದ ವಿಚಾರ ಮಾತ್ರ ಬಂದಿದೆ’ ಎಂದರು. ‘ಸೇಡಂನಲ್ಲಿ ಕಾನೂನು ಉಲ್ಲಂಘಿಸಿ ಆರ್‌ಎಸ್‌ಎಸ್ ಪಥಸಂಚಲನ ನಡೆಸಿದೆ. ಅದನ್ನೂ ಕೋರ್ಟ್ ಗಮನಕ್ಕೆ ತರಲಾಗುವುದು’ ಎಂದರು.

ಪಥಸಂಚಲನ ಸಂಪನ್ನ, ಶಾಂತಿಯುತ

ಗುರುಮಠಕಲ್ (ಯಾದಗಿರಿ) ಪೊಲೀಸ್ ಭದ್ರತೆ ನಡುವೆ ಪಟ್ಟಣದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಪಥಸಂಚಲನ ಶುಕ್ರವಾರ ಶಾಂತಿಯುತವಾಗಿ ನಡೆಯಿತು.

ಸ್ವಾತಂತ್ರ್ಯ ಹೋರಾಟಕ್ಕೆ ಧುಮಕಲು ಕರೆ ನೀಡದ ಹೆಡಗೇವಾರ್: ಸಿ.ಎಂ

ಬೆಂಗಳೂರು: ‘ಸ್ವಾತಂತ್ರ್ಯ ಹೋರಾಟ ಬಿರುಸಾಗಿದ್ದ 1925ರ ಹೊತ್ತಿನಲ್ಲೇ ಆರ್‌ಎಸ್‌ಎಸ್ ಸ್ಥಾಪನೆಯಾಗಿತ್ತು. ಅದರ ಸ್ಥಾಪಕರಾದ ಕೆ.ಬಿ.ಹೆಡಗೇವಾರ್, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಎಂದು ತಮ್ಮ ಕಾರ್ಯಕರ್ತರಿಗೆ ಕರೆ ನೀಡಿರಲಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಹೇಳಿದರು.

ಇಂದಿರಾ ಗಾಂಧಿ ಅವರ ಪುಣ್ಯಸ್ಮರಣೆ ಮತ್ತು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 150ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಮಹಾತ್ಮ ಗಾಂಧಿ, ಜವಾಹರ ಲಾಲ್ ನೆಹರೂ, ಸರ್ದಾರ್ ವಲ್ಲಭಭಾಯಿ ಪಟೇಲ್, ಸುಭಾಷ್ ಚಂದ್ರ ಬೋಸ್ ಹೋರಾಡಿದ ಫಲವಾಗಿ ಸ್ವಾತಂತ್ರ್ಯ ಲಭಿಸಿದೆ’ ಎಂದು ಹೇಳಿದರು.

ಸಾವರ್ಕರ್ ಮತ್ತು ಗೋಳ್ವಾಲ್ಕರ್ ಅವರು ಸ್ವಾತಂತ್ರ್ಯಕ್ಕಾಗಿ ಹೋರಾಡಿಲ್ಲ. ಅವರು ಮಹಾನ್ ದೇಶಭಕ್ತರು ಎಂಬಂತೆ ಬಿಜೆಪಿ ನಾಯಕರು ಮಾತನಾಡುತ್ತಾರೆ. ಇದು ಬಿಜೆಪಿಯ ಢೋಂಗಿತನ’ ಎಂದರು.

ಸುದ್ದಿ 2 ನಿಮಿಷ

ಬ್ರಿಮ್ಸ್ ಅಕ್ರಮ: ನಿವೃತ್ತ ನ್ಯಾಯಾಧೀಶರಿಂದ ತನಿಖೆ


ಬೀದರ್: ‘ಬೀದರ್ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ಬ್ರಿಮ್ಸ್) ನಡೆದಿರುವ ಅಕ್ರಮದ ತನಿಖೆಯನ್ನು ನಿವೃತ್ತ ನ್ಯಾಯಾಧೀಶರಿಗೆ ವಹಿಸಲಾಗಿದೆ. ವರದಿ ಆಧರಿಸಿ ಶಿಸ್ತು ಕ್ರಮ ಜರುಗಿಸಲಾಗುವುದು’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬ್ರಿಮ್ಸ್‌ನ ಅಕ್ರಮಗಳ ತನಿಖೆಗೆ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ್ ಅವರಿಗೆ ಪತ್ರ ಬರೆದಿದ್ದೆ. ಅವರು ನಿವೃತ್ತ ನ್ಯಾಯಾಧೀಶರಿಂದ ತನಿಖೆ ನಡೆಸುತ್ತಿದ್ದಾರೆ’ ಎಂದರು.

ಅಕ್ರಮಗಳ ಕುರಿತು ಬೀದರ್ ಜಿಲ್ಲಾಧಿಕಾರಿ ಕೂಡಾ ವರದಿ ಕೊಟ್ಟಿದ್ದಾರೆ. ಬ್ರಿಮ್ಸ್ ಒಂದಿಲ್ಲೊಂದು ಕಾರಣದಿಂದ ಚರ್ಚೆಯಲ್ಲಿದೆ. ಅದನ್ನು ಸರಿಪಡಿಸಬೇಕು ಎಂದು ತಾಕೀತು ಮಾಡಿದರೂ ಆ ಕೆಲಸವಾಗಿಲ್ಲ’ ಎಂದು ಹೇಳಿದರು.

‘ಬ್ರಿಮ್ಸ್‌ನ ಖಾತೆಯಲ್ಲಿ ಸದ್ಯ ₹1 ಕೋಟಿಗೂ ಅಧಿಕ ಹಣವಿದೆ. ಆದರೆ, ಹಣ ಇಲ್ಲ ಎಂದು ಹೇಳುತ್ತಿದ್ದಾರೆ. ಇಂಜೆಕ್ಷನ್, ಔಷಧ ಸೇರಿದಂತೆ ರೋಗಿಗಳಿಗೆ ಯಾವುದೂ ಸಕಾಲಕ್ಕೆ ಸಿಗುತ್ತಿಲ್ಲ. ಲಭ್ಯವಿದ್ದರೂ ಕೊಡುತ್ತಿಲ್ಲ’ ಎಂದು ಸಚಿವರು ಅಸಮಾಧಾನ ಹೊರಹಾಕಿದರು.

‘ನಿಯಮ ಉಲ್ಲಂಘಿಸಿ ವೈದ್ಯರ ನೇಮಕಾತಿ’: ‘ಬ್ರಿಮ್ಸ್‌ನಲ್ಲಿ 40 ತಜ್ಞ ವೈದ್ಯರ ನೇಮಕಾತಿಗೆ ಸಂಬಂಧಿಸಿ ನಿಯಮ ಅನುಸರಿಸಿಲ್ಲ. ‘ಡಿ’ ಗ್ರೂಪ್ ನೌಕರರಿಗೆ ಸಂಬಳ ಕೊಟ್ಟಿಲ್ಲ. ಔಷಧ ಖರೀದಿಗೆ ಟೆಂಡರ್ ಕರೆದಿಲ್ಲ. ಇದೆಲ್ಲ ಸರ್ಕಾರದ ನಿಯಮಗಳ ಸ್ಪಷ್ಟ ಉಲ್ಲಂಘನೆ. ನಿವೃತ್ತ ನ್ಯಾಯಾಧೀಶರಿಂದ ತನಿಖೆ ಪೂರ್ಣಗೊಂಡ ಬಳಿಕ ಕ್ರಮ ಜರುಗಿಸಿ, ಬ್ರಿಮ್ಸ್‌ಗೆ ಕಾಯಕಲ್ಪ ನೀಡಲಾಗುವುದು’ ಎಂದು ಈಶ್ವರ ಖಂಡ್ರೆ ತಿಳಿಸಿದರು.



ಡಿ.ಸಿ ಹೆಸರಲ್ಲಿ ವೈದ್ಯಾಧಿಕಾರಿಗೆ ₹ 50 ಸಾವಿರ ವಂಚನೆ

ಯಾದಗಿರಿ: ವಾಟ್ಸ್‌ಆ್ಯಪ್‌ನಲ್ಲಿ ಯಾದಗಿರಿ ಜಿಲ್ಲಾಧಿಕಾರಿ ಫೋಟೊ ಬಳಸಿಕೊಂಡು ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಯೊಬ್ಬರಿಂದ ₹50 ಸಾವಿರ ಪಡೆದು ವಂಚಿಸಿರುವ ಬಗ್ಗೆ ‘ಸೆನ್’ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ಜ್ಯೋತಿ ಡಿ.ಕಟ್ಟಿಮನಿ ವಂಚನೆಗೆ ಒಳಗಾದವರು. ‘ಹಲೊ ಜ್ಯೋತಿ, ಕೆಲಸ ಹೇಗೆ ನಡೆಯುತ್ತಿದೆ’ ಎಂದು ವಂಚಕರು ವಾಟ್ಸ್‌ಆ್ಯಪ್‌ನಲ್ಲಿ ಇಂಗ್ಲಿಷ್‌ನಲ್ಲಿ ಸಂದೇಶ ಕಳುಹಿಸಿದ್ದರು. ಜಿಲ್ಲಾಧಿಕಾರಿಯೇ ಮೆಸೇಜ್ ಕಳುಹಿಸಿದ್ದಾಗಿ ನಂಬಿದ ಜ್ಯೋತಿ, ‘ಯಾವುದೇ ತೊಂದರೆ ಇಲ್ಲ’ ಎಂದು ಪ್ರತಿಕ್ರಿಯಿಸಿದ್ದರು.

ಕೆಲ ನಿಮಿಷದ ಬಳಿಕ ಇಂಟರ್‌ನೆಟ್ ಬ್ಯಾಂಕಿಂಗ್‌ನಿಂದ ಹಣ ವರ್ಗಾವಣೆಗೆ ಸಮಸ್ಯೆ ಆಗಿದೆ. ₹50 ಸಾವಿರ ಕಳುಹಿಸಿ ಎಂದು ಬ್ಯಾಂಕ್ ಖಾತೆ ನಂಬರ್ ನೀಡಿದ್ದರು. ನಂಬಿದ ಜ್ಯೋತಿ ₹50 ಸಾವಿರ ವರ್ಗಾವಣೆ ಮಾಡಿದ್ದರು. ಮತ್ತೆ ₹20 ಸಾವಿರ ಕಳುಹಿಸಲು ಮೆಸೇಜ್ ಬಂದಾಗ ಶಂಕೆ ಬಂದಿದ್ದು, ಕರೆ ಮಾಡಿದಾಗ ವಂಚನೆ ಗೊತ್ತಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ದರ್ಶನ್ ಪ್ರಕರಣ: ನ.3ಕ್ಕೆ ದೋಷಾರೋಪ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಹತ್ಯೆ ಪ್ರಕರಣದಲ್ಲಿ ನಟ ದರ್ಶನ್ ಹಾಗೂ ಇತರ ಆರೋಪಿಗಳ ವಿರುದ್ಧ ದಾಖಲಾಗಿದ್ದ ದೋಷಾರೋಪ ನಿಗದಿಪಡಿಸುವ ದಿನಾಂಕವನ್ನು ನಗರದ 57ನೇ ಸಿಸಿಎಚ್ ನ್ಯಾಯಾಲಯ ನವೆಂಬರ್ 3ಕ್ಕೆ ಮುಂದೂಡಿದೆ.

ದರ್ಶನ್ ಪರ ವಕೀಲರ ಮನವಿ ಆಲಿಸಿದ ನ್ಯಾಯಾಲಯ, ದೋಷಾರೋಪ ನಿಗದಿಯನ್ನು ನ. 3ಕ್ಕೆ ಮುಂದೂಡಿ ಆದೇಶಿಸಿತು.

ದರ್ಶನ್, ಪವಿತ್ರಾಗೌಡ ಸೇರಿದಂತೆ ಆರು ಆರೋಪಿಗಳನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯಕ್ಕೆ ಶುಕ್ರವಾರ ಹಾಜರುಪಡಿಸಲಾಯಿತು. ವಿಚಾರಣೆ ಮುಗಿದ ಬಳಿಕ ದೋಷಾರೋಪ ನಿಗದಿ ಮಾಡುವ ದಿನ ಎಲ್ಲ ಆರೋಪಿಗಳೂ ಹಾಜರಾಗಬೇಕು ಎಂದು ನ್ಯಾಯಾಲಯ ಸೂಚಿಸಿತು.

ದರ್ಶನ್ ಪರ ವಾದ ಮಂಡಿಸಿದ ವಕೀಲ ಸುನೀಲ್, ತಮ್ಮ ಕಕ್ಷಿದಾರರಿಗೆ ಯಾವುದೇ ಸೂಚನೆಗಳನ್ನು ನೀಡಿಲ್ಲ. ಹೀಗಾಗಿ ಖುದ್ದು ಹಾಜರುಪಡಿಸಲು ಅನುಮತಿ ನೀಡಬೇಕು. ವಿಚಾರಣೆಗೂ ಮುನ್ನ ಎರಡು ವಾರ ಕಾಲಾವಕಾಶ ಕೊಡಬೇಕು ಎಂದು ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು, ಜೈಲಿಗೆ ತೆರಳಿ ಸೂಚನೆಗಳನ್ನು ನೀಡುವಂತೆ ನಟನ ಪರ ವಕೀಲರಿಗೆ ತಿಳಿಸಿದರು. ಜೊತೆಗೆ ವಕೀಲರ ಭೇಟಿಗೆ ಅವಕಾಶ ಕಲ್ಪಿಸುವಂತೆ ಜೈಲಧಿಕಾರಿಗಳಿಗೆ ನಿರ್ದೇಶಿಸಿದರು.


ನಟ ದರ್ಶನ್

ಏನಿದು ದೋಷಾರೋಪ ನಿಗದಿ?: ದರ್ಶನ್ ಹಾಗೂ ಇತರೆ ಆರೋಪಿಗಳ ವಿರುದ್ಧ ಪೊಲೀಸರು ಮಾಡಿರುವ ಆರೋಪಗಳನ್ನು ಆರೋಪಿಗಳಿಗೆ ಓದಿ ಹೇಳಲಾಗುತ್ತದೆ. ನಂತರ ಈ ಆರೋಪಗಳನ್ನು ಒಪ್ಪಿಕೊಳ್ಳುತ್ತೀರಾ ಎಂದು ನ್ಯಾಯಾಲಯ ಪ್ರಶ್ನಿಸಲಿದೆ. ಒಪ್ಪಿಕೊಂಡರೆ ಶಿಕ್ಷೆ ಪ್ರಕಟವಾಗಲಿದೆ. ನಿರಾಕರಿಸಿದರೆ, ಸಾಕ್ಷಿಗಳ ವಿಚಾರಣೆ ಮುಂದುವರಿಯಲಿದೆ.

ಏನಿದು ಪ್ರಕರಣ?

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ 2024ರ ಜೂನ್ 11ರಂದು ನಟ ದರ್ಶನ್, ಪವಿತ್ರಾಗೌಡ ಸೇರಿ ಹಲವರು ಬಂಧಿಸಲಾಗಿತ್ತು. ಬಳಿಕ ದರ್ಶನ್ ಸೇರಿ 7 ಆರೋಪಿಗಳಿಗೆ ಡಿಸೆಂಬರ್ 13ರಂದು ಹೈಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಈ ಆದೇಶ ಪ್ರಶ್ನಿಸಿದ್ದ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು. 2025ರ ಆಗಸ್ಟ್ 14ರಂದು ಸುಪ್ರೀಂಕೋರ್ಟ್ ಜಾಮೀನು ರದ್ದುಗೊಳಿಸಿತ್ತು. ಸದ್ಯ ಪ್ರಕರಣದ 7 ಆರೋಪಿಗಳು ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿದ್ದಾರೆ.

ಪಿಯುಸಿ ವಿಜ್ಞಾನ ವಿಷಯಗಳನ್ನು ಕನ್ನಡದಲ್ಲಿಯೇ ಬೋಧಿಸುತ್ತಿರುವ ಶಿವಲಿಂಗೇಶ್ವರ ಶಿಕ್ಷಣ ಸಂಸ್ಥೆ

ಮರಾಠಿಗರ ನೆಲದಲ್ಲಿ ‘ಕನ್ನಡ’ ಕಾಲೇಜು

• ಬಸವರಾಜ್ ಸಂಪಳ್ಳಿ

ವಿಜಯಪುರ: ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯ ಜತ್ತ ತಾಲ್ಲೂಕಿನ ‘ಸಂಖ’ ಗ್ರಾಮ ದಲ್ಲಿರುವ ‘ಶಿವಲಿಂಗೇಶ್ವರ ಶಿಕ್ಷಣ ಸಂಸ್ಥೆ’ಯ ಕಾಲೇಜಿನಲ್ಲಿ ಪಿಯುಸಿ ವಿಜ್ಞಾನ ನಿಕಾಯದ ವಿಷಯಗಳನ್ನು ಕನ್ನಡ ಭಾಷೆಯಲ್ಲಿಯೇ ಬೋಧಿಸಲಾಗುತ್ತಿದೆ.

ಸಂಸ್ಥೆಯ ಆರ್.ಕೆ.ಪಾಟೀಲ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ರಸಾಯನವಿಜ್ಞಾನ, ಜೀವವಿಜ್ಞಾನ, ಭೌತವಿಜ್ಞಾನ, ಗಣಿತ ವಿಷಯಗಳ ಬೋಧನೆ ಕನ್ನಡದಲ್ಲೇ ನಡೆದಿದೆ.

‘ಬೋಧನೆ ಜೊತೆಗೆ ವಿಷಯದ ಟಿಪ್ಪಣಿಯನ್ನು ಕನ್ನಡದಲ್ಲೇ ಬರೆಸುತ್ತೇವೆ. ಇದರಿಂದ ಪರೀಕ್ಷೆಗೆ ಅನುಕೂಲ. ಕನ್ನಡದಲ್ಲಿ ಬೋಧನೆ ಮಾಡುವುದರಿಂದ ವಿದ್ಯಾರ್ಥಿಗಳು ವಿಜ್ಞಾನವನ್ನು ಸುಲಭವಾಗಿ ಅರ್ಥಮಾಡಿಕೊಳ್ಳುತ್ತಾರೆ. ಕಲಿಕೆಯಲ್ಲಿ ಹೆಚ್ಚಿನ ಆಸಕ್ತಿ ತೋರಿಸುತ್ತಾರೆ’ ಎಂದು ಕಾಲೇಜಿನ ಪ್ರಾಂಶುಪಾಲರಾದ ಕವಿತಾ ಪಾಟೀಲ ‘ಪ್ರಜಾವಾಣಿ’ಗೆ ತಿಳಿಸಿದರು.

‘1997ರಿಂದಲೂ ವಿಜ್ಞಾನ ವಿಷಯವನ್ನು ಕನ್ನಡದಲ್ಲಿ ಬೋಧಿಸಲಾಗುತ್ತಿದೆ. ಈ ವರ್ಷ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ತಲಾ 80 ವಿದ್ಯಾರ್ಥಿಗಳು ಕನ್ನಡದಲ್ಲೇ ವ್ಯಾಸಂಗ ಮಾಡುತ್ತಾರೆ’ ಎಂದು ತಿಳಿಸಿದರು.

‘ಅಲ್ಲದೆ, ಕಾಲೇಜಿನಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಸಿಇಟಿ, ನೀಟ್ ತರಬೇತಿ ನೀಡುತ್ತೇವೆ. ಪ್ರತಿ ವರ್ಷ ಕನ್ನಡ ಮಾಧ್ಯಮ ವಿದ್ಯಾರ್ಥಿಗಳು ಶೇ 90ಕ್ಕೂ ಹೆಚ್ಚು ಫಲಿತಾಂಶ ಪಡೆಯುತ್ತಾರೆ’ ಎಂದು ಅವರು ಹೇಳಿದರು.

‘ವೈದ್ಯಕೀಯ, ಎಂಜಿನಿಯರಿಂಗ್, ಬಿ.ಎಸ್‌ಸಿ ತೋಟಗಾರಿಕೆ/ಕೃಷಿ ಪದವಿ ಸೇರಿ ತಾಂತ್ರಿಕ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳು ಆಯ್ಕೆಯಾಗುತ್ತಾರೆ. ಕನ್ನಡ ಮಾಧ್ಯಮದಲ್ಲಿ ವಿಜ್ಞಾನ ಕಲಿತ ನೂರಾರು ವಿದ್ಯಾರ್ಥಿಗಳು ಬೆಂಗಳೂರು, ಪುಣೆ, ಮುಂಬೈ ಸೇರಿ ದೇಶ, ವಿದೇಶಗಳಲ್ಲಿ ಪ್ರತಿಷ್ಠಿತ ಖಾಸಗಿ ಕಂಪನಿಗಳಲ್ಲೂ ಉದ್ಯೋಗ ಗಿಟ್ಟಿಸಿದ್ದಾರೆ’ ಎಂದರು.

ಕನ್ನಡಿಗರಿಗೆ ಆಸರೆ: ‘ಸಂಖ ಸೇರಿ ಜತ್ತ ತಾಲ್ಲೂಕಿನ 25ಕ್ಕೂ ಹೆಚ್ಚು ಗ್ರಾಮಗಳಲ್ಲಿ ಕನ್ನಡ ಭಾಷಿಕರು ಅಧಿಕ ಸಂಖ್ಯೆಯಲ್ಲಿದ್ದಾರೆ. ಮಾತೃಭಾಷೆ ಕನ್ನಡವಾಗಿದ್ದು, ಮರಾಠಿ ಭಾಷೆ ಸರಳವಲ್ಲ. ಇಂಗ್ಲಿಷ್ ಕಠಿಣ. ಹೀಗಾಗಿ ವಿದ್ಯಾರ್ಥಿಗಳು ಮತ್ತು ಪೋಷಕರು ಕನ್ನಡಕ್ಕೆ ಆದ್ಯತೆ ನೀಡುತ್ತಾರೆ’ ಎಂದು ಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕ ಕಿರಣ ಪಾಟೀಲ ಅವರು ತಿಳಿಸಿದರು.

‘ಮಹಾರಾಷ್ಟ್ರ ಸರ್ಕಾರದ ಅನುದಾನಕ್ಕೆ ಒಳಪಟ್ಟಿರುವ ನಮ್ಮ ಸಂಸ್ಥೆ ಮತ್ತು ಕಾಲೇಜಿನಲ್ಲಿ ಕನ್ನಡದಲ್ಲಿ ಬೋಧನೆ ಮಾಡುತ್ತಿರುವುದಕ್ಕೆ ಇದುವರೆಗೂ ಯಾರಿಂದಲೂ ಅಭ್ಯಂತರ, ಆಕ್ಷೇಪ ವ್ಯಕ್ತವಾಗಿಲ್ಲ. ಪ್ರೋತ್ಸಾಹ ಲಭಿಸಿದೆ’ ಎಂದರು.

‘ಗಡಿನಾಡಿನಲ್ಲಿ ಕನ್ನಡ ಸೇವೆ’



ಸಂಖ ಗ್ರಾಮದಲ್ಲಿರುವ ಶಿವಲಿಂಗೇಶ್ವರ ಶಿಕ್ಷಣ ಸಂಸ್ಥೆ 1967ರಲ್ಲಿ ಸ್ಥಾಪನೆ ಆಗಿದ್ದು, ಪೂರ್ವ ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಪದವಿ ಹಂತದವರೆಗೆ ಶಿಕ್ಷಣ ನೀಡುತ್ತಿದೆ. ಸುಮಾರು 3 ಸಾವಿರ ವಿದ್ಯಾರ್ಥಿಗಳಿದ್ದಾರೆ.

1978ರಿಂದ ವಸತಿ ನಿಲಯದ ಸೌಲಭ್ಯ ಲಭ್ಯವಿದ್ದು, 5 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಸೌಲಭ್ಯ ನೀಡಲಾಗುತ್ತಿದೆ. ಕನ್ನಡ, ಮರಾಠಿ, ಇಂಗ್ಲಿಷ್ ಮಾಧ್ಯಮಗಳಲ್ಲೂ ಬೋಧನೆ ಇದೆ.

ವಿಜ್ಞಾನ ವಿಷಯಗಳ ಬೋಧನೆಗೆ ಕನ್ನಡ ಪುಸ್ತಕಗಳ ಕೊರತೆ ಇದೆ. ಕನ್ನಡದಲ್ಲಿ ವಿಜ್ಞಾನ ವಿಷಯಗಳ ಪಠ್ಯಪುಸ್ತಕಗಳ ಕೊರತೆ ನೀಗಲು ಕರ್ನಾಟಕ ಸರ್ಕಾರ ನೆರವಾಗಬೇಕು

ಕಿರಣ ಪಾಟೀಲ, ಆಡಳಿತ ಮಂಡಳಿ ನಿರ್ದೇಶಕ, ಶಿವಲಿಂಗೇಶ್ವರ ಶಿಕ್ಷಣ ಸಂಸ್ಥೆ

ಕಾಡಾನೆ ದಾಳಿ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಶೃಂಗೇರಿ (ಚಿಕ್ಕಮಗಳೂರು): ತಾಲ್ಲೂಕಿನ ಕೆರೆಕಟ್ಟೆ ಸಮೀಪ ಬಳಿ ಅರಣ್ಯಕ್ಕೆ ಸೊಪ್ಪು ತರಲು ಹೋಗಿದ್ದ ಇಬ್ಬರು ಕಾಡಾನೆ ದಾಳಿಗೆ ಸಿಕ್ಕಿ, ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕೆರೆಕಟ್ಟೆ ಸಮೀಪದ ಕೆರೆಗದ್ದೆಯ ಉಮೇಶ್ ಗೌಡ (54) ಮತ್ತ ಹರೀಶ್ ಶೆಟ್ಟಿ (53) ಮೃತಪಟ್ಟವರು. ಹರೀಶ್ ಅವರು ಬಿಜೆಪಿ ಶಕ್ತಿ ಕೇಂದ್ರದ ಕೆರೆಕಟ್ಟೆ ಭಾಗದ ಅಧ್ಯಕ್ಷರಾಗಿದ್ದರು.

ಕುದುರೆಮುಖ ರಾಷ್ಟ್ರೀಯ ಉದ್ಯಾನಕ್ಕೆ ಹೊಂದಿಕೊಂಡಂತೆ ಇವರ ಮನೆಗಳಿದ್ದು, ಕಾಡಿಗೆ ಸೊಪ್ಪು ತರಲು ಹೋದಾಗ ಅವಘಡ ಸಂಭವಿಸಿದೆ.

ಇಬ್ಬರು ಮೃತಪಟ್ಟಿರುವ ವಿಷಯ ತಿಳಿದಂತೆ, ಅರಣ್ಯ ಇಲಾಖೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಸ್ಥಳೀಯರು ರಾಷ್ಟ್ರೀಯ ಹೆದ್ದಾರಿಯಲ್ಲಿ ಶೃಂಗೇರಿ–ಕಾರ್ಕಳ ನಡುವೆ ವಾಹನ ಸಂಚಾರವನ್ನು ತಡೆದು ಪ್ರತಿಭಟನೆ ನಡೆಸಿದರು.

ಶಾಸಕ ಟಿ.ಡಿ.ರಾಜೇಗೌಡ, ಜಿಲ್ಲಾಧಿಕಾರಿ ಮೀನಾ ನಾಗರಾಜ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ ಅಮಟೆ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕರಿಕಾಳನ್ ಸ್ಥಳಕ್ಕೆ ಬಂದು ಪ್ರತಿಭಟನಕಾರರ ಮನವೊಲಿಸಲು ಮುಂದಾದರು.

ಆದರೆ, ಅರಣ್ಯ ಸಚಿವ ಈಶ್ವರ ಖಂಡ್ರೆ ಸ್ಥಳಕ್ಕೆ ಬರಬೇಕು. ಮೃತರ ಕುಟುಂಬಕ್ಕೆ ತಲಾ ₹50 ಲಕ್ಷ ಪರಿಹಾರ ನೀಡಬೇಕು ಎಂದು ಪಟ್ಟು ಹಿಡಿದಿದ್ದರಿಂದ ಬೆಳಿಗ್ಗೆಯಿಂದ ಸಂಜೆ ತನಕ ವಾಹನ ಸವಾರರು ಪರದಾಡಿದರು.

ಮೃತರ ಕುಟುಂಬಕ್ಕೆ ಸರ್ಕಾರದಿಂದ ತಲಾ ₹20 ಲಕ್ಷ, ಶಾಸಕರು ಹಾಗೂ ಸ್ಥಳೀಯರ ನೆರವಿನಿಂದ ತಲಾ ₹5 ಲಕ್ಷ ಪರಿಹಾರ ನೀಡಲು ನಿರ್ಧರಿಸಲಾಯಿತು. ಬಳಿಕ ಸ್ಥಳೀಯರು ಪ್ರತಿಭಟನೆ ಹಿಂಪಡೆದರು.


ಶೃಂಗೇರಿಯ ಕೆರೆಕಟ್ಟೆ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸ್ಥಳೀಯರು ಪ್ರತಿಭಟಿಸಿದರು ಶಾಸಕ ಟಿ.ಡಿ.ರಾಜೇಗೌಡ, ಜಿಲ್ಲಾಧಿಕಾರಿ ಮೀನಾ ನಾಗರಾಜ್, ಎಸ್‌ಪಿ ವಿಕ್ರಮ ಅಮಟೆ ಪ್ರತಿಭಟನಾಕಾರರ ಜತೆ ಮಾತನಾಡಿದರು

ಶನಿವಾರ, ನವೆಂಬರ್ 1, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 301 | ಪುಟ 22
prajavani.net prajavani www.prajavani.net
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಏಕತಾ ದಿನಾಚರಣೆ
ಜಮ್ಮುವಿನಲ್ಲಿ ನಡೆದ ರಾಷ್ಟ್ರೀಯ ಏಕತಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯೊಬ್ಬರು ಕಾಣಿಸಿಕೊಂಡಿದ್ದು ಹೀಗೆ...





ರಾಜ್ಯೋತ್ಸವದ ಶುಭಾಶಯಗಳು

ಸೆನ್ಸೆಕ್ಸ್ 83,938 | ನಿಫ್ಟಿ 25,722 | $/₹ 88.70 | ಚಿನ್ನ (Std. 10g) ₹1,26,300 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,57,500 (ಬೆಂಗಳೂರು)

ಅರಣ್ಯ: ಭೂ ಮಂಜೂರಾತಿಗೆ ಭಂಗ

1980ರ ಬಳಿಕ ಭೂಮಿ ಹಂಚಿಕೆ ಪಡೆದವರಿಗೆ ಸಂಕಷ್ಟ

- ಪಟ್ಟಿ ಸಿದ್ಧಪಡಿಸಿ, ವರದಿ ಸಲ್ಲಿಸಲು ಸೂಚನೆ

40 ಸಾವಿರ ಚ. ಕಿ.ಮೀ ಕರ್ನಾಟಕದ ಅರಣ್ಯ ಪ್ರದೇಶ	**3.30** ಲಕ್ಷ ಹೆಕ್ಟೇರ್ ಪರಿಭಾವಿತ ಅರಣ್ಯ ಪ್ರದೇಶ	**1.20** ಲಕ್ಷ ಹೆಕ್ಟೇರ್ ರಾಜ್ಯದಲ್ಲಿನ ನೆಡುತೋಪು	**2.15** ಲಕ್ಷ ಎಕರೆ ಒತ್ತುವರಿಯಾದ ಅರಣ್ಯ ಭೂಮಿ

- ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಅಧಿಸೂಚಿತ ಅರಣ್ಯ ಪ್ರದೇಶಗಳಲ್ಲಿ 1980ರ ನಂತರ ಖಾಸಗಿ ವ್ಯಕ್ತಿಗಳು, ಖಾಸಗಿ ಸಂಸ್ಥೆಗಳು ಹಾಗೂ ಸರ್ಕಾರಿ ಸಂಸ್ಥೆಗಳಿಗೆ ಮಂಜೂರು ಮಾಡಿದ ಎಲ್ಲ ಭೂಮಿಯೂ ಕಾನೂನುಬಾಹಿರ ವಾಗಿದ್ದು, ಇಂತಹ ಪ್ರಕರಣಗಳ ಪಟ್ಟಿಯನ್ನು ಸಿದ್ಧಪಡಿಸಿ, ವರದಿ ಸಲ್ಲಿಸುವಂತೆ ಜಿಲ್ಲಾ ಮಟ್ಟದ ವಿಶೇಷ ತನಿಖಾ ತಂಡಗಳಿಗೆ (ಎಸ್ಐಟಿ) ಸರ್ಕಾರ ಸೂಚಿಸಿದೆ.

ಜಿಲ್ಲಾ ಮಟ್ಟದ ಎಸ್ಐಟಿಗಳು ನಿರ್ವಹಿಸಬೇಕಾದ ಕಾರ್ಯವಿಧಾನ ಕುರಿತು ಅರಣ್ಯ ಇಲಾಖೆಯು ಹೊರಡಿಸಿದ ಸುತ್ತೋಲೆಯಲ್ಲಿ ಈ ಸೂಚನೆ ನೀಡಲಾಗಿದೆ. ಅಧಿಸೂಚಿತ ಅರಣ್ಯ ಪ್ರದೇಶಗಳಲ್ಲಿ ಹಂಚಿಕೆ, ಮಂಜೂರು ಮಾಡಿದ ಪ್ರದೇಶಗಳ ಪಟ್ಟಿಯನ್ನು ರಾಜ್ಯ ಮಟ್ಟದ ವಿಶೇಷ ತನಿಖಾ ತಂಡಕ್ಕೆ ಸಲ್ಲಿಸುವಂತೆ ಹೇಳಿದೆ.

ಅಧಿಸೂಚಿತ ಅರಣ್ಯ ಎಂದರೆ...

ಅಧಿಸೂಚಿತ ಅರಣ್ಯ ಎಂದರೆ ರಾಜ್ಯ ಸರ್ಕಾರವು ತನ್ನ ಆದೇಶದ ಮೂಲಕ ಅರಣ್ಯದ ಗಡಿಗಳನ್ನು ಸ್ಪಷ್ಟವಾಗಿ ನಿಗದಿಪಡಿಸಿದ ಪ್ರದೇಶ (ಕಾಯ್ದಿರಿಸಿದ ಅರಣ್ಯ). ಈ ಪ್ರದೇಶಗಳಲ್ಲಿ ರಾಜ್ಯ ಸರ್ಕಾರ ಅನುಮತಿ ಇಲ್ಲದೆ ಯಾವುದೇ ಚಟುವಟಿಕೆ ನಡೆಸುವುದನ್ನು ನಿಷೇಧಿಸಲಾಗಿದೆ.

ಅರಣ್ಯ ಸಂರಕ್ಷಣಾ ಕಾಯಿದೆ-1980 ಭಾರತದಲ್ಲಿ ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಗಳಿಗಾಗಿ ಬಳಸುವುದನ್ನು ನಿಯಂತ್ರಿಸುವ ಒಂದು ಕಾನೂನು. ಇದರ ಮುಖ್ಯ ಉದ್ದೇಶವು ಅರಣ್ಯನಾಶ ತಡೆಯುವುದು ಮತ್ತು ಕೇಂದ್ರ ಸರ್ಕಾರದ ಪೂರ್ವಾನುಮತಿ ಇಲ್ಲದೆ ರಾಜ್ಯ ಸರ್ಕಾರಗಳು ಅರಣ್ಯ ಭೂಮಿಯನ್ನು ಬೇರೆ ಉದ್ದೇಶಗಳಿಗೆ ಬಳಕೆ ಮಾಡುವುದನ್ನು ನಿರ್ಬಂಧಿಸುವುದಾಗಿದೆ.



ಅರಣ್ಯ ಸಂರಕ್ಷಣಾ ಕಾಯಿದೆ-1980ರ ಪೂರ್ವದಲ್ಲಿ ಕಂದಾಯ ಇಲಾಖೆಯು ಅಧಿಸೂಚಿತ ಅರಣ್ಯ ಪ್ರದೇಶಗಳಲ್ಲಿ ಮಾಡಿರುವ ಮಂಜೂರಾತಿಯನ್ನು ಸಕ್ಷಮ ಪ್ರಾಧಿಕಾರದಿಂದ ಮಾಡಲಾಗಿದೆಯೇ? ಒಂದು ವೇಳೆ ಸಕ್ಷಮ ಪ್ರಾಧಿಕಾರದಿಂದ ಮಂಜೂರು ಮಾಡಿದ್ದರೆ ಅಂತಹ ಅಧಿಕಾರವನ್ನು ಯಾವ ಕಾಯ್ದೆ, ನಿಯಮ, ಆದೇಶಗಳ ಮೂಲಕ ನೀಡಲಾಗಿದೆ ಎನ್ನುವ ಕುರಿತು ದಾಖಲೆಗಳನ್ನು ಸಂಗ್ರಹಿಸಬೇಕು. ಕಂದಾಯ ಇಲಾಖೆಯ ಸಕ್ಷಮ ಪ್ರಾಧಿಕಾರ ಹೊರತುಪಡಿಸಿ, ಇತರೆ ಪ್ರಾಧಿಕಾರಗಳು ಮಂಜೂರು ಮಾಡಿದ ವಿವರಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಬೇಕು ಎಂದು ಸೂಚನೆ ನೀಡಲಾಗಿದೆ.

1996ರ ನಂತರ ಸರ್ಕಾರಿ ದಾಖಲೆಗಳಲ್ಲಿ ಅರಣ್ಯ ಎಂದು ನಮೂದಿಸಿರುವ ಪ್ರದೇಶಗಳಲ್ಲಿ ಕಂದಾಯ ಇಲಾಖೆ ಭೂ ಮಂಜೂರಾತಿ ಮಾಡಿದ್ದರೆ ಅಂತಹ ದಾಖಲೆಗಳನ್ನು ಸಮಗ್ರವಾಗಿ ಪರಿಶೀಲಿಸಬೇಕು. ಸೂಕ್ತ ಶಿಫಾರಸುಗಳೊಂದಿಗೆ ರಾಜ್ಯಮಟ್ಟದ ವಿಶೇಷ ತನಿಖಾ ತಂಡಕ್ಕೆ ಸಲ್ಲಿಸಬೇಕು ಎಂದು ವಿವರಿಸಲಾಗಿದೆ.

▶7

ದಂಡ ವಸೂಲಿಗೆ ಮಾರ್ಗಸೂಚಿ ದರ

ಕಾನೂನುಬಾಹಿರವಾಗಿ ಮಂಜೂರು ಮಾಡಿದ ಪ್ರತಿ ಪ್ರಕರಣ ಪಟ್ಟಿ ಮಾಡಿ, ಅಂತಹ ಪ್ರದೇಶಗಳನ್ನು ಮರಳಿ ಅರಣ್ಯ ಇಲಾಖೆಯ ವಶಕ್ಕೆ ಪಡೆಯಲು ಕ್ರಮಗಳನ್ನು ತೆಗೆದುಕೊಳ್ಳಬೇಕು. ಒಂದು ವೇಳೆ ಮಂಜೂರಾತಿ ನೀಡಿದ ಅರಣ್ಯ ಪ್ರದೇಶವನ್ನು ಮರಳಿ ವಶಕ್ಕೆ ಪಡೆಯುವುದು ಸಾರ್ವಜನಿಕ ಹಿತದೃಷ್ಟಿಯಿಂದ ಪೂರಕವಲ್ಲದಿದ್ದರೆ, ಸರ್ಕಾರದ ಮಾರ್ಗಸೂಚಿ ದರಗಳ ಅನುಸಾರ ಭೂಮಾಲೀಕರಿಂದ ದಂಡ ವಸೂಲಿ ಮಾಡುವುದೂ ಸೇರಿದಂತೆ ಅಳಡಿಸಿಕೊಳ್ಳ ಬಹುದಾದ ವಿಧಾನದ ಕುರಿತು ವರದಿಯಲ್ಲಿ ಉಲ್ಲೇಖಿಸುವಂತೆ ಅರಣ್ಯ ಇಲಾಖೆ ಸೂಚಿಸಿದೆ.

ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರವು ಅರಣ್ಯ ಭೂಮಿಗಳ ಕ್ರೋಡೀಕೃತ ದಾಖಲೆಗಳನ್ನು ತಯಾರಿಸಲು ಅಭಿವೃದ್ಧಿಪಡಿಸಲಾದ ಪೋರ್ಟಲ್ ಅನ್ನು ತಾಲ್ಲೂಕು, ಹೋಬಳಿ, ಗ್ರಾಮ, ಸರ್ವೆ ಸಂಖ್ಯೆ, ವಿಸ್ತೀರ್ಣವನ್ನು ಗುರುತಿಸಲು ಉಪಯೋಗಿಸಿಕೊಳ್ಳಲು ಹೇಳಿದೆ.

'ಮೆರೆದೇವು ಕನ್ನಡ ಪ್ರೇಮ'

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್



ರಾಜ್ಯೋತ್ಸವ ಸಂಭ್ರಮಾಚರಣೆಗಾಗಿ ಕಲಬುರಗಿಯ ಮಾರುಕಟ್ಟೆಯಲ್ಲಿ ಶುಕ್ರವಾರ ಕನ್ನಡ ಬಾವುಟಗಳ ಖರೀದಿಯಲ್ಲಿ ತೊಡಗಿದ್ದ ಜನ

ನಾಯಕತ್ವ ಬದಲು: ಮತ್ತಷ್ಟು ಗೋಜಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ ಚರ್ಚೆ ಶುಕ್ರವಾರವೂ ಮುಂದುವರಿದಿದೆ.

'ಡಿ.ಕೆ.ಶಿವಕುಮಾರ್ ಇದೇ ನವೆಂಬರ್‌ನಲ್ಲೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ' ಎಂಬ ವಿಷಯದ ಕುರಿತ ಪ್ರಶ್ನೆಗೆ ಸಿಟ್ಟಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ಪತ್ರಕರ್ತರ ಮೇಲೆ ಹರಿಹಾಯ್ದಿದ್ದಾರೆ.

ಸಿದ್ದರಾಮಯ್ಯ ಸಿಡಿಮಿಡಿ

'ಯಾರ್ ಹೇಳಿದ್ದು? ನಿನಗೆ ಯಾರ್ ಹೇಳಿದ್ರು, ನಿಂಗೆ ಹೇಗೆ ಗೊತ್ತಾಯ್ತು' ಎಂದು ಸಿದ್ದರಾಮಯ್ಯ ವರದಿಗಾರರನ್ನು ಏರಿದ ಧ್ವನಿಯಲ್ಲಿ ಪ್ರಶ್ನಿಸಿದರು.

ಶಿವಕುಮಾರ್ ನವೆಂಬರ್‌ನಲ್ಲಿ ಮುಖ್ಯಮಂತ್ರಿಯಾಗಿ ಪ್ರಮಾಣ ಸ್ವೀಕರಿಸುತ್ತಾರೆ ಎಂದು ಪತ್ರಿಕೆಯೊಂದರಲ್ಲಿ ಪ್ರಕಟವಾದ ವರದಿ ಕುರಿತ ಸುದ್ದಿಗಾರರು ಪ್ರಶ್ನಿಸುತ್ತಿದ್ದಂತೆ ಸಿದ್ದರಾಮಯ್ಯ ಕೆಂಡಾಮಂಡಲರಾದರು. 'ಯಾರು ಹೇಳಿದ್ದು' ಎಂದು ಸಿದ್ದರಾಮಯ್ಯ ಅವರು ಪ್ರಶ್ನಿಸಿದಾಗ 'ಪತ್ರಿಕೆಯಲ್ಲಿ ಪ್ರಕಟವಾಗಿದೆ' ಎಂದು ಸುದ್ದಿಗಾರರು ಪ್ರತಿಕ್ರಿಯಿಸಿದರು. 'ಯಾವ ಪತ್ರಿಕೆ? ಯಾವ ಪತ್ರಿಕೆ ನೋಡಿದೆ ನೀನು? ನಾನು ಎಲ್ಲ ಪತ್ರಿಕೆ ಓದುತ್ತೇನೆ. ಯಾವುದರಲ್ಲೂ ಬಂದಿಲ್ಲ' ಎಂದರು.

'ದಲಿತ ಸಿ.ಎಂ ಅಸಾಧ್ಯವಲ್ಲ'

'ಕರ್ನಾಟಕದಲ್ಲಿ ದಲಿತ ಸಿ.ಎಂ ಸಾಧ್ಯವಿಲ್ಲವೆಂದು ಯಾರು ಹೇಳಿದ್ದಾರೆ? ಈ ವಿಷಯದಲ್ಲಿ ಅಳುವ ಪರಿಸ್ಥಿತಿಯಂತೂ ಇಲ್ಲ' ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಹೇಳಿದರು. 'ಕರ್ನಾಟಕದಲ್ಲಿ ದಲಿತ ಮುಖ್ಯಮಂತ್ರಿ ಸಾಧ್ಯವಾಗುವುದಿಲ್ಲ ಎಂದು ಹೇಳಿದವರು ಯಾರು? ಸೂಕ್ತ ಸಮಯಕ್ಕೆ ಕಾಯುತ್ತಿರಬಹುದು. ಶೋಷಿತ ವರ್ಗಗಳಿಗೆ ಶಕ್ತಿ ತುಂಬಬೇಕು ಎಂಬುದೇ ಅಂಬೇಡ್ಕರ್ ಅವರ ಹೋರಾಟ, ಸಿದ್ಧಾಂತ. ನೂರು ವರ್ಷಗಳ ಹಿಂದಿನಿಂದ ಈ ಹೋರಾಟ ಇದೆ. ದಲಿತ ಮುಖ್ಯಮಂತ್ರಿ ಹೋರಾಟವೂ ನಿರಂತರವಾಗಿದ್ದು, ಸೂಕ್ತ ಸಮಯದಲ್ಲಿ ಹೈಕಮಾಂಡ್ ನಿರ್ಧರಿಸಲಿದೆ' ಎಂದರು.


▶10

'ಇದೇ 30ಗಳು ಸಂಪುಟ ಪುನರ್‌ರಚನೆ'

ಮೈಸೂರು: 'ಮುಖ್ಯಮಂತ್ರಿ ಯಾರಾದರೂ ಆಗಿರಲಿ, ಕಾಂಗ್ರೆಸ್ ಪಕ್ಷವೇ ಅಧಿಕಾರದ ಅವಧಿ ಪೂರ್ಣಗೊಳಿಸುತ್ತದೆ. ಬಿ.ನಾಗೇಂದ್ರ ಹಾಗೂ ಕೆ.ಎನ್. ರಾಜಣ್ಣ ರಾಜೀನಾಮೆಯ ಕಾರಣದಿಂದಾಗಿ ಎರಡು ಸಚಿವ ಸ್ಥಾನಗಳಷ್ಟೆ ಖಾಲಿ ಇವೆ. ನ.20 ಅಥವಾ 26ರಂದು ಸಚಿವ ಸಂಪುಟ ಪುನರ್‌ರಚನೆ ಬಗ್ಗೆ ಮುಖ್ಯಮಂತ್ರಿ ಕಚೇರಿಯಿಂದ ಮಾಹಿತಿ ಬಂದಿದೆ. ರಾಜ್ಯಕ್ಕೆ ಒಳಿತಾಗುವ ತೀರ್ಮಾನವನ್ನು ಹೈಕಮಾಂಡ್ ಕೈಗೊಳ್ಳುತ್ತದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಹೇಳಿದರು.

▶10

ಚಿನಕುರುಳಿ ಪ್ರಕಾಶ್ ಶೆಟ್ಟಿ



'ಕಾಂಗ್ರೆಸ್ ಭರವಸೆ 134, ಈಡೇರಿಕೆ 9'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಮುನ್ನ ಕಾಂಗ್ರೆಸ್ ಪಕ್ಷ 134 ಭರವಸೆಗಳನ್ನು ನೀಡಿತ್ತು. ಸರ್ಕಾರ ರಚಿಸಿದ ನಂತರದ ಎರಡು ವರ್ಷಗಳಲ್ಲಿ ಸಂಪೂರ್ಣವಾಗಿ ಈಡೇರಿಸಿದ್ದು ಒಂಬತ್ತು ಭರವಸೆಗಳನ್ನು ಮಾತ್ರ ಎನ್ನುತ್ತದೆ ಸಿವಿಕ್ ಸಂಘಟನೆಯ 'ನಮ್ಮ ಸರ್ಕಾರ, ನಮ್ಮ ರಿಪೋರ್ಟ್ ಕಾರ್ಡ್' ವರದಿ.

ನಿವೃತ್ತ ಐಎಎಸ್ ಅಧಿಕಾರಿ ಮತ್ತು ಸಿವಿಕ್ ಸಂಘಟನೆಯ ಟ್ರಸ್ಟಿ ಟಿ.ಆರ್. ರಘುನಂದನ್ ಅವರು, ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಈ ವರದಿ ಬಿಡುಗಡೆ ಮಾಡಿದರು.

ಕಾಂಗ್ರೆಸ್ ಪಕ್ಷವು ತಾನು ನೀಡಿದ್ದ ಭರವಸೆಗಳ ಪೈಕಿ 50 ಅನ್ನು ಕಾರ್ಯರೂಪಕ್ಕೆ ತರಲು ಕ್ರಮ ತೆಗೆದುಕೊಂಡಿದೆ. ಆದರೆ 73 ಭರವಸೆಗಳ ಸಂಬಂಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇನ್ನು 2 ಭರವಸೆಗಳನ್ನು ತಾನೇ ಹಾಕಿಕೊಂಡಿದ್ದ ಕಾಲಮಿತಿಯಲ್ಲಿ ಈಡೇರಿಸಲು ವಿಫಲವಾಗಿದೆ ಎಂದು ವರದಿ ಉಲ್ಲೇಖಿಸಿದೆ.

▶10

> **2 ವರ್ಷಗಳಲ್ಲಿ ಸರ್ಕಾರ ಏನು ಮಾಡಿದೆ ಮತ್ತು ಯಾವುದನ್ನೆಲ್ಲಾ ಮಾಡಿಲ್ಲ ಎಂಬುದನ್ನು ಅಧಿಕೃತ ದಾಖಲೆಗಳ ಆಧಾರದಲ್ಲಿ ವಿಶ್ಲೇಷಿಸಲಾಗಿದೆ**
> **ಟಿ.ಆರ್.ರಘುನಂದನ್,** ನಿವೃತ್ತ ಐಎಎಸ್ ಅಧಿಕಾರಿ ಮತ್ತು ಸಿವಿಕ್ ಸಂಘಟನೆಯ ಟ್ರಸ್ಟಿ

'ಡಿಸಿಎಂ ಆರ್‌ಎಸ್‌ಎಸ್ ಗೀತೆ: ಜಾತ್ಯತೀತತೆಗೆ ಧಕ್ಕೆ'

ಸರ್ಕಾರದ ಕಾರ್ಯವೈಖರಿ ಕುರಿತು ಸಿವಿಕ್ ಸಂಘಟನೆ ವ್ಯಕ್ತಪಡಿಸಿದ ಅಭಿಪ್ರಾಯಗಳು ಹೀಗಿವೆ:

- ಉಪ ಮುಖ್ಯಮಂತ್ರಿ ವಿಧಾನಸಭೆಯಲ್ಲಿ ಆರ್‌ಎಸ್‌ಎಸ್ ಪ್ರಾರ್ಥನೆ ಹಾಡಿದ್ದರಿಂದಾಗಿ ಜಾತ್ಯತೀತ ನಿಲುವಿಗೆ ಧಕ್ಕೆಯಾಯಿತು
- ಕಾವೇರಿ ಆರತಿಯು ಗಂಗಾ ಆರತಿಯ ಅನುಕರಣೆಯಾಗಿದ್ದು, ಅನಗತ್ಯವಾದ ಕಾರ್ಯಕ್ರಮ
- ಅನ್ನಭಾಗ್ಯ ಯೋಜನೆಯಿಂದ ಶೇ 80ರಷ್ಟು ಜನರು ಮೊದಲಿಗಿಂತಲೂ ಹೆಚ್ಚು ಪೌಷ್ಟಿಕಾಂಶಯುಕ್ತ ಮತ್ತು ಹೆಚ್ಚಿನ ಕ್ಯಾಲೊರಿಯ ಆಹಾರ ಸೇವಿಸುತ್ತಿದ್ದಾರೆ. ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ ಯೋಜನೆಗಳು ಜನರ ಜೀವನಮಟ್ಟ ಸುಧಾರಿಸಿವೆ. ರಾಜ್ಯದ ಆರ್ಥಿಕ ಸ್ಥಿತಿ ಬಿಗಡಾಯಿಸಿದೆ
- ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸದೇ ಇರುವ ಮೂಲಕ ರಾಜ್ಯ ಸರ್ಕಾರ ಜನರ ಮತದಾನದ ಹಕ್ಕನ್ನು ಕಸಿದುಕೊಂಡಿದೆ. ಜನಪ್ರತಿನಿಧಿಗಳು ಇಲ್ಲದೆಯೇ ಸ್ಥಳೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ

▶10

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ

ಹೆಚ್ಚುವರಿ ಸಿಬ್ಬಂದಿ ನೇಮಿಸಿ: ಹರ್ಷ ಗುಪ್ತ

ಬೆಂಗಳೂರು: ಆರೋಗ್ಯ ಮತ್ತು ಕುಟುಂಬ ಇಲಾಖೆಯಲ್ಲಿ ಸಿಬ್ಬಂದಿ ಕೊರತೆಯಿಂದ ಕಡತಗಳನ್ನು ತಡವಾಗಿ ಮಂಡಿಸುತ್ತಿರುವ ಕಾರಣ ಸಕಾಲದಲ್ಲಿ ನಿರ್ಣಯ ಕೈಗೊಳ್ಳಲು ವಿಳಂಬವಾಗುತ್ತಿದೆ. ಹಾಗಾಗಿ ಹೆಚ್ಚುವರಿ ಸಿಬ್ಬಂದಿ ನೇಮಿಸಬೇಕು ಎಂದು ಇಲಾಖೆಯ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ ಕೋರಿದ್ದಾರೆ.

ತ್ಯಾಗರಾಜ ಬ್ಯಾಂಕ್: ಸಹಕಾರ ಸಪ್ತಾಹ

ಬೆಂಗಳೂರು: 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಅಂಗವಾಗಿ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ ನಾನಾ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದು, ಕಾಲೇಜು ವಿದ್ಯಾರ್ಥಿಗಳಿಗೆ ಅಂತರ ಕಾಲೇಜು ರಸಪ್ರಶ್ನೆ ಸ್ಪರ್ಧೆಯನ್ನು ಆಯೋಜಿಸಿದೆ.

ಸಹಕಾರ ಕ್ಷೇತ್ರದ ಕುರಿತು ಪಿಯುಸಿ, ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಸ್ಪರ್ಧೆಗಳು ನಡೆಯಲಿದ್ದು, ತಲಾ ಮೂರು ಬಹುಮಾನ, ಐದು ಸಮಾಧಾನಕರ ಬಹುಮಾನ ನೀಡಲಾಗುವುದು ಎಂದು ಬ್ಯಾಂಕ್ ಅಧ್ಯಕ್ಷ ಎಂ.ಆರ್. ವೆಂಕಟೇಶ್ ತಿಳಿಸಿದ್ದಾರೆ.

ಇದಲ್ಲದೇ ಸರ್ಕಾರಿ ಶಾಲಾ ಹೆಣ್ಣುಮಕ್ಕಳಿಗೆ ಐಸಿರಿ ಸಮೃದ್ಧಿ ಯೋಜನೆಯನ್ನು ವಿಸ್ತರಿಸಲಾಗುತ್ತಿದೆ. ಯುವಕರನ್ನು ಬ್ಯಾಂಕ್ ವಹಿವಾಟಿನತ್ತ ಸೆಳೆಯಲು ಶೂನ್ಯ ಬ್ಯಾಲೆನ್ಸ್ ಉಳಿತಾಯ ಖಾತೆ ಆರಂಭ, ಎಟಿಎಂ ಕಾರ್ಡ್ ವಿತರಣೆ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮಕ್ಕೆ ಶಾಸಕ ಎಸ್.ಟಿ.ಸೋಮಶೇಖರ್ ನ.3ರಂದು ಜಯನಗರ 4ನೇ ಟಿ ಬ್ಲಾಕ್‌ನಲ್ಲಿರುವ ಬಿಇಎಸ್ ವಿದ್ಯಾಸಂಸ್ಥೆಯಲ್ಲಿ ಚಾಲನೆ ನೀಡುವರು ಎಂದು ಹೇಳಿದ್ದಾರೆ.

‘ತಪಾಸಣೆಯಿಂದ ಸ್ತನ ಕ್ಯಾನ್ಸರ್ ತಡೆ’

ಜಾಗೃತಿ ಅಭಿಯಾನಕ್ಕೆ ನಟಿ ಪೂಜಾ ಗಾಂಧಿ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ತನ ಕ್ಯಾನ್ಸರ್ ತಡೆಗೆ ತಪಾಸಣೆಯೇ ಪರಿಹಾರವಾಗಿದ್ದು, ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿದಲ್ಲಿ ಚಿಕಿತ್ಸೆ ಸುಲಭವಾಗಲಿದೆ. ಐದು ವರ್ಷಗಳ ಅವಧಿಯಲ್ಲಿ ಬೆಂಗಳೂರಿನಲ್ಲಿ 20ರಿಂದ 40 ವರ್ಷದೊಳಗಿನವರಲ್ಲಿ ಸ್ತನ ಕ್ಯಾನ್ಸರ್ ಪ್ರಕರಣಗಳು ದುಪ್ಪಟ್ಟಾಗಿವೆ’ ಎಂದು ಅಪೋಲೊ ಕ್ಯಾನ್ಸರ್ ಸೆಂಟರ್ ತಜ್ಞರು ಕಳವಳ ವ್ಯಕ್ತಪಡಿಸಿದರು.

ಸ್ತನ ಕ್ಯಾನ್ಸರ್ ಜಾಗೃತಿ ಮಾಸದ ಅಂಗವಾಗಿ ಈ ಸೆಂಟರ್ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಚಾಕೊಲೇಟ್ ಮೂಲಕ ಜಾಗೃತಿ ಸಂದೇಶ ಸಾರುವ ‘ಚೆಕ್-ಒಲೇಟ್’ ಅಭಿಯಾನಕ್ಕೆ ನಟಿ ಪೂಜಾ ಗಾಂಧಿ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಕ್ಯಾನ್ಸರ್ ತಜ್ಞೆ ಡಾ. ಜಯಂತಿ ತುಮ್ಸಿ, ‘ಸ್ತನ ಕ್ಯಾನ್ಸರ್ ಯುವತಿಯರಲ್ಲಿಯೂ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಆದ್ದರಿಂದ ಪ್ರತಿ ತಿಂಗಳು ಸ್ವಯಂ ತಪಾಸಣೆ ಮಾಡಿಕೊಳ್ಳಬೇಕು. ವರ್ಷಕ್ಕೆ ಒಮ್ಮೆಯಾದರೂ ‘ಮ್ಯಾಮೋಗ್ರಾಮ್’ ಪರೀಕ್ಷೆಗೆ ಒಳಪಡಬೇಕು. ದೇಶದಲ್ಲಿ ಪ್ರತಿ ವರ್ಷ 2 ಲಕ್ಷ ಸ್ತನ ಕ್ಯಾನ್ಸರ್ ಪ್ರಕರಣಗಳು ವರದಿಯಾಗುತ್ತಿವೆ’ ಎಂದರು.

> **ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸುತ್ತಾರೆ. ಆದ್ದರಿಂದ ಅವರು ವರ್ಷಕ್ಕೊಮ್ಮೆಯಾದರೂ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು**
> **ಪೂಜಾ ಗಾಂಧಿ,** ನಟಿ

ಅಪೋಲೊ ಆಸ್ಪತ್ರೆಗಳ ಸಮೂಹದ ಆಂಕಾಲಜಿ ವಿಭಾಗದ ಅಧ್ಯಕ್ಷ ದಿನೇಶ್ ಮಾಧವನ್, ‘ಡಾರ್ಕ್ ಚಾಕೊಲೇಟ್‌ನಲ್ಲಿರುವ ‘ಆ್ಯಂಟಿಆಕ್ಸಿಡೆಂಟ್’ ಮತ್ತು ‘ಫ್ಲಾವನಾಯ್ಡ್’ಗಳು ಹೃದಯ, ಚರ್ಮ ಮತ್ತು ಮನೋಸ್ಥಿತಿ ಸುಧಾರಿಸಲು ಸಹಕಾರಿ. ಆದ್ದರಿಂದ ಸಿಹಿ ತಿನಿಸಿನ ಮೂಲಕ ಕ್ಯಾನ್ಸರ್ ತಪಾಸಣೆ ಬಗ್ಗೆ ಜಾಗೃತಿ ಮೂಡಿಸುತ್ತಿದ್ದೇವೆ. ಪ್ರತಿ ‘ಚೆಕ್-ಒಲೇಟ್’ ಬಾಕ್ಸ್‌ನಲ್ಲೂ ಕ್ಯೂಆರ್ ಕೋಡ್ ಅಳವಡಿಸಲಾಗಿದ್ದು, ಸ್ಕ್ಯಾನ್ ಮಾಡಿದಾಗ ಸ್ತನವನ್ನು ಸ್ವಯಂ ತಪಾಸಣೆ ಮಾಡುವ ವಿಧಾನದ ವಿಡಿಯೊ ತೆರೆದುಕೊಳ್ಳುತ್ತದೆ. ಈ ಚಾಕೊಲೋಟ್ ಬಾಕ್ಸ್‌ಗಳು ಅಪೋಲೊ ಮಳಿಗೆಗಳಲ್ಲಿ ಲಭ್ಯ’ ಎಂದರು.

ಕ್ಯಾನ್ಸರ್ ತಜ್ಞರಾದ ಡಾ. ವಿಜಯ್ ಅಗರ್ವಾಲ್, ಡಾ. ಪೂನಂ, ಡಾ. ಯತೀಶ್ ಉಪಸ್ಥಿತರಿದ್ದರು.

ಕರ್ನಾಟಕ ಮಿನಿ ಕ್ರೀಡಾಕೂಟ ನಾಳೆಯಿಂದ

ಬೆಂಗಳೂರು: ಉದಯೋನ್ಮುಖ ಕ್ರೀಡಾ ಪ್ರತಿಭೆಗಳಿಗೆ ವೇದಿಕೆ ಒದಗಿಸುವ ‘ಕರ್ನಾಟಕ ಮಿನಿ ಕ್ರೀಡಾಕೂಟ’ ಇದೇ 2ರಿಂದ 9ರತನಕ ನಗರದಲ್ಲಿ ಆಯೋಜಿಸಲಾಗಿದೆ. 27 ವಿಭಾಗಗಳ ಸ್ಪರ್ಧೆಗಳಲ್ಲಿ 14 ವರ್ಷದೊಳಗಿನ ಸುಮಾರು 5 ಸಾವಿರ ಕ್ರೀಡಾಪಟುಗಳು ಭಾಗವಹಿಸುವ ನಿರೀಕ್ಷೆಯಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಕ್ರೀಡಾ ಪ್ರಾಧಿಕಾರ ಹಾಗೂ ಕರ್ನಾಟಕ ಒಲಿಂಪಿಕ್ ಸಂಸ್ಥೆಯ (ಕೆಒಎ) ಸಹಭಾಗಿತ್ವದಲ್ಲಿ ನಡೆಯುವ ನಾಲ್ಕನೇ ಆವೃತ್ತಿಯ ಕೂಟಕ್ಕೆ ಕಂಠೀರವ ಕ್ರೀಡಾಂಗಣದಲ್ಲಿ ನ.2ರಂದು ಸಂಜೆ 5ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡುವರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉಪಸ್ಥಿತರಿರುವರು ಎಂದು ಕೆಒಎ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯರೂ ಆಗಿರುವ ಕೆ. ಗೋವಿಂದರಾಜ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಜಿಲ್ಲಾ ಸಂಘದ ಮೂಲಕ ಸ್ಪರ್ಧಿಗಳು ಈ ಕೂಟದಲ್ಲಿ ಭಾಗವಹಿಸಲಿದ್ದಾರೆ’ ಎಂದು ಅವರು ತಿಳಿಸಿದರು.

27 ವಿಭಾಗಗಳಲ್ಲಿ ಸ್ಪರ್ಧೆ: ಕೂಟದಲ್ಲಿ ಆರ್ಚರಿ, ಅಥ್ಲೆಟಿಕ್ಸ್, ಬ್ಯಾಡ್ಮಿಂಟನ್, ಬ್ಯಾಸ್ಕೆಟ್‌ಬಾಲ್, ಬಾಕ್ಸಿಂಗ್, ಗಾಲ್ಫ್, ಸೈಕ್ಲಿಂಗ್, ಫುಟ್‌ಬಾಲ್, ಜಿಮ್ನಾಸ್ಟಿಕ್, ಹ್ಯಾಂಡ್ ಬಾಲ್, ಹಾಕಿ, ಜುಡೊ, ಕಬಡ್ಡಿ, ಕೊಕ್ಕೊ, ಟೆನಿಸ್, ರೈಫಲ್ ಶೂಟಿಂಗ್, ಈಜು, ಟೇಬಲ್ ಟೆನಿಸ್, ವಾಲಿಬಾಲ್, ವೇಟ್‌ಲಿಫ್ಟಿಂಗ್, ಕುಸ್ತಿ ಸ್ಪರ್ಧೆಗಳು ನಡೆಯಲಿವೆ

PUBLIC NOTICE

NOTICE is hereby given that, our client intends to transact with the lands situated in Jigani Village, Jigani Hobli, Anekal Taluk, Bangalore Urban District, from the respective owners, which is more fully described in the Schedule hereunder and hereinafter referred to as the **"Schedule Property"**. Any person having any subsisting claim, right, title or interest, in respect of the **Schedule Property** or any part thereof, in any manner including by way of easement, beneficial interest or pre-emption or under any agreement or other disposition or under any suit or award passed by any Court or Authority, arbitrator, lis-pendens, power of attorney, bequest, FSI, development rights, partnership, family arrangement or settlement or otherwise encumbrance howsoever **("Claim")**, are hereby requested to respond with documentary proof to the undersigned within 15 (Fifteen) days from the date of publication of this notice, failing which, it shall be presumed that no such Claim exists and if it existed, the claimant has relinquished such Claim and/or waived their right to exercise such Claim.

SCHEDULE PROPERTY

Sy No	Owner	Extent				East By	West By	North By	South By
		Acre	Gunta	Kharab "A"	Kharab "B"				
350/3	Mr R Puttappa Reddy son of late Mr Rama Reddy	0	34	0	1	Sy. No. 346	Sy. No. 350/1	Sy No. 350/2	Sy. Nos. 408 & 343
351/2	Mr Venkatesha son of Late Mr Muniyellappa Ms Lakshmamma wife of Mr Yellappa along with Mr Srinivas, Mr Sampangi and Mr Munikrishna (all sons of Mr Yellappa)	0	21	0	0	Sy. Nos. 349/1 & 350/1	Sy. No. 352	Sy. No. 351/1	Sy. No. 406

Date:01.11.2025
Bangalore

Pavithra Thammaiah
Khaitan & Co LLP
Embassy Quest, 3rd Floor, 45/1, Magrath Road Bengaluru-560 025
T: +91 80 43397000

ಶನಿವಾರ, ನವೆಂಬರ್ 1, 2025 | ₹ 7.00

prajavani.net prajavani • www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ದಬಂಗ್‌ಗೆ ಕಿರೀಟ



ಆಶು ಮಲಿಕ್ ನಾಯಕತ್ವದ ದಬಂಗ್ ಡೆಲ್ಲಿ ತಂಡವು ಶುಕ್ರವಾರ ಫೈನಲ್‌ನಲ್ಲಿ ಪುಣೇರಿ ಪಲ್ಟನ್ ತಂಡವನ್ನು 31–28 ಅಂಕಗಳಿಂದ ಮಣಿಸಿ ಪ್ರೊ ಕಬಡ್ಡಿ ಲೀಗ್‌ನ 12ನೇ ಆವೃತ್ತಿಯ ಪ್ರಶಸ್ತಿ ಗೆದ್ದುಕೊಂಡಿತು

ಕಥಕ್ಕಳಿ ಸಿದ್ಧತೆ



ಬೆಂಗಳೂರಿನಲ್ಲಿ ಶುಕ್ರವಾರ ಮಹಾಭಾರತ ನೃತ್ಯ ಪ್ರದರ್ಶನಕ್ಕಾಗಿ ಕಲಾವಿದರೊಬ್ಬರು ವೇಷ ಧರಿಸಿ ಅಂತಿಮ ಸ್ಪರ್ಶ ಪಡೆದರು

‘ಗೋಲ್ಡನ್ ಅವರ್’ ಅರಿವಿರಲಿ

ರಾಷ್ಟ್ರೀಯ ಸೈಬರ್ ಸಹಾಯವಾಣಿಗೆ ಮಾಹಿತಿ ನೀಡುವವರ ಸಂಖ್ಯೆ ಕಡಿಮೆ

• ಆದಿತ್ಯ ಕೆ.ಎ.

ಬೆಂಗಳೂರು: ಸೈಬರ್ ವಂಚನೆಗೆ ಒಳಗಾದವರ ನೆರವಿಗೆಂದು ‘ರಾಷ್ಟ್ರೀಯ ಸೈಬರ್ ಸಹಾಯವಾಣಿ’ (ಎನ್‌ಸಿಆರ್‌ಪಿ) ಸ್ಥಾಪಿಸಿ ನಾಲ್ಕು ವರ್ಷ ಕಳೆದಿದ್ದರೂ ‘ಗೋಲ್ಡನ್ ಅವರ್’ನಲ್ಲಿ (ಕೃತ್ಯ ನಡೆದ ಒಂದು ತಾಸಿನ ಒಳಗಾಗಿ) ಸಹಾಯವಾಣಿ (1930)ಗೆ ಕರೆ ಮಾಡಿ ವಂಚನೆಯ ಬಗ್ಗೆ ಮಾಹಿತಿ ನೀಡುತ್ತಿರುವವರ ಸಂಖ್ಯೆ ತೀರಾ ಕಡಿಮೆ.

ಈ ವರ್ಷವೂ ಸಾವಿರಾರು ಮಂದಿ ಸೈಬರ್ ವಂಚಕರ ಬಲೆಗೆ ಬಿದ್ದು, ಲಕ್ಷಾಂತರ ರೂಪಾಯಿ ಹಣ ಕಳೆದುಕೊಂಡಿದ್ದರೂ ಸಹಾಯವಾಣಿಗೆ ಕರೆ ಮಾಡಿ ನೆರವು ಕೋರಿದವರ ಸಂಖ್ಯೆ ಬರೀ ಶೇಕಡ 14.36.

ಸೈಬರ್ ವಂಚನೆ ಪ್ರಕರಣಗಳು ಹೆಚ್ಚಾದ ಬೆನ್ನಲ್ಲೇ 2021ರಲ್ಲಿ ಪ್ರತ್ಯೇಕವಾಗಿ ‘ಸೈಬರ್ ಕ್ರೈಂ ಸಹಾಯವಾಣಿ’ ಸ್ಥಾಪಿಸಲಾಗಿತ್ತು. ಆರಂಭಿಕ ವರ್ಷದಲ್ಲಿ ಶೇ 7.08 ಮಂದಿ ಕರೆ ಮಾಡಿ ವಂಚನೆಯ ಬಗ್ಗೆ ಮಾಹಿತಿ ನೀಡಿದ್ದರು. 2023ರಲ್ಲಿ ಕರೆ ಮಾಡಿದವರ ಸಂಖ್ಯೆ ಶೇ 11.7ಕ್ಕೆ ಏರಿಕೆ ಆಗಿತ್ತು. ಅದೇ 2024ರಲ್ಲಿ ಶೇ 9.43 ಮಂದಿಯಷ್ಟೇ ಕರೆ ಮಾಡಿ ಅಳಲು ತೋಡಿಕೊಂಡಿದ್ದರು.

‘ಕೃತ್ಯ ನಡೆದ ಒಂದು ತಾಸಿನ ಒಳಗಾಗಿ ಕರೆ ಮಾಡಿ ಮಾಹಿತಿ ನೀಡದ ಕಾರಣಕ್ಕೆ ವಂಚನೆಗೆ ಒಳಗಾದವರಿಗೆ ಹಣವನ್ನು ಮರಳಿ ಕೊಡಿಸಲು ಸಾಧ್ಯವಾಗುತ್ತಿಲ್ಲ. ವಂಚನೆಯಾದ ಕೆಲವೇ ನಿಮಿಷಗಳಲ್ಲಿ ಈ ಸಂಖ್ಯೆಗೆ ಮಾಹಿತಿ ನೀಡಿದರೆ ವರ್ಗಾವಣೆಯಾದ ಹಣವನ್ನು ಬ್ಯಾಂಕ್ ಖಾತೆಗಳಲ್ಲೇ ತಡೆ ಹಿಡಿಯಲು ಸಾಧ್ಯವಾಗಲಿದೆ. ‘ಡಿಜಿಟಲ್ ಅರೆಸ್ಟ್’, ಹೂಡಿಕೆ, ಲಿಂಕ್‌ಗಳ ಮೇಲೆ ಕ್ಲಿಕ್ ಮಾಡಿ ಅಥವಾ ಅಪರಿಚಿತರಿಗೆ ಒಟಿಪಿ ನೀಡಿ ವಂಚನೆಗೆ ಒಳಗಾದವರು ತಕ್ಷಣವೇ ಮಾಹಿತಿ ನೀಡುತ್ತಿಲ್ಲ. ಭಯದ ಕಾರಣದಿಂದ ಸೈಬರ್ ಸಹಾಯವಾಣಿ ಹಾಗೂ ಹತ್ತಿರದ ಠಾಣೆಗೆ ಮಾಹಿತಿ ನೀಡಲು ಜನರು ಹಿಂದೇಟು ಹಾಕುತ್ತಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಮುಖ್ಯಾಂಶಗಳು

- ಕೃತ್ಯ ನಡೆದ ತಾಸಿನ ಒಳಗಾಗಿ ಸಹಾಯವಾಣಿ 1930ಗೆ ಕರೆ ಮಾಡಿ
- ವರ್ಗಾವಣೆಯಾದ ಹಣವನ್ನು ಬ್ಯಾಂಕ್‌ನಲ್ಲಿ ತಡೆಹಿಡಿಯಲು ಸಾಧ್ಯ

‘ಚಿಕ್ಕಬಳ್ಳಾಪುರದ ಸಂಸದ ಡಾ.ಕೆ. ಸುಧಾಕರ್ ಅವರ ಪತ್ನಿ, ವೈದ್ಯೆ ಪ್ರೀತಿ ಅವರಿಗೆ ಸೈಬರ್ ವಂಚಕರು ‘ಡಿಜಿಟಲ್ ಅರೆಸ್ಟ್’ ಹೆಸರಿನಲ್ಲಿ ಬೆದರಿಸಿ ₹14 ಲಕ್ಷ ದೋಚಿದ್ದರು. ವಂಚನೆಗೊಳಗಾದ ಒಂದು ಗಂಟೆಯೊಳಗೇ ಸಹಾಯ-



ವಾಣಿಯಲ್ಲಿ ಪ್ರೀತಿ ಅವರು ದೂರು ದಾಖಲಿಸಿದ್ದರು. ಸಕಾಲದಲ್ಲಿ ಅವರು ದೂರು ದಾಖಲಿಸಿದ ಪರಿಣಾಮ ತ್ವರಿತವಾಗಿ ತನಿಖೆ ಸಾಧ್ಯವಾಗಿತ್ತು. ವರ್ಗಾವಣೆಯಾದ ಬ್ಯಾಂಕ್ ಖಾತೆಯಲ್ಲಿದ್ದ ಹಣದ ವಹಿವಾಟು ಸ್ಥಗಿತ (ಫ್ರೀಜ್) ಮಾಡಿಸಿದ್ದೆವು. ಬಳಿಕ ಅಷ್ಟೂ ಹಣವನ್ನು ಪ್ರೀತಿ ಅವರ ಖಾತೆಗೆ ಮರು ವರ್ಗಾವಣೆ ಮಾಡಿಸಲಾಗಿತ್ತು’ ಎಂದು ಮೂಲಗಳು ಹೇಳಿವೆ.

2024ರಲ್ಲಿ ಪ್ರತಿದಿನ ಸರಾಸರಿ 2,950 ಕರೆಗಳನ್ನು ಸ್ವೀಕರಿಸಲಾಗಿತ್ತು. ಕರೆಗಳ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಕರೆ ಸ್ಥಗಿತ ಸಮಸ್ಯೆ ಉಂಟಾಗಿತ್ತು. ಇದರಿಂದಾಗಿ 1,400 ಕರೆಗಳನ್ನು ಸ್ವೀಕರಿಸಲು ಸಾಧ್ಯವಾಗಿರಲಿಲ್ಲ. ಇದೀಗ ತಾಂತ್ರಿಕ ಸಮಸ್ಯೆಯನ್ನು ಸರಿಪಡಿಸಲಾಗಿದೆ. ಐವಿಆರ್ ವ್ಯವಸ್ಥೆಯ ಮೂಲಕ ಕರೆ ವರ್ಗೀಕರಿಸಲಾಗುತ್ತಿದೆ. ಈ ವರ್ಷ ನಿತ್ಯ 4,700 ಕರೆಗಳನ್ನು ಸ್ವೀಕರಿಸಲಾಗಿದ್ದು, ಈ ಪೈಕಿ 2,560 ಹಣಕಾಸಿಗೆ ಸಂಬಂಧಿಸಿದ್ದರೆ, ಉಳಿದ ಕರೆಗಳು ದೂರು ಸ್ಥಿತಿ ಕರೆಗಳಾಗಿದ್ದವು.

ಇತರೆ ಅಪರಾಧದ ಕರೆಗಳು ಹೆಚ್ಚು: ಸೈಬರ್ ಅಪರಾಧ ಹೊರತುಪಡಿಸಿದರೆ ರಾಜ್ಯದಲ್ಲಿ ಇತರೆ ಅಪರಾಧಗಳ ಕುರಿತು ಸಹಾಯವಾಣಿ 112ಕ್ಕೆ ಬರುತ್ತಿರುವ ಕರೆಗಳ ಸಂಖ್ಯೆ ಹೆಚ್ಚಾಗಿವೆ. 112 ಮೂಲಕ ಪ್ರತಿದಿನ 24 ಸಾವಿರ ಕರೆಗಳನ್ನು ಸ್ವೀಕರಿಸಲಾಗುತ್ತಿದೆ.

ಸಹಾಯವಾಣಿಗೆ ಬಂದ ಒಟ್ಟು ಕರೆಗಳು

ವರ್ಷ	ಕರೆಗಳ ಸಂಖ್ಯೆ	ವಂಚನೆ ಮೊತ್ತ (ಕೋಟಿಯಲ್ಲಿ)	ಬ್ಯಾಂಕ್‌ಗಳಲ್ಲಿ ತಡೆಹಿಡಿಯಲಾದ ಮೊತ್ತ(ಕೋಟಿಗಳಲ್ಲಿ)	ಶೇ
2022	1,30,333	₹113	₹8	7.08
2023	4,67,258	₹562	₹66	11.7
2024	10,79,458	₹2,396	₹226	9.43
2025*	6,71,365	₹938	₹135	14.36

ರಾಜ್ಯದಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ

ವರ್ಷ	ದಾಖಲಾದ ಪ್ರಕರಣಗಳು	ಹಣ ವಾಪಸ್ ಪಡೆದವರು	ಶಿಕ್ಷೆಯಾದ ಆರೋಪಿಗಳು
2023	22,253	4,563	48
2024	22,472	2,674	16
2025*	8,620	827	7

(ಜುಲೈ ವರೆಗೆ)

ಕನ್ನಡದಲ್ಲಿ ಮಾಹಿತಿ ನೀಡುವ ವ್ಯವಸ್ಥೆ

ಸೈಬರ್ ವಂಚನೆಗೆ ಒಳಗಾದವರು ಗಾಬರಿಗೊಂಡು ಸಮಯ ವ್ಯರ್ಥ ಮಾಡದೇ ಸಹಾಯವಾಣಿಗೆ ಕರೆ ಮಾಡಬೇಕು. ವಿಳಂಬ ಮಾಡಿದರೆ ತನಿಖೆಗೆ ಅಡ್ಡಿ ಆಗಲಿದೆ. ಹಣವು ಬೇರೆ ಬೇರೆ ನಕಲಿ ಖಾತೆಗಳಿಗೆ ವರ್ಗಾವಣೆಗೊಂಡು ಮೂಲ ಪತ್ತೆಯೇ ಕಷ್ಟವಾಗಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ವಂಚನೆಗೆ ಒಳಗಾದವರು ದೂರಿನ ಮಾಹಿತಿಯನ್ನು ತಮ್ಮ ಮೊಬೈಲ್ ಫೋನ್‌ಗಳ ಮೂಲಕವೇ ನೀಡುವಂತಹ ‘ವೆಬ್‌ಬಾಟ್’ ವ್ಯವಸ್ಥೆ ಜಾರಿಗೆ ತರಲಾಗಿದೆ. ಅವರು ಕನ್ನಡದಲ್ಲಿಯೇ ಮಾಹಿತಿ ನೀಡಬಹುದು’ ಎಂದು ಹೇಳಿದರು.

ಇವುಗಳ ಪೈಕಿ 1,450 ಸೇವಾ ಕರೆಗಳೇ ಆಗಿವೆ. ಕರೆ ಬಂದ ಬಳಿಕ ಗ್ರಾಮಾಂತರ ಪ್ರದೇಶದಲ್ಲಿ 15 ನಿಮಿಷ ಹಾಗೂ ನಗರ ಪ್ರದೇಶದಲ್ಲಿ 7 ನಿಮಿಷದಲ್ಲಿ ಸ್ಥಳಕ್ಕೆ ತೆರಳಿ ಸ್ಪಂದಿಸಲಾಗುತ್ತಿದೆ.

ಸಾರ್ವಜನಿಕ ಸ್ಥಳದಲ್ಲಿ ಅಸಭ್ಯ ವರ್ತನೆ, ಗಲಾಟೆ, ದಿಢೀರ್ ಪ್ರತಿಭಟನೆಗೆ ಸಂಬಂಧಿಸಿದಂತೆ ಈ ವರ್ಷ 1.48 ಲಕ್ಷ ಕರೆಗಳು (ಶೇ 67.49) ಬಂದಿದ್ದವು. ಅಗ್ನಿ ಅವಘಡಕ್ಕೆ ಸಂಬಂಧಿಸಿದಂತೆ 16,345 (ಶೇ 7.41) ಕರೆಗಳು ಬಂದಿವೆ. ಅಪಘಾತಕ್ಕೆ ಸಂಬಂಧಿಸಿದಂತೆ 12,073 (ಶೇ 5.47) ಕರೆಗಳನ್ನು ಸ್ವೀಕರಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಪರಿಹಾರ ಸೂತ್ರ ತಿರಸ್ಕಾರ

ಬಿಬಿಸಿ ಯೋಜನೆ: ಸೂಕ್ತ ಪರಿಹಾರಕ್ಕಾಗಿ ರೈತರ ಪಟ್ಟು

• ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪೆರಿಫೆರಲ್ ರಿಂಗ್ ರಸ್ತೆ- 1 ಬಿಬಿಸಿ) ಯೋಜನೆಗೆ ಸ್ವಾಧೀನಪಡಿಸಿಕೊಳ್ಳುವ ಭೂಮಿಗೆ ಪರಿಹಾರ ನೀಡುವ ಸಂಬಂಧ, ಸರ್ಕಾರ ರೂಪಿಸಿರುವ ಪರಿಹಾರ ಸೂತ್ರವನ್ನು ರೈತರು ತಿರಸ್ಕರಿಸಿದ್ದಾರೆ.

ಸ್ವಾಧೀನಪಡಿಸಿಕೊಳ್ಳುವ ಜಮೀನಿನ ಭೂ ಮಾಲೀಕರಿಗೆ ಆಯಾ ಗ್ರಾಮವಾರು ಮಾರ್ಗಸೂಚಿ ದರವನ್ನು ಗಮನದಲ್ಲಿಟ್ಟು ಕೊಂಡು ಸಂಧಾನ ಸೂತ್ರದ ಮೂಲಕ ಭೂ ಸ್ವಾಧೀನ ಕಾಯ್ದೆ 1894ರಡಿ ಪರಿಹಾರ ನೀಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಧರಿಸಿತ್ತು. ಇದಕ್ಕೆ ಭೂ ಮಾಲೀಕರು ಒಪ್ಪಲಿಲ್ಲ.



ಸರ್ಕಾರ ಹಾಗೂ ಬಿಡಿಎ ಮೇಲೆ ಆರ್ಥಿಕ ಹೊರೆ ಕಡಿಮೆ ಮಾಡಲು ಈ ಯೋಜನೆಯಲ್ಲಿ ಭೂಮಿ ಕಳೆದುಕೊಳ್ಳುವ ರೈತರಿಗೆ ನಾಲ್ಕು ರೀತಿಯಲ್ಲಿ ಪರಿಹಾರ ನೀಡಲು ಸರ್ಕಾರ ನಿರ್ಧರಿಸಿದೆ.

ಮಾರುಕಟ್ಟೆ ದರದಲ್ಲಿ ನಗರ ಭಾಗದಲ್ಲಿ ಎರಡು ಪಟ್ಟು ಹಾಗೂ ಗ್ರಾಮೀಣ ಪ್ರದೇಶದಲ್ಲಿ ಮೂರು ಪಟ್ಟು ನಗದು ಪರಿಹಾರ ಅಥವಾ ವರ್ಗಾಯಿಸಬಹುದಾದ ಹಕ್ಕು (ಟಿಡಿಆರ್) ಅಥವಾ ನೆಲ ವಿಸ್ತೀರ್ಣ ಅನುಪಾತ (ಎಫ್‌ಎಆರ್) ಅಥವಾ ಶೇ 35ರಷ್ಟು ವಾಣಿಜ್ಯ ಭೂಮಿಯನ್ನು ಪಡೆಯಬಹುದು. ಒಂದು ವೇಳೆ ವಾಣಿಜ್ಯ ಭೂಮಿ ಬೇಡ, ವಸತಿ ಪ್ರದೇಶದಲ್ಲಿ ಜಾಗ ಬೇಕು ಎಂದರೆ ಬಿಡಿಎ ನಿರ್ಮಿಸುತ್ತಿರುವ ನೂತನ ಬಡಾವಣೆಗಳಲ್ಲಿ ಶೇ 40ರಷ್ಟು ಜಾಗ ನೀಡಲಾಗುತ್ತದೆ.

ಬಿಡಿಎ ಕಾಯ್ದೆಯಲ್ಲಿ, ಕೇಂದ್ರದ ಹೊಸ ಕಾಯ್ದೆ ಅನುಸಾರ ಹೆಚ್ಚಿನ ಪರಿಹಾರ ನೀಡಲು ಅವಕಾಶವಿಲ್ಲ. 20 ಗುಂಟೆಗಿಂತ ಒಳಗೆ ಭೂಮಿ ಕಳೆದುಕೊಳ್ಳುವವರಿಗೆ ನಗದು ಪರಿಹಾರ ಮಾತ್ರ ನೀಡಲಾಗುವುದು. ಅದಕ್ಕಿಂತ ಹೆಚ್ಚಿನ ಭೂಮಿ ಕಳೆದುಕೊಳ್ಳುವವರಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಯಾವುದಾದರೂ ಒಂದು ಆಯ್ಕೆಯನ್ನು ಆರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

ಪರಿಹಾರ ಸೂತ್ರ ತಿರಸ್ಕರಿಸಿರುವ ರೈತರು, ಕೇಂದ್ರ ಸರ್ಕಾರದ 2013ರ ಭೂಸ್ವಾಧೀನ ಕಾಯ್ದೆ ಅಡಿ ಪರಿಹಾರ ನಿಗದಿ ಮಾಡಬೇಕು ಹಾಗೂ ಮಾರುಕಟ್ಟೆ ಬೆಲೆಗಿಂತ ಎರಡು ಪಟ್ಟು ಪರಿಹಾರ ನೀಡುವುದರ ಜತೆಗೆ ಪುನರ್ವಸತಿ ಕಲ್ಪಿಸಬೇಕು ಎಂದು ಪಟ್ಟು ಹಿಡಿದಿದ್ದಾರೆ.

‘ಮೆಟ್ರೊ, ರೈಲ್ವೆ ಸೇರಿ ಅನೇಕ ಸರ್ಕಾರಿ ಇಲಾಖೆಗಳು ಕೇಂದ್ರ ಭೂಸ್ವಾಧೀನ ಕಾಯ್ದೆಯಡಿ ಪರಿಹಾರ ನೀಡುತ್ತಿವೆ. ಬಿಬಿಸಿ ಯೋಜನೆ ಸಂತ್ರಸ್ತರಿಗೆ ಈ ಕಾಯ್ದೆ ಅನ್ವಯಿಸುವುದಿಲ್ಲವೇ’ ಎಂದು ರೈತರು ಪ್ರಶ್ನಿಸಿದ್ದಾರೆ.

2006–07ರಲ್ಲಿ ಈ ಯೋಜನೆಯನ್ನು ಸರ್ಕಾರ ಕೈಗೆತ್ತಿಕೊಂಡಿದ್ದು, 20 ವರ್ಷ ರೈತರು ನೋವು, ಕಷ್ಟ ಎದುರಿಸಿದ್ದಾರೆ.

▶5A

‘ರೈತರ ಸಭೆ ನಡೆಸಿ ಹೋರಾಟ ನಿರ್ಧಾರ’

‘ಯೋಜನೆಗೆ ಭೂಮಿ ನೀಡಲು ತಕರಾರು ಇಲ್ಲ. ಆದರೆ, ಕೇಂದ್ರ ಸರ್ಕಾರದ 2013ರ ಭೂಸ್ವಾಧೀನ ಕಾಯ್ದೆ ಅಡಿ ಪರಿಹಾರ ನಿಗದಿ ಮಾಡಬೇಕು ಹಾಗೂ ಮಾರುಕಟ್ಟೆ ಬೆಲೆಗಿಂತ ಎರಡು ಪಟ್ಟು ಪರಿಹಾರ ನೀಡುವುದರ ಜತೆಗೆ ಪುನರ್ವಸತಿ ಕಲ್ಪಿಸಬೇಕು. ಸಾಧ್ಯವಾಗದಿದ್ದರೆ ಯೋಜನೆ ರದ್ದುಪಡಿಸಲಿ. ಮುಂದಿನ ವಾರ ರೈತರ ಸಭೆ ನಡೆಸಿ, ಯೋಜನೆ ವಿರುದ್ಧ ಯಾವ ರೀತಿ ಹೋರಾಟ ಮಾಡಬೇಕು ಎಂಬುದರ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ರೈತ ಮುಖಂಡ ಬಿ.ಶ್ರೀನಿವಾಸ್ ತಿಳಿಸಿದರು.

‘77 ಗ್ರಾಮಗಳ ರೈತ ಮುಖಂಡರ ಜತೆ ಸಭೆ ನಡೆಸಿದ್ದು, ಯಾರಿಗೂ ಒಪ್ಪಿಗೆ ಇಲ್ಲ. ಯೋಜನೆ ರದ್ದುಪಡಿಸುವಂತೆ 700ಕ್ಕೂ ಅಧಿಕ ರೈತರು ಹೈಕೋರ್ಟ್ ಮೊರೆಹೋಗಿದ್ದಾರೆ. ಭೂ ಸ್ವಾಧೀನ ಕಾಯ್ದೆಯಲ್ಲೂ ಏಕರೂಪತೆ ತರಲು ಎರಡನೇ ಆಡಳಿತ ಸುಧಾರಣಾ ಆಯೋಗ ಸಲಹೆ ನೀಡಿದೆ. ಭೂಸ್ವಾಧೀನ, ಪರಿಹಾರ, ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ಕಾಯ್ದೆ 2013ಕ್ಕೆ ಅನುಗುಣವಾಗಿ ತಿದ್ದುಪಡಿ ಮಾಡಬೇಕು ಅಥವಾ ಅಳವಡಿಸಿಕೊಳ್ಳಬೇಕು. ಇದರಿಂದ ಭೂಮಾಲೀಕರ ಹಕ್ಕುಗಳನ್ನು ರಕ್ಷಿಸುವ ಜತೆಗೆ ಕೋರ್ಟ್‌ನಲ್ಲಿ ದಾಖಲಾಗುವ ಪ್ರಕರಣಗಳು ಕಡಿಮೆ ಆಗಲಿವೆ’ ಎಂದು ಹೇಳಿದರು.

ತಾಯಿ ಕೊಂದು ಕಥೆ ಕಟ್ಟಿದ್ದ ಪುತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಿಯಕರ ಹಾಗೂ ಆತನ ಸ್ನೇಹಿತರೊಂದಿಗೆ ಸೇರಿಕೊಂಡು ತಾಯಿಯನ್ನು ಕೊಂದು ಕಥೆ ಕಟ್ಟಿದ್ದ ಪುತ್ರಿ ಸೇರಿ ಐವರನ್ನು ಸುಬ್ರಹ್ಮಣ್ಯಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಮತ್ತೊಬ್ಬ ಬಾಲಕ ತಲೆಮರೆಸಿಕೊಂಡಿದ್ದು, ಹುಡುಕಾಟ ನಡೆಸಲಾಗುತ್ತಿದೆ.

ಉತ್ತರಹಳ್ಳಿಯ ನಿವಾಸಿ ನೇತ್ರಾವತಿ (34) ಅವರ ಅಸಹಜ ಸಾವು ಪ್ರಕರಣಕ್ಕೆ ಪೊಲೀಸ್ ತನಿಖೆಯಿಂದ ತಿರುವು ಸಿಕ್ಕಿದೆ.

ನೇತ್ರಾವತಿ ಅವರು ಬ್ಯಾಂಕ್‌ವೊಂದರ ಸಾಲ ವಸೂಲಾತಿ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಅವರ 16 ವರ್ಷದ ಪುತ್ರಿ, ಆಕೆಯ ಪ್ರಿಯಕರ ಹಾಗೂ ಆತನ ಸ್ನೇಹಿತರೇ ಕೊಲೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ. ಬಂಧಿತರು 16 ವರ್ಷದೊಳಗಿನವರಾಗಿದ್ದು, ಬಾಲಮಂದಿರಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ನೇತ್ರಾವತಿ ಅವರ ಪುತ್ರಿ, ಯುವಕನನ್ನು ಪ್ರೀತಿಸುತ್ತಿದ್ದರು. ಪ್ರಿಯಕರ ಹಾಗೂ ಅವನ ಮೂವರು ಸ್ನೇಹಿತರೊಂದಿಗೆ ಮನೆಗೆ ಬಂದಿದ್ದಳು’ ಎಂದು ಪೊಲೀಸರು ತಿಳಿಸಿದರು.

▶5A

ಹಳದಿ ಮಾರ್ಗದಲ್ಲಿ ಐದನೇ ರೈಲು ಸಂಚಾರ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವ ಆಚರಣೆಯ ಸಂದರ್ಭದಲ್ಲಿಯೇ ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಐದನೇ ರೈಲು ಸಂಚಾರ ಆರಂಭಿಸಲಿದೆ. ಈ ಮಾರ್ಗದಲ್ಲಿ ನವೆಂಬರ್ 1ರಿಂದ ಪ್ರತಿ 15 ನಿಮಿಷಕ್ಕೊಂದು ರೈಲು ಸಂಚರಿಸಲಿದೆ.



ಪಶ್ಚಿಮ ಬಂಗಾಳದ ಟಿಟಾಗಢ ರೈಲ್ ಸಿಸ್ಟಂ ಲಿಮಿಟೆಡ್ (ಟಿಆರ್‌ಎಸ್‌ಎಲ್) ಕಾರ್ಯಾಗಾರದಿಂದ ರವಾನೆಯಾಗಿದ್ದ ಐದನೇ ರೈಲಿನ ಆರು ಬೋಗಿಗಳು ಅಕ್ಟೋಬರ್ ಮೊದಲ ವಾರದಲ್ಲಿ ಹೆಬ್ಬಗೋಡಿ ಮೆಟ್ರೊ ಡಿಪೊಗೆ ತಲುಪಿದ್ದವು. ಇನ್‌ಸ್ಪೆಕ್ಷನ್ ಬೇ ಲೈನ್‌ನಲ್ಲಿ ಆರಂಭಿಕ ಪರೀಕ್ಷೆಗಳು ನಡೆದಿದ್ದವು. ಬಳಿಕ ರಾತ್ರಿ ವೇಳೆಯಲ್ಲಿ ವಾಣಿಜ್ಯ ಮಾರ್ಗದಲ್ಲಿ ಪರೀಕ್ಷಾ ಸಂಚಾರ ನಡೆಸಲಾಗಿತ್ತು.

ಆರ್.ವಿ. ರಸ್ತೆ–ಡೆಲ್ಟಾ ಎಲೆಕ್ಟ್ರಾನಿಕ್ಸ್ ಬೊಮ್ಮಸಂದ್ರ ನಡುವೆ ಆಗಸ್ಟ್ 11ಕ್ಕೆ ಆರಂಭವಾಗಿರುವ ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಸದ್ಯ ನಾಲ್ಕು ರೈಲುಗಳು ಪ್ರತಿ 19 ನಿಮಿಷಕ್ಕೊಂದು ಟ್ರಿಪ್‌ನಂತೆ ಸಂಚರಿಸುತ್ತಿವೆ. ಐಟಿ ಹಬ್ ಆಗಿರುವ ಎಲೆಕ್ಟ್ರಾನಿಕ್ ಸಿಟಿಯನ್ನು ಈ ಮಾರ್ಗ ಹಾದು ಹೋಗುತ್ತಿರುವುದರಿಂದ ನಿರೀಕ್ಷೆ ಮೀರಿ ಪ್ರಯಾಣಿಕರು ಮೆಟ್ರೊದಲ್ಲಿ ಸಂಚರಿಸುತ್ತಿದ್ದಾರೆ.

ಆರ್.ವಿ. ರಸ್ತೆ ಮತ್ತು ಬೊಮ್ಮಸಂದ್ರ ಟರ್ಮಿನಲ್ ನಿಲ್ದಾಣಗಳಿಂದ ಹೊರಡುವ ಮೊದಲ ಮತ್ತು ಕೊನೆಯ ರೈಲುಗಳ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

15,000 ರಸ್ತೆ ಗುಂಡಿ ದುರಸ್ತಿ

ಇನ್ನೆರಡು ದಿನಗಳಲ್ಲಿ ಎಲ್ಲ ಗುಂಡಿ ಮುಚ್ಚಲಾಗುವುದು: ಮಹೇಶ್ವರ್ ರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಈವರೆಗೆ 15 ಸಾವಿರ ಗುಂಡಿಗಳನ್ನು ಮುಚ್ಚಲಾಗಿದ್ದು, ಇನ್ನೆರಡು ದಿನಗಳಲ್ಲಿ ಬಹುತೇಕ ಎಲ್ಲ ರಸ್ತೆಗಳಲ್ಲೂ ದುರಸ್ತಿ ಕಾರ್ಯ ಮುಗಿಯಲಿದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀಡಿದ್ದ ಗಡುವು ಅ.31ಕ್ಕೆ ಮುಗಿದಿದ್ದು, ಎಲ್ಲ ಗುಂಡಿಗಳನ್ನು ಮುಚ್ಚಲಾಗಿದೆಯೇ' ಎಂಬ ಸುದ್ದಿಗಾರರ ಪ್ರಶ್ನೆಗೆ ಶುಕ್ರವಾರ ಪ್ರತಿಕ್ರಿಯೆ ನೀಡಿದ ಅವರು, 'ಮುಖ್ಯಮಂತ್ರಿಯವರ ಸೂಚನೆಯಂತೆ ಐದೂ ನಗರ ಪಾಲಿಕೆಗಳಲ್ಲಿ ಕ್ಷಿಪ್ರಗತಿಯಲ್ಲಿ ಕೆಲಸ ಮಾಡಿದ್ದೇವೆ. ಮಳೆ ಬಂದಿದ್ದರಿಂದ ಸಮಸ್ಯೆಯಾಯಿತು. ಇನ್ನೆರಡು ದಿನದಲ್ಲಿ ಎಲ್ಲ ಕಡೆ ರಸ್ತೆ ಗುಂಡಿ ಮುಚ್ಚಲಾಗುತ್ತದೆ' ಎಂದರು.

'ಎಲ್ಲ ನಗರ ಪಾಲಿಕೆಗಳ ಅಧಿಕಾರಿಗಳು ಆಯಾ ವ್ಯಾಪ್ತಿಯಲ್ಲಿ ನಿರಂತರವಾಗಿ ಕೆಲಸ ಮಾಡುತ್ತಿದ್ದಾರೆ. ಎಲ್ಲ ರಸ್ತೆಗಳ ಗುಂಡಿಗಳನ್ನೂ ಮುಚ್ಚಲಾಗಿಲ್ಲ ಎಂಬುದರ ಅರಿವಿದೆ. ಅತಿಹೆಚ್ಚು ವಾಹನ ಸಂಚಾರವಿರುವ ಕೆಲವು ರಸ್ತೆಗಳಲ್ಲಿ ಸಮಸ್ಯೆ ಇದೆ. ಅವುಗಳನ್ನು ಪರಿಹರಿಸಲಾಗುತ್ತದೆ. ಗುಂಡಿ ಮುಚ್ಚಿದ ತಕ್ಷಣ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುವುದರಿಂದ ಮತ್ತೆ ಗುಂಡಿಯಾಗುವ ಸಾಧ್ಯತೆ ಇದೆ' ಎಂದು ಹೇಳಿದರು.

ಹೊಸಕೆರೆ ಹಳ್ಳಿ ಜಂಕ್ಷನ್‌ನಲ್ಲಿ ಮೇಲ್ಸೇತುವೆ ಕಾಮಗಾರಿ ಬಹುತೇಕ ಮುಗಿದಿದ್ದು, ವಾಹನ ಸಂಚಾರಕ್ಕೆ ಅತಿ ಶೀಘ್ರವೇ ಅವಕಾಶ ಮಾಡಿಕೊಡಲಾಗುತ್ತದೆ ಎಂದರು. ಜಿಬಿಎ ವ್ಯಾಪ್ತಿಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಶೇ 100ಕ್ಕಿಂತ ಹೆಚ್ಚಾಗಿದೆ. ಸುಮಾರು 47 ಲಕ್ಷ ಕುಟುಂಬಗಳ ಸಮೀಕ್ಷೆ ಮುಗಿದಿದೆ. ಶೇ 20ರಷ್ಟು ಸಮೀಕ್ಷೆಯನ್ನು ಸಮೀಕ್ಷೆಯಿಂದ ಬಿಡುಗಡೆ ಮಾಡಲಾಗಿದೆ. ನಗರ ಪಾಲಿಕೆ ಆಯುಕ್ತರು ಅಂತಿಮ ಕಾರ್ಯದಲ್ಲಿದ್ದು, ಸೋಮವಾರದ ವೇಳೆಗೆ ಅಂಕಿ-ಅಂಶ ನೀಡಲಿದ್ದಾರೆ ಎಂದು ತಿಳಿಸಿದರು.

ಶೀಘ್ರ ಪೂರ್ಣಗೊಳಿಸಿ: ಪಣತ್ತೂರು ಎಸ್. ಕ್ರಾಸ್ ಹಾಗೂ ಬಳಗೆರೆ ರಸ್ತೆಯಲ್ಲಿ ಬಾಕಿಯಿರುವ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಲು ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿನ ವಿವಿಧ ಸ್ಥಳಗಳಲ್ಲಿ ಶುಕ್ರವಾರ ಪರಿಶೀಲನೆ ನಡೆಸಿದ ವೇಳೆ ಅವರು, ಪಣತ್ತೂರು ರಸ್ತೆಯ ಎರಡೂ ಬದಿಯ ಪಾದಚಾರಿ ಮಾರ್ಗಗಳ ಒತ್ತುವರಿಯನ್ನು ಗುರುತಿಸಿ ತೆರವುಗೊಳಿಸಬೇಕು. ಬಳಗೆರೆ ರಸ್ತೆಯ ಸುಮಾರು 700 ಮೀಟರ್ ರಸ್ತೆಗೆ ವೈಟ್ ಟಾಪಿಂಗ್ ಕಾಮಗಾರಿ ಪೂರ್ಣಗೊಂಡಿದ್ದು, ಉಳಿದ ಭಾಗದಲ್ಲಿ ವೆಟ್ ಮಿಕ್ಸ್ ಹಾಕಲಾಗಿದೆ. ಅಲ್ಲಿ ಕೂಡಲೇ ಡಾಂಬರೀಕರಣ ಮಾಡುವಂತೆ ಸೂಚಿಸಿದರು.



ಪಣತ್ತೂರಿನಲ್ಲಿ ರಸ್ತೆ ಕಾಮಗಾರಿಯನ್ನು ಮಹೇಶ್ವರ್ ರಾವ್ ಪರಿಶೀಲಿಸಿದರು

ವೈಟ್ ಟಾಪಿಂಗ್ ವಿಳಂಬ: ನೋಟಿಸ್

ಜಿಬಿಎ ವ್ಯಾಪ್ತಿಯಲ್ಲಿ ವೈಟ್ ಟಾಪಿಂಗ್ ನಡೆಯುತ್ತಿರುವ 28 ರಸ್ತೆಗಳಲ್ಲಿ ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ತ್ವರಿತಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು. ವಿಳಂಬ ಮಾಡುತ್ತಿರುವ ಗುತ್ತಿಗೆದಾರರಿಗೆ ನೋಟಿಸ್ ಜಾರಿ ಮಾಡಿ ಎಂದು ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ವೈಟ್ ಟಾಪಿಂಗ್ ಪ್ರಗತಿಯಲ್ಲಿರುವ ರಸ್ತೆಗಳಲ್ಲಿ ಜಲಮಂಡಳಿಯಿಂದ ರಸ್ತೆ ಪುನರ್ ಸ್ಥಾಪನೆ ಕಾರ್ಯ, ಒಳಚರಂಡಿ ಸೋರುವಿಕೆ, ಒಳಚರಂಡಿ ಚೇಂಬರ್‌ಗಳನ್ನು ಎತ್ತರಿಸುವುದು, ಒಳಚರಂಡಿಯಿಂದ ಕೊಳಚೆ ನೀರು ರಸ್ತೆ ಮೇಲೆ ಹರಿಯುವುದು, ಕತ್ತರಿಸಿರುವ ಭಾಗಗಳನ್ನು ದುರಸ್ತಿಪಡಿಸುವುದು, ಸಂಚಾರಿ ಪೊಲೀಸ್ ವಿಭಾಗದಿಂದ ಅನುಮತಿ ಪಡೆಯುವುದು ಸೇರಿದಂತೆ ಹಲವು ಸಮಸ್ಯೆಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಿ ಕಾಮಗಾರಿ ಪ್ರಾರಂಭಿಸಲು ಹೇಳಿದರು.

ವೈಟ್ ಟಾಪಿಂಗ್ ನಡೆಯುತ್ತಿರುವ ರಸ್ತೆ ಹಾಗೂ ಹೈ-ಡೆನ್ಸಿಟಿ ಕಾರಿಡಾರ್ ರಸ್ತೆಗಳಲ್ಲಿ ಯಾವುದೇ ಗುಂಡಿಗಳು ಇರದಂತೆ ನೋಡಿಕೊಳ್ಳಬೇಕು. ಜಲಮಂಡಳಿಯಿಂದ ಕೆಲಸ ಪೂರ್ಣಗೊಂಡಿರುವ ಸ್ಥಳಗಳಲ್ಲಿ ಕೂಡಲೇ ದುರಸ್ತಿ ಕಾರ್ಯ ಕೈಗೊಳ್ಳಬೇಕೆಂದು ಅವರು ಅಧಿಕಾರಿಗಳಿಗೆ ಸೂಚಿಸಿದರು.

ಒಎಫ್‌ಸಿ ಸೇವಾ ಸಂಸ್ಥೆಗಳೊಂದಿಗೆ ಸಭೆ ನಡೆಸಿ, ಪಾದಚಾರಿ ಮಾರ್ಗ ಹಾಗೂ ವಿದ್ಯುತ್ ಕಂಬಗಳ ಮೇಲೆ ಅನಧಿಕೃತವಾಗಿ ನೇತಾಡುತ್ತಿರುವ ಒಎಫ್‌ಸಿ ಕೇಬಲ್‌ಗಳನ್ನು ತೆರವುಗೊಳಿಸಬೇಕು ಎಂದರು.



ಬೆಂಗಳೂರಿನ ಗಾಂಧಿ ಭವನದಲ್ಲಿ ಶುಕ್ರವಾರ ಡಾ.ಸಿ.ಸೋಮಶೇಖರ–ಎನ್. ಸರ್ವ ಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನ ಆಯೋಜಿಸಿದ್ದ ಸಮಾರಂಭದಲ್ಲಿ(ಎಡದಿಂದ) ಗಾಯಕಿ ಕಸ್ತೂರಿ ಶಂಕರ್, ರಾಮನಗರದ ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷ ಹಿ. ಚಿ. ಬೋರಲಿಂಗಯ್ಯ ರಂಜಾನ್ ದರ್ಗಾ (ವಚನ ಸಾಹಿತ್ಯ), ಕಾ.ತ. ಚಿಕ್ಕಣ್ಣ (ದಾಸ ಸಾಹಿತ್ಯ) ಮತ್ತು ರಂಗಕರ್ಮಿ ಶ್ರೀನಿವಾಸ್ ಜಿ. ಕಪ್ಪಣ್ಣ (ಸಾಂಸ್ಕೃತಿಕ ಸಂಘಟನೆ) ಅವರಿಗೆ ಸಂಸ್ಕೃತಿ ಸಂಗಮ–2025' ಪ್ರಶಸ್ತಿ ಪ್ರದಾನ ಮಾಡಲಾಯಿತು. ಎನ್. ಸರ್ವಮಂಗಳ, ಸಿ. ಸೋಮಶೇಖರ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಬಸವರಾಜ ಎಸ್. ಬೊಮ್ಮಾಯಿ, ಕೆ.ವಿ. ನಾಗರಾಜ ಮೂರ್ತಿ, ಪುರುಷೋತ್ತಮ ಬಿಳಿಮಲೆ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ರಾಜಕೀಯಕ್ಕೆ ಬಸವಣ್ಣ ಬಳಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಸವಣ್ಣನನ್ನು ಕೆಲವರು ತಮ್ಮ ಇಚ್ಛೆಯ ರೀತಿ ವ್ಯಾಖ್ಯಾನಿಸಿ ಹರಿದು ಹಂಚಿಕೊಂಡಿದ್ದೂ ಅಲ್ಲದೇ ರಾಜಕೀಯ ವಸ್ತುವಾಗಿ ಬಳಕೆ ಮಾಡಿಕೊಳ್ಳುತ್ತಿರುವುದು ದುರ್ದೈವ' ಎಂದು ಸಂಸದ ಬಸವರಾಜ ಬೊಮ್ಮಾಯಿ ಬೇಸರ ವ್ಯಕ್ತಪಡಿಸಿದರು.

ಸಿ.ಸೋಮಶೇಖರ ಎನ್. ಸರ್ವಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನ ನಗರದ ಗಾಂಧಿ ಭವನದಲ್ಲಿ ಶುಕ್ರವಾರ ಏರ್ಪಡಿಸಿದ್ದ ಸಾಧಕರಿಗೆ ಸಂಸ್ಕೃತಿ ಸಂಗಮ–2025 ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

'ಬಸವಣ್ಣ ಈ ನಾಡಿನಲ್ಲಿ ಜನಿಸಿ ಕ್ರಾಂತಿ ಮಾಡಿದವರು ಎನ್ನುವುದು ನಮ್ಮ ಹಿರಿಮೆ. ಇಂಥ ಬಸವಣ್ಣನನ್ನು ತಮ್ಮ ಇಚ್ಛೆಯಂತೆ ಕೆಲವರು ವ್ಯಾಖ್ಯಾನಿಸುತ್ತಿದ್ದಾರೆ. ಜಾತಿ, ಧರ್ಮದ ಹೆಸರಿನಲ್ಲಿ ವಿಚಾರಧಾರೆಯನ್ನು ಸೀಮಿತಗೊಳಿಸುವ ಪ್ರಯತ್ನ ನಡೆಸುತ್ತಿದ್ದಾರೆ' ಎಂದು ಹೇಳಿದರು.

'ಜಾನಪದವನ್ನು ಮುಂದಿನ ಪೀಳಿಗೆಗೆ ತಲುಪಿಸಲು ತಂತ್ರಜ್ಞಾನ ಬಳಸಿಕೊಳ್ಳಬೇಕು. ಜಾನಪದ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ಜಾನಪದ ಪರಿಷತ್ತು ಜಂಟಿಯಾಗಿ ಕೆಲಸ ಮಾಡಬೇಕು. ಸರ್ಕಾರವೂ ಆರ್ಥಿಕ ನೆರವನ್ನು ನೀಡಬೇಕು' ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಮಾತನಾಡಿ, 'ಹೊಸ ತಲೆಮಾರು ತಂತ್ರಜ್ಞಾನ ಸಹಿತ ಹೊಸ ವಿಚಾರ, ಪ್ರಯೋಗಗಳ ಕಡೆ ಯೋಚಿಸುತ್ತಿದೆ. ಇಂತಹ ಪ್ರಯೋಗಗಳ ಲಾಭವನ್ನು ಕನ್ನಡ ಭಾಷೆಗೆ ಪಡೆಯಲು ವಿಫಲವಾಗುತ್ತಿದ್ದೇವೆ. ಸಾಂಸ್ಕೃತಿಕ ಪರಿಕಲ್ಪನೆಯನ್ನೂ ಹೊಸ ನೆಲೆಯಲ್ಲಿ ನೋಡಬೇಕಿದೆ' ಎಂದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, 'ತಮಿಳುನಾಡಿನಲ್ಲೂ ನಮ್ಮ ಸಂಸ್ಥೆಗಳಿವೆ. ಅಲ್ಲಿಗೆ ಬರುವ ಸರ್ಕಾರದ ಸೂಚನೆಗಳು ತಮಿಳಿನಲ್ಲೇ ಇರುತ್ತವೆ. ದೆಹಲಿಯಲ್ಲಿ ಹಿಂದಿಯಲ್ಲಿ ಪತ್ರಗಳು ಬರುತ್ತವೆ. ನಮ್ಮಲ್ಲಿ ಮಾತ್ರ ಹಾಗಿಲ್ಲ. ಇಂಗ್ಲಿಷ್‌ನಲ್ಲಿಯೇ ಸುತ್ತೋಲೆ ಹೊರಡಿಸುವುದು ಈಗಲೂ ಇದೆ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ನೀಡಿದರೂ ಸೌಲಭ್ಯ ಒದಗಿಸುತ್ತಿಲ್ಲ' ಎಂದು ಹೇಳಿದರು.

'ಸೋಮಶೇಖರ್ ಕಸಾಪ ಅಧ್ಯಕ್ಷರಾಗಲಿ'

ನಿವೃತ್ತ ಐಎಎಸ್ ಅಧಿಕಾರಿ ಸಿ.ಸೋಮಶೇಖರ್ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಬೇಕು ಎನ್ನುವ ಸಲಹೆ ಸಂಸ್ಕೃತಿ ಸಂಗಮ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕೇಳಿಬಂತು.

ಲೋಕಸಭಾ ಚುನಾವಣೆಗಿಂತಲೂ ಕಸಾಪ ಚುನಾವಣೆ ಹೆಚ್ಚು ಎನ್ನುವಂತಾಗಿದೆ. ಸಾಹಿತ್ಯ ಪರಿಷತ್ ಚುನಾವಣೆಗೆ ಸೋಮಶೇಖರ್ ಸ್ಪರ್ಧೆ ಮಾಡುತ್ತಾರೆ ಎನ್ನುವುದು ಸಂತೋಷದ ವಿಚಾರ ಎಂದು ಬಸವರಾಜ ಬೊಮ್ಮಾಯಿ ಹೇಳಿದರು. ಕನ್ನಡಿಗರ ಸಾಂಸ್ಕೃತಿಕ ಪ್ರಾತಿನಿಧಿಕ ಸಂಸ್ಥೆಯಾದ ಕಸಾಪದ ಗೌರವ, ಘನತೆಯನ್ನು ಹೆಚ್ಚಿಸುವ ಕೆಲಸ ಆಗಬೇಕು ಎಂದು ಪುರುಷೋತ್ತಮ ಬಿಳಿಮಲೆ, ನಾಗರಾಜಮೂರ್ತಿ, ರಂಜಾನ್ ದರ್ಗಾ ಹೇಳಿದರು.

'ಸಿಟಿ ಆಕ್ಸಿಲರೇಟರ್'ಗೆ ಚಾಲನೆ

ಪ್ರಜಾವಾಣಿ ವಾರ್ತೆ



ಗೌರವ್ ಗುಪ್ತ

ಬೆಂಗಳೂರು: ರಾಜ್ಯದಲ್ಲಿ 'ಪ್ರಧಾನ ಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ' ಯೋಜನೆಯ ತ್ವರಿತ ಅನುಷ್ಠಾನಕ್ಕಾಗಿ 'ಸಿಟಿ ಆಕ್ಸಿಲರೇಟರ್' ಕಾರ್ಯಕ್ರಮಕ್ಕೆ ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಶುಕ್ರವಾರ ಚಾಲನೆ ನೀಡಿದರು.

ಈ ಯೋಜನೆಯಡಿ ಚಾವಣಿ ಸೌರ (ಆರ್‌ಟಿಎಸ್) ಘಟಕಗಳ ಅಳವಡಿಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ(ಎಂಎನ್‌ಆರ್‌ಇ), ಶಕ್ತಿ ಸುಸ್ಥಿರ ಇಂಧನ ಫೌಂಡೇಷನ್, ಕೆಪಿಎಂಜಿ ಮತ್ತು ಬೆಸ್ಕಾಂ ಸಹಯೋಗದೊಂದಿಗೆ ಸಿಟಿ ಆಕ್ಸಿಲರೇಟರ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

'ಸಿಟಿ ಆಕ್ಸಿಲರೇಟರ್' ಉಪಕ್ರಮದಡಿ ಮೊದಲ ಹಂತದಲ್ಲಿ ಬೆಂಗಳೂರು, ಮೈಸೂರು ಹಾಗೂ ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ಸೌರ ಚಾವಣಿ ಘಟಕಗಳ ಸ್ಥಾಪನೆಗೆ ಉತ್ತೇಜನೆ ನೀಡಲಾಗುತ್ತದೆ. ವಿದ್ಯುತ್ ವಿತರಣಾ ಕಂಪನಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ತಾಂತ್ರಿಕ ನೆರವು ಒದಗಿಸಲಾಗುತ್ತದೆ. ಈ ಉಪಕ್ರಮವನ್ನು ದೇಶದಾದ್ಯಂತ 100 ನಗರಗಳಲ್ಲಿ ಹಂತ ಹಂತವಾಗಿ ಜಾರಿಗೆ ತರಲಾಗುತ್ತಿದೆ.

ಗೌರವ್ ಗುಪ್ತ ಮಾತನಾಡಿ, 'ರಾಜ್ಯದಾದ್ಯಂತ ಮನೆಗಳಲ್ಲಿ ಸೌರಶಕ್ತಿಯ ಬಳಕೆಯನ್ನು ಉತ್ತೇಜಿಸುವ ಗುರಿಯನ್ನು ಈ ಯೋಜನೆ ಹೊಂದಿದೆ. ಇದರಿಂದ ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿಯ ಗುರಿ ತಲುಪಲು ಸುಲಭವಾಗಲಿದೆ' ಎಂದು ಅಭಿಪ್ರಾಯಪಟ್ಟರು.

ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್. ಶಿವಶಂಕರ್ ಮಾತನಾಡಿ, 'ಸುಸ್ಥಿರ ವಿದ್ಯುತ್ ಉತ್ಪಾದನೆ ಹಾಗೂ ಬಳಕೆಗೆ ರೂಪಿಸಿರುವ ಪಿಎಂ ಸೂರ್ಯಘರ್ ಯೋಜನೆಯನ್ನು ಅಳವಡಿಸಿಕೊಳ್ಳುವುದರಿಂದ ಸಾಂಪ್ರದಾಯಿಕ ಇಂಧನ ಮೂಲಗಳ ಮೇಲಿನ ಅವಲಂಬನೆ ಕಡಿಮೆಯಾಗಲಿದೆ. ಪರಿಸರ ಸ್ನೇಹಿಯೂ ಆದ ಸೌರ ವಿದ್ಯುತ್ತಿನ ಬಳಕೆಯಿಂದ ಹಣದ ಉಳಿತಾಯವೂ ಸಾಧ್ಯವಾಗಲಿದೆ' ಎಂದು ಹೇಳಿದರು.

ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ, ಮೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಆರ್. ಜಯಕುಮಾರ್ ಉಪಸ್ಥಿತರಿದ್ದರು.

ಸೋಲಾರ್ ಫಲಕ ಅಳವಡಿಕೆ

ದೇಶದಲ್ಲಿ ಒಂದು ಕೋಟಿ ಮನೆಗಳ ಚಾವಣಿಗೆ ಸೋಲಾರ್ ಫಲಕ ಅಳವಡಿಸುವ ಮೂಲಕ ಸೂರ್ಯ ಘರ್ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಕೇಂದ್ರ ಸರ್ಕಾರದ pmsuryaghar.gov.in ವೆಬ್‌ಸೈಟ್ ಮೂಲಕ ಗೃಹ ಬಳಕೆದಾರರು ಅರ್ಜಿ ಸಲ್ಲಿಸಬಹುದು. ಮನೆಯ ಚಾವಣಿ ಸೋಲಾರ್ ವ್ಯವಸ್ಥೆಯನ್ನು ಗ್ರಿಡ್ ಜತೆಗೆ ಸಂಪರ್ಕಿಸುವುದರಿಂದ 25 ವರ್ಷ ವಿದ್ಯುತ್ ಬಿಲ್ ಪಾವತಿಸಬೇಕಿಲ್ಲ. ಚಾವಣಿಯಲ್ಲಿ ಅಳವಡಿಸುವುದರಿಂದ ಹೆಚ್ಚು ವರಿ ಜಾಗದ ಅಗತ್ಯ ಇಲ್ಲ. ನಿರ್ವಹಣೆ ವೆಚ್ಚ ಕಡಿಮೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 1 ಕಿಲೋ ವಾಟ್ ಸಾಮರ್ಥ್ಯದ ವ್ಯವಸ್ಥೆಗೆ ₹ 30,000 ಸಬ್ಸಿಡಿ, 2 ಕಿಲೋ ವಾಟ್ ಸಾಮರ್ಥ್ಯದ ವ್ಯವಸ್ಥೆಗೆ ₹ 60,00, 3 ಕಿಲೋ ವ್ಯಾಟ್ ಮೇಲ್ಪಟ್ಟ ವ್ಯವಸ್ಥೆಗೆ ಗರಿಷ್ಠ ಸಬ್ಸಿಡಿ ಮಿತಿ ₹78,000 ದೊರೆಯಲಿದೆ ಎಂದು ಮಾಹಿತಿ ನೀಡಿದ್ದಾರೆ.

'ಇಂದಿರಾ, ವಲ್ಲಭಭಾಯಿ ನಡೆಯೇ ದಾರಿದೀಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿವಂಗತ ಪ್ರಧಾನಿ ಇಂದಿರಾ ಗಾಂಧಿ ಹುತಾತ್ಮರಾದರೂ ಅವರ ಆದರ್ಶಗಳನ್ನು ಬಿಟ್ಟು ಹೋಗಿದ್ದಾರೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರಲ್ಲಿ ವಲ್ಲಭಭಾಯಿ ಪಟೇಲರು ಅಗ್ರಗಣ್ಯರು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣಿಸಿದರು.

ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಇಂದಿರಾ ಗಾಂಧಿಯವರ ಪುಣ್ಯಸ್ಮರಣೆ ಹಾಗೂ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 150ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಇಂದಿರಾ ಗಾಂಧಿಯವರು ದಿಟ್ಟ ಮಹಿಳೆ, ಉಕ್ಕಿನ ಮಹಿಳೆ. ಬಾಂಗ್ಲಾದೇಶದ ವಿಮೋಚನಾ ಯುದ್ಧದಲ್ಲಿ ಪಾಕಿಸ್ತಾನವನ್ನು ಸದೆಬಡಿದಿದ್ದರು. ಪಾಕಿಸ್ತಾನದ ಸುಮಾರು 90 ಸಾವಿರ ಸೈನಿಕರು ಸೆರೆಯಾಗಿದ್ದರು' ಎಂದರು.

'ವಲ್ಲಭಭಾಯಿ ಪಟೇಲರು ದೇಶದ ಉಪ ಪ್ರಧಾನಿಯಾಗಿದ್ದರು. ದೇಶದಲ್ಲಿದ್ದ 562 ಸಂಸ್ಥಾನಗಳನ್ನು ಭಾರತಕ್ಕೆ ಸೇರಿಸಲು ಅವರ ಪ್ರಯತ್ನವೇ ಕಾರಣ. ಅದಕ್ಕಾಗಿಯೇ ಅವರನ್ನು ಉಕ್ಕಿನ ಮನುಷ್ಯ ಎಂದು ಕರೆಯುತ್ತೇವೆ' ಎಂದು ಸ್ಮರಿಸಿದರು.

ಸಚಿವ ಎಚ್.ಸಿ.ಮಹದೇವಪ್ಪ, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ವಿಧಾನ ಪರಿಷತ್ತಿನ ಮುಖ್ಯ ಸಚೇತಕ ಸಲೀಂ ಅಹಮದ್, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ, ಮಾಜಿ ಸಂಸದ ಬಿ.ಎನ್. ಚಂದ್ರಪ್ಪ, ಎಐಸಿಸಿ ಕಾರ್ಯದರ್ಶಿ ಬಿ.ಎಂ. ಸಂದೀಪ್, ಕೆಪಿಸಿಸಿ ಅಧ್ಯಕ್ಷರ ರಾಜಕೀಯ ಕಾರ್ಯದರ್ಶಿ ದೀಪಕ್ ತಿಮ್ಮಯ ಉಪಸ್ಥಿತರಿದ್ದರು.

'ಬಡಜನರ ಉಸಿರು ಇಂದಿರಾ ಹೆಸರು'

'ಇಂದಿರಾಗಾಂಧಿ ಅವರ ಹೆಸರು ಈ ದೇಶದ ಬಡ ಜನರ ಉಸಿರು. ಇಂದಿರಾಗಾಂಧಿ ಅವರು ಈ ದೇಶದ ಏಕತೆ, ಸಮಗ್ರತೆ ಮತ್ತು ಶಾಂತಿಗೆ ದೊಡ್ಡ ಕೊಡುಗೆ ನೀಡಿ ಹುತಾತ್ಮರಾದವರು. ಅವರು ಪ್ರಧಾನಿಯಾದಾಗ ಈ ದೇಶಕ್ಕೆ ನೀಡಿದ ಕಾರ್ಯಕ್ರಮಗಳು ಇಂದಿಗೂ ಜೀವಂತವಾಗಿವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ಜೆ.ಪಿ. ನಗರದ ಸಾರಕ್ಕಿಯಲ್ಲಿ ಶುಕ್ರವಾರ ಏರ್ಪಡಿಸಿದ್ದ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಶಿವಕುಮಾರ್ ಮಾತನಾಡಿದರು.

ಇಂದಿರಾ ಗಾಂಧಿ ಅವರು ಬಡತನ ನಿವಾರಣೆಗೆ ದಿಟ್ಟ ನಿರ್ಧಾರ ತೆಗೆದುಕೊಂಡರು. ಇಂದಿರಾಗಾಂಧಿಯವರ ಉಳುವವನೇ ಭೂಮಿಯ ಒಡೆಯ ಯೋಜನೆಯನ್ನು ರಾಜ್ಯದಲ್ಲಿ ದೇವರಾಜ ಅರಸು ಅವರು ಜಾರಿಗೆ ತಂದು ಬಡವರಿಗೆ ಭೂಮಿ ಹಂಚಿದರು ಎಂದರು.

ಫುಟ್‌ಬಾಲ್: ರಾಕೇಶ್ ಹ್ಯಾಟ್ರಿಕ್, ಕಿಕ್‌ಸ್ಟಾರ್ಟ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎನ್. ರಾಕೇಶ್ ಸಿಂಗ್ (36ನೇ ನಿ., 59ನೇ ನಿ. ಹಾಗೂ 75ನೇ ನಿ.) ಅವರ ಹ್ಯಾಟ್ರಿಕ್ ಗೋಲಿನ ನೆರವಿನಿಂದ ಕಿಕ್‌ಸ್ಟಾರ್ಟ್ ಫುಟ್‌ಬಾಲ್ ಕ್ಲಬ್ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಶುಕ್ರವಾರ 7–0ಯಿಂದ ಭಾರತ್ ಬೆಂಗಳೂರು ತಂಡವನ್ನು ನಿರಾಯಾಸವಾಗಿ ಮಣಿಸಿತು. ಈ ಗೆಲುವಿನ ಮೂಲಕ 35 ಪಾಯಿಂಟ್ಸ್‌ಗಳೊಂದಿಗೆ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ತಂಡದ ಆಟಗಾರರು ಪಂದ್ಯದುದ್ದಕ್ಕೂ ಪಾರಮ್ಯ ಮೆರೆದರು. ಮೋನಿಷ್ (3ನೇ ನಿ.) ಆರಂಭಿಕ ಮುನ್ನಡೆ ತಂದಿತ್ತರೆ, ಎದುರಾಳಿ ತಂಡದ ಸಿಲ್ವರ್ ರಾಕ್ಸ್ 4ನೇ ನಿಮಿಷದಲ್ಲಿ ಉಡುಗೊರೆ ಗೋಲು ಹೊಡೆದರು. ರಾಕೇಶ್ ಹ್ಯಾಟ್ರಿಕ್ ಗೋಲಿನೊಂದಿಗೆ ಮಿಂಚಿದರು. ಪ್ರೇಮಿಷ್ ಟಿ.(56ನೇ ನಿ.) ಹಾಗೂ ಅಮೋಘವರ್ಷ ಜಿ.(75ನೇ ನಿ.) ಗೆಲುವಿನ ಅಂತರವನ್ನು ಹಿಗ್ಗಿಸಿದರು.

ಇನ್ನೊಂದು ಪಂದ್ಯದಲ್ಲಿ ಬೆಂಗಳೂರು ಸಿಟಿ ಎಫ್‌ಸಿ ತಂಡವು 1–0ಯಿಂದ ಎಂಎಫ್‌ಎಆರ್ ಸ್ಟುಡೆಂಟ್ಸ್ ಯೂನಿಯನ್ ತಂಡವನ್ನು ಸೋಲಿಸಿತು. ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು–ಎಫ್‌ಸಿ ರಿಯಲ್ ಬೆಂಗಳೂರು ನಡುವಣ ಪಂದ್ಯ 1–1 ಡ್ರಾ ಆಯಿತು.



ಬೆಂಗಳೂರು ಸಿಟಿ ಎಫ್‌ಸಿ ಹಾಗೂ ಎಂಎಫ್‌ಎಆರ್ ಸ್ಟುಡೆಂಟ್ಸ್ ಯೂನಿಯನ್ ತಂಡದ ಆಟಗಾರರು ಚೆಂಡಿಗಾಗಿ ಜಿದ್ದಾಜಿದ್ದಿ ನಡೆಸಿದರು —ಚಿತ್ರ: ಪುಷ್ಕರ್ ವಿ.

ಬೆಂಗಳೂರು ರೇಸ್

ಐರನ್ ಕ್ಲಾಡ್ ಗೆಲ್ಲುವ ನಿರೀಕ್ಷೆ

ರಾಜ್ಯೋತ್ಸವ ಟ್ರೋಫಿ ಶನಿವಾರ ಆರಂಭವಾಗಲಿರುವ ಬೆಂಗಳೂರು ಚಳಿಗಾಲದ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಐರನ್ ಕ್ಲಾಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಆರಂಭವಾಗಲಿರುವ ದಿನದ ಎಲ್ಲ ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಫೀಲ್ ಲೈಕ್ ಗುಡ್ 4, ಸ್ಪ್ರಿಂಗ್ ಏರ್ 5, ಸದರ್ನ್ ಅರಿಸ್ಟೊಕ್ರಾಟ್ 8
2ನೇ ರೇಸ್: ಸೋಲಾರ್ 10, ಥ್ರಿಫಿನ್ 12, ಕ್ರಾಷಬಲ್ 6
3ನೇ ರೇಸ್: ಸನ್‌ರೈಸ್ 4, ಅಪಿರ್ಸ್ 6, ನೈಟ್ ರೈಡರ್ 2
4ನೇ ರೇಸ್: ರೀಗಲ್ ರಿಯಾಲಿಟಿ 4, ಎಕ್ಸಲೆಂಟ್ ಲಾಸ್ 1, ಎಲೈನ್ ನೈಟ್ 5
5ನೇ ರೇಸ್: ಐರನ್ ಕ್ಲಾಡ್ 3, ಇಂಡಿಪೆಂಡೆಂಟ್ ಬ್ಲ್ಯೂ 2, ಕ್ರೆಮಿಷ್ಟ 4
6ನೇ ರೇಸ್: ವೈಟ್ ಆಫ್ ಫ್ಯಾನ್ಸಿ 4, ರೀಡಿಯೊ 3, ಸ್ಕಾಲ್ ಡ್ರೀಮ್ಸ್ 2
7ನೇ ರೇಸ್: ಸನ್ ಪ್ರೈಡ್ 1, ಅನ್‌ಟೆಬಲ್ 6, ಎಲ್‌ಪಿಡ್ ಸ್ಟಾರ್ 2

ಉತ್ತಮ ಬೆಟ್: ಫೀಲ್ ಲೈಕ್ ಗುಡ್

ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್
3,4,5,6,7	2,3,4	5,6,7

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

‘ಮತ, ಮತಿ ಭ್ರಾಂತಿ ಎಚ್ಚರಿಸಿದ್ದ ನಿರಂಜನ’

ವಿಚಾರಸಂಕಿರಣದಲ್ಲಿ ವಿಮರ್ಶಕ ರಾಜೇಂದ್ರ ಚೆನ್ನಿ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರಂಜನ ಅವರು ಎಚ್ಚರಿಸಿದ್ದ ಮತ ಭ್ರಾಂತಿ ಮತ್ತು ಮತಿ ಭ್ರಾಂತಿ ಇಂದಿಗೂ ಪ್ರಸ್ತುತ. ಇಂದಿಗೂ ಎಲ್ಲ ಫ್ಯಾಸಿಸ್ಟ್‌ಗಳಲ್ಲಿ ಈ ಎರಡು ಭ್ರಾಂತಿಗಳು ಜಂಟಿಯಾಗಿ ಕೆಲಸ ಮಾಡುತ್ತಿವೆ ಎಂದು ವಿಮರ್ಶಕ ರಾಜೇಂದ್ರ ಚೆನ್ನಿ ಹೇಳಿದರು.

ಕ್ರಿಯಾ ಮಾಧ್ಯಮ ಮತ್ತು ಜನಶಿಕ್ಷಣ ಟ್ರಸ್ಟ್ ಶುಕ್ರವಾರ ಆಯೋಜಿಸಿದ್ದ ನಿರಂಜನ ಶತಮಾನ ಸಮಾರೋಪ ವಿಚಾರಸಂಕಿರಣ ಮತ್ತು ನಿರಂಜನ ಮರು ಓದು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಲೇಖಕನು ಒಂದು ಪಕ್ಷಕ್ಕೆ, ಸಿದ್ಧಾಂತಕ್ಕೆ ಬದ್ಧನಾಗಿದ್ದರೆ ಸೃಜನಶೀಲತೆ ಬತ್ತಿಹೋಗುತ್ತದೆ. ಬದುಕಿಗೆ ಬದ್ಧನಾಗಿದ್ದರೆ, ಅದಕ್ಕೆ ರಾಜಕೀಯ ಪಕ್ಷ ಪೂರಕವಾಗಿದ್ದರೆ ಅದು ಬೇರೆ. ಆದರೆ, ಅದಕ್ಕಾಗಿ ಸೃಜನಶೀಲತೆಯನ್ನು ಬಿಟ್ಟುಕೊಡಬಾರದು ಎಂಬುದು ನಿರಂಜನ ಅವರ ನಿಲುವು ಆಗಿತ್ತು ಎಂದು ವಿವರಿಸಿದರು.

ಸಮಾಜದ ರಚನೆಗಳ ಬಗ್ಗೆ ಹೆಚ್ಚು ಗಮನ ಕೊಡದೆ, ಸಡಿಲವಾಗಿ ಮನುಷ್ಯ ಪರವಾಗಿ ಇರುವ ಉದಾರವಾದಿ ಮಾನವೀಯತೆ ನಮ್ಮ ಸಾಹಿತ್ಯ ಪರಂಪರೆಯಲ್ಲಿ ಮುಂದುವರಿದುಕೊಂಡು ಬಂದಿದೆ. ಅದರ ಬದಲು ಸಮಾಜದ ಸಂರಚನೆಯ ಒಳಗೆ ಆಳವಾಗಿ ಬೇರೂರಿರುವ ವಿಚಾರಗಳ ಬಗ್ಗೆ ತಿಳಿದುಕೊಂಡು ಬದ್ಧರಾಗುವುದು ಮುಖ್ಯ ಎಂದು ನಿರಂಜನ ಪ್ರತಿಪಾದಿಸಿದ್ದರು ಎಂದರು.



‘ನಿರಂಜನ ಶತಮಾನ ಸಮಾರೋಪ ವಿಚಾರಸಂಕಿರಣ’ದಲ್ಲಿ ವಸಂತ ರಾಜ್, ಎನ್. ಗಾಯತ್ರಿ, ರಾಜೇಂದ್ರ ಚೆನ್ನಿ, ತೇಜಸ್ವಿನಿ ನಿರಂಜನ ಮತ್ತು ಎಂ.ಜಿ. ಹೆಗಡೆ ಮಾತುಕತೆಯಲ್ಲಿ ತೊಡಗಿದ್ದರು –ಪ್ರಜಾವಾಣಿ ಚಿತ್ರ

ಮಹಿಳೆಯರನ್ನು ಶೋಷಿತರನ್ನಾಗಿ ನೋಡುವುದೇ ಒಂದು ಅಪರಾಧ. ಶೋಷಿತರ ಬದಲಾಗಿ ಅವರನ್ನು ಶೋಧನೆಯ ಒಳನೋಟಗಳಿಂದ ನೋಡಬೇಕು ಎಂಬುವುದನ್ನು ನಿರಂಜನ ಅವರ ಬರಹಗಳು ಕಟ್ಟಿಕೊಡುತ್ತವೆ ಎಂದು ವಿಮರ್ಶಿಸಿದರು.

‘ದ್ವೇಷ ಭಾಷಣ ಮಾಡಿದಾಗ ನ್ಯಾಯಾಲಯ ಕ್ರಮ ಕೈಗೊಳ್ಳುತ್ತದೆ ಎಂದು ಭಾವಿಸಿದ್ದೆವು. ಆದರೆ ಅಂಥವರ ಮೇಲೆ ಬಲವಂತದ ಕ್ರಮ ಕೈಗೊಳ್ಳಬಾರದು ಎಂದು ನ್ಯಾಯಾಲಯ ಪದೇ ಪದೇ ಹೇಳುವ ಕಾಲಘಟ್ಟದಲ್ಲಿದ್ದೇವೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ನಿರಂಜನ ಅವರ ಸಾಹಿತ್ಯದಲ್ಲಿ ಮಹಿಳೆ’ ಕುರಿತು ಮಾತನಾಡಿದ ಲೇಖಕಿ ಎಚ್. ಗಾಯತ್ರಿ, ‘ನಿರಂಜನ ಬರಹವು ವಿಧವೆಯು ಸಂಕೋಲೆಯಿಂದ ಹೊರಬರುವುದರ ಬಗ್ಗೆ ಒತ್ತಿಹೇಳುತ್ತದೆ’ ಎಂದು ಹೇಳಿದರು.

ಎಂ.ಜಿ. ಹೆಗಡೆ, ತೇಜಸ್ವಿನಿ ನಿರಂಜನ ಅವರು ನಿರಂಜನರ ವಿಚಾರಗಳ ಬಗ್ಗೆ ಮಾತನಾಡಿದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಅಧ್ಯಕ್ಷತೆ ವಹಿಸಿದ್ದರು.

ಜಯದೇವ: ನಟರಾಜ್ ಶೆಟ್ಟಿಗೆ ಜಾಗತಿಕ ಮನ್ನಣೆ

ಬೆಂಗಳೂರು: ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಸಹ ಪ್ರಾಧ್ಯಾಪಕ ಡಾ.ಎಚ್.ಎಸ್. ನಟರಾಜ್ ಶೆಟ್ಟಿ ಅವರ ‘ಎಚ್‌ಐವಿ ಪೀಡಿತರಲ್ಲಿ ಹೃದಯದ ಸಮಸ್ಯೆ’ ಸಂಶೋಧನಾ ಪ್ರಬಂಧವು ‘ಜರ್ನಲ್ ಆಫ್ ದಿ ಅಮೆರಿಕನ್ ಕಾಲೇಜ್ ಆಫ್ ಕಾರ್ಡಿಯಾಲಜಿ’ಯಲ್ಲಿ ಪ್ರಕಟವಾಗಿದೆ.



ಡಾ. ನಟರಾಜ್ ಶೆಟ್ಟಿ

ಈ ಮೂಲಕ ಅವರು ಜಾಗತಿಕ ಮನ್ನಣೆ ಪಡೆದಿದ್ದಾರೆ. ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೊದಲ್ಲಿ ಇತ್ತೀಚೆಗೆ ನಡೆದ ‘ಟ್ರಾನ್ಸ್‌ಕ್ಯಾಥೆಟರ್ ಕಾರ್ಡಿಯೋವಾಸ್ಕುಲರ್ ಥೆರಪ್ಯೂಟಿಕ್ಸ್’ (ಟಿಸಿಟಿ) ಸಮ್ಮೇಳನದಲ್ಲಿ ಅವರು ಈ ಪ್ರಬಂಧ ಮಂಡಿಸಿದರು.

‘ಎಚ್‌ಐವಿ ಪೀಡಿತರಲ್ಲಿ ಹೃದಯ ರಕ್ತನಾಳದ ಅಪಾಯದ ಬಗ್ಗೆ ಈ ಸಂಶೋಧನಾ ಪ್ರಬಂಧ ತಿಳಿಸಲಿದೆ. ಆರಂಭಿಕ ಹಂತದಲ್ಲಿ ಅಪಾಯ ಗುರುತಿಸುವಿಕೆ, ತಡೆಗಟ್ಟುವಿಕೆ ಹಾಗೂ ಸಮಗ್ರ ನಿರ್ವಹಣಾ ತಂತ್ರಗಳನ್ನು ಕೇಂದ್ರೀಕೃತವಾಗಿಸಿ ಕೊಂಡಿದೆ’ ಎಂದು ಡಾ. ನಟರಾಜ್ ಶೆಟ್ಟಿ ಹೇಳಿದ್ದಾರೆ.

‘ಡಾ. ನಟರಾಜ್ ಶೆಟ್ಟಿ ಅವರು ಕಳೆದ ಹತ್ತು ವರ್ಷಗಳಲ್ಲಿ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆದ ಎಚ್‌ಐವಿ ಸೋಂಕಿತ 910 ರೋಗಿಗಳನ್ನು ಸಂಶೋಧನೆಗೆ ಒಳಪಡಿಸಿ, ಸಂಶೋಧನಾ ಪ್ರಬಂಧ ರಚಿಸಿದ್ದರು. ಈ ಪ್ರಬಂಧ ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನದಲ್ಲಿ ಚರ್ಚೆ ಆಗಿರುವುದು ಸಂಸ್ಥೆಯ ಗರಿಮೆ ಹೆಚ್ಚಿಸಿದೆ’ ಎಂದು ಸಂಸ್ಥೆಯ ನಿರ್ದೇಶಕ ಡಾ.ಬಿ. ದಿನೇಶ್ ತಿಳಿಸಿದ್ದಾರೆ.

ಕಲಾವಿದರಿಂದ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತು 23ನೇ ವರ್ಷದ ಚಿತ್ರಸಂತೆಯಲ್ಲಿ ಭಾಗವಹಿಸಲು ಕಲಾವಿದರಿಂದ ಅರ್ಜಿ ಆಹ್ವಾನಿಸಿದೆ.

ಕುಮಾರ ಕೃಪಾ ರಸ್ತೆ ಮತ್ತು ಪರಿಷತ್ತಿನ ಆವರಣದಲ್ಲಿ ಜನವರಿ ತಿಂಗಳಲ್ಲಿ ಈ ಸಂತೆ ನಡೆಯಲಿದೆ. ಭಾಗವಹಿಸುವ ಕಲಾವಿದರು www.chitrasanthe.in ಮೂಲಕ ನ.6ರೊಳಗೆ ನೋಂದಣಿ ಮಾಡಿಕೊಳ್ಳಬೇಕು ಎಂದು ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9036330928











ಕೆರೆಯಲ್ಲಿ ಮುಳುಗಿ ಇಬ್ಬರು ಬಾಲಕರ ಸಾವು

ಬೆಂಗಳೂರು: ಆಟವಾಡಲು ಕೆರೆಯ ನೀರಿಗೆ ಇಳಿದಿದ್ದ ಇಬ್ಬರು ಮಕ್ಕಳು ಮೃತಪಟ್ಟ ಘಟನೆ ಜ್ಞಾನಭಾರತಿ ಪೊಲೀಸ್ ಠಾಣಾ ವ್ಯಾಪ್ತಿಯ ವಿಶ್ವೇಶ್ವರಯ್ಯ ಲೇಔಟ್‌ನಲ್ಲಿ ಗುರುವಾರ ರಾತ್ರಿ ನಡೆದಿದೆ. ಸಂಜಯ್ (6) ಹಾಗೂ ಜಗನ್ನಾಥ್ (10) ಮೃತ ಮಕ್ಕಳು. ಸಂಜಯ್ ಸ್ಥಳದಲ್ಲೇ ಮೃತಪಟ್ಟಿದ್ದರೆ, ಜಗನ್ನಾಥ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ.

ಉಲ್ಲಾಳ ಉಪನಗರದ ನಿವಾಸಿ ಸುಬ್ರಹ್ಮಣ್ಯಂ ಅವರ ಮಕ್ಕಳಾದ ಸಂಜಯ್ ಹಾಗೂ ಜಗನ್ನಾಥ್ ಅವರು ಗುರುವಾರ ಸಂಜೆ ಟ್ಯೂಷನ್‌ಗೆ ತೆರಳಿದ್ದರು. ಟ್ಯೂಷನ್ ಮುಗಿಸಿಕೊಂಡು ರಾತ್ರಿ ಮನೆಗೆ ವಾಪಸ್ ಬರುವಾಗ ಸಮೀಪದ ಕೆರೆಯಲ್ಲಿ ಆಟವಾಡಲು ನೀರಿಗೆ ಇಳಿದಿದ್ದರು. ಇಬ್ಬರೂ ನೀರಿನಲ್ಲಿ ಮುಳುಗಲು ಆರಂಭಿಸಿದ್ದರು. ಜತೆಯಲ್ಲಿದ್ದ ಮತ್ತೊಬ್ಬ ಬಾಲಕ ಓಡಿಹೋಗಿ ಪೋಷಕರಿಗೆ ಮಾಹಿತಿ ನೀಡಿದ್ದ. ಪೋಷಕರು ಸ್ಥಳಕ್ಕೆ ಬರುವಷ್ಟರಲ್ಲಿ ಸಂಜಯ್ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದ. ಸ್ಥಳೀಯರ ಸಹಾಯದಿಂದ ಜಗನ್ನಾಥ್‌ನನ್ನು ಮೇಲಕ್ಕೆ ತಂದು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಶುಕ್ರವಾರ ಮುಂಜಾನೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ ಎಂದು ಪೊಲೀಸರು ಹೇಳಿದರು.

ಸುಬ್ರಹ್ಮಣ್ಯಂ ಅವರು ಗಾರೆ ಕೆಲಸ ಮಾಡುತ್ತಿದ್ದರು. ತಾಯಿ ಕಂಪನಿಯೊಂದರಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡುತ್ತಿದ್ದರು ಎಂದು ಮೂಲಗಳು ಹೇಳಿವೆ.

ಜ್ಞಾನಭಾರತಿ ಠಾಣೆಯಲ್ಲಿ ಅಸಹಜ ಸಾವಿನ ಪ್ರಕರಣ ದಾಖಲಾಗಿದೆ.

ನೀರಿನ ಘಟಕ: ಸದ್ಯದಲ್ಲೇ ಏಕರೂಪ ದರ

ಕ್ಯೂಆರ್ ಕೋಡ್ ಬಳಸಿ ನೀರು: ಜಲಮಂಡಳಿಯಿಂದ ಯೋಜನೆ

● ಉಮೇಶ ಭಟ್ಟ ಪಿ.ಎಚ್.

ಮುಖ್ಯಾಂಶಗಳು
- ಶುದ್ಧ ನೀರಿನ ಘಟಕಗಳ ಒಟ್ಟು ಸಂಖ್ಯೆ 1184
- ನಿರ್ವಹಣೆಗೆ ₹10 ಕೋಟಿ ವೆಚ್ಚ
- 20 ಲೀಟರ್‌ಗೆ ₹10 ದರ ನಿಗದಿ

ಬೆಂಗಳೂರು: ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆಯನ್ನು ಸಂಪೂರ್ಣ ತಂತ್ರಜ್ಞಾನ ಆಧಾರಿತವಾಗಿ ಮಾಡಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮುಂದಾಗಿದೆ. ಅಲ್ಲದೆ ಕ್ಯೂಆರ್ ಕೋಡ್ ಸ್ಕ್ಯಾನ್ ಇಲ್ಲವೇ ಪ್ರೀಪೇಯ್ಡ್ ಕಾರ್ಡ್ ಮೂಲಕ ನೀರು ಪಡೆಯುವ ಹಾಗೂ ಏಕರೂಪ ದರ ನಿಗದಿ ಸಂಬಂಧ ಯೋಜನೆ ರೂಪಿಸಲಾಗಿದೆ.

ಜಲಮಂಡಳಿಯು ವರ್ಷದ ಹಿಂದೆಯೇ ಆಗಿನ ಬಿಬಿಎಂಪಿಯಿಂದ ತನ್ನ ವಶಕ್ಕೆ ಪಡೆದಿರುವ ಶುದ್ಧ ನೀರಿನ ಘಟಕಗಳ ನಿರ್ವಹಣೆಯ ಸ್ವರೂಪವನ್ನೇ ಬದಲಾಯಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸಿ ಟೆಂಡರ್ ಪ್ರಕ್ರಿಯೆ ಆರಂಭಿಸಿದೆ.

ಹಿಂದಿನ ಬಿಬಿಎಂಪಿ ನಿರ್ವಹಿಸುತ್ತಿದ್ದ ಶುದ್ಧ ನೀರಿನ ಘಟಕಗಳನ್ನು ಸ್ಥಳೀಯವಾಗಿ ನಿರ್ವಹಿಸುತ್ತಿದ್ದರೂ ಆದಾಯದ ಸ್ವರೂಪ ತಿಳಿದಿರಲಿಲ್ಲ. ವಿದ್ಯುತ್ ಸಂಪರ್ಕವೂ ಸರಿಯಾಗಿ ಇರಲಿಲ್ಲ. ನೀರು ಶುದ್ಧೀಕರಣದ ನಿಖರ ಮಾಹಿತಿಯೂ ಗ್ರಾಹಕರಿಗೆ ಸಿಗುತ್ತಿರಲಿಲ್ಲ. ಈ ಕಾರಣದಿಂದಲೇ ಶುದ್ಧ ನೀರಿನ ಘಟಕಗಳ ನಿರ್ವಹಣೆಗೆ ಹೊಸ ರೂಪ ನೀಡುವ ಚಟುವಟಿಕೆ ಶುರುವಾಗಿದೆ. ಗ್ರಾಹಕರಿಗೂ ನಿರಂತರ, ಶುದ್ಧ ನೀರು ಸಿಗಲಿದೆ.

ಏಕರೂಪದ ದರ ನಿಗದಿ ಮಾಡುತ್ತಿದ್ದು, ನಾಣ್ಯ ಹಾಕುವ ಪ್ರಮೇಯವೂ ಇರುವುದಿಲ್ಲ. ಜಲಮಂಡಳಿ ರೂಪಿಸುವ ಕಾರ್ಡ್ ಬಳಸಿಕೊಂಡು ಇಲ್ಲವೇ ಕ್ಯೂಆರ್ ಕೋಡ್ ಬಳಸಿ ಸುಲಭವಾಗಿ ನೀರು ಪಡೆಯಬಹುದು. ಇದಕ್ಕಾಗಿಯೇ ಆಟೋಮೇಷನ್ ತಂತ್ರಜ್ಞಾನ ಬಳಸುವುದಕ್ಕೆ ಟೆಂಡರ್ ಕರೆಯಲಾಗಿದೆ. ₹10 ಕೋಟಿ ವೆಚ್ಚ ಮಾಡಿ ಶುದ್ಧ ಕುಡಿಯುವ ನೀರಿನ ಎಲ್ಲ ಘಟಕಗಳ ದುರಸ್ತಿ ಮಾಡಲಾಗುತ್ತದೆ.

55 ರಿಂದ 60 ಘಟಕಗಳಿಗೆ ಒಂದು ಪ್ಯಾಕೇಜ್‌ನಂತೆ ಒಟ್ಟು 20 ಪ್ಯಾಕೇಜ್‌ಗಳ ಟೆಂಡರ್ ಪ್ರಕ್ರಿಯೆ ಮಾಸಾಂತ್ಯದೊಳಗೆ ಪೂರ್ಣಗೊಂಡು, ಡಿಸೆಂಬರ್ ಹೊತ್ತಿಗೆ ಘಟಕಗಳ ಮರು ಚಾಲನೆ ಆರಂಭಿಸಲಾಗುತ್ತದೆ ಎಂದು ಜಲಮಂಡಳಿ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಜನಪ್ರತಿನಿಧಿಗಳ ಕ್ಷೇತ್ರಾಭಿವೃದ್ಧಿ ಅನುದಾನದಲ್ಲಿ ಶುದ್ಧ ನೀರಿನ ಘಟಕಗಳನ್ನು ಆರಂಭಿಸಲಾಗಿತ್ತು. 1,184 ಘಟಕಗಳು ಸೂಕ್ತ ನಿರ್ವಹಣೆಯಿಲ್ಲದೇ ಮುಚ್ಚಿಹೋಗಿವೆ. ವಿದ್ಯುತ್ ಸಂಪರ್ಕ, ನೀರಿನ ಸರಬರಾಜು ಗೊಂದಲ, ಸ್ವಚ್ಛತೆ ಸರಿಯಾಗಿ ಆಗದೇ ಬಳಕೆಯೇ ಆಗುತ್ತಿರಲಿಲ್ಲ. ಬಿಬಿಎಂಪಿಗೆ ಆದಾಯವೂ ಬರುತ್ತಿರಲಿಲ್ಲ. ಸಾರ್ವಜನಿಕರಿಂದಲೂ ದೂರುಗಳು ಬರುತ್ತಲೇ ಇದ್ದವು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶುದ್ಧ ನೀರಿನ ಘಟಕಗಳನ್ನು ಜಲಮಂಡಳಿಗೆ ವಹಿಸಿದ್ದರು. ಜಲಮಂಡಳಿ ಕಾರ್ಯಾಚರಣೆ ಮತ್ತು ನಿರ್ವಹಣೆ ವಿಭಾಗಕ್ಕೆ ಜವಾಬ್ದಾರಿ ನೀಡಿದ್ದರೂ ವಿಳಂಬವಾಗಿತ್ತು. ಕೊನೆಗೆ ಇದನ್ನು ವಿನ್ಯಾಸ ಮತ್ತು ಗುಣಮಟ್ಟದ ವಿಭಾಗಕ್ಕೆ ವಹಿಸಲಾಯಿತು. ಆ ವಿಭಾಗದಲ್ಲಿ ಯೋಜನೆ ರೂಪಿಸಿ ಘಟಕಗಳ ಪುನಾರಂಭಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

'ಗುತ್ತಿಗೆ ನಿಯಮಾವಳಿಗಳ ಪ್ರಕಾರ ಶೇ 60ರಷ್ಟು ಆದಾಯ ಗುತ್ತಿಗೆದಾರರಿಗೆ ಶೇ 40ರಷ್ಟು ಆದಾಯ ಜಲಮಂಡಳಿಗೆ ಬರಲಿದೆ. ಮಂಡಳಿಯೇ ವಿದ್ಯುತ್ ಬಿಲ್ ಪಾವತಿಸಿದರೆ, ಗುತ್ತಿಗೆದಾರರು ಘಟಕದ ನಿರ್ವಹಣೆ ಮಾಡಬೇಕಾಗುತ್ತದೆ. ಸರ್ಕಾರಕ್ಕೆ ವಿದ್ಯುತ್ ಬಿಲ್ ಜತೆಗೆ ಸಂಗ್ರಹವಾದ ಮೊತ್ತದಲ್ಲಿ ಶೇ 10ರಷ್ಟು ಆದಾಯವೂ ಬರಲಿದೆ. ಕನ್ಸಲ್ಟೆನ್ಸಿ ಕಂಪನಿಗೆ ಶೇ 5ರಷ್ಟು ಆದಾಯ ಹೋಗಲಿದೆ. ಜಲಮಂಡಳಿ ಕಿಯೋಸ್ಕ್ ಇಲ್ಲವೇ ಸೇವಾ ಕೇಂದ್ರಗಳಲ್ಲಿ ಗ್ರಾಹಕರು ಕಾರ್ಡ್ ಖರೀದಿಸಲು ಅವಕಾಶ ಮಾಡಿಕೊಡಲಾಗುತ್ತದೆ' ಎಂದು ಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದರು.


ಶುದ್ಧ ನೀರಿನ ಘಟಕ

ದರ ನಿಗದಿ, ಆದಾಯ ಹಂಚಿಕೆ ಹೇಗೆ

ಬಿಬಿಎಂಪಿ ನಿರ್ವಹಣೆಯಲ್ಲಿದ್ದಾಗ ದರ ಏಕರೂಪದಲ್ಲಿ ಇರಲಿಲ್ಲ. ಕೆಲವು ಕಡೆ 20 ಲೀಟರ್‌ಗೆ ₹5, ₹10, ಇಲ್ಲವೇ ₹15 ಇತ್ತು. ಇದನ್ನು ತಪ್ಪಿಸಿ ಒಂದೇ ದರ ನಿಗದಿ ಮಾಡುವ ನಿರ್ಧಾರವನ್ನು ಜಲಮಂಡಳಿ ಕೈಗೊಂಡಿದೆ. ಆ ನಂತರ ವಿದ್ಯುತ್ ಸಂಪರ್ಕ ಪಡೆದು ಪ್ರತಿ ತಿಂಗಳು ಘಟಕವೊಂದರಿಂದ ಬೆಸ್ಕಾಂಗೆ ಅಂದಾಜು ₹12 ಸಾವಿರದವರೆಗೂ ಬಿಲ್ ಪಾವತಿಸುವ ತೀರ್ಮಾನ ಮಾಡಲಾಗಿದೆ.

ಮುಖ್ಯಮಂತ್ರಿಯವರ ಒಂದು ಲಕ್ಷ ಮನೆ ಯೋಜನೆ

ಬಾಕಿ ಪಾವತಿಸದಿದ್ದರೆ ಮನೆ ಹಂಚಿಕೆ ರದ್ದು

ಶೀಘ್ರ ಪಾವತಿಸಿದರಷ್ಟೇ ಹಂಚಿಕೆಯಾದ ಮನೆ ಸೇಫ್





ಯೋಜನೆಯಡಿ ಘಟಕದ ವೆಚ್ಚ ಹೆಚ್ಚಳ ಹಿನ್ನೆಲೆ ಸಚಿವ ಜಮೀರ್ ಅಹಮದ್ ಖಾನ್‌ರವರು ಮುಖ್ಯಮಂತ್ರಿ ಸಿದ್ಧರಾಮಯ್ಯರೊಂದಿಗೆ ಮಾತನಾಡಿ, ಮನವೊಲಿಸಿದ್ದರ ಪರಿಣಾಮ ಬಡವರಿಗೆ ಹೆಚ್ಚುವರಿ ಸಬ್ಸಿಡಿ ಲಭಿಸಿದೆ. 2020ರಲ್ಲಿ ಪ್ರಾರಂಭಿಕ ಮೊತ್ತ ಪಾವತಿಸಿದ್ದ ಸುಮಾರು 12ಸಾವಿರ ಫಲಾನುಭವಿಗಳಿಗೆ ಒಂದು ಲಕ್ಷರೂ. ಸರ್ಕಾರದಿಂದ ಹೆಚ್ಚುವರಿ ಸಬ್ಸಿಡಿ ದೊರಕಿತ್ತು. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಸಾಮಾನ್ಯ ವರ್ಗಕ್ಕೆ 2.70 ಲಕ್ಷರೂ., ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ 3.50 ಲಕ್ಷರೂ. ಸಬ್ಸಿಡಿ ದೊರೆಯಲಿದೆ.

-ಪರಶುರಾಮ್ ಶಿನ್ನಾಳ್ಕರ್, ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ವಸತಿ ನಿಗಮ

ಬೆಂಗಳೂರು: ಮುಖ್ಯಮಂತ್ರಿ ಯವರ ಒಂದು ಲಕ್ಷ ಮನೆ ಯೋಜನೆಯಡಿಯಲ್ಲಿ ಪ್ರಾರಂಭಿಕ ಠೇವಣಿ ಪಾವತಿಸಿ ಮನೆ ಆಯ್ಕೆ ಮಾಡಿಕೊಂಡಿರುವ ಫಲಾನುಭವಿಗಳು ತಕ್ಷಣವೇ ಬಾಕಿ ಹಣ ಪಾವತಿ ಮಾಡದಿದ್ದರೆ ಮನೆ ಹಂಚಿಕೆ ರದ್ದಾಗಲಿದೆ. ಹೌದು, ರಾಜೀವ್ ಗಾಂಧಿ ವಸತಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಮುಖ್ಯಮಂತ್ರಿಯವರ ಒಂದು ಲಕ್ಷ ಮನೆ ಯೋಜನೆಯಡಿಯಲ್ಲಿ ಮುಂಗಡ ಪಾವತಿಸಿ ಮನೆ ಹಂಚಿಕೆ ನಂತರ ಬಾಕಿ ಹಣ ಉಳಿಸಿಕೊಂಡಿರುವ ಫಲಾನುಭವಿಗಳಿಗೆ ಈಗಾಗಲೇ ೨ಬಾರಿ ನೋಟಿಸ್ ನೀಡಲಾಗಿದೆ. ಪ್ರಾಥಮಿಕ ಹಂತದಲ್ಲಿ ತಿಳುವಳಿಕೆ ನೋಟಿಸ್, ಆ ನಂತರ ೨ನೇ ಹಂತದಲ್ಲಿ ಅಂತಿಮ ನೋಟಿಸ್ ನೀಡಿದ್ದರೂ ಸಹ ಈವರೆಗೆ ಬಾಕಿ ಹಣವನ್ನು ಪಾವತಿಸಿಲ್ಲ. ಈ ಹಣ ಪಾವತಿಗೆ ಸಂಬಂಧಿಸಿದಂತೆ ಸರ್ಕಾರದಿಂದಲೇ ಸಾಕಷ್ಟು ಮಾರ್ಗೋಪಾಯಗಳನ್ನು ಒದಗಿಸಿದ್ದರೂ ಸಹ ಅನೇಕರು ಈವರೆಗೆ ಹಣ ಬಾಕಿ ಉಳಿಸಿಕೊಂಡಿದ್ದಾರೆ. ರಾಜೀವ್‌ಗಾಂಧಿ ವಸತಿ ನಿಗಮ ಹಣಕಾಸು ಸಂಸ್ಥೆಗಳಿಂದ ಸಾಲದ ವ್ಯವಸ್ಥೆ ಮಾಡಿಕೊಡಲೆಂದೇ ಸಾಲ ಮೇಳ ಆಯೋಜನೆ ಮಾಡುತ್ತಿದ್ದರೂ ಸಹ ಫಲಾನುಭವಿಗಳು ಈ ಸೌಕರ್ಯವನ್ನು ಬಳಸಿಕೊಳ್ಳುತ್ತಿಲ್ಲ. ಹೀಗಾಗಿ, ಅನಿವಾರ್ಯವಾಗಿ ಬಾಕಿ ಹಣ ಪಾವತಿ ಮಾಡದವರ ಮನೆ ಹಂಚಿಕೆಯನ್ನು ರದ್ದುಗೊಳಿಸುವ ನಿರ್ಧಾರ ಮಾಡಲಾಗಿದೆ. ಇತ್ತೀಚಿಗೆ ವಸತಿ ಸಚಿವ ಜಮೀರ್ ಅಹಮದ್ ಖಾನ್ ರವರ ಅಧ್ಯಕ್ಷತೆಯಲ್ಲಿ ನಡೆದ ನಿಗಮದ ಪ್ರಗತಿ ಪರಿಶೀಲನೆ ಸಭೆಯಲ್ಲಿ ಹಣ ಪಾವತಿ ಮಾಡದವರ ಮನೆ ಹಂಚಿಕೆ ರದ್ದುಪಡಿಸಲು ತೀರ್ಮಾನಿಸಲಾಗಿದೆ.

ಈ ಕುರಿತು ಮಾಹಿತಿ ನೀಡಿರುವ ರಾಜೀವ್‌ಗಾಂಧಿ ವಸತಿ ನಿಗಮ ವ್ಯವಸ್ಥಾಪಕ ನಿರ್ದೇಶಕ ಪರಶುರಾಮ್ ಶಿನ್ನಾಳ್‌ಕರ್, ಮುಖ್ಯಮಂತ್ರಿಯವರ ಒಂದು ಲಕ್ಷ ಮನೆ ಯೋಜನೆಯಡಿ ಠೇವಣಿ ಪಾವತಿಸಿ, ಬಾಕಿ ಹಣ ಪಾವತಿಸದ ಫಲಾನುಭವಿಗಳ ಮನೆ ಹಂಚಿಕೆಯನ್ನು ರದ್ದು ಮಾಡಲಾಗುತ್ತದೆ. ಮುಂಗಡ ಪಾವತಿ ಹಣದಲ್ಲಿ ಶೇ. 25ರಷ್ಟು ಸೇವಾ ಶುಲ್ಕ ಕಡಿತಗೊಳಿಸಿ ಉಳಿಕೆ ಹಣ ಫಲಾನುಭವಿಗಳ ಖಾತೆಗೆ ಜಮೆ ಮಾಡಲಾಗುವುದು. ನಂತರ ಬೇರೆಯವರಿಗೆ ಮನೆ ಹಂಚಿಕೆ ಆಗಲಿದೆ. ವಸತಿ ನಿಗಮದಿಂದಲೇ ಸಾಲದ ವ್ಯವಸ್ಥೆ ಮಾಡಿಕೊಟ್ಟು, ಸರ್ಕಾರ ಗರಿಷ್ಠ ಶೇ. 5ರವರೆಗೆ ಬಡ್ಡಿ ಸಹಾಯಧನ(ಮಾಸಿಕ 3 ಸಾವಿರ ರೂ. ವರೆಗೆ)ಒದಗಿಸುವ ಬಗ್ಗೆ ಫಲಾನುಭವಿಗಳಿಗೆ ತಿಳಿಸಿ, ಸಾಕಷ್ಟು ಮನವರಿಕೆ ಮಾಡಲಾಗಿದೆ. ನಿಗಮದಿಂದಲೇ ಇಷ್ಟೆಲ್ಲಾ ಸೌಕರ್ಯ ಮಾಡಿಕೊಟ್ಟರೂ ಸಹ ಯಾರೂ ಮುಂದೆ ಬರುತ್ತಿಲ್ಲ. ಹೀಗಾಗಿ ಮನೆ ಹಂಚಿಕೆ ರದ್ದು ಪಡಿಸುವುದು ಅನಿವಾರ್ಯವಾಗಿದೆ ಎಂದಿದ್ದಾರೆ.

45,124 ಮನೆಗಳ ನಿರ್ಮಾಣ!: ಬೆಂಗಳೂರಿನಲ್ಲಿ ರಾಜೀವ್ ಗಾಂಧಿ ವಸತಿ ನಿಗಮದಿಂದ ಮುಖ್ಯಮಂತ್ರಿಯವರ ಒಂದು ಲಕ್ಷ ಮನೆ ಯೋಜನೆಯಡಿ ಒಟ್ಟು 45,124 ಮನೆ ನಿರ್ಮಾಣ ಮಾಡಿದ್ದು, ಮೊದಲ ಹಂತದಲ್ಲಿ 7890 ಮನೆ ಪೂರ್ಣಗೊಂಡು ಎಲ್ಲಾ ಮೂಲಭೂತ ಸೌಕರ್ಯದೊಂದಿಗೆ ಹಂಚಿಕೆಗೆ ಸಿದ್ಧವಾಗಿದೆ. ಮಹದೇವಪುರದ ಬಿದರಹಳ್ಳಿ, ಆನೇಕಲ್ ನ ಕೂಗೂರು, ಚಿಕ್ಕನಹಳ್ಳಿ-ಕಾಮನ ಹಳ್ಳಿ, ಬೆಂಗಳೂರು ದಕ್ಷಿಣದ ದೊಡ್ಡ ನಾಗಮಂಗಲ, ಜೆ ಭಂಗಿ ಪುರ, ಯಶವಂತಪುರದ ದೇವಗೆರೆ, ಕೆಂಚನಪುರ, ನೆಲಗುಳಿ, ತೋಟ ಗೆರೆ, ರಾಮಪುರ, ಯಲಹಂಕದ ಅಗ್ರಹಾರ ಪಾಳ್ಯ, ಕುಕ್ಕನಹಳ್ಳಿ, ಪಿಲ್ಲಹಳ್ಳಿ, ಸಾದೇನಹಳ್ಳಿ, ಇಟಗಲ ಪುರ, ಬ್ಯಾಟರಾಯ ನ ಪುರದ ನವರತ್ನ ಅಗ್ರಹಾರ ಸೇರಿ ಬೆಂಗಳೂರಿನ 20 ಕಡೆ ವಸತಿ ಸಮುಚ್ಚಯ ನಿರ್ಮಿಸಲಾಗಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಹರಿಹರಪ್ರಿಯ ಚಿಕಿತ್ಸಾ ವೆಚ್ಚ ಭರಿಸಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಾರೋಗ್ಯದಿಂದ ಬಳಲುತ್ತಿರುವ ಸಾಹಿತಿ ಹರಿಹರಪ್ರಿಯ ಅವರ ವೈದ್ಯಕೀಯ ಚಿಕಿತ್ಸಾ ವೆಚ್ಚವನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಭರಿಸುವ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದಾರೆ.


ಹರಿಹರಪ್ರಿಯ

ಈ ಬಗ್ಗೆ ಅವರು ಪತ್ರ ಬರೆದಿದ್ದಾರೆ. 'ಹರಿಹರಪ್ರಿಯ ಅವರು ಹೃದಯ ಶಸ್ತ್ರಚಿಕಿತ್ಸೆಗೆ ಸಂಬಂಧಪಟ್ಟಂತೆ ವೈದ್ಯಕೀಯ ವೆಚ್ಚ ಭರಿಸಲು ಸಾಧ್ಯವಾಗದೆ ಸರ್ಕಾರಕ್ಕೆ ಮನವಿ ಮಾಡಿರುವುದು ತಿಳಿದುಬಂದಿದೆ. ಅವರ ವೆದ್ಯಕೀಯ ವೆಚ್ಚ ಭರಿಸಲು ಸಂಬಂಧಪಟ್ಟ ಅಧಿಕಾರಿಗೆ ಸೂಚಿಸಬೇಕು' ಎಂದು ಹೇಳಿದ್ದಾರೆ.

ಬ್ರೈಲ್ ಕಿಟ್ ವಿತರಣೆ: ಅವಧಿ ವಿಸ್ತರಣೆಗೆ ನಕಾರ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಅಂಧ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಹಾಗೂ ಬ್ರೈಲ್ ಕಿಟ್ ವಿತರಿಸುವ ಯೋಜನೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ವಿಸ್ತರಿಸಲು ಹೈಕೋರ್ಟ್ ನಿರಾಕರಿಸಿದೆ.

'ಲ್ಯಾಪ್‌ಟಾಪ್ ಹಾಗೂ ಬ್ರೈಲ್ ಕಿಟ್ ವಿತರಣೆ ಯೋಜನೆ-2025ರಡಿ ಆನ್‌ಲೈನ್‌ಲ್ಲಿ ಅರ್ಜಿ ಸಲ್ಲಿಸುವ ಅವಧಿಯನ್ನು 60 ದಿನಗಳವರೆಗೆ ವಿಸ್ತರಿಸಬೇಕು ಅದಕ್ಕಾಗಿ ಸೇವಾ ಸಿಂಧು ಪೋರ್ಟಲ್ ತೆರೆದಿಡುವಂತೆ ಸಂಬಂಧಿಸಿದ ಇಲಾಖೆಗಳಿಗೆ ನಿರ್ದೇಶಿಸಬೇಕು' ಎಂದು ಕೋರಿ ಹೈಕೋರ್ಟ್ ವಕೀಲರು ಮತ್ತು ಸ್ವತಃ ಅಂಧರೂ ಆದ ಎನ್.ಶ್ರೇಯಸ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

'ಈಗಾಗಲೇ ಎರಡು ಬಾರಿ ದಿನಾಂಕ ವಿಸ್ತರಣೆ ಮಾಡಲಾಗಿದೆ. ಹಾಗಾಗಿ ಪುನಃ ದಿನಾಂಕ ವಿಸ್ತರಿಸಬೇಕೆಂಬ ಮನವಿಯನ್ನು ಪರಿಗಣಿಸಲು ಸಾಧ್ಯವಿಲ್ಲ. ಆದರೆ, ಯಾವುದೇ ಕಾರಣದಿಂದ ಅರ್ಜಿ ಸಲ್ಲಿಸಲು ಸಾಧ್ಯವಾಗದೇ ಇದ್ದ ವಿದ್ಯಾರ್ಥಿಗಳು ವೈಯಕ್ತಿಕವಾಗಿ ನ್ಯಾಯಾಲಯದ ಮೆಟ್ಟಿಲೇರಿದರೆ ಅದಕ್ಕೆ ಕಾರಣಗಳನ್ನು ಪರಿಶೀಲಿಸಬಹುದು' ಎಂದು ಹೇಳಿ ಅರ್ಜಿಯನ್ನು ವಿಲೇವಾರಿ ಮಾಡಿತು.

ಸಮೀರ್ ಅರ್ಜಿ: ರಿಜಿಸ್ಟ್ರಿಗೆ ಸೂಚನೆ

'ಧರ್ಮಸ್ಥಳ ಕ್ಷೇತ್ರದ ಕುರಿತು ಅವಹೇಳನಕಾರಿಯಾಗಿ ತಮ್ಮ ಯೂ-ಟ್ಯೂಬ್ ಚಾನಲ್‌ನಲ್ಲಿ ವಿಡಿಯೊ ಸಹಿತದ ಸುದ್ದಿ ಪ್ರಸಾರ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸುವಂತೆ ಕೋರಿರುವ ಎಂ.ಡಿ.ಸಮೀರ್ ಅರ್ಜಿಯ ವಿಚಾರಣೆ ಬೆಂಗಳೂರು ಪ್ರಧಾನ ಪೀಠದಲ್ಲಿ ನಡೆಯಬೇಕೊ ಅಥವಾ ಧಾರವಾಡದ ಪೀಠದಲ್ಲಿ ನಡೆಯಬೇಕೊ ಎಂಬುದನ್ನು ವಿಶದಪಡಿಸಿ' ಎಂದು ಹೈಕೋರ್ಟ್ ರಿಜಿಸ್ಟ್ರಿಗೆ ಸೂಚಿಸಿದೆ.

'ಬಳ್ಳಾರಿಯ ಕೌಲ್ ಬಜಾರ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಮತ್ತು ಇದಕ್ಕೆ ಸಂಬಂಧಿಸಿದಂತೆ ಸ್ಥಳೀಯ ಸಿವಿಲ್ ಜಡ್ಜ್ (ಕಿರಿಯ ವಿಭಾಗ) ಮತ್ತು ಜೆಎಂಎಫ್‌ಸಿ ಕೋರ್ಟ್‌ನಲ್ಲಿರುವ ಪ್ರಕರಣವನ್ನು ರದ್ದುಗೊಳಿಸಬೇಕು' ಎಂದು ಕೋರಿದ ರಿಟ್ ಅರ್ಜಿ ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠದಲ್ಲಿ ಶುಕ್ರವಾರ ವಿಚಾರಣೆಗೆ ನಿಗದಿಯಾಗಿತ್ತು.

ಈ ಹಿಂದಿನ ವಿಚಾರಣೆ ವೇಳೆಯಲ್ಲಿಯೇ ಪ್ರಾಸಿಕ್ಯೂಷನ್ ಪರ ವಕೀಲರು ಈ ಅರ್ಜಿ ಬಳ್ಳಾರಿ ಪೀಠದ ವ್ಯಾಪ್ತಿಗೆ ಒಳಪಡುತ್ತದೆ ಎಂದು ನ್ಯಾಯಪೀಠಕ್ಕೆ ತಿಳಿಸಿದ್ದರು. ಆದರೆ, ಈ ಕುರಿತ ಜಿಜ್ಞಾಸೆ ಬಗೆಹರಿದಿರಲಿಲ್ಲ. ಕಾರಣ ನ್ಯಾಯಪೀಠ, ಇದನ್ನು ಸ್ಪಷ್ಟಪಡಿಸುವಂತೆ ರಿಜಿಸ್ಟ್ರಿಗೆ ಸೂಚಿಸಿ ವಿಚಾರಣೆಯನ್ನು ನವೆಂಬರ್ 10ಕ್ಕೆ ಮುಂದೂಡಿತು.

ಅಮೆರಿಕದಿಂದಲೇ ವಿಚಾರಣೆಗೆ ಹಾಜರಾಗಲು ಅನುಮತಿ

ಕ್ರೌರ್ಯದ ಆರೋಪಕ್ಕೆ ಸಂಬಂಧಿಸಿದ ಕೌಟುಂಬಿಕ ಪ್ರಕರಣವೊಂದರಲ್ಲಿ ತಮ್ಮ ಪತಿಯ ವಿರುದ್ಧ ಬೆಂಗಳೂರಿನ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ವ್ಯಾಜ್ಯ ನಡೆಸುತ್ತಿರುವ ಭಾರತೀಯ ಮಹಿಳೆಯೊಬ್ಬರಿಗೆ ಅಮೆರಿಕದ ಅವರ ನಿವಾಸದಿಂದಲೇ ವಿಡಿಯೊ ಕಾನ್ಫರೆನ್ಸ್ ಮುಖಾಂತರ ಹಾಜರಾಗಲು ಹೈಕೋರ್ಟ್ ಸಮ್ಮತಿಸಿದೆ.

ಈ ಸಂಬಂಧ ಅಮೆರಿಕದಲ್ಲಿರುವ 36 ವರ್ಷದ ಭಾರತೀಯ ಮಹಿಳೆ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ವಿಡಿಯೋ ಕಾನ್ಫರನ್ಸ್ ಮುಖಂತರವೇ ಮುಖ್ಯ ವಿಚಾರಣೆ ಹಾಗೂ ಪಾಟಿ ಸವಾಲಿನ ನ್ಯಾಯಿಕ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅನುಮತಿ ನೀಡಿ ಆದೇಶಿಸಿದೆ.

'ಅರ್ಜಿದಾರ ಮಹಿಳೆಯು, ವಿಚಾರಣೆಯ ಸಮಯದಲ್ಲಿ ವಿಡಿಯೊ ಕಾನ್ಫರೆನ್ಸ್ ಸಂಪರ್ಕ ಕಡಿತಗೊಳಿಸುವುದಿಲ್ಲ ಅಥವಾ ಹಠಾತ್ತನೆ ಕೊನೆಗೊಳಿಸುವುದಿಲ್ಲ ಎಂಬುದನ್ನು ದೃಢೀಕರಿಸಿ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಮುಚ್ಚಳಿಕೆ ನೀಡಬೇಕು. ಮುಚ್ಚಳಿಕೆಯನ್ನು ಉಲ್ಲಂಘಿಸಿದರೆ ಸಂಪೂರ್ಣ ಸಾಕ್ಷ್ಯವನ್ನು ತಿರಸ್ಕರಿಸಲು ಮ್ಯಾಜಿಸ್ಟ್ರೇಟ್ ಕೋರ್ಟ್ ಸ್ವಾತಂತ್ರ್ಯ ಹೊಂದಿರುತ್ತದೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಸುಭಾಷ್ ಗುತ್ತೇದಾರ್‌ಗೆ ನಿರೀಕ್ಷಣಾ ಜಾಮೀನು


ಸುಭಾಷ್ ಗುತ್ತೇದಾರ್

ಬೆಂಗಳೂರು: ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ನಡೆದಿದೆ ಎನ್ನಲಾದ ಮತಗಳವು ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಶಾಸಕ ಬಿಜೆಪಿಯ ಸುಭಾಷ್ ಗುತ್ತೇದಾರ್ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತುಬದ್ಧ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಈ ಕುರಿತಂತೆ ಸುಭಾಷ್ ಗುತ್ತೇದಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಶುಕ್ರವಾರ ಷರತ್ತುಬದ್ಧ ನಿರೀಕ್ಷಣಾ ಜಾಮೀನು ಮಂಜೂರು ಮಾಡಿ ಆದೇಶಿಸಿದ್ದಾರೆ.

'ಅರ್ಜಿದಾರರು ₹1 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್, ಇಷ್ಟೇ ಮೊತ್ತಕ್ಕೆ ಒಬ್ಬರ ಖಾತ್ರಿ ನೀಡಬೇಕು. ನ್ಯಾಯಾಲಯದ ಅನುಮತಿ ಇಲ್ಲದೆ ದೇಶ ಬಿಟ್ಟು ತೆರಳುವಂತಿಲ್ಲ' ಎಂಬುದೂ ಸೇರಿದಂತೆ ನಿಯಮಿತ ಷರತ್ತುಗಳನ್ನು ವಿಧಿಸಿದೆ.

ಆತ್ಮಹತ್ಯೆ ಪ್ರಕರಣ: ತಾಯಿ ಸ್ಥಿತಿ ಗಂಭೀರ

ಬೆಂಗಳೂರು: ರಿಯಲ್ ಎಸ್ಟೇಟ್ ಉದ್ಯಮದಲ್ಲಿ ನಷ್ಟಕ್ಕೆ ಒಳಗಾಗಿ ಒಂದೇ ಕುಟುಂಬದ ನಾಲ್ವರು ಆತ್ಮಹತ್ಯೆಗೆ ಯತ್ನಿಸಿದ್ದ ಪ್ರಕರಣದಲ್ಲಿ ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾಗಿರುವ ಇಬ್ಬರ ಪೈಕಿ ಮಹಿಳೆ ಸ್ಥಿತಿ ಗಂಭೀರವಾಗಿದೆ.

ದೇವನಹಳ್ಳಿ ತಾಲ್ಲೂಕಿನ ಚಿಕ್ಕಜಾಲ ಪೊಲೀಸ್ ಠಾಣಾ ವ್ಯಾಪ್ತಿಯ ಹೆಗ್ಗನಹಳ್ಳಿಯಲ್ಲಿ ಗುರುವಾರ ರಾತ್ರಿ ಘಟನೆ ನಡೆದಿತ್ತು.

ರಿಯಲ್ ಎಸ್ಟೇಟ್ ಉದ್ಯಮಿ ಕುಮಾರಪ್ಪ (60), ಅವರ ಪತ್ನಿ ರಮಾ (55), ಪುತ್ರರಾದ ಅರುಣ್ ಕುಮಾರ್ (30) ಹಾಗೂ ಅಕ್ಷಯ್ ಕುಮಾರ್ (25) ಆತ್ಮಹತ್ಯೆಗೆ ಯತ್ನಿಸಿದ್ದರು. ಕುಮಾರಪ್ಪ ಹಾಗೂ ಅರುಣ್ ಅವರು ಮೃತಪಟ್ಟಿದ್ದರು. ಅಸ್ವಸ್ಥರಾಗಿದ್ದ ರಮಾ ಹಾಗೂ ಅಕ್ಷಯ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು.

ರಮಾ ಅವರಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರಿದಿದೆ. ಅಕ್ಷಯ್ ಅವರು ಚೇತರಿಸಿಕೊಳ್ಳುತ್ತಿದ್ದಾರೆ. ಅವರು ಚೇತರಿಸಿಕೊಂಡ ಬಳಿಕ ಮಾಹಿತಿ ಪಡೆದುಕೊಳ್ಳಲಾಗುವುದು. ಆಗ ಕಾರಣ ಗೊತ್ತಾಗಲಿದೆ ಎಂದು ಪೊಲೀಸರು ಹೇಳಿದರು.

ಮೃತದೇಹಗಳ ಮರಣೋತ್ತರ ಪರೀಕ್ಷೆ ನಡೆಸಿ ಸಂಬಂಧಿಕರಿಗೆ ಹಸ್ತಾಂತರ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು

ಸಾಲಬಾಧೆಯೇ ಕಾರಣ?: 'ಕುಮಾರಪ್ಪ ಅವರು ರಿಯಲ್ ಎಸ್ಟೇಟ್ ಉದ್ಯಮ ಸೇರಿ ಬೇರೆ ಬೇರೆ ಕಾರಣಕ್ಕೆ ವಿಪರೀತ ಸಾಲ ಮಾಡಿದ್ದರು. ಸಾಲ ನೀಡಿದವರು ನಿತ್ಯ ಮನೆಯ ಬಳಿ ಬಂದು ಹಣ ನೀಡುವಂತೆ ಒತ್ತಡ ಹೇರುತ್ತಿದ್ದರು. ಇದೇ ಕಾರಣಕ್ಕೆ ನಾಲ್ವರು ಆತ್ಮಹತ್ಯೆಗೆ ಯತ್ನಿಸಿದ್ದರು. ಅದರಲ್ಲಿ ಇಬ್ಬರು ಮೃತಪಟ್ಟಿದ್ದರು' ಎಂದು ಪೊಲೀಸರು ಹೇಳಿದರು.

ಮಕ್ಕಳತ್ತ ಪಟಾಕಿ ಎಸೆದಿದ್ದ ಇಬ್ಬರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ಕಡೆಗೆ ಪಟಾಕಿ ಎಸೆದು, ಕೈ ಸುಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರ ವಿರುದ್ಧ ಕೊಡಿಗೆಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೇವಿನಗರ ನಿವಾಸಿ ರಾಜೇಶ್ವರಿ ಕಂದಪ್ಪನವರ ದೂರಿನ ಮೇರೆಗೆ ಹಿರಾನಂದನಿ ನಿವಾಸಿಗಳಾದ ದೀಪಾಂಶು ಶಾ ಮತ್ತು ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಅಕ್ಟೋಬರ್ 22ರಂದು ರಾತ್ರಿ ಮಕ್ಕಳು ಪಟಾಕಿ ಸಿಡಿಸುತ್ತಿದ್ದ ವೇಳೆ ಫ್ಲ್ಯಾಟ್ ಸಂಖ್ಯೆ ಎ–904 ನಿವಾಸಿ ದೀಪಾಂಶು ಶಾ ಬಂದು ಅವರತ್ತ ಪಟಾಕಿ ಎಸೆದಿದ್ದಾರೆ. ಆಗ ಬೆಂಕಿ ಕಿಡಿ ತಾಗಿ ಮಗನ ಕೈ ಸುಟ್ಟಿದೆ. ಅದೃಷ್ಟವಶಾತ್ ಮಗಳು ಪಾರಾಗಿದ್ದಾಳೆ. ಇದಾದ ಕೆಲ ಹೊತ್ತಿನ ಬಳಿಕ ಹತ್ತು ಜನರೊಂದಿಗೆ ದೀಪಾಂಶು ಅವರು ನನ್ನ ಮನೆಗೆ ಬಂದು ಅವಾಚ್ಯ ಶಬ್ದಗಳಿಂದ ನಿಂದಿಸಿ, ಮನೆ ಒಳಗೆ ಪ್ರವೇಶಿಸಲು ಯತ್ನಿಸಿದರು. ಮಕ್ಕಳು ಹಾಗೂ ನನ್ನ ಮೇಲೆ ಹಲ್ಲೆ ನಡೆಸಲು ಯತ್ನಿಸಿದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಎಲ್ಲರೂ ನನ್ನ ವಿರುದ್ಧ ಕೂಗಾಡಿದರು. ಸುಮ್ಮನಿರುವಂತೆ ಮನವಿ ಮಾಡಿದರೂ ಕೇಳಲಿಲ್ಲ. ಅವಾಚ್ಯ ಶಬ್ದಗಳಿಂದ ನಿಂದಿಸಿ, ಗಲಾಟೆ ಮಾಡಿ ಭಯ ಉಂಟು ಮಾಡಿದ್ದಾರೆ. ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಮನವಿ ಮಾಡಿದ್ದಾರೆ.

ಪ್ರಕರಣ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ಆರೋಪಿಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಕೊಡಿಗೆಹಳ್ಳಿ ಠಾಣೆ ಪೊಲೀಸರು ತಿಳಿಸಿದರು.

ಇಪಿಎಫ್‌ಒ ಸಿಬ್ಬಂದಿಯ ಸೊಸೈಟಿಯಲ್ಲಿ ದುರ್ಬಳಕೆ: ಆರೋಪ–ದೂರು ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಪಿಎಫ್‌ಒ ಸ್ಟಾಫ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ'ಯಲ್ಲಿ ಹೂಡಿಕೆ ಮಾಡಿದ್ದ ಹಣವನ್ನು ಸೊಸೈಟಿ ಸಿಬ್ಬಂದಿ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿ ಹೂಡಿಕೆದಾರರು ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಸೊಸೈಟಿಯ ₹73 ಕೋಟಿಯನ್ನು ಹೂಡಿಕೆ ಮಾಡಲಾಗಿತ್ತು. ಆದರೆ, ಕಳೆದ 15 ವರ್ಷದಿಂದ ಸಿಇಒ ಆಗಿರುವ ಗೋಪಿಗೌಡ ಮತ್ತು ಲೆಕ್ಕಾಧಿಕಾರಿ ಜಗದೀಶ್ ಅವರು ಈ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದರು. ಹೂಡಿಕೆದಾರರು ಕಬ್ಬನ್ ಪಾರ್ಕ್ ಠಾಣೆಯ ಎದುರು ಜಮಾಯಿಸಿ ಅಕ್ರಮ ಎಸಗಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

'ದೂರು ಸ್ವೀಕರಿಸಲಾಗಿದ್ದು ಪ್ರಕರಣದ ಮಾಹಿತಿ ಕಲೆಹಾಕಲಾಗುತ್ತಿದೆ. ಕಾನೂನು ಪ್ರಕಾರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಪೊಲೀಸರು ಹೇಳಿದರು.

ಸೊಸೈಟಿನಲ್ಲಿ ಹೂಡಿಕೆ ಮಾಡಿದ್ದೆವು. ಪ್ರತಿ ತಿಂಗಳು ಬಡ್ಡಿ ಖಾತೆಗೆ ಬರುತ್ತಿತ್ತು. ಮೂರು ತಿಂಗಳಿಂದ ಹಣ ಬಂದಿಲ್ಲ. ಪರಿಶೀಲನೆ ನಡೆಸಿದಾಗ ₹70 ಕೋಟಿಯಷ್ಟು ವಂಚನೆ ನಡೆದಿರುವುದು ಗೊತ್ತಾಗಿದೆ ಎಂದು ಹೂಡಿಕೆದಾರರು ದೂರಿದರು.

61 ವರ್ಷದ ಹಿಂದೆ ಇಪಿಎಫ್‌ಒ ಸಿಬ್ಬಂದಿ 'ಇಪಿಎಫ್‌ಒ ಸ್ಟಾಫ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ' ರಚಿಸಿಕೊಂಡಿದ್ದರು. ಉಳಿತಾಯದ ಹಣವನ್ನು ಹೂಡಿಕೆ ಮಾಡುತ್ತಿದ್ದರು. ಅವಶ್ಯಕತೆ ಇರುವ ಸಿಬ್ಬಂದಿಗೆ ಈ ಸೊಸೈಟಿ ಸಾಲ ನೀಡುತ್ತಿತ್ತು.

'₹3 ಕೋಟಿ ಹಣವನ್ನು ಮಾತ್ರ ಸಾಲವಾಗಿ ಸೊಸೈಟಿ ನೀಡಿದೆ. ಉಳಿದ ಹಣ ಖಾತೆಯಲ್ಲಿ ಇಲ್ಲ ಎಂಬುದು ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

'ವಂಚನೆ ನಡೆದಿರುವುದು ನಿಜವಾಗಿದ್ದರೆ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗುವುದು. ಹೂಡಿಕೆದಾರರು ಆರೋಪಿಸಿರುವಂತೆ ಹೆಚ್ಚಿನ ಮೊತ್ತದ ವಂಚನೆ ಆಗಿದ್ದರೆ ಪ್ರಕರಣವನ್ನು ಸಿಐಡಿಗೆ ವರ್ಗಾವಣೆ ಮಾಡಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ನಾಳೆ ಕೆ–ಸೆಟ್: 1.36 ಲಕ್ಷ ಅಭ್ಯರ್ಥಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ (ಕೆ-ಸೆಟ್) ನ.2ರಂದು 11 ಜಿಲ್ಲೆಗಳಲ್ಲಿ ನಡೆಯಲಿದೆ.

33 ವಿಷಯಗಳಿಗೆ ನಡೆಯುವ ಕೆ-ಸೆಟ್ ಪರೀಕ್ಷೆಗೆ 1.36 ಲಕ್ಷ ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಬೆಂಗಳೂರು, ಬಳ್ಳಾರಿ, ಬೆಳಗಾವಿ, ದಾವಣಗೆರೆ, ಧಾರವಾಡ, ಕಲಬುರಗಿ, ಮಂಗಳೂರು, ಮೈಸೂರು, ಶಿವಮೊಗ್ಗ, ತುಮಕೂರು, ವಿಜಯಪುರ ಜಿಲ್ಲೆಗಳ 316 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಬೆಂಗಳೂರಿನಲ್ಲಿ ಎಲ್ಲ 33 ವಿಷಯಗಳ ಪರೀಕ್ಷೆ ನಡೆದರೆ, ಉಳಿದ ಜಿಲ್ಲೆಗಳಲ್ಲಿ 11 ವಿಷಯಗಳ ಪರೀಕ್ಷೆಗಳು ನಡೆಯಲಿವೆ.

ಈ ಪರೀಕ್ಷೆಗಳಿಗೆ ನೆಗೆಟಿವ್ ಮೌಲ್ಯ ಮಾಪನ ಇರುವುದಿಲ್ಲ. ಬೆಳಿಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಸಮಯ ನಿಗದಿ ಮಾಡಲಾಗಿದ್ದು, ಒಮ್ಮೆಗೆ ಪತ್ರಿಕೆ-1 ಮತ್ತು ಪತ್ರಿಕೆ-2 ನೀಡಲಾಗುತ್ತದೆ. ಅಭ್ಯರ್ಥಿಗಳು ಮೂರು ಗಂಟೆ ಅವಧಿಯಲ್ಲಿ 100 ಅಂಕಗಳ ಸಾಮಾನ್ಯ ಜ್ಞಾನ ಮತ್ತು 200 ಅಂಕಗಳ ವಿಷಯವಾರು ಪತ್ರಿಕೆಗಳಿಗೆ ಉತ್ತರಿಸಬೇಕು. ಎರಡೂ ಪತ್ರಿಕೆಗಳಿಗೆ ಪ್ರತ್ಯೇಕ ಒಎಂಆರ್ ನೀಡುತ್ತಿದ್ದು, ಆಯಾ ಒಎಂಆರ್‌ನಲ್ಲೇ ಉತ್ತರಗಳನ್ನು ಎಚ್ಚರಿಕೆಯಿಂದ ದಾಖಲಿಸಬೇಕು ಎಂದು ಪರೀಕ್ಷಾ ಪ್ರಾಧಿಕಾರ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

‘ವಸ್ತ್ರ ಸಂಹಿತೆ ಕಡ್ಡಾಯ’

ವಸ್ತ್ರ ಸಂಹಿತೆಯನ್ನು ಕಡ್ಡಾಯವಾಗಿ ಪಾಲಿಸಬೇಕು. ಪರೀಕ್ಷಾ ಕೇಂದ್ರಗಳ ಪ್ರವೇಶಕ್ಕೂ ಮುನ್ನ ಪೊಲೀಸ್ ಮತ್ತು ಗೃಹರಕ್ಷಕ ಸಿಬ್ಬಂದಿ ಅಭ್ಯರ್ಥಿಗಳ ಮುಖ ಚಹರೆ ಪತ್ತೆ ಕಾರ್ಯ ನಡೆಸುವರು. ಹಾಗಾಗಿ, ನಿಗದಿತ ಸಮಯಕ್ಕಿಂತ ಸಾಕಷ್ಟು ಮೊದಲು ಪರೀಕ್ಷಾ ಕೇಂದ್ರದಲ್ಲಿ ಹಾಜರಿರಬೇಕು ಎಂದು ಪ್ರಾಧಿಕಾರ ಸೂಚಿಸಿದೆ.

ಜಟಾಪಟಿ ನಡೆದಿಲ್ಲ: ಮಹದೇವಪ್ಪ

ಬೆಂಗಳೂರು: ‘ನಿನ್ನೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಯಾರ ಮಧ್ಯೆಯೂ ಜಟಾಪಟಿ ನಡೆದಿಲ್ಲ’ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಹೇಳಿದರು.

ಎಸ್‌ಸಿಎಸ್‌ಪಿ-ಟಿಎಸ್‌ಪಿ ಅನುದಾನ ಹಂಚಿಕೆ ವಿಚಾರದಲ್ಲಿ ಮಹದೇವಪ್ಪ ಮತ್ತು ಕೆ.ಜೆ.ಜಾರ್ಜ್ ಮಧ್ಯೆ ಮಾತಿನ ಚಕಮಕಿ ನಡೆದಿತ್ತು ಎಂದು ಮಾಧ್ಯಮಗಳಲ್ಲಿ ಸುದ್ದಿ ಪ್ರಕಟವಾಗಿತ್ತು. ಈ ಬಗ್ಗೆ ಸ್ಪಷ್ಟನೆ ನೀಡಿದ ಮಹದೇವಪ್ಪ, ‘ಯಾವ ಗಲಾಟೆಯೂ ಆಗಿಲ್ಲ. ವಿಷಯಗಳು ಬಂದಾಗ ಚರ್ಚೆ ಆಗುತ್ತದೆ, ಅದು ಆಗಿದೆ ಅಷ್ಟೇ’ ಎಂದು ತಿಳಿಸಿದರು.

ಚುಟುಕು ಸುದ್ದಿ

6.13 ಕೋಟಿ ಜನರ ಜಾತಿವಾರು ಸಮೀಕ್ಷೆ ಪೂರ್ಣ

ಬೆಂಗಳೂರು: ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ ಭಾಗವಾಗಿ ಈವರೆಗೆ 6.13 ಕೋಟಿ ಜನರ ವಿವರಗಳನ್ನು ಕಲೆ ಹಾಕಲಾಗಿದ್ದು, 4.22 ಲಕ್ಷದಷ್ಟು ಕುಟುಂಬದವರು ಮಾಹಿತಿ ನೀಡಲು ನಿರಾಕರಿಸಿದ್ದಾರೆ ಎಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಹೇಳಿದೆ.

ಆಯೋಗವು ನಡೆಸಿದ್ದ ಸಮೀಕ್ಷೆಯ ಮನೆ–ಮನೆ ಭೇಟಿ ಹಂತವು ಶುಕ್ರವಾರಕ್ಕೆ (ಅಕ್ಟೋಬರ್ 31ಕ್ಕೆ) ಕೊನೆಗೊಂಡಿದೆ.

ರಾಜ್ಯದಾದ್ಯಂತ ಒಟ್ಟು 6.85 ಕೋಟಿ ಜನರನ್ನು ಸಮೀಕ್ಷೆಗೆ ಒಳಪಡಿಸುವ ಗುರಿಯನ್ನು ಹಾಕಿಕೊಳ್ಳಲಾಗಿತ್ತು. ಅದರಲ್ಲಿ 6.13 ಕೋಟಿ ಜನರನ್ನು ಸಮೀಕ್ಷೆಗೆ ಒಳಪಡಿಸಿದ್ದು, 72 ಲಕ್ಷ ಜನರು ಸಮೀಕ್ಷೆಯಲ್ಲಿ ಭಾಗಿಯಾಗಿಲ್ಲ ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

ರಾಜ್ಯದಾದ್ಯಂತ ನಡೆದ ಸಮೀಕ್ಷೆಯ ವೇಳೆ 34.49 ಲಕ್ಷ ಮನೆಗಳಿಗೆ ಬೀಗ ಹಾಕಲಾಗಿತ್ತು ಇಲ್ಲವೇ ಮನೆಗಳು ಖಾಲಿ ಇದ್ದವು. ಈ ಪೈಕಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲೇ 29 ಲಕ್ಷಕ್ಕೂ ಹೆಚ್ಚು ಮನೆಗಳನ್ನು ಖಾಲಿ/ಬೀಗ ಹಾಕಲಾದ/ಸಮೀಕ್ಷೆ ಮಾಡಲಾಗದ ಮನೆಗಳು ಎಂದು ಗುರುತಿಸಲಾಗಿದೆ.

ರಾಜ್ಯದಾದ್ಯಂತ ಒಟ್ಟು

ಸಮೀಕ್ಷೆಯ ಮನೆ–ಮನೆ ಭೇಟಿ ಹಂತವು ಕೊನೆಗೊಂಡಿದ್ದರೂ, ಆನ್‌ಲೈನ್‌ನಲ್ಲಿ ಮಾಹಿತಿ ನಮೂದಿಸಲು ನವೆಂಬರ್ 10ರವರೆಗೆ ಅವಕಾಶವಿದೆ.

ನನ್ನ ಅವಧಿಯದ್ದೂ ಸೇರಿಸಿ ತನಿಖೆ ಮಾಡಿಸಿ: ಕಾಗೇರಿ

ಬೆಂಗಳೂರು: ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ತಮ್ಮ ಮೇಲಿನ ಭ್ರಷ್ಟಾಚಾರದ ಆರೋಪದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲು ಶಿಫಾರಸು ಮಾಡಲಿ ಎಂದು ಬಿಜೆಪಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಒತ್ತಾಯಿಸಿದ್ದಾರೆ.

ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಅಗತ್ಯವಿದ್ದರೆ ನನ್ನ ಅವಧಿಯದ್ದೂ ಸೇರಿಸಿ ತನಿಖೆ ಮಾಡಿಸಲಿ’ ಎಂದು ಹೇಳಿದರು.

‘ಖಾದರ್ ಅವರ ಆಡಳಿತ ಸುಧಾರಣೆಯ ಭಾಗವಾಗಿ ಭ್ರಷ್ಟಾಚಾರ ನಡೆದಿದೆ. ಈ ಬಗ್ಗೆ ಸಾರ್ವಜನಿಕ ವಲಯದಲ್ಲೂ ಚರ್ಚೆ ನಡೆದಿದೆ. ಆದ್ದರಿಂದ, ನ್ಯಾಯಾಂಗ ತನಿಖೆ ನಡೆಸುವುದು ಸೂಕ್ತ. ಸಭಾಧ್ಯಕ್ಷರ ಹುದ್ದೆ ಸಾಂವಿಧಾನಿಕ ಹುದ್ದೆ. ಅದಕ್ಕೆ ಘನತೆ– ಗೌರವ ಇದೆ. ಆರೋಪ ಬಂದಾಗ ತನಿಖೆಗೆ ಆದೇಶಿಸಬೇಕು, ಆರೋಪಗಳಿಂದ ಕಳಂಕ ಮುಕ್ತರಾಗಿ ಹೊರಬರಬೇಕು’ ಎಂದು ಕಾಗೇರಿ ಹೇಳಿದರು.

‘ಕಾಗೇರಿ ಅವರು ಮಾಡಿರುವ ಆರೋಪ ಮಾಜಿ ಸಭಾಧ್ಯಕ್ಷರಿಗೆ ಮಾಡಿರುವ ಅಪಮಾನ’ ಎಂದು ಖಾದರ್ ಅವರು ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದ ಕಾಗೇರಿ, ‘ಅಭಿಪ್ರಾಯ ಹೇಳುವುದಕ್ಕೆ ನಮಗೆ ಸ್ವಾತಂತ್ರ್ಯವಿದೆ’ ಎಂದರು.

ಪುಸ್ತಕ ಖರೀದಿಗೆ ಶೇ 50ರಷ್ಟು ರಿಯಾಯಿತಿ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ನವೆಂಬರ್ ತಿಂಗಳಲ್ಲಿ ಪುಸ್ತಕಗಳ ಖರೀದಿ ಮೇಲೆ ಶೇ 50ರಷ್ಟು ರಿಯಾಯಿತಿ ಘೋಷಿಸಿದೆ.

‘ಕನ್ನಡ ಪುಸ್ತಕ ಪ್ರಾಧಿಕಾರವು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ 700ಕ್ಕೂ ಅಧಿಕ ಶೀರ್ಷಿಕೆಗಳಡಿ ಕೃತಿಗಳನ್ನು ಪ್ರಕಟಿಸಿದೆ. ಎಲ್ಲ ಪುಸ್ತಕಗಳ ಮೇಲೆ ಶೇ 50ರಷ್ಟು ರಿಯಾಯಿತಿ ಇರಲಿದೆ’ ಎಂದು ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ತಿಳಿಸಿದ್ದಾರೆ.

ಬೆಂಗಳೂರಿನ ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆ, ಎಲ್ಲ ಜಿಲ್ಲೆಗಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಹಾಗೂ ಪ್ರಾಧಿಕಾರದಿಂದ ತೆರೆಯಲಾದ ಮಾರಾಟ ಮಳಿಗೆಗಳಲ್ಲಿ ರಿಯಾಯಿತಿ ಇರಲಿದೆ. ಪ್ರಾಧಿಕಾರದ ಜಾಲತಾಣ https://kpp.karnataka.gov.in ಮೂಲಕವೂ ಖರೀದಿಸಬಹುದು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪುಸ್ತಕಗಳನ್ನು www.kuvempubhashabharathi.karnataka.gov.in ಮೂಲಕವೂ ರಿಯಾಯಿತಿ ದರದಲ್ಲಿ ಖರೀದಿಸಬಹುದು ಎಂದು ಪ್ರಾಧಿಕಾರದ ರಿಜಿಸ್ಟ್ರಾರ್ ಈಶ್ವರ್ ಕು. ಮಿರ್ಜಿ ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

ಸಾಂಸ್ಕೃತಿಕ ಸಂಭ್ರಮ ಇಂದು

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಭಾರತೀಯ ಮಾಲ್‌ನಲ್ಲಿ 'ಸಾಂಸ್ಕೃತಿಕ ಸಂಭ್ರಮ ಕರ್ನಾಟಕಕ್ಕೊಂದು ನಮನ' ಕಾರ್ಯಕ್ರಮವನ್ನು ಶನಿವಾರ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 7 ಗಂಟೆಗೆ ಧ್ವಜಾರೋಹಣ ನಡೆಯಲಿದೆ. ಕರ್ನಾಟಕದ ಶ್ರೀಮಂತ ಪರಂಪರೆ, ಸಂಸ್ಕೃತಿಯನ್ನು ಬಿಂಬಿಸುವ ಡೊಳ್ಳು ಕುಣಿತ, ಹುಲಿವೇಷ, ಯಕ್ಷಗಾನ, ಜಾನಪದ ನೃತ್ಯ ಪ್ರದರ್ಶನ ನಡೆಯಲಿವೆ.

ಸಂಜೆ 6.30ರಿಂದ ವಿವಿಧ ಮನರಂಜನಾ ಕಾರ್ಯಕ್ರಮಗಳು ನಡೆಯಲಿವೆ. ಎಲ್ಲರಿಗೂ ಪ್ರವೇಶ ಉಚಿತ ಎಂದು ಪ್ರಕಟಣೆ ತಿಳಿಸಿದೆ.

ಅಂಗವಿಕಲರಿಗೆ ಕ್ರೀಡಾಕೂಟ

ಬೆಂಗಳೂರು: ವಿಶ್ವ ಅಂಗವಿಕಲರ ದಿನಾಚರಣೆ ಅಂಗವಾಗಿ ಬೆಂಗಳೂರು ನಗರ ಜಿಲ್ಲೆಯ ವಿಶೇಷ ಶಾಲೆಗಳಲ್ಲಿನ ಅಂಗವಿಕಲ ಮಕ್ಕಳಿಗೆ ಸಾಂಸ್ಕೃತಿಕ ಹಾಗೂ ಕ್ರೀಡಾಕೂಟವನ್ನು ನ.6, 11 ರಂದು ಹಮ್ಮಿಕೊಳ್ಳುವಂತೆ ಬೆಂಗಳೂರು ನಗರ ಜಿಲ್ಲೆ ಹೆಚ್ಚುವರಿ ಜಿಲ್ಲಾಧಿಕಾರಿ ಜಗದೀಶ್ ಕೆ.ನಾಯಕ್ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 'ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ ಹಿಂಭಾಗದಲ್ಲಿರುವ ಸಂಭ್ರಮ ಸಭಾಂಗಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ, ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ಕ್ರೀಡಾಕೂಟ ನಡೆಸಬೇಕು' ಎಂದರು.

ಅಂಗಾಂಗ ಕಸಿಗೆ ಮತ್ತಷ್ಟು ಆಸ್ಪತ್ರೆ ಅಣಿ

ಕಸಿ ಚಿಕಿತ್ಸೆಗೆ ಅನುಮೋದನೆ ಪಡೆದ ಆಸ್ಪತ್ರೆಗಳ ಸಂಖ್ಯೆ 84ಕ್ಕೆ ಏರಿಕೆ

• ವರುಣ ಹೆಗಡೆ

ಬೆಂಗಳೂರು: ಅಂಗಾಂಗ ಕಸಿಗೆ ಉತ್ತೇಜನ ನೀಡಲು ಹಾಗೂ ಕಸಿ ಶಸ್ತ್ರ ಚಿಕಿತ್ಸೆ ಕಾಯುವಿಕೆ ಅವಧಿ ಕಡಿತಗೊಳಿಸಲು ಖಾಸಗಿ ಆಸ್ಪತ್ರೆಗಳಲ್ಲಿನ ಮೂಲಸೌಕರ್ಯ ಹಾಗೂ ಅಗತ್ಯ ವ್ಯವಸ್ಥೆಯನ್ನು ಪರಿಶೀಲಿಸಿ, ಕಸಿ ಶಸ್ತ್ರಚಿಕಿತ್ಸೆಗೆ ಅವಕಾಶ ನೀಡಲಾಗುತ್ತಿದೆ.

ಆರೋಗ್ಯ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ರಾಜ್ಯ ಅಂಗಾಂಗ ಮತ್ತು ಅಂಗಾಂಶ ಕಸಿ ಸಂಸ್ಥೆಯು (ಜೀವಸಾರ್ಥಕತೆ) ಅಂಗಾಂಗ ಹಾಗೂ ಅಂಗಾಂಶವನ್ನು ಸಂಗ್ರಹಿಸಿ, ಅಂಗಾಂಗ ವೈಫಲ್ಯ ಸಮಸ್ಯೆ ಎದುರಿಸುತ್ತಿರುವವರಿಗೆ ಕಸಿ ಮಾಡಿಸಲು ನೆರವಾಗುತ್ತಿದೆ. ಇಲಾಖೆ ರಚಿಸಿದ ತಜ್ಞರ ಸಮಿತಿಯು ಆಸ್ಪತ್ರೆಯಲ್ಲಿನ ಮೂಲಸೌಕರ್ಯ ಹಾಗೂ ವ್ಯವಸ್ಥೆಯನ್ನು ಪರಿಶೀಲಿಸಿ, ಜೀವ ಸಾರ್ಥಕತೆ ಯೋಜನೆಯಡಿ ಅಂಗಾಂಗ ಕಸಿಗೆ ಮಾನ್ಯತೆ ನೀಡಲು ಶಿಫಾರಸು ಮಾಡುತ್ತಿವೆ.

ಕಸಿ ಶಸ್ತ್ರಚಿಕಿತ್ಸೆಗೆ ಅರ್ಜಿ ಸಲ್ಲಿಸಿದ್ದ ಆಸ್ಪತ್ರೆಗಳಲ್ಲಿ ಇನ್‌ಫೆಂಟ್ರಿ ರಸ್ತೆಯಲ್ಲಿರುವ ಸ್ಪರ್ಶ್ ಆಸ್ಪತ್ರೆ ಹಾಗೂ ಮಹದೇವಪುರದಲ್ಲಿರುವ ಕಿಮ್ಸ್ ಆಸ್ಪತ್ರೆ ಇದೇ ಅಕ್ಟೋಬರ್‌ನಲ್ಲಿ ಮಾನ್ಯತೆ ಪಡೆದಿವೆ. ಇದರಿಂದಾಗಿ ಜೀವಸಾರ್ಥಕತೆಯಡಿ ಅಂಗಾಂಗ ಕಸಿಗೆ ಮಾನ್ಯತೆ ಪಡೆದ ಒಟ್ಟು ಆಸ್ಪತ್ರೆಗಳ ಸಂಖ್ಯೆ 84ಕ್ಕೆ ಏರಿಕೆಯಾಗಿದೆ.

ಅಂಕಿ ಅಂಶಗಳು

153 ಈ ವರ್ಷ ಅಂಗಾಂಗ ದಾನ ಮಾಡಿದವರು

433 ದಾನವಾಗಿ ಸ್ವೀಕರಿಸಲಾದ ಅಂಗಾಂಗ

312 ದಾನವಾಗಿ ಸ್ವೀಕರಿಸಲಾದ ಅಂಗಾಂಶ


ಈ ಆಸ್ಪತ್ರೆಗಳಲ್ಲಿ 50ಕ್ಕೂ ಅಧಿಕ ಆಸ್ಪತ್ರೆಗಳು ಬೆಂಗಳೂರಿನಲ್ಲಿಯೇ ಇವೆ.

ದರ ನಿಗದಿ: ಆಸ್ಪತ್ರೆಯಲ್ಲಿನ ಮೂಲ ಸೌಕರ್ಯ, ಶಸ್ತ್ರಚಿಕಿತ್ಸಾ ಕೊಠಡಿ, ಮಾನವ ಸಂಪನ್ಮೂಲ, ಪ್ರಯೋಗಾಲಯ, ತೀವ್ರ ನಿಗಾ ಘಟಕ, ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಅಗ್ನಿ ಸುರಕ್ಷತಾ ಪ್ರಮಾಣಪತ್ರ ಸೇರಿದಂತೆ ಅಗತ್ಯ ದಾಖಲಾತಿಗಳನ್ನು ಪರಿಶೀಲಿಸಿ, ನಿಗದಿತ ಅಂಗಗಳ ಕಸಿಗೆ ಐದು ವರ್ಷಗಳ ಮಾನ್ಯತೆ ನೀಡಲಾಗುತ್ತಿದೆ. ಅಂಗವಾರು ಕಸಿ ಶಸ್ತ್ರಚಿಕಿತ್ಸೆಗೆ ಸರ್ಕಾರವು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅಡಿ ದರ ಪ್ಯಾಕೇಜ್ ನಿಗದಿ ಮಾಡಿದ್ದು, ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬಗಳಿಗೆ ಉಚಿತವಾಗಿ ಕಸಿ ಶಸ್ತ್ರಚಿಕಿತ್ಸೆ ನಡೆಸಲಾಗುತ್ತಿದೆ.

ಹೃದಯ ಮತ್ತು ಶ್ವಾಸಕೋಶ ಕಸಿಗೆ ₹22 ಲಕ್ಷ ಪ್ಯಾಕೇಜ್ ನಿಗದಿಪಡಿಸಲಾಗಿದೆ. ಯಕೃತ್ ಕಸಿಗೆ ₹11 ಲಕ್ಷ, ಮೂತ್ರಪಿಂಡ ಕಸಿಗೆ ₹2 ಲಕ್ಷ, ಹೃದಯ ಕಸಿಗೆ ₹10 ಲಕ್ಷ ಹಾಗೂ ಶ್ವಾಸಕೋಶ ಕಸಿಗೆ ₹15 ಲಕ್ಷದ ಪ್ಯಾಕೇಜ್ ಗೊತ್ತುಪಡಿಸಲಾಗಿದೆ.

'ಜೀವಸಾರ್ಥಕತೆಯಡಿ ಅಂಗಾಂಗ ಕಸಿಗೆ ಹೆಸರು ನೋಂದಾಯಿಸಿಕೊಳ್ಳುವವರಲ್ಲಿ ಬಹುತೇಕರು ಬೆಂಗಳೂರಿನ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ರೋಗಿಗಳೇ ಆಗಿರುತ್ತಾರೆ. ಆಸ್ಪತ್ರೆಗಳ ವ್ಯವಸ್ಥೆ, ದಾಖಲಾತಿಗಳನ್ನು ಪರಿಶೀಲಿಸಿ, ಮಾನ್ಯತೆಗೆ ಶಿಫಾರಸು ಮಾಡುತ್ತೇವೆ. ಬೆಂಗಳೂರಿನಲ್ಲಿಯೇ ಅಧಿಕ ಆಸ್ಪತ್ರೆಗಳು ನೋಂದಣಿಯಾಗಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ರಾಜಧಾನಿಗೆ ಕಸಿ ಶಸ್ತ್ರಚಿಕಿತ್ಸೆಗೆ ಬರುತ್ತಾರೆ' ಎಂದು ತಜ್ಞರ ಸಮಿತಿಯ ಸದಸ್ಯರೊಬ್ಬರು ತಿಳಿಸಿದರು.






8 ಜೀವ ಉಳಿಸಲು ಸಾಧ್ಯ

'ರಾಜ್ಯದಲ್ಲಿ ಅಂಗಾಂಗ ಮತ್ತು ಅಂಗಾಂಶಗಳ ತೀವ್ರ ಕೊರತೆಯಿದೆ. ಒಬ್ಬ ವ್ಯಕ್ತಿಯು ಅಂಗಾಂಗ ದಾನದ ಮೂಲಕ ಎಂಟು ಜೀವವನ್ನು ಉಳಿಸಬಹುದಾಗಿದೆ. ಹೃದಯ, ಮೂತ್ರಪಿಂಡಗಳು, ಪಿತ್ತಜನಕಾಂಗ, ಮೇದೋಜೀರಕ ಗ್ರಂಥಿ, ಸಣ್ಣ ಕರುಳು ಮತ್ತು ಶ್ವಾಸಕೋಶವನ್ನು ದಾನ ಮಾಡಬಹುದು. ಅಂಗಾಂಶದ ಮೂಲಕ 50ಕ್ಕೂ ಹೆಚ್ಚು ಮಂದಿಗೆ ನೆರವಾಗಬಹುದು' ಎಂದು ಜೀವಸಾರ್ಥಕತೆ ಸಂಸ್ಥೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಅಂಗಾಂಗ ವೈಫಲ್ಯಕ್ಕೆ ಒಳಗಾದವರಿಗೆ ಸಮಯಕ್ಕೆ ಸರಿಯಾಗಿ ಕಸಿ ಮಾಡದಿದ್ದಲ್ಲಿ ಜೀವಕ್ಕೆ ಕುತ್ತು ಬರುವ ಸಾಧ್ಯತೆ ಇದೆ. ಆದ್ದರಿಂದ ಇಲಾಖೆಯಡಿ ಕಸಿಗೆ ಮಾನ್ಯತೆ ಪಡೆದ ಆಸ್ಪತ್ರೆಗಳ ವೈದ್ಯರೂ ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಯ ಕುಟುಂಬಸ್ಥರಿಗೆ ಅಂಗಾಂಗ ದಾನದ ಮಹತ್ವದ ಬಗ್ಗೆ ತಿಳಿಸಿ, ಸಂಗ್ರಹಿಸಲಾದ ಅಂಗಾಂಗವನ್ನು ನೋಂದಾಯಿತ ರೋಗಿಗಳಿಗೆ ಕಸಿ ಮಾಡುತ್ತಿದ್ದಾರೆ' ಎಂದು ಹೇಳಿದರು.

ಅಂಗಾಂಗ ದಾನ ಮಾಡಿದವರ ವರ್ಷವಾರು ವಿವರ



ಅಡಿಗಡಿಗೂ ಲಂಚ: ಕ್ರಮದ ಭರವಸೆ

ಪುತ್ರಿಯ ಮೃತದೇಹ ಸಾಗಿಸಲು, ಮರಣೋತ್ತರ ಪರೀಕ್ಷೆ, ಆಂಬುಲೆನ್ಸ್ ಚಾಲಕ, ಪೊಲೀಸರು, ಸ್ಮಶಾನದ ಸಿಬ್ಬಂದಿ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಅಧಿಕಾರಿಗಳಿಂದ ಅನುಭವಿಸಿದ ನೋವು ಹಾಗೂ ಸಿಬ್ಬಂದಿ ಹಣಕ್ಕೆ ಬೇಡಿಕೆಯಿಟ್ಟಿರುವ ಬಗ್ಗೆ ಭಾರತ್ ಪೆಟ್ರೋಲಿಯಂ ನಿಗಮದ ನಿವೃತ್ತ ಸಿಎಫ್‌ಒ ಕೆ.ಶಿವಕುಮಾರ್ 'ಲಿಂಕ್ಡ್ ಇನ್'ನಲ್ಲಿ ಮಾಡಿರುವ ಆರೋಪಕ್ಕೆ ಸಂಬಂಧಿಸಿ, ಗೃಹ ಸಚಿವ ಪರಮೇಶ್ವರ, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ.

ಸೇವೆಯಿಂದ ವಜಾ: ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆ. ಶಿವಕುಮಾರ್ ಅವರ ಮಗಳ ಸಾವಿನ ಪ್ರಕರಣದಲ್ಲಿ ಪೊಲೀಸ್ ಇಲಾಖೆಯಲ್ಲಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿ ಲಂಚ ಪಡೆದಿರುವುದು ಸಾಬೀತಾದರೆ ಅವರನ್ನು ಸೇವೆಯಿಂದಲೇ ವಜಾ ಮಾಡಲಾಗುತ್ತದೆ' ಎಂದು ಗೃಹ ಸಚಿವ ಪರಮೇಶ್ವರ ಪ್ರತಿಕ್ರಿಯಿಸಿದ್ದಾರೆ.



'ಸಾವಿರ ಇರಲಿ, ಐನೂರು ರೂಪಾಯಿಯೇ ಆಗಿರಲಿ, ಪೊಲೀಸರು ಲಂಚ ಪಡೆದಿದ್ದರೆ ಕೂಡಲೇ ಅಮಾನತು ಮಾಡಿ ಇಲಾಖಾ ವಿಚಾರಣೆ ನಡೆಸಲಾಗುವುದು. ತನಿಖೆಯಲ್ಲಿ ಲಂಚ ಪಡೆದಿರುವುದು ಸಾಬೀತಾದರೆ ಸೇವೆಯಿಂದ ವಜಾ ಮಾಡಲಾಗುತ್ತದೆ. ಭ್ರಷ್ಟಾಚಾರವನ್ನು ಸರ್ಕಾರ ಸಹಿಸುವುದಿಲ್ಲ' ಎಂದಿದ್ದಾರೆ.

ನಿರ್ದಿಷ್ಟ ದೂರು ನೀಡಿಲ್ಲ: ಮಹೇಶ್ವರ್ ರಾವ್



'ಭಾರತ್ ಪೆಟ್ರೋಲಿಯಂ ನಿಗಮದ ನಿವೃತ್ತ ಸಿಎಫ್‌ಒ ಕೆ.ಶಿವಕುಮಾರ್ ಅವರು ನನಗೆ ಪರಿಚಿತರು. ಅವರೊಂದಿಗೆ ನಾನು ಮಾತನಾಡಿದ್ದೇನೆ. ಅವರು ಮಗಳನ್ನು ಕಳೆದುಕೊಂಡು ತೀವ್ರ ದುಃಖದಲ್ಲಿದ್ದಾರೆ. ವ್ಯವಸ್ಥೆಯಲ್ಲಿ ಸಮಸ್ಯೆ ಇದೆ. ಇಡೀ ವ್ಯವಸ್ಥೆಯನ್ನು ಸರಿ ಮಾಡಬೇಕು ಎಂದು ಹೇಳಿದ್ದಾರೆ. ಹೆಚ್ಚಿನ ಮಾತುಕತೆ ಮಾಡಲು ಸಾಧ್ಯವಾಗಿಲ್ಲ' ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಹೇಳಿದರು.

ಮರಣ ಪ್ರಮಾಣಪತ್ರಕ್ಕೂ ಲಂಚ ನೀಡಬೇಕು ಎಂಬ ಶಿವಕುಮಾರ್ ಅವರ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಮಹೇಶ್ವರ್ ರಾವ್, 'ಪೂರ್ವ ನಗರ ಪಾಲಿಕೆಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು, ಪಾಲಿಕೆಯಲ್ಲಿ ಯಾವ ರೀತಿ ವಿಳಂಬವಾಗಿದೆ? ಯಾರು ತೊಂದರೆ ಮಾಡಿದ್ದಾರೆ ಎಂಬುದನ್ನು ಪರಿಶೀಲಿಸುತ್ತಿದ್ದೇವೆ. ತಪ್ಪು ಮಾಡಿರುವುದು ಕಂಡು ಬಂದರೆ ಕೂಡಲೇ ಕ್ರಮ ಕೈಗೊಳ್ಳುತ್ತೇವೆ' ಎಂದಿದ್ದಾರೆ.

ಸುಲಿಗೆ ಟಾರ್ಗೆಟ್ ಎಷ್ಟು?: ಅಶೋಕ



'ಕಾಂಗ್ರೆಸ್ ಹೈಕಮಾಂಡ್ ಮತ್ತು ರಾಹುಲ್ ಗಾಂಧಿ ಅವರ ಜೋಳಿಗೆ ತುಂಬಿಸಿ, ಸಿ.ಎಂ ಕುರ್ಚಿ ಗಿಟ್ಟಿಸಿಕೊಳ್ಳಲು ಪಾಲಿಕೆ ಅಧಿಕಾರಿಗಳಿಗೆ ಎಷ್ಟು ಸುಲಿಗೆ ಟಾರ್ಗೆಟ್ ಕೊಟ್ಟಿದ್ದೀರಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರೇ' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು 'ಎಕ್ಸ್'ನಲ್ಲಿ ಪ್ರಶ್ನಿಸಿದ್ದಾರೆ.

'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿರುವ 'ಅಂತ್ಯಸಂಸ್ಕಾರಕ್ಕೆ ಅಡಿಗಡಿಗೂ ಲಂಚ' ಸುದ್ದಿಯನ್ನು ಉಲ್ಲೇಖಿಸಿರುವ ಅವರು, 'ಮರಣೋತ್ತರ ಪರೀಕ್ಷೆ ವರದಿ ಪಡೆಯಲು ಲಂಚ, ಮರಣ ಪ್ರಮಾಣಪತ್ರ ಪಡೆಯಲು ಲಂಚ, ಅಂತ್ಯ ಸಂಸ್ಕಾರ ಮಾಡೋದಕ್ಕೆ ಲಂಚ. ನಿಮ್ಮ ಕುರ್ಚಿ ಆಸೆಗೆ ಜನಸಾಮಾನ್ಯರ ರಕ್ತ ಇನ್ನೆಷ್ಟು ಹೀರುತ್ತೀರಿ ಉಪ ಮುಖ್ಯಮಂತ್ರಿಯವರೇ?' ಎಂದು ಹೇಳಿದ್ದಾರೆ.

ತಾಯಿ ಕೊಂದು ಕಥೆ ಕಟ್ಟಿದ್ದ ಪುತ್ರಿ

ಎರಡನೇ ಮುಖಪುಟದಿಂದ...

'ರಾತ್ರಿ ವೇಳೆ ನೇತ್ರಾವತಿ ಮಲಗಿದ್ದಾಗ ಬಂದಿದ್ದರು. ಎಚ್ಚರಗೊಂಡಿದ್ದ ನೇತ್ರಾವತಿ ಮಗಳನ್ನು ಪ್ರಶ್ನಿಸಿ ಬುದ್ಧಿಮಾತು ಹೇಳಿದ್ದರು. ಪೊಲೀಸರಿಗೆ ತಿಳಿಸುವುದಾಗಿ ಗದರಿದ್ದರು. ಆಗ ಗಲಾಟೆಯಾಗಿತ್ತು' ಎಂದು ಪೊಲೀಸರು ಹೇಳಿದರು.

'ಜಗಳ ವಿಕೋಪಕ್ಕೆ ಹೋದಾಗ ಕೋಪಗೊಂಡಿದ್ದ ಮಗಳು ಹಾಗೂ ಆಕೆಯ ಸ್ನೇಹಿತರು ಬಾಯಿ ಮುಚ್ಚಿ ಟವಲ್‌ನಿಂದ ಕುತ್ತಿಗೆ ಬಿಗಿದು ಕೊಲೆ ಮಾಡಿದ್ದರು. ಬಳಿಕ ಮನೆಯಲ್ಲಿದ್ದ ಫ್ಯಾನ್‌ಗೆ ಮೃತದೇಹವನ್ನು ನೇತುಹಾಕಿ ಆರೋಪಿಗಳು ಪರಾರಿಯಾಗಿದ್ದರು' ಎಂದರು.

ಕೊಲೆ ರಹಸ್ಯ ಬಯಲಾಗಿದ್ದು ಹೇಗೆ?: ಅಂತ್ಯ ಸಂಸ್ಕಾರಕ್ಕೂ ಪುತ್ರಿ ಬಾರದೇ ಇರುವುದನ್ನು ಕಂಡು ನೇತ್ರಾವತಿ ಅವರ ಸಹೋದರಿ ಅನಿತಾಗೆ ಅನುಮಾನ ಬಂದಿತ್ತು. ಸಹೋದರಿಯ ಪುತ್ರಿ ನಾಪತ್ತೆ ಆಗಿರುವುದಾಗಿ ದೂರು ನೀಡಿದ್ದರು.

ಅ.30ರಂದು ನೇತ್ರಾವತಿ ಪುತ್ರಿ ಮನೆಗೆ ಬಂದಾಗ ಆಕೆಯನ್ನು ಸಂಬಂಧಿಕರು ವಿಚಾರಣೆ ನಡೆಸಿದ್ದರು.

'ತಾಯಿ ಹಾಗೂ ನಾನು ಮನೆಯಲ್ಲಿರುವಾಗ ಸ್ನೇಹಿತರು ಬಂದಿದ್ದರು. ಸ್ನೇಹಿತರು ಮನೆಗೆ ಬಂದಿರುವ ವಿಚಾರದ ಬಗ್ಗೆ ಪೊಲೀಸರಿಗೆ ಹೇಳುತ್ತೇನೆ ಎಂದು ಹೆದರಿಸಿದ್ದರು. ಅಷ್ಟರಲ್ಲಿ ತಾಯಿಯ ಕುತ್ತಿಗೆಗೆ ಟವಲ್‌ನಿಂದ ಬಿಗಿದು ಉಸಿರುಗಟ್ಟಿಸಿದ್ದರು. ನನಗೂ ಚಾಕು ತೋರಿಸಿ ಈ ವಿಚಾರವನ್ನು ಯಾರಿಗೂ ಹೇಳದಂತೆ ಹೆದರಿಸಿದ್ದರು. ಭಯಗೊಂಡು, ಸ್ನೇಹಿತೆಯ ಮನೆಗೆ ಹೋಗಿದ್ದೆ' ಎಂದು ಸಂಬಂಧಿಕರ ಬಳಿ ಆರೋಪಿ ಬಾಲಕಿ ಕಥೆ ಕಟ್ಟಿದ್ದಳು. ಆದರೆ, ಅನಿತಾ ಅವರಿಗೆ ಅನುಮಾನ ಬಂದು ಪೊಲೀಸರಿಗೆ ಮಾಹಿತಿ ನೀಡಿದ್ದರು. ಬಾಲಕಿಯ ವಿಚಾರಣೆ ನಡೆಸಿದಾಗ ರಹಸ್ಯ ಬಯಲಾಗಿದೆ.

ಪರಿಹಾರ ಸೂತ್ರ ತಿರಸ್ಕಾರ

ಎರಡನೇ ಮುಖಪುಟದಿಂದ...

ಇನ್ನಾದರೂ ನೆಮ್ಮದಿ ಜೀವನ ನಡೆಸಲು ಅನುವು ಮಾಡಿಕೊಡುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

'ಬಿಬಿಸಿ ಯೋಜನೆಗೆ 2007ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದ್ದು, ಈವರೆಗೂ ಯೋಜನೆ ಅನುಷ್ಠಾನಗೊಂಡಿಲ್ಲ. ಹಳೆಯ ಪೆರಿಫೆರಲ್ ರಿಂಗ್ ರಸ್ತೆ ಯೋಜನೆಗೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದ್ದು, ಪರಿಹಾರ ಪಡೆಯಲು ಸರ್ಕಾರ ನೀಡಿರುವ ನಾಲ್ಕು ಆಯ್ಕೆಗಳು ರೈತರಿಗೆ ಮರಣ ಶಾಸನವಾಗಲಿವೆ. ಬಿಡಿಎ ಕಾಯ್ದೆ 1894ರ ಸೆಕ್ಷನ್ 27ರ ಪ್ರಕಾರ ಐದು ವರ್ಷಗಳ ಅವಧಿ ಮುಗಿ ದಿರುವುದರಿಂದ ಪಿಆರ್‌ಆರ್ ಭಾಗ -1 ಯೋಜನೆಯನ್ನು ರದ್ದುಗೊಳಿಸಿ, ಎಲ್ಲ ಭೂ ಮಾಲೀಕರಿಗೆ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ನೀಡಬೇಕು' ಎಂದು ಹಳ್ಳಿ ವರ್ತೂರಿನ ಜಗದೀಶ್ ಒತ್ತಾಯಿಸಿದರು.

'ಯೋಜನೆಗೆ ಒಂದು ವೇಳೆ ಯಾರಾದರೂ ಭೂಮಿ ನೀಡಲು ನಿರಾಕರಿಸಿದರೆ, ಸಹಜ ಸ್ವಾಧೀನ ಪ್ರಕ್ರಿಯೆ ಪರಿಹಾರದ ಹಣವನ್ನು ನ್ಯಾಯಾಲಯದಲ್ಲಿ ಠೇವಣಿ ಇಟ್ಟು ಯೋಜನೆ ಮುಂದುವರಿಸಲು ಸರ್ಕಾರ ನಿರ್ದೇಶನ ನೀಡಿದೆ. ಯಾವುದೇ ಕಾರಣಕ್ಕೂ ಈ ಜಾಗವನ್ನು ಡಿನೋಟಿಫಿಕೇಶನ್ ಮಾಡುವುದಿಲ್ಲ. ಟಿಡಿಆರ್ ವಿನಿಮಯ ಪ್ರಾರಂಭಿಸುವಂತೆ ಸೂಚಿಸಿದೆ. ಭೂಮಿ ಕಳೆದುಕೊಳ್ಳುವವರು ನೋಂದಣಿ ಮಾಡಿಕೊಂಡು, ಈ ಟಿಡಿಆರ್ ವಿನಿಮಯ ಮಾಡಿಕೊಳ್ಳಬಹುದಾಗಿದೆ' ಎಂದು ಬಿಡಿಎ ಅಧಿಕಾರಿಗಳು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ಕನ್ನಡ ಶಾಲೆಗಳ ಸಬಲೀಕರಣ ಕಾಯ್ದೆ ಜಾರಿಗೆ ಆಗ್ರಹ

ಬೆಂಗಳೂರು: 'ಕನ್ನಡ ಶಾಲೆಗಳನ್ನು ಉಳಿಸಲು 'ಕನ್ನಡ ಶಾಲೆಗಳ ಸಬಲೀಕರಣ ಕಾಯ್ದೆ' ಜಾರಿ ಮಾಡಬೇಕು' ಎಂದು ಅಖಿಲ ಕರ್ನಾಟಕ ಅನುದಾನರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘ ಆಗ್ರಹಿಸಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ರೇವಣ ಸಿದ್ದಪ್ಪಾ ಜಲಾದೆ, 'ಹತ್ತು ವರ್ಷಗಳ ಅವಧಿಯಲ್ಲಿ ಹಲವಾರು ಕನ್ನಡ ಶಾಲೆಗಳನ್ನು ರಾಜ್ಯದಲ್ಲಿ ಮುಚ್ಚಲಾಗಿದೆ. ಸರ್ಕಾರದ ಕಠಿಣ ನಿಯಮಗಳಿಂದಾಗಿ ಕನ್ನಡ ಶಾಲೆಗಳು ಸೊರಗುತ್ತಿವೆ. ತಾಯಿ ಭಾಷೆಯಾದ ಕನ್ನಡ ಉಳಿಯಬೇಕಾದರೆ ಕನ್ನಡ ಶಾಲೆಗಳ ಸಮಗ್ರ ವಿಕಾಸವಾಗಬೇಕು. ಇದು ಸರ್ಕಾರದ ಮುಖ್ಯ ಧ್ಯೇಯವಾಗಬೇಕು' ಎಂದು ತಿಳಿಸಿದರು.

'ಸರ್ಕಾರದ ನಿರ್ಲಕ್ಷ್ಯದಿಂದ ಪ್ರತಿ ವರ್ಷ ಕನ್ನಡ ಶಾಲೆಗಳು ಮುಚ್ಚುತ್ತಿವೆ. ನೂರಾರು ನಿಯಮಗಳಿಂದ ಖಾಸಗಿ ಕನ್ನಡ ಶಾಲೆಗಳನ್ನು ನಡೆಸಲು ಸಾಧ್ಯವಾಗುತ್ತಿಲ್ಲ. 1995ರ ನಂತರ ಪ್ರಾರಂಭವಾದ ಖಾಸಗಿ ಶಾಲಾ-ಕಾಲೇಜುಗಳನ್ನು ಅನುದಾನಕ್ಕೊಳಪಡಿಸಬೇಕು' ಎಂದು ಒತ್ತಾಯಿಸಿದರು.

'ಕನ್ನಡ ಶಾಲೆಗಳನ್ನು ಪ್ರಾರಂಭಿಸಲು ಇರುವ ಷರತ್ತುಗಳನ್ನು ಸರಳಗೊಳಿಸಬೇಕು. ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುಮತಿ ನವೀಕರಣ ಪ್ರಕ್ರಿಯೆ ಸುಲಭಗೊಳಿಸಬೇಕು. ಬಡ ಮಕ್ಕಳಿಗೆ ದಾರಿ ದೀಪವಾದ 'ಆರ್‌ಟಿಇ' ಖಾಸಗಿ ಶಾಲೆಗಳಿಗೆ ಮರು ಜಾರಿ ಮಾಡಬೇಕು' ಎಂದು ಆಗ್ರಹಿಸಿದರು.

'ಸರ್ಕಾರ ಈ ಬಗ್ಗೆ ಕ್ರಮ ಕೈಗೊಂಡು ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಘೋಷಿಸಬೇಕು. ಇಲ್ಲದೇ ಹೋದರೆ ನವೆಂಬರ್ ಅಂತ್ಯದಲ್ಲಿ ಮಾಡು ಇಲ್ಲವೇ ಮಡಿ ಹೋರಾಟ ಕೈಗೊಳ್ಳಲಾಗುವುದು' ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಉಪಾಧ್ಯಕ್ಷರಾದ ಎಂ.ಮೌಲಾಲಿ, ಡಿ.ಬಿ.ನದಾಫ್, ಕಾರ್ಯದರ್ಶಿ ಕೆ.ಗುರುನಾಥ ರೆಡ್ಡಿ, ರಾಜ್ಯ ಸಂಚಾಲಕ ಜೆ.ಸಿ. ಶಿವಪ್ಪ ಮಂಡ್ಯ, ಮಹಾಲಿಂಗನಗೌಡ ಉಪಸ್ಥಿತರಿದ್ದರು.

ವಿಜಯೇಂದ್ರ ಬದಲಿಸದಿದ್ದರೆ ಹೊಸ ಪಕ್ಷ: ಯತ್ನಾಳ



ಬೆಂಗಳೂರು: ಬಿಜೆಪಿಯಲ್ಲಿ ಮತ್ತೆ ಬಿ.ವೈ.ವಿಜಯೇಂದ್ರ ಅವರನ್ನು ಅಧ್ಯಕ್ಷರನ್ನಾಗಿ ಮುಂದುವರಿಸಿದರೆ ತಾವು ಹೊಸ ಪಕ್ಷ ಕಟ್ಟುವುದಾಗಿ ಬಿಜೆಪಿಯಿಂದ ಉಚ್ಚಾಟನೆಗೊಂಡಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ.

ಮಾಜಿ ಸಚಿವ ಕುಮಾರ್ ಬಂಗಾರಪ್ಪ ಅವರ ಮನೆಗೆ ಶುಕ್ರವಾರ ಬಂದಿದ್ದ ಯತ್ನಾಳ ಅವರು ಸುದ್ದಿಗಾರರ ಜತೆ ಮಾತನಾಡಿದರು. ಯತ್ನಾಳ ಅವರು ಬಿಜೆಪಿಯಿಂದ ಉಚ್ಚಾಟನೆಗೊಂಡ ಬಳಿಕ ನಡೆಸಿದ ಭಿನ್ನರ ಬಣದ ಮೊದಲ ಸಭೆ ಇದಾಗಿದೆ.

'ಯಾವುದೇ ಕಾರಣಕ್ಕೂ ವಿಜಯೇಂದ್ರ ಅವರನ್ನು ಅಧ್ಯಕ್ಷರನ್ನಾಗಿ ಮುಂದುವರಿಸಬಾರದು' ಎಂದು ಒತ್ತಾಯಿಸಿದರು. ಶಾಸಕ ರಮೇಶ ಜಾರಕಿಹೊಳಿ ಅವರೂ ಇದ್ದರು.

'ರೈತರ ಜತೆ ಮಾತುಕತೆ'

ಬಿಬಿಸಿ ಯೋಜನೆಗೆ ಭೂಮಿ ನೀಡುವ ರೈತರಿಗೆ ಐದು ಪರಿಹಾರ ಆಯ್ಕೆಗಳನ್ನು ನೀಡಲಾಗಿದೆ. ರಾಜ್ಯದ ಯಾವುದೇ ಯೋಜನೆಯಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ಹಿಂದೆಂದೂ ನೀಡದಂತಹ ವಿಸ್ತೃತ ಆಯ್ಕೆಗಳಾಗಿವೆ.

ನವೆಂಬರ್‌ನಲ್ಲಿ ರೈತರಿಗೆ ಈ ಆಯ್ಕೆಗಳ ಬಗ್ಗೆ ವಿವರವಾಗಿ ತಿಳಿಸಲಾಗುವುದು. ಎಲ್‌ಎಕ್ಯೂ ಮತ್ತು ಆರ್‌ಆರ್ 2013ರ ಕಾಯ್ದೆ ಪ್ರಕಾರ ನಗದು ಪರಿಹಾರ ಪಾವತಿಸಲಾಗುವುದು. ನಗರದ ಪ್ರದೇಶದಲ್ಲಿ ಪ್ರಸ್ತುತ ಮಾರ್ಗಸೂಚಿ ದರದ ಎರಡು ಪಟ್ಟು ಮತ್ತು ಗ್ರಾಮೀಣ ಪ್ರದೇಶದಲ್ಲಿ ಮೂರು ಪಟ್ಟು ನೀಡಲಾಗುವುದು. 2013ರ ಕಾಯ್ದೆಯಡಿ ಪರಿಹಾರ ನೀಡುವ ಬೇಡಿಕೆ ನ್ಯಾಯಯುತವಾಗಿದ್ದು, ಭೂಮಾಲೀಕರು ಮತ್ತು ಕೆಲವು ರೈತ ಸಂಘಟನೆಗಳೊಂದಿಗೆ ಮಾತುಕತೆ ಮುಂದುವರಿಸಲಾಗುವುದು ಎಂದು ಬಿಬಿಸಿ ವಿಶೇಷ ಉದ್ದೇಶದ ಘಟಕ (ಎಸ್‌ಪಿವಿ) ಅಧ್ಯಕ್ಷ ಎಲ್.ಕೆ.ಅತೀಕ್ ಹೇಳಿದ್ದಾರೆ.

ನಗರದಲ್ಲಿ ಇಂದು

ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮಗಳು

ಕನ್ನಡ ಯುವಜನ ಸಂಘ: ಧ್ವಜಾರೋಹಣ: ರಾಜೇಂದ್ರ ಪ್ರಸಾದ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಸ್ಥಳ: ಕನ್ನಡ ಯುವಜನ ಸಂಘ, ಎಚ್. ಸಿದ್ದಯ್ಯ ರಸ್ತೆ, ಹೊಂಬೇಗೌಡನಗರ, ಬೆಳಿಗ್ಗೆ 7.30

ಧ್ವಜಾರೋಹಣ: ವೇಮಗಲ್ ನಾರಾಯಣಸ್ವಾಮಿ, ಅತಿಥಿಗಳು: ವಿಜೆಕೆ ಭಕವತ್ಸಲಂ, ಕೆ.ಸಿ. ಜಗನ್ನಾಥ ರೆಡ್ಡಿ, ಎಚ್.ಎ. ಪುಲಿಕೇಶಿ, ಬಿ. ಗೋವಿಂದರಾಜು, ಆಯೋಜನೆ: ಹೆಣ್ಣೂರು ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಚಿಕ್ಕಣ್ಣ ಬಡಾವಣೆ, ಹೆಣ್ಣೂರು, ಬೆಳಿಗ್ಗೆ 8.15

ಧ್ವಜಾರೋಹಣ: ಅತಿಥಿಗಳು: ಡಿ.ನಂ. ವೆಂಕಟರಮಣಯ್ಯ, ಬಿ.ಎಸ್. ಗುರುಪ್ರಸಾದ್, ಸು. ಜಗದೀಶ್, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 8.30

ರಾಜ್ಯೋತ್ಸವ ಸಮಾರಂಭ: ಅತಿಥಿ: ಶ್ವೇತಾ ಎ., ಅಧ್ಯಕ್ಷತೆ: ಆರ್. ಉಪೇಂದ್ರ ಶೆಟ್ಟಿ, ಆಯೋಜನೆ ಹಾಗೂ ಸ್ಥಳ:ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಶನ್, ಬೆಳಿಗ್ಗೆ 8.30

ಧ್ವಜಾರೋಹಣ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ: ಅಧ್ಯಕ್ಷತೆ: ಎಚ್.ಎಸ್. ಶ್ರೀನಾಥ್, ಅತಿಥಿ: ಎಸ್. ರಾಮಲಿಂಗೇಶ್ವರ, ಉಪಸ್ಥಿತಿ: ಗೀತಾ ಶ್ರೀನಾಥ್, ವಿನೀತ್ ರಾಜೇಶ್, ಆಯೋಜನೆ ಹಾಗೂ ಸ್ಥಳ: ರಾಜರಾಜೇಶ್ವರಿ ಆಂಗ್ಲ ಶಾಲೆ, ಯಶವಂತಪುರ, ಬೆಳಿಗ್ಗೆ 8.30

ಧ್ವಜಾರೋಹಣ ಹಾಗೂ ರಾಜ್ಯೋತ್ಸವ ಸಂದೇಶ: ಸಿದ್ದರಾಮಯ್ಯ, ಉಪಸ್ಥಿತಿ: ಬಸವರಾಜ ಎಸ್. ಹೊರಟ್ಟಿ, ಡಿ.ಕೆ. ಶಿವಕುಮಾರ್, ಯು.ಟಿ. ಖಾದರ್, ಅಧ್ಯಕ್ಷತೆ: ಎಸ್. ಮಧು ಬಂಗಾರಪ್ಪ, ಆಯೋಜನೆ: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಸ್ಥಳ: ಕಂಠೀರವ ಹೊರಾಂಗಣ ಕ್ರೀಡಾಂಗಣ, ಬೆಳಿಗ್ಗೆ 9

ಎಸ್‌ಕೆಎಫ್ ಕ್ರೀಡಾ ಮತ್ತು ಸಾಂಸ್ಕೃತಿಕ ಸಮಿತಿ: ಕಾರ್ಯಕ್ರಮ ಉದ್ಘಾಟನೆ: ಜಿ.ಬಿ. ಹರೀಶ್, ಅಧ್ಯಕ್ಷತೆ: ಕೆ. ವೆಂಕಟೇಶ್, ಅತಿಥಿಗಳು: ಎಂ. ಸತ್ಯಾನಂದ, ಪುಟ್ಟಣ್ಣ ಮುಳ್ಯ, ಎಸ್.ಎಂ. ವೇಣುಗೋಪಾಲ್, ಸ್ಥಳ: ಚೌಡಯ್ಯ ಮೆಮೋರಿಯಲ್ ಹಾಲ್, ವೈಯಾಲಿಕಾವಲ್, ಬೆಳಿಗ್ಗೆ 9

ರಾಜ್ಯೋತ್ಸವ ಸಮಾರಂಭ: ಅತಿಥಿ: ನಟರಾಜ್ ತಲಘಟ್ಟಪುರ, ಆಯೋಜನೆ ಹಾಗೂ ಸ್ಥಳ: ಹೋಲಿ ಸ್ಪಿರಿಟ್ ಶಾಲೆ ಮತ್ತು ಪಿಯು ಕಾಲೇಜು, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 9

ರಾಜ್ಯೋತ್ಸವ ಮತ್ತು 'ಅನಿಕೇತನ' ಮಾಸ ಪತ್ರಿಕೆ ಬಿಡುಗಡೆ: ಅಧ್ಯಕ್ಷತೆ: ರಮೇಶ್.ಬಿ.,ಅತಿಥಿ: ಆರ್. ಪೂರ್ಣಿಮಾ, ಉಪಸ್ಥಿತಿ: ನವೀನ್ ಜೋಸೆಫ್ ಎ., ರಮೇಶ್ ಬಿ. ಕುಡೇನಟ್ಟಿ, ಎಂ.ವಿ. ವಿಜಯಲಕ್ಷ್ಮಿ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ರಾಜಾಜಿ ಹಾಲ್, ಸೆಂಟ್ರಲ್ ಕಾಲೇಜಿನ ಆವರಣ, ಡಾ.ಬಿ.ಆರ್.ಅಂಬೇಡ್ಕರ್ ವೀದಿ, ಬೆಳಿಗ್ಗೆ 9

ಧ್ವಜಾರೋಹಣ: ವೈ.ಎ. ನಾರಾಯಣಸ್ವಾಮಿ, ಆಯೋಜನೆ: ಗಂಗಾನಗರ ಗೆಳೆಯರ ಬಳಗ, ಸ್ಥಳ: ಬಿನ್ನಿಮಿಲ್ ರಸ್ತೆ, 30ಸಿ. ಬಸ್ ನಿಲ್ದಾಣ, ಬೆಳಿಗ್ಗೆ 10


ಪುಸ್ತಕ ಜಾತ್ರೆ: ರಿಯಾಯಿತಿ ಮೇಳದ ಉದ್ಘಾಟನೆ: ಸುಧಾಮೂರ್ತಿ, ದೀಪಾರಾಧನೆ: ಅಂಕಿತಾ ಅಮರ್, ಅತಿಥಿ: ಅನಿರುದ್ಧ ಜತಕರ, ಕನ್ನಡ ಪುಸ್ತಕ ವಿತರಣೆ: ಜಾಣಗೆರೆ ವೆಂಕಟರಾಮಯ್ಯ, ಹಾಡು-ಹರಟೆ: ಎಂ.ಎಸ್. ನರಸಿಂಹಮೂರ್ತಿ, ಎಚ್. ಡುಂಡಿರಾಜ್, ವೈ.ವಿ. ಗುಂಡುರಾವ್, ಆಯೋಜನೆ ಹಾಗೂ ಸ್ಥಳ: ಸಪ್ನ ಬುಕ್ ಹೌಸ್, 3ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಳಿಗ್ಗೆ 10


ಸುಧಾಮೂರ್ತಿ

ಮಾಲಾರ್ಪಣೆ ಹಾಗೂ ಪ್ರಶಸ್ತಿ ಪ್ರದಾನ: ಬೆಳಿಗ್ಗೆ 10ಕ್ಕೆ ಧ್ವಜಾರೋಹಣ: ಎಂ.ವೆಂಕಟಸ್ವಾಮಿ, ಕುರಬೂರು ಶಾಂತಕುಮಾರ್, ಉಪಸ್ಥಿತಿ: ಗುರುದೇವ್ ನಾರಾಯಣ್ ಕುಮಾರ್, ಮಧ್ಯಾಹ್ನ 3ಕ್ಕೆ ಕೆಂಪೇಗೌಡ ಪ್ರತಿಮೆಗೆ ಮಾಲಾರ್ಪಣೆ: ಡಿ.ಕೆ. ಶಿವಕುಮಾರ್, ಅತಿಥಿಗಳು: ಆರ್. ಸಂಪತ್ ರಾಜ್, ಎಂ. ಮಹೇಶ್ವರ ರಾವ್, ರಾಜೇಂದ್ರ ಚೋಳನ್, ಸಂಜೆ 7ಕ್ಕೆ 'ಪರಮೇಶ್ವರ ಪುಲಕೇಶಿ ಪ್ರಶಸ್ತಿ' ಪ್ರದಾನ ಸಮಾರಂಭ: ವಿ. ಸೋಮಣ್ಣ, ಉದ್ಘಾಟನೆ: ಡಿ.ವಿ. ಸದಾನಂದಗೌಡ, ಅತಿಥಿಗಳು: ಎಂ.ಎ. ಸಲೀಂ, ರಮೇಶ್ ಬಾಬು, ಅಧ್ಯಕ್ಷತೆ: ಗುರುದೇವ್ ನಾರಾಯಣ ಕುಮಾರ್, ಆಯೋಜನೆ: ಕನ್ನಡ ಚಳವಳಿ ಕೇಂದ್ರ ಸಮಿತಿ, ಸ್ಥಳ: ಪರಮೇಶ್ವರ ಪುಲಕೇಶಿ ಮಹಾಮಂಟಪ, ಬನ್ನಪ್ಪ ಪಾರ್ಕ್ ಆಟದ ಮೈದಾನ, ಕೆಂಪೇಗೌಡ ರಸ್ತೆ

ಕವಿ ಪ್ರತಿಮೆಗೆ ಮಾಲಾರ್ಪಣೆ-ಕನ್ನಡ ಚಿಂತನೆ: ಬೆಳಿಗ್ಗೆ 7.30ಕ್ಕೆ ತೀ.ನಂ.ಶ್ರೀ. (ಸೌತ್‌ಎಂಡ್) ವೃತ್ತದಲ್ಲಿರುವ ತೀ.ನಂ.ಶ್ರೀ. ಪ್ರತಿಮೆಗೆ ಮಾಲಾರ್ಪಣೆ: ವಿಶ್ವನಾಥ್ ಸಪಲ್ಯ, ಬೆಳಿಗ್ಗೆ 7.40ಕ್ಕೆ ಲಾಲ್‌ಬಾಗ್ ಪಶ್ಚಿಮ ದ್ವಾರದಲ್ಲಿರುವ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ: ಯೋಗಶ್ರೀ ಎಚ್.ಜೆ., ಬೆಳಿಗ್ಗೆ 7.50ಕ್ಕೆ ಬಸವನಗುಡಿಯ ನ್ಯಾಷನಲ್ ಕಾಲೇಜು ವೃತ್ತದಲ್ಲಿರುವ ಎಚ್.ಎನ್. ಪ್ರತಿಮೆಗೆ ಮಾಲಾರ್ಪಣೆ: ಕೆಂಪಯ್ಯ, ಬೆಳಿಗ್ಗೆ 8ಕ್ಕೆ ಬಸವನಗುಡಿಯ ನ್ಯಾಷನಲ್ ಕಾಲೇಜು ವೃತ್ತದಲ್ಲಿರುವ ಬಿ.ಎಂ.ಶ್ರೀ. ಪ್ರತಿಮೆಗೆ ಮಾಲಾರ್ಪಣೆ: ಭಾಗ್ಯಲಕ್ಷ್ಮಿ ಪದಕಿ, ಗೌರವಾರ್ಪಣೆ: ಕೆ.ಎಸ್.ಎಂ. ಹುಸೇನ್, ಕನ್ನಡ ಚಿಂತನೆ: ಜಿ.ಎನ್. ನರಸಿಂಹಮೂರ್ತಿ, ಆಯೋಜನೆ: ಕನ್ನಡ ಗೆಳೆಯರ ಬಳಗ

'ಕೃಷ್ಣೆಯಿಂದ ಕಾವೇರಿವರೆಗೆ' ಉತ್ಸವ: ಉದ್ಘಾಟನೆ: ನಾಗತಿಹಳ್ಳಿ ಚಂದ್ರಶೇಖರ್, ಮುಂಜಾನೆ ರಾಗ: ವಿನಾಯಕ್ ತೊರವಿ, ವ್ಯಾಸಮೂರ್ತಿ ಕಟ್ಟಿ, ಗುರುಮೂರ್ತಿ ವೈದ್ಯ, 'ಶ್ರೇಷ್ಠ ಕಥೆಯ ಹುಡುಕಾಟ': ಸೀಮಾ ಕಾರಂತ್, 'ಕನ್ನಡ ಗೊತ್ತಿಲ್ಲ' ಸಂವಹನ: ಅರ್ಪಿತ್ ಕುಮಾರ್, 'ಸುತ್ತಮುತ್ತ ಗೊತ್ತಾ?' ಪ್ರಶ್ನೋತ್ತರ ಸ್ಪರ್ಧೆ: ತೇಜಸ್ವಿ ಉಡುಪ, 'ಮಧ್ಯಾಹ್ನದ ಮಾಯಾಲೋಕ' ಪ್ರದರ್ಶನ, 'ಬೀಸೊ ಹಾಡ' ಶ್ರಮಿಕರ ಗೀತೆಗಳು: ಶಿಲ್ಪಾ ಮುಡ್ಬಿ ಕೊತಕೋಟ ಮತ್ತು ತಂಡ, ಕರ್ನಾಟಕ ಕುರಿತ ಪ್ರದರ್ಶನ: ರುದ್ರಗೌಡ ಇಂಡಿ, ಜಾನಪದ ಕಲಾ ಪ್ರದರ್ಶನ, ಗಾಯನ, ಪುಸ್ತಕ ಬಿಡುಗಡೆ, ಉಪನ್ಯಾಸ, ವಿಚಾರ ಸಂಕಿರಣ, ಕಾರ್ಯಾಗಾರ, ಚರ್ಚೆ, ಸಾಂಸ್ಕೃತಿಕ ಕಾರ್ಯಕ್ರಮ, ಆಯೋಜನೆ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 10


ನಾಗತಿಹಳ್ಳಿ ಚಂದ್ರಶೇಖರ್

ರಾಜ್ಯೋತ್ಸವ ಸಮಾರಂಭ: ಅಧ್ಯಕ್ಷತೆ: ಬಿ.ಎಸ್. ರಾಗಿಣಿ ನಾರಾಯಣ್, ಮುಖ್ಯ ಅತಿಥಿಗಳು: ಎಲ್. ಹನುಮಂತಯ್ಯ, ಪಿ. ದಯಾನಂದ ಪೈ, ಅವಿರಾಮ್ ಶರ್ಮ, ತಿರುಮಲಾಚಾರಿ ರಾಮಸ್ವಾಮಿ, ಆಯೋಜನೆ ಹಾಗೂ ಸ್ಥಳ: ಬಿ.ಎಸ್. ನಾರಾಯಣ್ ಸ್ಮಾರಕ ಕಲಾಮಂದಿರ, ಬಿ.ಎಂ.ಎಸ್. ಮಹಿಳಾ ಮಹಾವಿದ್ಯಾಲಯ, ಬೆಳಿಗ್ಗೆ 10.30

ಪ್ರಶಸ್ತಿ ಪ್ರದಾನ ಸಮಾರಂಭ: 'ಕನ್ನಡ ಸಿರಿ ಪ್ರಶಸ್ತಿ' ಪುರಸ್ಕೃತರು: ಬಿ.ಆರ್. ಲಕ್ಷ್ಮಣರಾವ್, 'ಪ್ರತಿಭಾಶ್ರೀ ಪ್ರಶಸ್ತಿ' ಪುರಸ್ಕೃತರು: ಎಂ.ಎನ್. ವೆಂಕಟಸುಬ್ಬರಾವ್, ಎಚ್. ಎನ್. ಗೋಪಾಲ್, ಅಧ್ಯಕ್ಷತೆ: ಸಿ.ವಿ. ಶ್ರೀಧರ್, ಅತಿಥಿ: ಕೆ.ಸಿ. ದೊರೆಸ್ವಾಮಿ, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಇಲಾಖೆ ಪಿಂಚಣಿದಾರರ ಸಂಘ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣ, ಯಶವಂತಪುರ, ಬೆಳಿಗ್ಗೆ 10.30


ಬಿ.ಆರ್. ಲಕ್ಷ್ಮಣರಾವ್

ಧ್ವಜಾರೋಹಣ ಮತ್ತು ಮೆರವಣಿಗೆ: ಅತಿಥಿಗಳು: ಸಿದ್ದರಾಮಯ್ಯ, ಜಮೀರ್ ಅಹಮದ್ ಖಾನ್, ರಾಮಲಿಂಗಾರೆಡ್ಡಿ, ಮನ್ಸೂರ್ ಅಲಿಖಾನ್, ಆರ್.ವಿ. ದೇವರಾಜ್, ಝೈದ್‌ಖಾನ್, ಮೊಹಮ್ಮದ್ ನಲಪಾಡ್, ಆಯೋಜನೆ: ಚಾಮರಾಜಪೇಟೆ ನಾಡಹಬ್ಬದ ಕನ್ನಡ ರಾಜ್ಯೋತ್ಸವ ಸಮಿತಿ, ಸ್ಥಳ: 3ನೇ ಮುಖ್ಯ ರಸ್ತೆ, 7ನೇ ಅಡ್ಡರಸ್ತೆ, ಚಾಮರಾಜಪೇಟೆ, ಬೆಳಿಗ್ಗೆ 10.30

ಕರ್ನಾಟಕ ರಾಜ್ಯೋತ್ಸವ ಹಾಗೂ ವಾರ್ಷಿಕೋತ್ಸವ: ಸಾಂಸ್ಕೃತಿಕ ಹಬ್ಬ ಹಾಗೂ ಭುವನೇಶ್ವರಿ ಮೂರ್ತಿ ಮೆರವಣಿಗೆ, ಆಯೋಜನೆ: ಜಯ ಕರ್ನಾಟಕ ಜನಪರ ವೇದಿಕೆ, ಸ್ಥಳ: ಬಾರ್ಟನ್ ಸೆಂಟರ್ ಮುಂಭಾಗ, ಎಂ.ಜಿ. ರಸ್ತೆ, ಬೆಳಿಗ್ಗೆ 10.30

ಧ್ವಜಾರೋಹಣ: ಟಿ.ಎ. ನಾರಾಯಣಗೌಡ, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ರಕ್ಷಣಾ ವೇದಿಕೆ, ಗಾಂಧಿನಗರ, ಬೆಳಿಗ್ಗೆ 11

39ನೇ ವರ್ಷದ ಕರ್ನಾಟಕ ರಾಜ್ಯೋತ್ಸವ: ಧ್ವಜಾರೋಹಣ: ಆನಂದ ಗುರೂಜಿ, ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಅತಿಥಿಗಳು: ಕೆ.ಜೆ. ಜಾರ್ಜ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಎಚ್. ಎಂ. ರೇವಣ್ಣ, ಡಾ. ನಾಗಲಕ್ಷ್ಮೀ ಚೌಧರಿ, ಪ್ರಿಯಕೃಷ್ಣ, ಸಪ್ತಗಿರಿಗೌಡ, ಆಯೋಜನೆ: ಕನ್ನಡ ಕರ್ನಾಟಕ ರಕ್ಷಣಾ ಸಂಘ, ಸ್ಥಳ: ಡಾ.ರಾಜ್‌ಕುಮಾರ್ ವೃತ್ತ, ಗಾಂಧಿನಗರ, ಬೆಳಿಗ್ಗೆ 11

5ನೇ ಕನ್ನಡ ಪುಸ್ತಕ ಹಬ್ಬ ಉದ್ಘಾಟನೆ: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು: ಆರ್. ಬಾಲಸುಬ್ರಹ್ಮಣ್ಯಂ, ಮಲ್ಲೇಪುರಂ ಜಿ. ವೆಂಕಟೇಶ್, ಅಧ್ಯಕ್ಷತೆ: ಎಂ.ಪಿ. ಕುಮಾರ್, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ ಸಭಾಂಗಣ, ಕೆಂಪೇಗೌಡನಗರ, ಬೆಳಿಗ್ಗೆ 11

ಆರಕ್ಷಕ ಠಾಣೆಯಲ್ಲಿ ಕನ್ನಡದ ಕಲರವ: ಅಧ್ಯಕ್ಷತೆ: ವೇಮಗಲ್ ನಾರಾಯಣಸ್ವಾಮಿ, ಪುಸ್ತಕ ಸ್ವೀಕಾರ: ಶಾಮಿದ್ ಬಾಷಾ, ಪುಸ್ತಕ ಹಸ್ತಾಂತರ: ಎಂ. ಪ್ರಕಾಶಮೂರ್ತಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ವಿವಿ ಪುರಂ ಪೊಲೀಸ್ ಠಾಣೆ, ಚಾಮರಾಜಪೇಟೆ, ಮಧ್ಯಾಹ್ನ 12

ಭುವನೇಶ್ವರಿ ಪೂಜೆ-ಉತ್ಸವ, ಅಣ್ಣಮ್ಮ ದೇವತೆಯ ವೈಭವದ ಮೆರವಣಿಗೆ: ಚಾಲನೆ: ಸಿದ್ದರಾಮಯ್ಯ, ಆಯೋಜನೆ: ಕರ್ನಾಟಕ ರಾಜ್ಯೋತ್ಸವ ಸಮಿತಿ, ಸ್ಥಳ: ನೃಪತುಂಗ ಮಂಟಪ, ಮೈಸೂರು ಬ್ಯಾಂಕ್ ಹತ್ತಿರ, ಮಧ್ಯಾಹ್ನ 2

ಕನ್ನಡ ಹಬ್ಬ-ಕನ್ನಡ ಸಂಭ್ರಮ: ಭರತನಾಟ್ಯ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಅತಿಥಿ: ಎಸ್. ರಾಮಲಿಂಗೇಶ್ವರ್, ಆಯೋಜನೆ: ಎಟರ್ನಿಯಾ ಕನ್ನಡ ಬಳಗ, ಸ್ಥಳ: ಕ್ಲಬ್ ಹೌಸ್, ಎಟರ್ನಿಯಾ ಅಪಾರ್ಟ್‌ಮೆಂಟ್, ಪರಪ್ಪನ ಅಗ್ರಹಾರ, ಸಂಜೆ 5.30

ರಾಜ್ಯೋತ್ಸವ ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಶಿವರಾಜ ಎಸ್. ತಂಗಡಗಿ, ಅತಿಥಿ: ಉದಯ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

'ಸಂಪೂರ್ಣ ರಾಮಾಯಣ' ನಾಟಕ ಪ್ರದರ್ಶನ: ಅತಿಥಿಗಳು: ಎಲ್.ಎ. ರವಿ ಸುಬ್ರಹ್ಮಣ್ಯ, ತೇಜಸ್ವಿ ಸೂರ್ಯ, ಉದಯ್ ಗರುಡಾಚಾರ್, ಆಯೋಜನೆ: ಬಂಡೆ ಮಹಾಂಕಾಳಿ ದೇವಾಲಯ ವಿಶ್ವಸ್ಥ ಮಂಡಳಿ, ಸ್ಥಳ: ಬಂಡಿಮಾಹಾಂಕಾಳಮ್ಮ ದೇವಸ್ಥಾನ ಆವರಣ, ಕೆಂಪೇಗೌಡನಗರ, ಮಧ್ಯಾಹ್ನ 3


'ಅಣ್ಣನ ನೆನಪು' ನಾಟಕದ ದೃಶ್ಯ

'ಅಣ್ಣನ ನೆನಪು' ಸಾಕ್ಷ್ಯ ನಾಟಕ ಪ್ರದರ್ಶನ: ರಚನೆ: ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ನಿರ್ದೇಶನ: ಹನು ರಾಮಸಂಜೀವ್, ಆಯೋಜನೆ: ಪ್ರವರ ಥಿಯೇಟರ್, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಇತರೆ ಕಾರ್ಯಕ್ರಮ

ಅಖಿಲ ಭಾರತ ಶ್ವಾನ ಪದರ್ಶನ: ವಿವಿಧ ತಳಿಯ ಶ್ವಾನಗಳ ಪ್ರದರ್ಶನ, ಆಯೋಜನೆ: ಸಿಲಿಕಾನ್ ಸಿಟಿ ಕೆನಲ್ ಕ್ಲಬ್, ಬೆಂಗಳೂರು ಕೆನೈನ್ ಕ್ಲಬ್, ಸ್ಥಳ: ಈಶಾ ಫಾರ್ಮ್ಸ್ ಆ್ಯಂಡ್ ಲೀಷರ್, ರಯಾನ್ ಇಂಟರ್‌ನ್ಯಾಷನಲ್ ಸ್ಕೂಲ್ ಹತ್ತಿರ, ಯಲಹಂಕ, ಬೆಳಿಗ್ಗೆ 9ರಿಂದ

ಡಿ.ವಿ.ಜಿ. ಅವರಿಗೆ ನುಡಿ ನಮನ ಹಾಗೂ ಪುತ್ಥಳಿಗೆ ಮಾಲಾರ್ಪಣೆ: ಎಸ್.ಪಿನಾಕಪಾಣಿ, ಅಧ್ಯಕ್ಷತೆ: ಕೆ.ಎಸ್. ನಾಗರಾಜ್, ಆಶಯ ನುಡಿ: ಜಗದೀಶ ಮುಳಬಾಗಿಲು, ಆಯೋಜನೆ: ಡಿ.ವಿ.ಜಿ. ಕನ್ನಡ ಬಳಗ, ಸ್ಥಳ: ಕಹಳೆ ಬಂಡೆ ಉದ್ಯಾನ, ಬಸವನಗುಡಿ, ಬೆಳಿಗ್ಗೆ 9

ಗಾರ್ಮೆಂಟ್ಸ್ ಕಾರ್ಮಿಕ ಮಹೋತ್ಸವ: ಉದ್ಘಾಟನೆ: ಪಿ.ಜಿ.ಆರ್. ಸಿಂಧ್ಯ, ಅತಿಥಿಗಳು: ಉಮಾಶ್ರೀ, ತಾರಾ, ಸೌಮ್ಯಾ ರೆಡ್ಡಿ, ಬಿ. ಜಯಲಕ್ಷ್ಮಿ, ದೀಪಿಕಾ ರಾವ್, ಬಿ. ಶಿವರಾಜೇಗೌಡ, ಆಯೋಜನೆ: ಮುನ್ನಡೆ ಸೋಶಿಯಲ್ ಆರ್ಗನೈಸೇಷನ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 10.30

37 ದಿನಗಳ ಸಾಹಿತ್ಯ-ಸಂಸ್ಕೃತಿ ಉತ್ಸವ: 'ಲಯಲಾವಣ್ಯ'-ತಾಳವಾದ್ಯಗೋಷ್ಠಿ, ನಿರ್ದೇಶನ: ಆನೂರು ಅನಂತಕೃಷ್ಣ ಶರ್ಮ, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ ಸಭಾಂಗಣ, ಕೆಂಪೇಗೌಡನಗರ, ಸಂಜೆ 6


ಆನೂರು ಅನಂತಕೃಷ್ಣ ಶರ್ಮ

ಕಲಾ ವಿದ್ಯಾರ್ಥಿಗಳಿಗೆ ಪ್ರತಿಭಾನ್ವೇಷಣೆ: ಸ್ಪರ್ಧಾ ಶಿಬಿರ ಉದ್ಘಾಟನೆ: ಅವಿನಾಶ್ ಡಿ. ಕಾಟೆ, ಅತಿಥಿಗಳು: ಗುರುದಾಸ್ ಶೆಣೈ, ಸುಜಯ್ ನಾಯರ್, ಅಧ್ಯಕ್ಷತೆ: ಪ.ಸ. ಕುಮಾರ್, ಆಯೋಜನೆ: ಕರ್ನಾಟಕ ಲಲಿತಕಲಾ ಅಕಾಡೆಮಿ, ಸ್ಥಳ: ಜೈನ್ ಡೀಮ್ಡ್ ಟು ಬಿ ಯುನಿವರ್ಸಿಟಿ, ಹುಣಸಮಾರನಹಳ್ಳಿ, ಬೆಳಿಗ್ಗೆ 11

ಇತಿಹಾಸದೊಂದಿಗೆ ಮಕ್ಕಳ ವ್ಯಕ್ತಿತ್ವ ರೂಪಿಸುವ 'ಹಿಸ್ಟರಿ ಮೇಕರ್ಸ್' ವಾರಾಂತ್ಯ ಶಿಬಿರ: ಆಯೋಜನೆ: ಪರಮ್ ಹಿಸ್ಟರಿ ಸೆಂಟರ್, ಸ್ಥಳ: ಮೇಕರ್ಸ್ ಅಡ್ಡ, 7ನೇ ಬ್ಲಾಕ್ ಜಯನಗರ, ಸಂಜೆ 5.30

32ನೇ ವಾರ್ಷಿಕ ಸಂಗೀತೋತ್ಸವ: ಕೊಳಲು: ಜೆ.ಎ. ಜಯಂತ್, ವಯೋಲಿನ್: ಎಲ್. ರಾಮಕೃಷ್ಣನ್, ಮೃದಂಗ: ಅರ್ಜುನ್ ಗಣೇಶ್, ಘಟ: ಶಶಾಂಕ್ ಕೌಶಿಕ್, ಆಯೋಜನೆ: ನಾದಸುರಭಿ, ಸ್ಥಳ: ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜಿನ ಆವರಣ, ಕೋರಮಂಗಲ, ಸಂಜೆ 6

'ಹರಿವಾಯು ಸ್ತುತಿ' ಧಾರ್ಮಿಕ ಪ್ರವಚನ: ಚಂದ್ರಶೇಖರ ಆಚಾರ್ಯ, ಆಯೋಜನೆ: ಪ್ರವಚನ ಬಳಗ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ದೊಡ್ಡಬೊಮ್ಮಸಂದ್ರ, ವಿದ್ಯಾರಣ್ಯಪುರ, ಸಂಜೆ 6.15

'ಮಹಾಭಾರತ ತಾತ್ಪರ್ಯ ನಿರ್ಣಯ' ಧಾರ್ಮಿಕ ಪ್ರವಚನ: ಸಿಂಧನೂರು ಕೃಷ್ಣಾಚಾರ್ಯ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in



ಚೇಂಜಬಲ್ ಸರ, ಪೆಂಡೆಂಟ್

ಯಾವುದೇ ಸರ ಅಥವಾ ಪೆಂಡೆಂಟ್ ನಮಗೆ ಬೇಕಾದಂತೆ ಬದಲಿಸಲು ಅನುವಾಗುವಂತಹ ಹುಕ್ಕನ್ನು ಹೊಂದಿರಬೇಕು. ಆಗ ಕಡಿಮೆ ಚಿನ್ನದಲ್ಲಿ ಕಲರ್ ಮ್ಯಾಚ್ ಮಾಡಿಕೊಂಡು ಸೀರೆ, ಲೆಹೆಂಗಾ, ಚೂಡಿದಾರ್‌ಗೆ ಹೊಂದಿಸಿಕೊಳ್ಳಬಹುದು. ಕಡಿಮೆ ಚಿನ್ನದಲ್ಲಿ ತಯಾರಿಸಿದ ವಿವಿಧ ನೆಕ್ಲೆಸ್, ಸರಗಳನ್ನು ನಾವೇ ಮನೆಯಲ್ಲಿ ಪುನರ್ ಜೋಡಿಸಿಕೊಂಡು ಧರಿಸಬಹುದು.

ದುಬಾರಿ ದುನಿಯಾಗೆ ಲೈಟ್‌ವೇಟ್ ಆಭರಣ



ಬಂಗಾರದ ಒಡವೆ ತೊಡಬೇಕೆಂಬ ಹಂಬಲ ಯಾವ ಹೆಣ್ಣಿಗೆ ತಾನೇ ಇರದು? ಚಿನ್ನದ ಬೆಲೆ ಗಗನಮುಖಿಯಾಗಿರುವ ಈ ತುಟ್ಟಿ ಕಾಲದಲ್ಲಿ, ಜೇಬು ಗಟ್ಟಿ ಇಲ್ಲದವರು ಅದನ್ನು ಕೊಳ್ಳುವುದಾದರೂ ಹೇಗೆ? ಕನಕಾಂಗಿಯರ ಈ ಕನಲಿಕೆಗೆ, ಹೆಚ್ಚು ಚಿನ್ನ ಬೇಡದ, ಆದರೆ ಅತ್ಯಾಕರ್ಷಕವಾಗಿ ಕಾಣುವ ಲೈಟ್‌ವೇಟ್ ಆಭರಣಗಳು 'ಚಿನ್ನದಂತಹ' ಉತ್ತರ ಕೊಡುತ್ತವೆ.

• ಕೃಷ್ಣವೇಣಿ ಪ್ರಸಾದ್ ಮುಳಿಯ

ಆನಂದ ತರುವ ಮನಮೋಹಕ ಚಿನ್ನವು ಮನೆಗೆ ಶ್ರೀರಕ್ಷೆ. ಈ ಬಂಗಾರಕ್ಕೆ ಹಲವಾರು ಬಂಧಗಳಿವೆ. ಅಷ್ಟೇ ಅಲ್ಲ ಅದರೊಂದಿಗೆ ಹಲವಾರು ಭಾವನೆಗಳು ಬೆಸೆದುಕೊಂಡಿರುತ್ತವೆ. ಸ್ವರ್ಣವನ್ನು ಖರೀದಿಸುವಾಗ ಸಿಗುವ ಖುಷಿ, ಸಂತೋಷ, ತೃಪ್ತಿ ವರ್ಣಿಸಲಸದಳ.

ಹೊನ್ನು ಇದ್ದರೆ ಅದೊಂದು ಭದ್ರತೆ, ಬಂಗಾರದೊಡವೆ ಧರಿಸಿದರೆ ಶ್ರೀರಕ್ಷೆ ಎನ್ನುವ ಭಾವನೆ ಇದೆ. ಇದೆಲ್ಲಾ ಸರಿ, ಆದರೆ ಈಗಿನ ತುಟ್ಟಿ ಕಾಲದಲ್ಲಿ ಬಂಗಾರದ ಆಭರಣಗಳನ್ನು ಖರೀದಿಸಲು ಎಷ್ಟು ಜನರಿಗೆ ಸಾಧ್ಯವಾಗುತ್ತದೆ? ಆದರೆ ಹೆಚ್ಚು ಹಣ ತೆತ್ತು ಖರೀದಿಸಲು ಸಾಧ್ಯವಾಗದವರು, ದಪ್ಪ ದಪ್ಪವಾಗಿ, ಭಾರವಾಗಿ ಇರುವ ಆಭರಣಗಳನ್ನೇ ಕೊಂಡು ಧರಿಸಬೇಕೆಂದಿಲ್ಲ. ಸರಳವಾಗಿ, ಹಗುರವಾಗಿ, ಕಡಿಮೆ ಚಿನ್ನ ಬಳಸಿದ್ದರೂ ದೊಡ್ಡದಾಗಿ ಕಾಣುವಂತಹ, ಫ್ಯಾಷನಬಲ್ ಎನಿಸುವ ಹಲವಾರು ಮಾದರಿಯ ಒಡವೆಗಳು ಚಿನ್ನಾಭರಣ ಮಳಿಗೆಗಳಲ್ಲಿ ಲಭ್ಯವಿವೆ.

ವ್ಯಾಕ್ಸ್‌ಬಾಲ್ ನೆಕ್ಲೆಸ್

ಚಿನ್ನದ ಹೊಳಪು ಇರಬೇಕು, ದೊಡ್ಡದಾಗಿ ಕಾಣಬೇಕು, ಕುತ್ತಿಗೆಗೆ ಒಪ್ಪುವಂತೆ ಇರಬೇಕು. ಎರಡು ಎಳೆ, ಮೂರು ಎಳೆ ಡ್ರಾಪ್‌ಶೇಪ್, ದೊಡ್ಡ ಗುಂಡು, ಸಣ್ಣ ಗುಂಡು, ವಿನ್ಯಾಸ ಹೊಂದಿರುವ ಗುಂಡು, ರೂಬಿ, ಮುತ್ತು, ಎಮರಾಲ್ಡ್, ಹುದುಗಿರುವ ಗುಂಡು... ಹೀಗೆ ಹಲವು ರೀತಿಯಲ್ಲಿ ಈ ವ್ಯಾಕ್ಸ್ ಗುಂಡುಗಳನ್ನು ತಯಾರಿಸಲಾಗುತ್ತದೆ. ಅವರವರ ಭಾವಕ್ಕೆ ತಕ್ಕಂತೆ ಧರಿಸಬಹುದು. ಭಾರವೂ ಇರುವುದಿಲ್ಲ, ಬೆಲೆಯೂ ಕಡಿಮೆ. ಚಿನ್ನದ ಬಳಕೆ ಕಡಿಮೆ ಇದ್ದರೂ ನೋಡಲು ದೊಡ್ಡದಾಗಿ ಕಾಣುತ್ತದೆ. ಹಗುರವಾಗಿದ್ದು ವ್ಯಾಕ್ಸ್ ತುಂಬಿರುವುದರಿಂದ ಕುತ್ತಿಗೆಯಲ್ಲಿ ಸರಿಯಾಗಿ ಕುಳಿತುಕೊಳ್ಳುತ್ತದೆ.

ಕಲರ್ ಬೀಡ್ಸ್ ನೆಕ್ಲೆಸ್

ಇದು ಈಗಿನ ಟ್ರೆಂಡಿ ಆಭರಣ. ನಮ್ಮ ದಿರಿಸಿನ ಬಣ್ಣಕ್ಕೆ ಹೊಂದಿಕೊಳ್ಳುವಂತೆ ಅದೇ ಬಣ್ಣದ ಬೀಡ್ಸ್ ಇರುವ ನೆಕ್ಲೆಸ್ ಚೆನ್ನಾಗಿ ಕಾಣುತ್ತದೆ. ಬೀಡ್ಸನ್ನು ನೂಲಲ್ಲಿ ಪೋಣಿಸಿ, ಚಿನ್ನದ ಬೀಡಿಂಗ್‌ಗೆ ಮೂರು ತೂತು ಮಾಡಿ ಮೂರು ಎಳೆ ಧರಿಸಬಹುದು. ಎದುರಿಗೆ ಚಿನ್ನದ 3 ಗುಂಡು ಸೇರಿದರೆ ಅದರ ಲುಕ್ಕೇ ಬೇರೆ. ಜೊತೆಗೆ, ನಿಮ್ಮಲ್ಲಿರುವ ಚಿನ್ನದ ಬೆಂಡೋಲೆ, ಜುಮುಕಿ ಧರಿಸಿದರೆ ಇನ್ನಷ್ಟು ಸ್ಮಾರ್ಟ್ ಆಗಿ ಕಾಣಬಹುದು.



ಟರ್ಕಿ ಆಭರಣ

ಕಡಿಮೆ ಚಿನ್ನದಲ್ಲಿ ತಯಾರು ಮಾಡುವ ಈ ಆಭರಣದಲ್ಲಿ ಬಣ್ಣದ ಹರಳನ್ನು ಪೋಣಿಸಬಹುದು. ಬರೀ ಬಂಗಾರದಲ್ಲೇ ಬೇಕು ಅನ್ನುವವರು ಬಂಗಾರದ್ದೇ ಧರಿಸಬಹುದು. ಹೊಳಪು ಮಾತ್ರ ಸದಾ ಇರುತ್ತದೆ.

'ನಕಾಶೆ' ಆ್ಯಂಟಿಕ್ ಆಭರಣ

ನಕಾಶೆ ಎಂದರೆ ಅಚ್ಚು ಮಾಡಿ ಎರಕ ಹೊಯ್ದು ಮಾಡಿದ ತೆಳ್ಳಗಿನ ವಿನ್ಯಾಸ. ಉಬ್ಬು ಉಬ್ಬಾಗಿ ಇರುತ್ತದೆ. ಆದರೆ ಅದರ ಚಂದಕ್ಕೇನೂ ಕೊರತೆ ಇಲ್ಲ. ಜಾಗರೂಕವಾಗಿ ಹ್ಯಾಂಡಲ್ ಮಾಡಬೇಕು. ಜನರಲ್ಲಿ ಆ್ಯಂಟಿಕ್ ಅಂದಾಕ್ಷಣ ಹೆಚ್ಚು ಚಿನ್ನ ಬಳಸಲಾಗುತ್ತದೆ ಎಂಬ ಭಾವನೆ ಇದೆ. ಆದರೆ ನಕಾಶೆ ಮಾದರಿಯ ಆಭರಣಗಳು ಇದಕ್ಕೆ ಹೊರತಾಗಿರುತ್ತವೆ.

ಮುತ್ತಿನ ಆಭರಣ/ಗೊಂಚಲು ಪೆಂಡೆಂಟ್

ಮುತ್ತನ್ನು ನೂಲಿನಲ್ಲಿ ಪೋಣಿಸಿ ಎಳೆಯನ್ನು ಹೆಣೆದು, ಚಿನ್ನದ ಕಡ್ಡಿ ವಿನ್ಯಾಸದ ಪೆಂಡೆಂಟ್ ತಯಾರಿಸಿ ಮುತ್ತಿನ ಗೊಂಚಲನ್ನು ವಿನ್ಯಾಸಗೊಳಿಸಿದಾಗ ಹಾರ ತಯಾರಾಗುತ್ತದೆ. ನೋಡಲು ಸುಂದರವಾಗಿರುತ್ತದೆ, ಚಿನ್ನದ ಬಳಕೆಯೂ ಕಡಿಮೆ. ಮುತ್ತಿನ ಆಭರಣ ಇಷ್ಟಪಡುವವರಿಗೆ ಉದ್ದನೆಯ ಮೂರು ಎಳೆಯ ಮುತ್ತಿನ ಹಾರಕ್ಕೆ ಒಂದು ಪೆಂಡೆಂಟ್ ಸಾಕು, ತೊಟ್ಟವಳ ಸೌಂದರ್ಯ ಇಮ್ಮಡಿಸುವಂತೆ ಮಾಡಲು.

ಚಾಂದ್‌ಬಾಲಿ ಕಿವಿಯೋಲೆ/ಪೆಂಡೆಂಟ್



ನೋಡಲು ಚಂದ್ರನಂತೆ ವೃತ್ತಾಕಾರವಾಗಿ ಇದ್ದರೂ ಈ ವಿನ್ಯಾಸಕ್ಕೆ ಕಡಿಮೆ ಚಿನ್ನ ಸಾಕು. ಯಾಕೆಂದರೆ ಮಧ್ಯದಲ್ಲಿ ಚಿನ್ನ ಬಳಸುವ ಅಗತ್ಯವಿಲ್ಲ. ಸುತ್ತಲೂ ಚಿನ್ನದ ಸರಿಗೆಯನ್ನು ಬಳಸಿ ಮುತ್ತಿನ, ಸಣ್ಣ ಹರಳುಗಳ ಗೊಂಚಲು ಬರುವಂತೆ ವಿನ್ಯಾಸಗೊಳಿಸಿದರೆ ಬಹು ಸೊಗಸು. ಕಡಿಮೆ ಚಿನ್ನದಲ್ಲಿ ದೊಡ್ಡ ಓಲೆ ನಿಮ್ಮದಾಗುತ್ತದೆ. ಪೆಂಡೆಂಟ್ ಕೂಡ ಇದೇ ರೀತಿ ಮಾಡಬಹುದು. ಬೀಡ್ಸ್ ಅನ್ನು ನೂಲಿನಲ್ಲಿ ಪೋಣಿಸಿ, ಪೆಂಡೆಂಟ್ ಧರಿಸಿ.



18 ಕ್ಯಾರೆಟ್ ಚಿನ್ನ + ಡೈಮಂಡ್

ಎಲ್ಲರಿಗೂ ತಿಳಿದಿರುವಂತೆ, 22 ಕ್ಯಾರೆಟ್ ಆಭರಣಗಳು ಪ್ರಸಿದ್ಧಿ ಹೊಂದಿವೆ. 18 ಕ್ಯಾರೆಟ್‌ನಲ್ಲಿ ಚಿನ್ನದ ಪ್ರಮಾಣ ಕಡಿಮೆ ಇದ್ದು, ಕೈಗೆಟುಕುವ ಬೆಲೆಯಲ್ಲಿ ದೊರೆಯುತ್ತದೆ. ಆದರೆ ಆಕರ್ಷಕ ನೋಟಕ್ಕೆ, ಹೊಳಪಿಗೇನೂ ಕೊರತೆಯಿಲ್ಲ. ಖರೀದಿಸುವಾಗಲೂ ಬೆಲೆ ಕಡಿಮೆ, ಮಾರಿದರೂ ಅದೇ ಬೆಲೆ ಸಿಗುತ್ತದೆ. ವಜ್ರದ ಆಭರಣದಲ್ಲೂ ಈ ಚಿನ್ನ ಬಳಸಿ, ಕೊಳ್ಳುವ ಆಭರಣದ ಬೆಲೆಯನ್ನು ಅಷ್ಟರ ಮಟ್ಟಿಗೆ ಕಡಿಮೆ ಮಾಡಿಕೊಳ್ಳಬಹುದು.

ಹರಳು ಬದಲಿಸುವ ಆಭರಣ

ಈಗಿನ ದಿನಗಳಲ್ಲಿ ಇದೊಂದು ಬಹಳ ಪ್ರಸಿದ್ಧಿ ಪಡೆದಿರುವ ಆಭರಣ. ನೆಕ್ಲೆಸ್ ಆಗಲಿ, ಕಿವಿಯೋಲೆ ಆಗಲಿ, ಪೆಂಡೆಂಟ್ ಆಗಲಿ, ಮಧ್ಯದಲ್ಲಿ ಒಂದು ರಂಧ್ರ ಇರುತ್ತದೆ. ಅಲ್ಲಿಗೆ ಬಣ್ಣಬಣ್ಣದ ಹರಳುಗಳನ್ನು ಪೋಣಿಸಲು ವ್ಯವಸ್ಥೆ ಇರುತ್ತದೆ. ಆಗ ಒಂದೇ ಆಭರಣವನ್ನು ನಮಗೆ ಬೇಕಾದ ಬಣ್ಣದ ಆಭರಣವನ್ನಾಗಿ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ.



ಚಿತ್ರಗಳು: ಮುಳಿಯ ಜುವೆಲರಿ

ಮಲ್ಟಿಪಲ್ ಬಳಕೆಯ ಒಡವೆ

ಇದೊಂದು ವಿಶೇಷ ಆಭರಣ. ದೊಡ್ಡ ಹಾರಗಳನ್ನು ಸಣ್ಣ ಲಾಕ್ ಸಿಸ್ಟಮ್ ಬಳಸಿ ನೆಕ್ಲೆಸ್ ಮಾಡಬಹುದು, ಕೈಗೆ ವಂಕಿಯಾಗಿ ಧರಿಸಬಹುದು, ಮುಂದಲೆ ಬೊಟ್ಟಾಗಿ ಬಳಸಬಹುದು. ಅಂದರೆ, ಆಯಾ ಸಮಾರಂಭಕ್ಕೆ ತಕ್ಕಂತೆ ಹೊಂದಿಸಿಕೊಂಡು ಆಭರಣದ ಸ್ಟೈಲ್ ಬದಲಿಸಿ ಧರಿಸಿಕೊಳ್ಳಬಹುದು. ಹಲವಾರು ರೀತಿಯಲ್ಲಿ ಶರೀರದ ಬೇರೆ ಬೇರೆ ಭಾಗಗಳಲ್ಲಿ ಧರಿಸಬಹುದಾದ ಆಭರಣ ಇದು.

ಬಗೆಬಗೆ ಚೋಕರ್

ಕಡಿಮೆ ತೂಕದ, ಆದರೆ ಸುಂದರವಾಗಿ ಕಾಣುವ ವಿವಿಧ ಬಗೆಯ 'ಚೋಕರ್'ಗಳು ಒಂದು ಗ್ರಾಮ್‌ನಲ್ಲಿ ಕೂಡ ಲಭ್ಯವಿವೆ. ಗಮನಿಸಿ, ನಮ್ಮ ಬುದ್ಧಿಕೌಶಲದಿಂದ ಕಡಿಮೆ ಚಿನ್ನದಲ್ಲಿ ಹಲವಾರು ರೀತಿಯ ಆಭರಣಗಳನ್ನು ಕೊಂಡು ಧರಿಸಬಹುದು. ತಿಳಿದವರ ಬಳಿ ಮಾತನಾಡಿದರೆ ಇನ್ನಷ್ಟು ಐಡಿಯಾಗಳು ಹೊಳೆಯುತ್ತವೆ.

ಏನಿವರ ಬ್ಯೂಟಿ ಸೀಕ್ರೆಟ್?

ಮೇಘಶ್ರೀ, ಕಿರುತೆರೆ ನಟಿ

ಪದೇಪದೇ ಪಾರ್ಲರ್, ಚರ್ಮತಜ್ಞರ ಕ್ಲಿನಿಕ್ಕಿಗೆ ಹೋಗುವುದಿಲ್ಲ. ಆದರೆ ಕೆಲವು 'ಮಿನಿಮಲ್' ಕ್ರೀಂಗಳನ್ನು ಬಳಸುತ್ತೇನೆ. ತ್ವಚೆ ಸದಾ ತೇವಯುಕ್ತವಾಗಿರಲು ಮಾಯಿಶ್ಚರೈಸರ್, ಟೋನರ್, ಬಿಸಿಲಿನಿಂದಾಗುವ ಟ್ಯಾನ್ ತಪ್ಪಿಸಲು ಸನ್‌ಸ್ಕ್ರೀನ್ ಹಚ್ಚುತ್ತೇನೆ.

ಬಿಸಿಲಿನಲ್ಲಿ ಓಡಾಡಿ ಚರ್ಮ ಟ್ಯಾನ್ ಆದಾಗ ಗಟ್ಟಿ ಮೊಸರನ್ನು ಮುಖಕ್ಕೆ ಹಚ್ಚುತ್ತೇನೆ. ಚಮತ್ಕಾರದ ರೀತಿಯಲ್ಲಿ ಕೆಲಸ ಮಾಡುವ ಮೊಸರು ನನಗೆ ಉತ್ತಮ ಆಯ್ಕೆ ಎನಿಸಿದೆ. ಅದು ಮುಖದಲ್ಲಿ ಇರುವ ಶಾಖವನ್ನು 15 ನಿಮಿಷದಲ್ಲಿ ಹೀರಿಕೊಂಡು, ಶೇ 50ರಷ್ಟು ಟ್ಯಾನ್ ಅನ್ನು ಹೊಡೆದೋಡಿಸುತ್ತದೆ.


ಇದು ಬಿಟ್ಟರೆ ಮನೆಯಲ್ಲಿ ಕಾಫಿಪುಡಿ, ಸಕ್ಕರೆ ಹಾಗೂ ಜೇನುತುಪ್ಪದಿಂದ ಸ್ಕ್ರಬ್ ಮಾಡಿಕೊಳ್ಳುತ್ತೇನೆ. ಚರ್ಮ ಹೊಳೆಯಲು ಚೆನ್ನಾಗಿ ನೀರು ಕುಡಿಯಬೇಕು. ಬೆಳಿಗ್ಗೆ ಖಾಲಿ ಹೊಟ್ಟೆಗೆ 'ಎಬಿಸಿ' (ಆಮ್ಲ, ಬೀಟ್ರೂಟ್, ಕ್ಯಾರೆಟ್) ಜ್ಯೂಸ್ ಕುಡಿಯುತ್ತೇನೆ. ಕೂದಲಿಗೂ ಇದು ಉತ್ತಮವಾದ್ದರಿಂದ ಈ ಜ್ಯೂಸ್‌ಗೆ ಕರಿಬೇವು ಸೇರಿಸಿಕೊಳ್ಳುತ್ತೇನೆ. ಸಮಯವಿದ್ದಾಗ ಈ ಮೂರು ಮಿಶ್ರಣದ ಐಸ್‌ಕ್ಯೂಬ್ ಮಾಡಿಟ್ಟುಕೊಂಡು, ಬಿಸಿನೀರಿಗೆ ಕ್ಯೂಬ್ ಸೇರಿಸಿ ಕುಡಿಯುತ್ತೇನೆ.

ಕೂದಲು ಉದುರುವುದನ್ನು ತಡೆಯಲು ಮನೆಯಲ್ಲೇ ತಯಾರಿಸಿದ ರೋಸ್ಮರಿ ನೀರನ್ನು ಬಳಸುತ್ತೇನೆ. ರೋಸ್ಮರಿ ಸೊಪ್ಪು ತಂದು ಅದನ್ನು ನೀರಿನಲ್ಲಿ ಲವಂಗದ ಜತೆ ಚೆನ್ನಾಗಿ ಕುದಿಸಿ, ನಿತ್ಯ ರಾತ್ರಿ ಹಚ್ಚಿಕೊಳ್ಳುತ್ತೇನೆ. ವಾರಕ್ಕೊಮ್ಮೆ ಎಣ್ಣೆ ಹಚ್ಚಿಕೊಂಡು ಸ್ನಾನ ಮಾಡುತ್ತೇನೆ. ಇದು ಬಿಟ್ಟರೆ, ದೂಳಿನಿಂದ ಹಾಳಾದ ಕೂದಲನ್ನು ಎರಡು ದಿನಕ್ಕೊಮ್ಮೆ ಶ್ಯಾಂಪೂ ಬಳಸಿ ತೊಳೆಯುತ್ತೇನೆ.

ಸೌಂದರ್ಯ ಎನ್ನುವುದು ನಮ್ಮ ನಗು, ನಾವು ಹೇಗೆ ನಡೆದುಕೊಳ್ಳುತ್ತೇವೆ ಎಂಬುದನ್ನೂ ಅವಲಂಬಿಸಿರುತ್ತದೆ. ಒಟ್ಟಾರೆ ನಮ್ಮ ವ್ಯಕ್ತಿತ್ವವೇ ಸೌಂದರ್ಯದ ಧಾತು ಆಗಿರುತ್ತದೆ. ಹಾಗಾಗಿ, ಒಳಗಿನ ಸೌಂದರ್ಯಕ್ಕೆ ಅಗತ್ಯವಿರುವ ಚಟುವಟಿಕೆಗಳನ್ನೂ ಆಗಾಗ್ಗೆ ಮಾಡುತ್ತಿರಬೇಕು. ದೃಢ ವ್ಯಕ್ತಿತ್ವವನ್ನು ಹೊಂದಲು ಬೇಕಾದ ಅಂಶಗಳನ್ನು ಅಳವಡಿಸಿಕೊಳ್ಳುವುದು ಸಹ ಸೌಂದರ್ಯ ಹೆಚ್ಚಿಸಿಕೊಳ್ಳುವುದರ ಭಾಗವೇ ಆಗಿರುತ್ತದೆ.



ಅಮ್ಮ ಹೇಳ್ತಾಳೆ



ಅಡುಗೆ ಉಪ್ಪನ್ನು ಸ್ಟೀಲ್ ಅಥವಾ ಕಬ್ಬಿಣದಂತಹ ಲೋಹದ ಡಬ್ಬಿಗಳಲ್ಲಿ ತುಂಬಿಸಿ ಇಡಬೇಡಿ. ಲೋಹದ ಕಾರಣದಿಂದ ರಾಸಾಯನಿಕ ಕ್ರಿಯೆ ನಡೆದು ಉಪ್ಪು ಹಾಳಾಗುತ್ತದೆ. ಅಲ್ಲದೆ ನೀರು ಬಿಟ್ಟುಕೊಳ್ಳುತ್ತದೆ. ಇಂಥ ಉಪ್ಪನ್ನು ಬಳಸುವುದು ಆರೋಗ್ಯಕ್ಕೆ ಹಾನಿಕಾರಕ. ಉಪ್ಪು ಸಂಗ್ರಹಿಸಲು ಉತ್ತಮವಾದ ಗಾಜು, ಸೆರಾಮಿಕ್ ಅಥವಾ ಮರದ ಡಬ್ಬಿಗಳನ್ನು ಬಳಸುವುದು ಒಳ್ಳೆಯದು.

ಸಾಧನೆಗೆ ಕೀಳರಿಮೆ ಅಡ್ಡಿಯಾಗದಿರಲಿ



ಅಂತರಂಗ

ಅಕ್ಷರ ದಾಮ್ಲೆ, ಮನಃಶಾಸ್ತ್ರಜ್ಞ

• **ಸಪೂರ ದೇಹ ಹಾಗೂ ಕುಳ್ಳಗಿರುವ ಕಾರಣಕ್ಕೆ ವಿಪರೀತ ಎನ್ನುವಷ್ಟು ಕೀಳರಿಮೆಯನ್ನು ಬೆಳೆಸಿಕೊಂಡಿದ್ದೇನೆ. ಇದು ನನ್ನ ಬೆಳವಣಿಗೆಗೆ ದೊಡ್ಡ ಕುತ್ತಾಗಿದೆ. ಇದರಿಂದ ಹೊರಬರುವುದು ಹೇಗೆ ಎಂದು ತಿಳಿಸಿ ಸರ್.** –ಶ್ರೇಯಾ, ಬೆಂಗಳೂರು


ದೇಹ-ಮನಸ್ಸು ಒಂದಕ್ಕೊಂದು ಬಹಳ ಆಪ್ತವಾದಂತಹವು. ನಮ್ಮ ದೈಹಿಕ ಆಕಾರವು ನಮ್ಮ ಮಾನಸಿಕ ಸ್ಥೈರ್ಯದ ಮೇಲೆ ಪ್ರಭಾವವನ್ನು ಬೀರುತ್ತದೆ. ಮಾತ್ರವಲ್ಲ, ಎಲ್ಲರಿಗೂ ತಾವು ಚಂದವಾಗಿ ಕಾಣಬೇಕೆಂಬ ಹಂಬಲವೂ ಇರುತ್ತದೆ. ಆದರೆ ಅದರೊಂದಿಗೆ ಗಮನಿಸಬೇಕಾದ ಇನ್ನೊಂದು ಮುಖ್ಯ ಅಂಶವೆಂದರೆ, ನಮ್ಮ ದೈಹಿಕ ಆಕಾರದ ಮೇಲೆ ನಮ್ಮೊಳಗಿರುವ ಜೀವತಂತುಗಳ ಆಧಿಪತ್ಯ ಇರುತ್ತದೆ. ಅಂದರೆ, ನಿಮ್ಮ ದೇಹ ರಚನೆಯ ಹಿಂದೆ ನೀವು ತಂದೆ-ತಾಯಿಯಿಂದ ಪಡೆದುಕೊಂಡು ಬಂದಿರುವಂಥ ಗುಣಲಕ್ಷಣಗಳು ಹೆಚ್ಚಿರುತ್ತವೆ. ಕೆಲವೊಮ್ಮೆ, ನೀವು ಸರಿಯಾಗಿ ಪೌಷ್ಟಿಕಾಂಶಯುಕ್ತ ಆಹಾರವನ್ನು ತಿನ್ನದಿರುವುದೂ ಕುಬ್ಜ ಶರೀರಕ್ಕೆ ಕಾರಣವಾಗಿರಬಹುದು. ಹಾಗಿದ್ದೂ ನೀವು ನಿಮ್ಮ ಸ್ಥೈರ್ಯ ಮತ್ತು ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳಬಹುದು. ದೈಹಿಕವಾಗಿ ನೀವು ಹೇಗೆ ಕಾಣಿಸುತ್ತಿದ್ದೀರಿ ಎಂಬುದಕ್ಕಿಂತ ಮಾನಸಿಕವಾಗಿ ಹೇಗೆ ನಿಮ್ಮನ್ನು ನೀವು ರೂಪಿಸಿಕೊಂಡಿದ್ದೀರಿ ಎಂಬುದು ಮುಖ್ಯ. ಹಾಗಾಗಿ, ನಮ್ಮ ಯಶಸ್ಸಿಗೆ ದೈಹಿಕ ಆರೋಗ್ಯ ಮತ್ತು ದೇಹ ರಚನೆ ಪೂರಕವಾಗಬಹುದೇ ವಿನಾ ಅವೇ ಎಲ್ಲವನ್ನೂ ನಿರ್ಧಾರ ಮಾಡುವುದಿಲ್ಲ.

12ನೇ ತರಗತಿ ಓದುತ್ತಿದ್ದ ಹುಡುಗಿಯೊಬ್ಬಳು ಒಮ್ಮೆ ನನ್ನ ಬಳಿ ಚಿಕಿತ್ಸೆಗೆ ಬಂದಿದ್ದಳು. ಉದ್ದವಾಗಿ ಇದ್ದುದೇ ಅವಳ ಸಮಸ್ಯೆಯಾಗಿತ್ತು. ತನ್ನ ಉದ್ದದ ಕಾರಣದಿಂದ ಆಕೆಯಲ್ಲಿ ಎಷ್ಟರಮಟ್ಟಿಗೆ ಕೀಳರಿಮೆ ತುಂಬಿಕೊಂಡಿತ್ತು ಅಂದರೆ, ಬೇರೆಯವರೊಡನೆ ಬೆರೆಯುವುದನ್ನೇ ಅವಳು ನಿಲ್ಲಿಸಿದ್ದಳು. ಎಷ್ಟೋ ದಿನ ಕಾಲೇಜಿಗೆ ಹೋಗುವುದಕ್ಕೂ ಹಿಂಜರಿಯುತ್ತಿದ್ದಳು. ತಂದೆ-ತಾಯಿ ಬಹಳ ಎತ್ತರ ಇದ್ದವರು. ಹಾಗಾಗಿ, ಆಕೆಗೆ ದಕ್ಕಿದ್ದ ಎತ್ತರ ಸಹಜವಾಗಿ ಬಂದದ್ದು. ಆದರೆ ಅವಳಿಗೆ ಅದನ್ನು ಒಪ್ಪಿಕೊಳ್ಳುವುದು ಕಷ್ಟವಾಗಿತ್ತು.

ಇದು ದೇಹ ರಚನೆಗಷ್ಟೇ ಸೀಮಿತವಲ್ಲ. ಚರ್ಮದ ಬಣ್ಣದ ಕಾರಣದಿಂದಾಗಿಯೂ ಎಷ್ಟೋ ಬಾರಿ ಜನ ಕೀಳರಿಮೆ ಅನುಭವಿಸುತ್ತಾರೆ. ಆದರೆ, ಜೀವನದಲ್ಲಿ ಔನ್ನತ್ಯಕ್ಕೆ ಏರಲು ದೈಹಿಕ ಸೌಂದರ್ಯಕ್ಕಿಂತಲೂ ಮುಖದಲ್ಲಿ ಬೆಳಕಿರುವುದು ಮುಖ್ಯ. ಆ ಬೆಳಕು ನಿಮ್ಮ ಅಂತಃಸತ್ವದ ಕಾರಣದಿಂದ ಬರುತ್ತದೆಯೇ ಹೊರತು ಬಾಹ್ಯ ಸೌಂದರ್ಯದಿಂದ ಅಲ್ಲ. ಎತ್ತರ ಕಡಿಮೆ ಇದ್ದರೇನಾಯ್ತು, ಸಾಧನೆ ಮಾಡುವುದಕ್ಕೆ ಮೆಟ್ಟಿಲುಗಳನ್ನು ನಾವೇ ಸೃಷ್ಟಿ ಮಾಡಿಕೊಳ್ಳಬಹುದಲ್ಲಾ!

ವಿಶ್ವದಲ್ಲಿ ಅನೇಕ ಸಾಧಕರು ಕುಬ್ಜರಾಗಿದ್ದರೂ ದೇಹರಚನೆಯು ತಮ್ಮ ಗುರಿ ಸಾಧನೆಗೆ ಅಡಚಣೆಯಾಗದಂತೆ ಮೆಟ್ಟಿ ನಿಂತವರು. ಉದಾಹರಣೆಗೆ, ಸಚಿನ್ ತೆಂಡೂಲ್ಕರ್ ಅವರನ್ನು ಕ್ರಿಕೆಟ್ ಜಗತ್ತು ಕೊಂಡಾಡುತ್ತದೆ. ಆದರೆ, ಕ್ರಿಕೆಟ್ ಕ್ಷೇತ್ರದಲ್ಲಿ ಇತರ ಆಟಗಾರರಿಗೆ ಹೋಲಿಸಿದರೆ ಅವರು ಕುಳ್ಳಗೆ ಇದ್ದರು. ಅದು ಅವರ ಸಾಧನೆಗೆ ಅಡ್ಡಿಯಾಗಲಿಲ್ಲ. ರಾಷ್ಟ್ರಪತಿ ಅಬ್ದುಲ್ ಕಲಾಂ ತುಂಬಾ ಎತ್ತರದವರಾಗಿರಲಿಲ್ಲ. ಆದರೆ ಅವರ ಸಾಧನೆಗಳು ಬಾನೆತ್ತರಕ್ಕೆ ಏರಿದಂತಹವು. ವಿಶ್ವವಿಖ್ಯಾತ ಹಾಡುಗಾರ್ತಿ, 14 ಗ್ರ್ಯಾಮಿ ಪ್ರಶಸ್ತಿಗಳನ್ನು ಪಡೆದಂತಹ ಲೇಡಿ ಗಾಗಾ ಅವರೂ ಕುಬ್ಜರೇ! ಆದರೆ ಅವರ ಕುಬ್ಜತೆ ಅವರ ಜೀವನದಲ್ಲಿ ಮೈಲಿಗಲ್ಲುಗಳನ್ನು ಸ್ಥಾಪಿಸುವಲ್ಲಿ ಅಡ್ಡಿ ಬರಲಿಲ್ಲ. ಹಾಗಾಗಿ, ನಾನು ಕುಬ್ಜಳಾಗಿದ್ದೇನೆ ಎಂದು ನಿಮಗೆ ನೀವೇ ಹೇಳಿಕೊಂಡು ಮಾನಸಿಕ ಕುಬ್ಜತೆಯನ್ನು ತಂದುಕೊಳ್ಳುವ ಬದಲು, ನೀವು ಏನನ್ನು ಸಾಧಿಸಬೇಕೋ ಅದರ ಕಡೆ ಗಮನಹರಿಸಿ. ಸಾಧಿಸಿದ ಮೇಲೆ, ಈಗ ಕಾಣುತ್ತಿರುವ ಎಲ್ಲ ಸಮಸ್ಯೆಗಳೂ ಕುಬ್ಜವಾಗಿ ಕಾಣಿಸುತ್ತವೆ.

ಲೆಫ್ಟಿನೆಂಟ್ ಕನ್ನಡತಿ ಕಂಡ 'ಭವ್ಯ' ಭಾರತ!



ತಾಯಿ ಭಾಗ್ಯಲಕ್ಷ್ಮಿ ಅವರೊಂದಿಗೆ ಭವ್ಯಾ ನರಸಿಂಹಮೂರ್ತಿ

• ಗುರು ಪಿ.ಎಸ್.

'ನೀವು ಸಿಟಿಯಲ್ಲಿ ಸ್ಥಿತಿವಂತರ ಮನೆಯಲ್ಲಿ ಬೆಳೆದವರು, ರಾಜಕೀಯದಲ್ಲಿಯೂ ಇರುವವರು. ನೀವು ಟ್ರೇನಿಂಗ್ ಪೂರ್ತಿ ಮಾಡೋದು ಡೌಟು ಮೇಡಂ' ಎಂದವರೇ ಬಹಳ. ಆದರೆ, ತರಬೇತಿ ಮುಗಿದ ನಂತರ, 'ರಿಯಲಿ ಪ್ರೌಡ್ ಆಫ್ ಯೂ ಭವ್ಯಾ' ಎಂದು ನಮ್ಮ ಟ್ರೇನಿಂಗ್ ಆಫೀಸರ್ರೇ ಬೆನ್ನು ತಟ್ಟಿದಾಗ ನನಗಾದ ಖುಷಿ ಅಷ್ಟಿಷ್ಟಲ್ಲ'– ಕಣ್ಣರಳಿಸಿ ಹೇಳುತ್ತಾ ಹೋದರು ಭವ್ಯಾ ನರಸಿಂಹಮೂರ್ತಿ.

ಬೆಂಗಳೂರಿನ ಭವ್ಯಾ ಈಗ ನಮ್ಮ ಟೆರಿಟೋರಿಯಲ್ ಆರ್ಮಿಯಲ್ಲಿ ಲೆಫ್ಟಿನೆಂಟ್. ಭಾರತೀಯ ಸೇನೆಯ ಭಾಗವಾಗಿರುವ ಈ ಸ್ವಯಂಸೇವಾ ರಕ್ಷಣಾ ಪಡೆಯಲ್ಲಿ 3 ತಿಂಗಳ ಕಠಿಣ ತರಬೇತಿ ಮುಗಿಸಿ ಬಂದಿದ್ದಾರೆ. 2021ರಲ್ಲಿ ಟೆರಿಟೋರಿಯಲ್ ಆರ್ಮಿ ಬಗ್ಗೆ ತಿಳಿದುಕೊಂಡ ಕ್ಷಣದಿಂದಲೇ ಭವ್ಯಾ ತಮ್ಮ ಗುರಿಯನ್ನು ಸ್ಪಷ್ಟಪಡಿಸಿಕೊಂಡರು. ಪ್ರತಿವರ್ಷ ಇಡೀ ದೇಶಕ್ಕೆ ಮಹಿಳೆಯರಿಗೆ ಒಂದೇ ಹುದ್ದೆ ಇದೆಯಾದರೂ, ಅದನ್ನು ಪಡೆಯುವಲ್ಲಿ ಯಶಸ್ಸು ಕಂಡಿದ್ದಾರೆ. ಕಾಶ್ಮೀರದ ಬಾರಾಮುಲ್ಲಾದಲ್ಲಿನ '173 ಎಂಜಿನಿಯರ್ ಟಿಎ ಯುನಿಟ್'ಗೆ 2024ರ ಜುಲೈನಲ್ಲಿ ನಿಯೋಜನೆಗೊಂಡಿದ್ದಾರೆ.

'ನ್ಯಾಷನಲ್ ಡಿಫೆನ್ಸ್ ಅಕಾಡೆಮಿ (ಎನ್‌ಡಿಎ) ಹಾಗೂ ಇಂಡಿಯನ್ ಮಿಲಿಟರಿ ಅಕಾಡೆಮಿಯಲ್ಲಿ (ಐಎಂಎ) ಮಹಿಳೆಯರಿಗೆ ತರಬೇತಿ ಪಡೆಯಲು ಅವಕಾಶವಿರಲಿಲ್ಲ. ಆದರೆ, ಇಲ್ಲಿ ಮಹಿಳೆಯರಿಗೆ ಅವಕಾಶ ನೀಡಬೇಕು ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದ ನಂತರ, ಐಎಂಎಯಲ್ಲಿ ತರಬೇತಿಗೆ ಹಾಜರಾದ ಮೊದಲ ಮಹಿಳೆ ನಾನು' ಎಂದು ಹೆಮ್ಮೆಯಿಂದ ಹೇಳುತ್ತಾರೆ ಭವ್ಯಾ.

'ಪರೀಕ್ಷೆ 3 ಹಂತದಲ್ಲಿ ನಡೆಯಿತು. ಮೊದಲು ಬೆಂಗಳೂರಿನಲ್ಲಿ ಲಿಖಿತ ಪರೀಕ್ಷೆ, ನಂತರ ಪುಣೆಯಲ್ಲಿ ಪೂರ್ವಭಾವಿ ಸಂದರ್ಶನ, ಭೋಪಾಲದಲ್ಲಿ ಎಸ್‌ಎಸ್‌ಬಿ ಪರೀಕ್ಷೆ ಇತ್ತು' ಎಂದು ಭವ್ಯಾ ಮಾಹಿತಿ ನೀಡಿದರು.

ವೈಯಕ್ತಿಕ ವಿವರ, ಪ್ರಚಲಿತ ವಿದ್ಯಮಾನ, ಮನೋವಿಜ್ಞಾನ, ಗಣಿತ ಹಾಗೂ ಸೇನೆಯ ಕುರಿತ ಕಠಿಣ ಪ್ರಶ್ನೆಗಳಿರುವ ಸಂದರ್ಶನವನ್ನು ಎದುರಿಸಿ, ಐದು ದಿನಗಳ ದೈಹಿಕ ಹಾಗೂ ಮನೋಸಾಮರ್ಥ್ಯದ ಪರೀಕ್ಷೆಯಲ್ಲಿಯೂ ಉತ್ತೀರ್ಣರಾದರು.

'ಸೇನಾ ಶಿಬಿರದ ತರಬೇತಿಯಲ್ಲಿ ಕಾಡಿಗೆಲ್ಲ ಕರೆದುಕೊಂಡು ಹೋಗುತ್ತಿದ್ದರು. ಶತ್ರುಗಳ ದಾಳಿಯಿಂದ ರಕ್ಷಿಸಿಕೊಳ್ಳುವ ದಿಸೆಯಲ್ಲಿ ಟ್ರೆಂಚ್ ಕೊರೆದು ಅದರಲ್ಲಿ ಕುಳಿತುಕೊಳ್ಳಬೇಕಿತ್ತು. ಮನೆಯಲ್ಲಿ ಹಲ್ಲಿ, ಜಿರಲೆ ಕಂಡರೆ ಹೊರ ಓಡಿಬರುತ್ತಿದ್ದ ನಾನು, ಅಲ್ಲಿ ಹುಳ–ಹುಪ್ಪಡಿಗಳೆಲ್ಲ ಮೈಮೇಲೆ ಓಡಾಡಿದರೂ ಸಹಿಸಿಕೊಳ್ಳಬೇಕಿತ್ತು. ಈ ತರಬೇತಿಯು ನನ್ನ ಜೀವನದ ಅವಿಸ್ಮರಣೀಯ ಅವಧಿ' ಎಂಬುದು ಅವರ ಖುಷಿಯ ಮಾತು.

'ಕ್ಯಾಂಪ್‌ನಲ್ಲಿದ್ದ ಐದು ದಿನ ಕಠಿಣ ತರಬೇತಿ ಇರುತ್ತದೆ. 5 ಕೆ.ಜಿ ಬ್ಯಾಗ್ ಮತ್ತು ಒಂದು ರೈಫಲ್ ಯಾವಾಗಲೂ ಹೊತ್ತಿರಬೇಕಿತ್ತು. ಶಿಬಿರದ ಕೊನೆಯ ದಿನ 20 ಕೆ.ಜಿ ಭಾರ ಹೊತ್ತು, ಜೊತೆಗೆ ರೈಫಲ್ ಹಿಡಿದು 20 ಕಿ.ಮೀ. ಓಡಿದೆ. ತರಬೇತಿಯ ಕಷ್ಟವನ್ನು ಸಹಿಸಲಾಗದೆ ಇಬ್ಬರು ಹುಡುಗರು ವಾಪಸ್ ಹೋದರು. ನಾನಂತೂ ಹಿಂದಿರುಗುವ ಬಗ್ಗೆ ಯೋಚಿಸಲೂ ಇಲ್ಲ. ಇದೊಂದು ಸುವರ್ಣಾವಕಾಶ, ಅಲ್ಲದೆ ನಾನು ಹಿಂದಿರುಗಿದರೆ, ಸೇನೆ ಅಥವಾ ಟೆರಿಟೋರಿಯಲ್ ಆರ್ಮಿ ಸೇರಬಯಸುವ ಇತರ ಯುವತಿಯರು ಎದೆಗುಂದುವಂತೆ ಆಗಬಾರದು ಎಂಬ ಉದ್ದೇಶದಿಂದ ತರಬೇತಿ ಪೂರ್ಣಗೊಳಿಸಿಯೇ ಬಂದೆ' ಎಂದರು ಭವ್ಯಾ.

'ನನ್ನ ವೃತ್ತಿಯಲ್ಲಿ ಇದ್ದುಕೊಂಡೇ ವರ್ಷದಲ್ಲಿ ಎರಡು ತಿಂಗಳು ಸೇನೆಯಲ್ಲಿ ಸೇವೆ ಸಲ್ಲಿಸುವ ಅದೃಷ್ಟ ನನ್ನದಾಗಿದೆ. ವೈಯಕ್ತಿಕವಾಗಿಯೂ ಈ ತರಬೇತಿ ನನ್ನಲ್ಲಿ ಹೆಚ್ಚಿನ ಆತ್ಮವಿಶ್ವಾಸ ಮತ್ತು ಕಷ್ಟವನ್ನು ಸಹಿಸುವ ಶಕ್ತಿ ನೀಡಿದೆಯಲ್ಲದೆ, ಶಿಸ್ತು ಮೂಡಿಸಿದೆ. ಮುಂದೆ ರಾಜಕೀಯದಲ್ಲಿ ನಾನು ಹೆಚ್ಚು ತೊಡಗಿಸಿಕೊಂಡರೂ ಸೇನೆಯಲ್ಲಿ ಸೇವೆ ಸಲ್ಲಿಸುತ್ತೇನೆ' ಎನ್ನುವ ಭವ್ಯಾ, ನಿವೃತ್ತಿ ವೇಳೆಗೆ ಲೆಫ್ಟಿನೆಂಟ್ ಕರ್ನಲ್ ಆಗಲಿದ್ದಾರೆ.

ಸ್ಪಷ್ಟ ಭಾಷೆ, ಸ್ವಚ್ಛ ಅಡುಗೆ

ರಸಾಸ್ವಾದ

ಅನುದಿನವೂ ತಿಂಡಿಗೆ, ಮಕ್ಕಳ ಲಂಚ್ ಬಾಕ್ಸ್‌ಗೆ, ಸ್ನ್ಯಾಕ್ಸ್ ಬ್ರೇಕ್‌ಗೆ... ಹೀಗೆ ಪ್ರತಿಯೊಂದಕ್ಕೂ ತರಹೇವಾರಿ ತಿನಿಸು ಸಿದ್ಧಪಡಿಸುವ ಸವಾಲು ಅಮ್ಮಂದಿರ ಮುಂದೆ ಇದ್ದೇ ಇರುತ್ತದೆ. ಅದನ್ನು ಸಮರ್ಥವಾಗಿ ನಿಭಾಯಿಸಿದರೆ 'ದೈನಂದಿನ ಓಟ'ದಲ್ಲಿ ಅವರು ಅರ್ಧ ಗೆದ್ದಂತೆಯೇ. ಈ 'ಓಟ' ಒಂದಷ್ಟು ತಯಾರಿಯನ್ನು ಬೇಡುತ್ತದೆ. ಅಂತಹ ತಯಾರಿಗಾಗಿ 'ಅಂಬಿಕಾ ಶೆಟ್ಟೀಸ್' ಯೂಟ್ಯೂಬ್ ಅಡುಗೆ ಚಾನೆಲ್ ತಡಕಾಡಿದರೆ ಸಾಕು, ತಾಯಂದಿರ ದಾರಿ ಸುಲಭವೇದ್ಯ.

ಕರಾವಳಿಯ ಸಾಂಪ್ರದಾಯಿಕ ಅಡುಗೆಗಳನ್ನು ಹೇಳಿಕೊಡುತ್ತಲೇ ಇನ್‌ಸ್ಟಂಟ್ ರೆಸಿಪಿ, ದಿಢೀರ್ ಊಟದ ಮೆನು, ಬಗೆ ಬಗೆಯ ಜ್ಯೂಸ್‌ಗಳನ್ನು ಫಟಾಫಟ್ ಆಗಿ ಮಾಡಿ ತೋರಿಸುವ ಅಂಬಿಕಾ, ಇಂಗ್ಲಿಷ್, ಕನ್ನಡ ಎರಡೂ ಭಾಷೆಗಳಲ್ಲಿ ಅಡುಗೆ ಚಾನೆಲ್ ನಡೆಸುತ್ತಿದ್ದಾರೆ. 2011ರಿಂದ ಯೂಟ್ಯೂಬ್ ನಂಟು ಬೆಳೆಸಿಕೊಂಡ ಅವರು, 10 ಲಕ್ಷಕ್ಕೂ ಹೆಚ್ಚು ಸಬ್‌ಸ್ಕ್ರೈಬರ್‌ಗಳನ್ನು ಹೊಂದಿದ್ದಾರೆ.

'ಸ್ಪಷ್ಟ ಭಾಷೆ ಸ್ವಚ್ಛ ಅಡುಗೆ' ಎನ್ನುವ ತನ್ನ ಟ್ಯಾಗ್‌ಲೈನ್‌ಗೆ ಪೂರಕವಾಗಿಯೇ ಇದೆ ಅವರ ಚಾನೆಲ್. ಸ್ಪಷ್ಟವಾಗಿ, ಸ್ಫುಟವಾಗಿ, ಅಡುಗೆ ಮಾಡುವವರಿಗೆ ಕಿಂಚಿತ್ತೂ ಗೊಂದಲ ಬಾರದಂತೆ ಅಷ್ಟೇ ನಾಜೂಕಾಗಿ ರೆಸಿಪಿಗಳನ್ನು ಹೇಳಿಕೊಡುತ್ತಾರೆ ಅಂಬಿಕಾ.

ಎಷ್ಟೋ ಹೆಣ್ಣುಮಕ್ಕಳಿಗೆ ಯೂಟ್ಯೂಬ್‌ನಲ್ಲಿರುವ ಉದ್ದದ ವಿಡಿಯೊ ನೋಡಿದ ಬಳಿಕ, ಅದರಲ್ಲಿ ತಿಳಿಸಿದ ಸಾಮಗ್ರಿಗಳನ್ನು ಹೊಂದಿಸಿಕೊಂಡು ಅಡುಗೆ ಮಾಡುವಷ್ಟು ಪುರಸತ್ತು ಇರುವುದಿಲ್ಲ. ಅಂತಹವರಿಗೆಂದೇ ಅವರು 3ರಿಂದ 6 ನಿಮಿಷದ ವಿಡಿಯೊದಲ್ಲೇ ಮೂರ್ನಾಲ್ಕು ರೆಸಿಪಿಗಳನ್ನು ಮುಂದಿಡುತ್ತಾರೆ. ದಿನನಿತ್ಯದ ಅಡುಗೆ ಕಾಯಕದಲ್ಲಿ ಮಹಿಳೆಯರು ಎದುರಿಸುವ ತೊಡಕುಗಳನ್ನೇ ಪರಿಗಣಿಸಿ, ಅವರಿಗೆ ಸುಲಭವಾಗುವಂತೆ ರೆಸಿಪಿಗಳನ್ನು ಹಂಚಿಕೊಂಡಿದ್ದಾರೆ.

ಒಂದೇ ಮುಖ್ಯ ಪದಾರ್ಥದಲ್ಲಿ ವೈವಿಧ್ಯಮಯ ರುಚಿಯ ಬೇರೆ ಬೇರೆ ರೆಸಿಪಿಗಳನ್ನು ಸಾದರಪಡಿಸುವುದು ಈ ಚಾನೆಲ್‌ನ ಮತ್ತೊಂದು ವಿಶೇಷ. 20 ನಿಮಿಷದಲ್ಲಿ ಮಾಡುವ ನಾಲ್ಕು ಬಗೆಯ ಬೆಳಗಿನ ತಿಂಡಿಗಳು, ಕಳಿತ ಬಾಳೆಹಣ್ಣಿನಲ್ಲಿ ಮಾಡುವ ಹೊಸಬಗೆಯ ಖಾದ್ಯಗಳು (ಬಾಳೆಹಣ್ಣಿನ ಅಕ್ಕಿ ರೊಟ್ಟಿ, ಮಲ್‌ಪುವ, ಮಿಲ್ಕ್‌ಶೇಕ್, ಕೇಸರಿಬಾತ್), ಅವಲಕ್ಕಿಯಿಂದ ದಿಢೀರ್ ತಿನಿಸುಗಳು (ರೊಟ್ಟಿ, ಟೊಮೆಟೊಬಾತ್, ಉಪ್‌ಕರಿ, ಪಡ್ಡು), ಬಗೆಬಗೆಯ ದಿಢೀರ್ ದೋಸೆಗಳು, ದಿಢೀರ್ ಸ್ನ್ಯಾಕ್ಸ್ ರೆಸಿಪಿಗಳು, ಆರೋಗ್ಯಕರ ಪೇಯ, ಜ್ಯೂಸ್‌ಗಳು, ಪಾಲಾಕ್‌ನಿಂದ ತಯಾರಿಸಿದ ತಿಂಡಿ, ಸಿಹಿ ಖಾದ್ಯಗಳು, ವಿವಿಧ ಬಗೆಯ ಚಟ್ನಿಗಳು ಜಿಹ್ವಾಚಾಪಲ್ಯವನ್ನು ಹೆಚ್ಚಿಸುತ್ತವೆ.

ಸುಮಾ ಬಿ.



> ಧಾವಂತದ ಜೀವನಶೈಲಿಯಲ್ಲಿ ಎಲ್ಲರಿಗೂ ಸಮಯವೇ ಮುಖ್ಯ. ಹಾಗಾಗಿ, ಅನಗತ್ಯವಾದುದನ್ನು ವಿಡಿಯೊದಲ್ಲಿ ತುರುಕುವುದಿಲ್ಲ. ರುಚಿಯಾದ ಆರೋಗ್ಯಕರ ಅಡುಗೆ ಹೇಳಿಕೊಡುವುದಕ್ಕೆ ನನ್ನ ಆದ್ಯತೆ.
> **ಅಂಬಿಕಾ ಶೆಟ್ಟಿ**

ಅಂಬಿಕಾ ಟಿಪ್ಸ್

- ತರಕಾರಿ ಪಲ್ಯ ಅಥವಾ ಸಾಂಬಾರ್ ಮಾಡುವಾಗ ಸಣ್ಣ ಉರಿಯಲ್ಲಿ ಬೇಯಿಸಿದರೆ ರುಚಿ ಹೆಚ್ಚು. ದೊಡ್ಡ ಉರಿಯಲ್ಲಿ ಬೇಗನೆ ಬೆಂದರೂ ಅಷ್ಟಾಗಿ ರುಚಿ ಬಾರದು.
- ಕರಿದ ಪದಾರ್ಥಗಳನ್ನು ದೊಡ್ಡ ಉರಿ ಇಟ್ಟುಕೊಂಡೇ ಕರಿಯಬೇಕು. ಸಣ್ಣ ಉರಿ ಇಟ್ಟರೆ ಪದಾರ್ಥಗಳು ಹೆಚ್ಚು ಎಣ್ಣೆ ಕುಡಿಯುತ್ತವೆ.
- ಆಲೂ ಚಿಪ್ಸ್ ಅಥವಾ ಪಕೋಡ ಮಾಡುವಾಗ ತುರಿದ ಆಲೂ ಸ್ಲೈಸ್‌ಗಳನ್ನು ತಣ್ಣೀರಿನಲ್ಲಿ ಚೆನ್ನಾಗಿ ತೊಳೆದು ಸ್ಟಾರ್ಚ್ ಅಂಶವನ್ನು ತೆಗೆಯಬೇಕು. ಇದರಿಂದ ಆಲೂ ಹೆಚ್ಚು ಎಣ್ಣೆಯನ್ನು ಹೀರಿಕೊಳ್ಳುವುದಿಲ್ಲ, ಜೊತೆಗೆ ಕ್ರಿಸ್ಪಿಯಾಗಿ ಬರುತ್ತದೆ.
- ಪಾತ್ರೆಯಲ್ಲಿ ತರಕಾರಿ ಪಲ್ಯ ಅಥವಾ ಸಾಂಬಾರ್ ಬಿಸಿಗೆ ಇಟ್ಟು ಮರೆತರೆ, ಅದು ಸೀಯುವ ಹಂತ ತಲುಪಿದೆ ಎಂದರೆ ತಕ್ಷಣ ಅದಕ್ಕೆ ಐಸ್‌ಕ್ಯೂಬ್ ಹಾಕಬೇಕು. ಆಗ ಪಾತ್ರೆ ತಳ ಹಿಡಿಯುವುದನ್ನು ತಪ್ಪಿಸಬಹುದು.
- ಶಾವಿಗೆ ಪಾಯಸ, ಮೈಸೂರುಪಾಕ್, ಬರ್ಫಿಯಂತಹ ಸಿಹಿ ಖಾದ್ಯಗಳನ್ನು ತಯಾರಿಸುವಾಗ ಗ್ಯಾಸ್ ಆರಿಸಿದ ಬಳಿಕವೂ ಅವುಗಳ ಕುಕಿಂಗ್ ಪ್ರೋಸೆಸ್ ಮುಂದುವರಿದಿರುತ್ತದೆ. ಹಾಗಾಗಿ, ಆ ಹದ ನೋಡಿಕೊಂಡು ಒಂದು ಸ್ಟೆಪ್ ಮುಂಚಿತವಾಗಿಯೇ ಗ್ಯಾಸ್ ಆಫ್ ಮಾಡಬೇಕು. ಇಲ್ಲದಿದ್ದರೆ ಖಾದ್ಯ ಹೆಚ್ಚು ಬೆಂದು ಗಟ್ಟಿಯಾಗುವ ಸಾಧ್ಯತೆ ಇರುತ್ತದೆ.

ಚಹಾ ಸಮಯಕ್ಕೆ ದಿಢೀರ್ ಸ್ನ್ಯಾಕ್ಸ್

ಆಲೂ ಲಚ್ಛಾ ಪಕೋಡ



ಆಲೂಗಡ್ಡೆಯನ್ನು ತುರಿದು ನೀರಿನಲ್ಲಿ 5 ನಿಮಿಷ ನೆನೆಯಲು ಬಿಡಬೇಕು. ಬಳಿಕ ನೀರಿನಂಶ ಹೋಗುವಂತೆ ಅದನ್ನು ಚೆನ್ನಾಗಿ ಹಿಂಡಿ ಬೇರೆ ಪಾತ್ರೆಗೆ ಹಾಕಬೇಕು. ಅದಕ್ಕೆ ಒಂದು ಚಮಚ ಚಿಲ್ಲಿ ಫ್ಲೇಕ್ಸ್, ಸಣ್ಣಗೆ ಹೆಚ್ಚಿದ ಹಸಿಮೆಣಸಿನ ಕಾಯಿ ಸ್ವಲ್ಪ, ಅರ್ಧ ಚಮಚ ಶುಂಠಿ–ಬೆಳ್ಳುಳ್ಳಿ ಪೇಸ್ಟ್, ಅರ್ಧ ಕಪ್ ಕೊತ್ತಂಬರಿ ಸೊಪ್ಪು ಹಾಕಿ ಚೆನ್ನಾಗಿ ಕಲಸಬೇಕು. ರುಚಿಗೆ ತಕ್ಕಷ್ಟು ಉಪ್ಪು, ಅರ್ಧ ಚಮಚ ಕಾಳುಮೆಣಸಿನ ಪುಡಿ, ಬೈಂಡಿಂಗ್‌ಗೆ ಎರಡು ಚಮಚ ಕಾರ್ನ್‌ಫ್ಲೋರ್, 3 ಚಮಚ ಮೈದಾಹಿಟ್ಟು ಹಾಕಿ ಮತ್ತೆ ಚೆನ್ನಾಗಿ ಕಲಸಬೇಕು. ಅದನ್ನು ಕೈಯಲ್ಲಿ ವಡೆ ರೀತಿ ತಟ್ಟಿಕೊಂಡು ಎಣ್ಣೆಯಲ್ಲಿ ಕರಿದರೆ ಆಲೂ ಲಚ್ಛಾ ಪಕೋಡ ಸಿದ್ಧ. ಟೊಮೆಟೊ ಕೆಚಪ್ ಅಥವಾ ಪುದೀನ ಚಟ್ನಿ ಜೊತೆ ಸವಿಯಬಹುದು.

ಬೇಬಿಕಾರ್ನ್ 65



ಒಂದು ಪಾತ್ರೆಯಲ್ಲಿ ನೀರು ಹಾಕಿ ಕುದಿಯಲು ಬಿಡಿ. ಅದಕ್ಕೆ 200 ಗ್ರಾಂ ಬೇಬಿಕಾರ್ನ್ ಹಾಕಿ 3ರಿಂದ 4 ನಿಮಿಷ ಬೇಯಿಸಬೇಕು. ಬಳಿಕ ಅದನ್ನು ಹೊರತೆಗೆದು ಉದ್ದುದ್ದ ಹೆಚ್ಚಿಟ್ಟುಕೊಳ್ಳಬೇಕು. ಇದಕ್ಕೆ ಅರ್ಧ ಚಮಚ ಜೀರಿಗೆ ಪುಡಿ, ಒಂದು ಚಮಚ ಕೆಂಪುಮೆಣಸಿನ ಪುಡಿ, ಅರ್ಧ ಚಮಚ ದನಿಯಾ ಪುಡಿ, ಕಾಲು ಚಮಚ ಅರಸಿನ, ರುಚಿಗೆ ಉಪ್ಪು, ಒಂದು ಚಮಚ ಶುಂಠಿ–ಬೆಳ್ಳುಳ್ಳಿ ಪೇಸ್ಟ್, ಒಂದು ಚಮಚ ರೆಡ್ ಚಿಲ್ಲಿಸಾಸ್, ಎರಡು ದೊಡ್ಡ ಚಮಚ ಮೊಸರು, ಮೂರ್ನಾಲ್ಕು ಹಸಿಮೆಣಸಿನಕಾಯಿಗಳನ್ನು ಉದ್ದಕ್ಕೆ ಸೀಳಿ ಹಾಕಿ ಎಲ್ಲವನ್ನೂ ಚೆನ್ನಾಗಿ ಮಿಶ್ರ ಮಾಡಿಟ್ಟುಕೊಳ್ಳಬೇಕು.

ಇನ್ನೊಂದು ಪಾತ್ರೆಯಲ್ಲಿ ಅರ್ಧ ಕಪ್ ಮೈದಾಹಿಟ್ಟು, ಕಾಲು ಕಪ್ ಕಾರ್ನ್‌ಫ್ಲೋರ್, ಚಿಟಿಕೆ ಉಪ್ಪು, ಚಿಟಿಕೆ ಕಾಳುಮೆಣಸಿನ ಪುಡಿ ಹಾಗೂ ಸ್ವಲ್ಪ ನೀರು ಹಾಕಿ ಚೆನ್ನಾಗಿ ಮಿಕ್ಸ್ ಮಾಡಿಕೊಳ್ಳಬೇಕು. ಇದನ್ನು ಮಸಾಲೆಭರಿತ ಬೇಬಿಕಾರ್ನ್‌ಗೆ ಹಾಕಿ ಕೋಟಿಂಗ್ ಕೊಡಬೇಕು.

ಒಂದು ಬಾಣಲೆಯಲ್ಲಿ ಎಣ್ಣೆ ಇಟ್ಟು ದೊಡ್ಡ ಉರಿಯಲ್ಲಿ ಕರಿದರೆ 'ಬೇಬಿಕಾರ್ನ್ 65'ರೆಡಿ.

ಲೈಂಗಿಕ ಕಿರುಕುಳ: ಮೈಲಾರಪ್ಪ ಬಂಧನ

ಬಸವೇಶ್ವರನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೈಂಗಿಕ ಕಿರುಕುಳ ನೀಡಿದ ಆರೋಪದ ಅಡಿ ಬೆಂಗಳೂರು ವಿಶ್ವವಿದ್ಯಾಲಯದ ಮಾಜಿ ಕುಲಸಚಿವ ಪ್ರೊ.ಬಿ.ಸಿ.ಮೈಲಾರಪ್ಪ ಅವರನ್ನು ಬಸವೇಶ್ವರನಗರ ಠಾಣೆಯ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

37 ವರ್ಷದ ಮಹಿಳೆಯೊಬ್ಬರು ನೀಡಿದ ದೂರಿನ ಮೇರೆಗೆ ಅಕ್ಟೋಬರ್ 9ರಂದು ಮೈಲಾರಪ್ಪ ಹಾಗೂ ಜಯಮ್ಮ ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದಾಗ ಲೈಂಗಿಕ ಕಿರುಕುಳ ನೀಡಿರುವುದಕ್ಕೆ ಪುರಾವೆ ಲಭಿಸಿದ್ದು ಮೈಲಾರಪ್ಪ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.


ಮೈಲಾರಪ್ಪ

'ಮೈಲಾರಪ್ಪ ಅಲಿಯಾಸ್ ಚಿಕ್ಕ-ಮೆಲುರಪ್ಪ ಅವರು ಸದಾಶಿವನಗರದಲ್ಲಿ ನಡೆಸುತ್ತಿರುವ ಕರ್ನಾಟಕ ರಾಜ್ಯ ಹರಿಜನ ಸೇವಕ ಸಂಘದಲ್ಲಿ 2022ರ ನವೆಂಬರ್‌ನಲ್ಲಿ ದೂರುದಾರರು ಕೆಲಸಕ್ಕೆ ಸೇರಿಕೊಂಡಿದ್ದರು. 2024ರ ಮೇವರೆಗೂ ಅವರು ಅಲ್ಲೇ ಕೆಲಸ ಮಾಡಿದ್ದರು. ಅದೇ ವರ್ಷದ ಡಿಸೆಂಬರ್ 23ರಂದು ಮಹಿಳೆಯ ಪತಿ ಮೃತಪಟ್ಟಿದ್ದರು. ದೂರುದಾರರು ವಾಸವಿದ್ದ ಮನೆಯನ್ನು ತಮ್ಮ ಹೆಸರಿಗೆ ಬರೆದುಕೊಡುವಂತೆ ಅವರ ಅತ್ತೆ ಹಾಗೂ ಮಾವ ಒತ್ತಡ ಹೇರಿದ್ದರು. ಮನೆಯನ್ನು ಬರೆದುಕೊಡದಿದ್ದರೆ, ಪತಿಯ ಸಾವಿಗೆ ನೀನೇ ಕಾರಣವೆಂದು ಪ್ರಕರಣ ದಾಖಲಿಸುವುದಾಗಿ ಮಹಿಳೆಗೆ ಬೆದರಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪತಿಯ ಸಾವಿನ ಕುರಿತು ಮಹಾಲಕ್ಷ್ಮಿಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಲಾರಪ್ಪ ಅವರು ಮಹಿಳೆಯ ಪರವಾಗಿ ಓಡಾಟ ನಡೆಸುತ್ತಿದ್ದರು. ಸಂತ್ರಸ್ತೆಯ ತಂದೆಯ ಆಸ್ತಿಯ ಭಾಗದ ವಿಷಯವಾಗಿಯೂ ಮನಸ್ತಾಪ ಉಂಟಾಗಿತ್ತು. ತಂದೆ ಆಸ್ತಿಯ ಭಾಗಾಂಶಕ್ಕಾಗಿ ಸಂತ್ರಸ್ತೆಯ ಸಹೋದರ ಹಾಗೂ ವಕೀಲ ರಘು ಎಂಬುವವರ ಸಹಾಯದಿಂದ ನ್ಯಾಯಾಲಯದಲ್ಲಿ ದೂರು ದಾಖಲಿಸಿದ್ದರು. ಈ ವಿಷಯವಾಗಿ ವಕೀಲರು ಆಗಾಗ್ಗೆ ಸಂತ್ರಸ್ತೆಯನ್ನು ಭೇಟಿ ಮಾಡುವ ಸುದ್ದಿ ತಿಳಿದಿದ್ದ ಮೈಲಾರಪ್ಪ ಅವರು, ಹೋಟೆಲ್ ಬಳಿ ಮಾತನಾಡಬೇಕೆಂದು ಮಹಿಳೆಯನ್ನು ಕರೆಸಿಕೊಂಡಿದ್ದರು. ಭೇಟಿ ಮಾಡಲು ಬಂದಾಗ ಆಕೆಗೆ ಒಂದಿಷ್ಟು ದಾಖಲಾತಿಗಳನ್ನು ನೀಡಿ, ಸಹಿ ಹಾಕುವಂತೆ ಹೇಳಿದ್ದರು. ದಾಖಲಾತಿ ಪರಿಶೀಲಿಸಿದಾಗ, 'ನನ್ನ ಜೀವನದಲ್ಲಿ ಏನೇ ತೊಂದರೆಯಾದರೂ ಅದಕ್ಕೆ ವಕೀಲ ರಘು ಕಾರಣ' ಎಂದು ಬರೆದಿದ್ದನ್ನು ನೋಡಿ, ಸಹಿ ಹಾಕಲು ಸಂತ್ರಸ್ತೆ ನಿರಾಕರಿಸಿದ್ದರು. ಹೀಗೆ ಬರೆದು ಸಹಿ ಹಾಕಿಸಿಕೊಳ್ಳಲು ನೀವು ಯಾರೆಂದು ಮಹಿಳೆ ಪ್ರಶ್ನಿಸಿದಾಗ ಕೋಪಗೊಂಡ ಮೈಲಾರಪ್ಪ ಅವರು ನಡುರಸ್ತೆಯಲ್ಲಿಯೇ ನಿಂದಿಸಿ, ದೂರುದಾರರ ಜುಟ್ಟು ಹಿಡಿದು ಹಲ್ಲೆ ನಡೆಸಿದ್ದರು' ಎಂದು ಮೂಲಗಳು ಹೇಳಿವೆ.

'ಮೈಲಾರಪ್ಪ ಅವರು ಪ್ರತಿನಿತ್ಯ ಕರೆ ಮಾಡಿ ಕೆಟ್ಟ ಪದಗಳಿಂದ ನಿಂದನೆ ಮಾಡುತ್ತಿದ್ದರು. ಮನೆಯಲ್ಲಿ ಮಕ್ಕಳಿಲ್ಲದ ವೇಳೆ ಬಂದು ಬಾಗಿಲು ಬಡಿಯುವುದು, ಬೆಲ್ ಮಾಡುವುದು ಮಾಡುತ್ತಿದ್ದರು. ಎಲ್ಲೇ ಹೋದರೂ ಹಿಂಬಾಲಿಸುತ್ತಿದ್ದರು. ಸಹಕರಿಸಿಕೊಂಡು ಹೋಗುವಂತೆ ಸಂಘಟನೆಯವರ ಮೂಲಕ ಒತ್ತಡ ಹೇರುತ್ತಿದ್ದರು' ಎಂದು ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ

ಮತ್ತೊಂದು ಪ್ರಕರಣ ದಾಖಲು

ಕಚೇರಿಗೆ ಕರೆಸಿಕೊಂಡು ಚಾಕು ತೋರಿಸಿ ಬೆದರಿಕೆ ಹಾಕಿದ ಆರೋಪದ ಅಡಿ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಅ.30ರಂದು ಮೈಲಾರಪ್ಪ ವಿರುದ್ಧ ಮತ್ತೊಂದು ಪ್ರಕರಣ ದಾಖಲಾಗಿದೆ.

'ಹೊಸ ಪರೀಕ್ಷಾ ಪದ್ಧತಿ ರದ್ದಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರೀಯ ಶಾಲಾ ಪರೀಕ್ಷೆಗಳ ಮಾದರಿಯಲ್ಲಿ ತೇರ್ಗಡೆ ಅಂಕವನ್ನು ಶೇ 33ಕ್ಕೆ ನಿಗದಿ ಮಾಡಿ, ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯು ಪರೀಕ್ಷೆ ನಡೆಸುವ ಶಾಲಾ ಶಿಕ್ಷಣ ಇಲಾಖೆ ನಿರ್ಧಾರವನ್ನು ತಡೆಯಬೇಕು ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಮುಖ್ಯಮಂತ್ರಿಗೆ ಮನವಿ ಮಾಡಿದ್ದಾರೆ.

ಸಿದ್ದರಾಮಯ್ಯ ಅವರನ್ನು ಶುಕ್ರವಾರ ಭೇಟಿ ಮಾಡಿ ಚರ್ಚೆ ನಡೆಸಿದ ಅವರು, ಹಲವು ಸಲಹೆಗಳನ್ನು ನೀಡಿದ್ದಾರೆ.

ಕೇಂದ್ರೀಯ ಶಾಲೆಗಳ ಪದ್ಧತಿ ಅನುಸರಿಸಲು ಗಣೇಶ್ ಭಟ್ ನೇತೃತ್ವದ ಸಮಿತಿ ಮಾಡಿದ್ದ ಶಿಫಾರಸಿನಂತೆ ಶಾಲಾ ಶಿಕ್ಷಣ ಇಲಾಖೆ ಪರೀಕ್ಷಾ ಪದ್ಧತಿಯಲ್ಲಿ ಬದಲಾವಣೆ ತಂದಿದೆ. ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯನ್ನು (ಎನ್‌ಇಪಿ) ತಿರಸ್ಕರಿಸಿ, ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ಅಳವಡಿಕೆಗೆ ಸಿದ್ಧತೆ ನಡೆದಿದೆ. ಈಗ ಕೇಂದ್ರೀಯ ಶಾಲಾ ಪರೀಕ್ಷಾ ಮಾದರಿ ಅನುಸರಿಸುವುದು ಒಂದು ತಾತ್ವಿಕ ವಿಪರ್ಯಾಸ. ಎನ್‌ಸಿಇಆರ್‌ಟಿ ಮಾದರಿಯಲ್ಲೇ ಪಠ್ಯಪುಸ್ತಕಗಳು ಇರಬೇಕು ಎನ್ನುವುದು ಸಾಕಾರಗೊಳ್ಳುವುದಾದರೆ ಎನ್‌ಇಪಿ ತಿರಸ್ಕರಿಸುವ ಅಗತ್ಯವೇ ಇರಲಿಲ್ಲ. ಶಾಲಾ ಶಿಕ್ಷಣ ಇಲಾಖೆ ಸರ್ಕಾರದ ನಿಲುವನ್ನು ಉಲ್ಲಂಘಿಸಿ ರಾಜ್ಯದ ಶೈಕ್ಷಣಿಕ ಸ್ವಾಯತ್ತತೆಗೆ ಧಕ್ಕೆ ತಂದಿದೆ ಎಂದು ಬರಗೂರು ದೂರಿದ್ದಾರೆ.

ಮುಖ್ಯಾಂಶಗಳು

- 'ಹೊಸ ಪದ್ಧತಿ' ಶಿಕ್ಷಣ ಗುಣಮಟ್ಟಕ್ಕೆ ಮಾರಕ
- ಲಿಖಿತ ಪರೀಕ್ಷಾ ಅಂಕಗಳಿಗೆ ಆದ್ಯತೆಗೆ ಸಲಹೆ
- ಮುಖ್ಯಮಂತ್ರಿಯವರ ಮಧ್ಯಪ್ರವೇಶಕ್ಕೆ ಆಗ್ರಹ

ಮೊದಲಿದ್ದ ಪರೀಕ್ಷಾ ಪದ್ಧತಿಯ ದೋಷಗಳು ಏನು ಎನ್ನುವುದನ್ನು ಖಚಿತಪಡಿಸದೆ ಅಥವಾ ದೋಷಗಳು ಇಲ್ಲದಿದ್ದರೂ ಹೊಸ ಪರೀಕ್ಷಾ ಪದ್ಧತಿ ಅಳವಡಿಸಿಕೊಳ್ಳಲಾಗಿದೆ. ಆಂತರಿಕ ಮೌಲ್ಯಮಾಪನದ 20 ಅಂಕಗಳೂ ಸೇರಿ ಪ್ರತಿ ವಿಷಯದಲ್ಲಿ 33 ಅಂಕ ಗಳಿಸಿದರೆ ತೇರ್ಗಡೆ ಮಾಡುವ ಕ್ರಮ ಶಿಕ್ಷಣದ ಗುಣಮಟ್ಟಕ್ಕೆ ಮಾರಕವಾಗುತ್ತದೆ. ಆಂತರಿಕ ಮೌಲ್ಯಮಾಪನದಲ್ಲಿ ವಿದ್ಯಾರ್ಥಿಗೆ ಒಂದು ವಿಷಯದಲ್ಲಿ 20ಕ್ಕೆ 20 ಅಂಕ ನೀಡಿದರೆ ಆ ವಿದ್ಯಾರ್ಥಿ ಮುಖ್ಯ ಪರೀಕ್ಷೆಯಲ್ಲಿ ಕೇವಲ 13 ಅಂಕ ಪಡೆದರೂ ಸಾಕು. ಇದುವರೆಗಿನ ಆಂತರಿಕ ಅಂಕಗಳನ್ನು ಪರಿಶೀಲಿಸಿದರೆ ಯಾವ ವಿದ್ಯಾರ್ಥಿಯೂ 18ಕ್ಕಿಂತ ಕಡಿಮೆ ಪಡೆದಿಲ್ಲ. ಇದು ಅವೈಜ್ಞಾನಿಕ ಕ್ರಮ. ಆಂತರಿಕ ಅಂಕಗಳನ್ನು 10 ಅಥವಾ ಅದಕ್ಕಿಂತ ಕಡಿಮೆ ನಿಗದಿ ಮಾಡಬೇಕು. ಲಿಖಿತ ಪರೀಕ್ಷಾ ಅಂಕಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದ್ದಾರೆ.


ಬರಗೂರು ರಾಮಚಂದ್ರಪ್ಪ

ಯಾವ ಯಾವ ಪಾಠಗಳಲ್ಲಿ ಎಷ್ಟು ಅಂಕಗಳಿಗೆ ಎಷ್ಟು ಪ್ರಶ್ನೆಗಳನ್ನು ಕೇಳಬೇಕು ಎಂದು ಶಾಲಾ ಶಿಕ್ಷಣ ಇಲಾಖೆಯೇ ಪಟ್ಟಿ ನೀಡಿದೆ. ಪಾಠ ಮಾಡುವ ಶಿಕ್ಷಕರಿಗೆ ಇರಬೇಕಾದ ಪ್ರಶ್ನೆ ಕೇಳುವ ಸ್ವಾತಂತ್ರ್ಯವನ್ನೂ ಮೊಟಕುಗೊಳಿಸಲಾಗಿದೆ. ಇಂತಹದ್ದೆ ಪ್ರಶ್ನೆ ಎಂದು ಪೂರ್ವ ನಿರ್ಧಾರ ಮಾಡಿ ಶಿಕ್ಷಕರನ್ನು ಅಷ್ಟಕ್ಕೆ ಸೀಮಿತಗೊಳಿಸಿ ಪಾಠ ಮಾಡುವ ಸೌಲಭ್ಯ ಕಲ್ಪಿಸಲಾಗಿದೆ. ಪೂರ್ಣ ಬೋಧನೆಗೆ ಇತಿಶ್ರೀ ಹಾಡಲಾಗಿದೆ. ಪಾಠಾಧಾರಿತ ಮೌಲ್ಯಾಂಕನದ ಪ್ರಕಾರ ಎಲ್ಲ ವಿಷಯಗಳನ್ನೂ ಸೇರಿಸಿ ಒಂದು ವರ್ಷದಲ್ಲಿ 100ಕ್ಕೂ ಹೆಚ್ಚು ಕಿರು ಪರೀಕ್ಷೆಗಳನ್ನು ನಡೆಸಬೇಕಾಗುತ್ತದೆ. ಪಠ್ಯೇತರ ಚಟುವಟಿಕೆಗಳಿಗೆ ಆದ್ಯತೆ ನೀಡಿಲ್ಲ ಎಂದು ದೂರಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ವಿಷಯದಲ್ಲಿ ಮಧ್ಯಪ್ರವೇಶಿಸಬೇಕು. ಶಿಕ್ಷಣಾಸಕ್ತರ ಜತೆ ಸಮಾಲೋಚನೆ ಮಾಡಬೇಕು. ಸಂಪುಟ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಸಬೇಕು. ನಿರ್ದಿಷ್ಟ ನಿರ್ಧಾರಕ್ಕೆ ಬರುವವರೆಗೆ ಹೊಸ ಪ್ರಯೋಗಗಳಿಗೆ ಮುಂದಾಗಬಾರದು ಎಂದು ಒತ್ತಾಯಿಸಿದ್ದಾರೆ.

ವಿ.ವಿ: ಬಸವಣ್ಣ, ಕನಕ, ಅರಸ್, ಒಡೆಯರ್ ಹೆಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಿಗೆ ಸಾಂಸ್ಕೃತಿಕ ನಾಯಕರ ಹೆಸರಿಡಲು ಸೂಕ್ತ ಪ್ರಸ್ತಾವನೆ ಸಲ್ಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚಿಸಿದ್ದಾರೆ.

ಈ ಕುರಿತು ಮುಖ್ಯಕಾರ್ಯದರ್ಶಿಗೆ ಸೂಚನೆ ನೀಡಿರುವ ಅವರು, 'ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣ, ಶೂದ್ರ ಸಿದ್ಧಾಂತದ ಹರಿಕಾರ ಕನಕದಾಸ, ಹಿಂದುಳಿದ ಸಮುದಾಯಗಳಿಗೆ ಚೈತನ್ಯ ನೀಡಿ ರಾಜ್ಯದ ಅಭಿವೃದ್ಧಿಗೆ ಚಲನಶೀಲತೆ ತಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ದೇವರಾಜ ಅರಸು ಅವರ ಹೆಸರುಗಳನ್ನು ವಿಶ್ವವಿದ್ಯಾಲಯಗಳಿಗೆ ನಾಮಕರಣ ಮಾಡುವ ಕುರಿತು ಪ್ರಸ್ತಾವನೆ ಸಲ್ಲಿಸಿ' ಎಂದು ನಿರ್ದೇಶನ ನೀಡಿದ್ದಾರೆ.

ಈ ಕುರಿತು ಪರಿಶೀಲಿಸಿ, ಸೂಕ್ತ ಪ್ರಸ್ತಾವನೆಯನ್ನು ಮುಂದಿನ ಸಚಿವ ಸಂಪುಟದ ಮುಂದೆ ತರುವಂತೆಯೂ ಅವರು ಸೂಚಿಸಿದ್ದಾರೆ.

ಆದಿಕವಿ ಮಹರ್ಷಿ ವಾಲ್ಮೀಕಿ, ಅಕ್ಕಮಹಾದೇವಿ, ರಾಣಿ ಚನ್ನಮ್ಮ, ಕೃಷ್ಣದೇವರಾಯ, ಕುವೆಂಪು, ವಿಶ್ವೇಶ್ವರಯ್ಯ, ಗಂಗೂಬಾಯಿ ಹಾನಗಲ್, ರಾಜೀವ್‌ಗಾಂಧಿ ಹಾಗೂ ಮನಮೋಹನ ಸಿಂಗ್ ಅವರ ಹೆಸರನ್ನು ಈಗಾಗಲೇ ವಿವಿಧ ವಿಶ್ವವಿದ್ಯಾಲಯಗಳಿಗೆ ನಾಮಕರಣ ಮಾಡಲಾಗಿದೆ ಎಂದೂ ಅವರು ಟಿಪ್ಪಣಿಯಲ್ಲಿ ಉಲ್ಲೇಖಿಸಿದ್ದಾರೆ.

ಉತ್ತರ ಉಪವಿಭಾಗಾಧಿಕಾರಿ ಚಳಿ ಬಿಡಿಸಿದ ಕೃಷ್ಣ ಬೈರೇಗೌಡ


'ಎಷ್ಟು ಏಜೆಂಟರನ್ನು ಇಟ್ಟುಕೊಂಡಿದ್ದೀರಿ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಮಗೆ ಎಷ್ಟು ಜನ ಏಜೆಂಟ್ ಇದ್ದಾರೆ. ಅವರಲ್ಲಿ ಅಧಿಕೃತ ಯಾರು ಎಂಬ ಬೋರ್ಡ್ ಹಾಕಿಸಿಬಿಡಿ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಅಧಿಕಾರಿಯ ಮೇಲೆ ಕೆಂಡಾಮಂಡಲರಾದ ಘಟನೆ ನಡೆದಿದೆ.

ಉಪವಿಭಾಗಾಧಿಕಾರಿ ನ್ಯಾಯಾಲಯ ಗಳಲ್ಲಿ ಬಾಕಿ ಇರುವ ಪ್ರಕರಣಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು ಬೆಂಗಳೂರು ಉತ್ತರ ವಿಭಾಗದ ಉಪವಿಭಾಗಾಧಿಕಾರಿ ಕಿರಣ್ ಅವರನ್ನು ತರಾಟೆಗೆ ತೆಗೆದುಕೊಂಡರು.

'ಜನರು ತಮ್ಮ ಕೆಲಸಗಳಿಗೆ ಏಜೆಂಟರನ್ನೇ ಭೇಟಿಯಾಗಲಿ ಬಿಡಿ. ನೀವು ನನಗೇ ಸಿಗಲ್ಲ ಎಂದರೆ ಜನರ ಕಥೆ ಏನು? ಜನ ಯಾರನ್ನು ಸಂಪರ್ಕಿಸಬೇಕು? ನಮ್ಮ ಕಚೇರಿಯಲ್ಲಿ ಯಾವ ಏಜೆಂಟ್ ಅನ್ನು ಸಂಪರ್ಕಿಸಬೇಕು ಎನ್ನುವುದು ನಮ್ಮ ಆಫೀಸ್‌ನಲ್ಲಿ ಇರುವವರಿಗೇ ಗೊತ್ತಿಲ್ಲ. ನೀವು ದೂರವಾಣಿ ಕರೆಗೂ ಸಿಗುವುದಿಲ್ಲ. ವೈಯಕ್ತಿಕವಾಗಿಯೂ ಸಿಗುವುದಿಲ್ಲ. ನೀವು ಆಫೀಸ್‌ನಲ್ಲಿ ಇರಲ್ಲ. ಕೋರ್ಟ್ ನಡೆಸಿ ಕೈಗೆ ಸಿಗದೆ ಹಿಂದಿನ ಬಾಗಿಲಿನಿಂದ ಹೋಗುತ್ತೀರಿ. ಆದ್ದರಿಂದ ಯಾರನ್ನಾದರೂ ಇಟ್ಟು ಬಿಡಿ.' ಎಂದರು.


ಕೃಷ್ಣ ಬೈರೇಗೌಡ

'ನಮ್ಮ ಮಾತು ಹಾಗಿರಲಿ ಜನರನ್ನು ಎದುರಿಸಲು ನೀವು ತಯಾರಿಲ್ಲ. ಅವರಿಗೆ ಉತ್ತರ ಕೊಡುವುದಿಲ್ಲ. ಒಬ್ಬರು ಅಲ್ಲದಿದ್ದರೆ 2–3 ಏಜೆಂಟರನ್ನಾದರೂ ಇಟ್ಟುಕೊಳ್ಳಿ. ಕಳೆದ ಎರಡೂವರೆ ತಿಂಗಳಿನಲ್ಲಿ 1,730 ಪ್ರಕರಣಗಳಲ್ಲಿ 30 ಪ್ರಕರಣಗಳನ್ನು ಇತ್ಯರ್ಥ ಮಾಡಿದ್ದೀರಿ. ನಿಜವಾಗಿಯೂ ನಿಮಗೆ ಜನರ ಬಗ್ಗೆ ಕಾಳಜಿ ಇದೆಯೇ. ಸುಮ್ಮನೆ ಮಾತನಾಡಿ ಸಮಯ ವ್ಯರ್ಥ ಮಾಡುವುದು ಬೇಡ. ನಿಮ್ಮನ್ನು ಅವಮಾನಿಸಿ ನನಗೆ ಏನೂ ಸಿಗುವುದಿಲ್ಲ. ಜನರ ಕೆಲಸ ಆಗಬೇಕು ಅಷ್ಟೇ' ಎಂದು ಹೇಳಿದರು.

ಕಟ್ಟಡ ನಕ್ಷೆ: ಶೇ 15ರಷ್ಟು ಉಲ್ಲಂಘನೆ ಸಕ್ರಮ

ಬೆಂಗಳೂರು: ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ (ಬೆಂಗಳೂರು ಹೊರತುಪಡಿಸಿ) ಕಟ್ಟಡ ನಿರ್ಮಾಣ ಪರವಾನಗಿಯ (ನಕ್ಷೆ) ಶೇ 15ರವರೆಗಿನ ಉಲ್ಲಂಘನೆಯನ್ನು ಸಕ್ರಮ ಮಾಡಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಕರ್ನಾಟಕ ಮಹಾನಗರ ಪಾಲಿಕೆ (ತಿದ್ದುಪಡಿ) ಕಾಯ್ದೆ 2025ರ ಕಲಂ 299–ಎಬಿ (2)(ಐ) ಹಾಗೂ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ಕಾಯ್ದೆ 2025ರ ಕಲಂ 187 (1–ಎ) ಯಂತೆ ಕಟ್ಟಡ ನಕ್ಷೆ ಉಲ್ಲಂಘನೆಗೆ ದಂಡ ವಿಧಿಸಿ, ಪರಿಷ್ಕೃತ ನಕ್ಷೆ ನೀಡಲಾಗುತ್ತದೆ. ಮಂಜೂರಾದ ಕಟ್ಟಡ ನಕ್ಷೆಯಲ್ಲಿ ಸೆಟ್‌ಬ್ಯಾಕ್/ಕವರೇಜ್‌ನಲ್ಲಿ ಶೇ 15 ರಷ್ಟು ಉಲ್ಲಂಘಿಸಿದವರಿಗೆ ಪ್ರತಿ ಚ.ಮೀಗೆ ದಂಡ ಶುಲ್ಕ ನಿಗದಿ ಮಾಡಲಾಗಿದೆ. ಕಟ್ಟಡಗಳ ಉಲ್ಲಂಘನೆ ಪರಿಗಣಿಸಿ, ದಂಡ ಪಡೆದು ಪರಿಷ್ಕೃತ ನಕ್ಷೆ ನೀಡಬಹುದು. ಕಟ್ಟಡ ನಕ್ಷೆ ಪಡೆದು ಎಫ್‌ಎಆರ್ ಮತ್ತು ಕಾರ್ ಪಾರ್ಕಿಂಗ್ ಪ್ರದೇಶ ಉಲ್ಲಂಘನೆ ಶೇ 5ರ ಮಿತಿಯಲ್ಲಿದ್ದರೆ ಅದಕ್ಕೂ ದಂಡ ವಿಧಿಸಿ, ಪರಿಷ್ಕೃತ ನಕ್ಷೆ ನೀಡಬಹುದು ಎಂದು ಸೂಚಿಸಲಾಗಿದೆ.

ಎಫ್‌ಎಆರ್/ ಕಾರು ಪಾರ್ಕಿಂಗ್

ಸ್ಥಳೀಯ ಸಂಸ್ಥೆ	ಕಾರ್ ಪಾರ್ಕಿಂಗ್ ಒಂದಕ್ಕೆ ದಂಡ	ಎಫ್‌ಎಆರ್ ಉಲ್ಲಂಘನೆ ಪ್ರತಿ ಚ.ಮೀ.	
		ವಸತಿ/ಕೈಗಾರಿಕೆ/ಇತರೆ	ವಾಣಿಜ್ಯ ಕಟ್ಟಡ
ಪಟ್ಟಣ ಪಂಚಾಯಿತಿ	₹5,000	₹1,000	₹1,500
ಪುರಸಭೆ		₹1,200	₹1,800
ನಗರಸಭೆ		₹1,500	₹2,250
ಮಹಾನಗರ ಪಾಲಿಕೆ		₹2,000	₹3,000

ಸೆಟ್‌ಬ್ಯಾಕ್/ ಕವರೇಜ್ ಉಲ್ಲಂಘನೆ

ಸ್ಥಳೀಯ ಸಂಸ್ಥೆ	ಪ್ರತಿ ಚದರ ಮೀಟರ್‌ಗೆ ದಂಡ	
	ವಸತಿ/ಕೈಗಾರಿಕೆ/ಇತರೆ	ವಾಣಿಜ್ಯ ಕಟ್ಟಡ
ಪಟ್ಟಣ ಪಂಚಾಯಿತಿ	₹1,000	₹1,500
ಪುರಸಭೆ	₹1,200	₹1,800
ನಗರಸಭೆ	₹1,500	₹2,250
ಮಹಾನಗರ ಪಾಲಿಕೆ	₹2,000	₹3,000

ಅರಣ್ಯ: ಭೂ ಮಂಜೂರಾತಿಗೆ ಭಂಗ

ಒಂದನೇ ಪುಟದಿಂದ...

ಡಿಸಿಎಫ್‌ಗಳಿಗೆ ಹೊಣೆ: ಕಂದಾಯ ಇಲಾಖೆ ವ್ಯಕ್ತಿ, ಸಂಸ್ಥೆಗಳಿಗೆ ಮಂಜೂರು ಮಾಡಿದ ಭೂಮಿಯ ವಿವರ, ದಾಖಲೆ ಪಟ್ಟಿಯನ್ನು ಆಯಾ ಕಾರ್ಯವ್ಯಾಪ್ತಿಯ ಡಿಸಿಎಫ್ ವಿಶೇಷ ತನಿಖಾ ತಂಡಕ್ಕೆ ಒದಗಿಸಬೇಕು. ಪಟ್ಟಿಯಲ್ಲಿನ ಮಾಹಿತಿಯನ್ನು ತನಿಖಾ ತಂಡಗಳು ಪರಿಶೀಲನೆಗೆ ಮಾತ್ರ ಬಳಸಬೇಕು. ಆ ಪಟ್ಟಿಯೇ ಅಂತಿಮ ಎಂದು ತೀರ್ಮಾನಿಸಬಾರದು. ಎಲ್ಲ ವಿವರ ಒಳಗೊಂಡ ಅಂತಿಮ ಪಟ್ಟಿ ಸಿದ್ಧಪಡಿಸಿ, ಸೂಕ್ತ ಶಿಫಾರಸು ಮಾಡಬೇಕು. ಜಿಲ್ಲಾ ತನಿಖಾ ತಂಡಗಳು ತಿಂಗಳಿಗೆ ಎರಡು ಬಾರಿ ಸಭೆ ನಡೆಸಬೇಕು. ಈ ಎಲ್ಲ ಕಾರ್ಯಗಳನ್ನು 2 ಹಂತಗಳಲ್ಲಿ ಪೂರ್ಣಗೊಳಿಸಬೇಕು.4 ತಿಂಗಳ ಒಳಗೆ ಸಲ್ಲಿಸಬೇಕು ಎನ್ನಲಾಗಿದೆ.

'ಹೆಚ್ಚಿದ ಅತ್ಯಾಚಾರ ಪ್ರಕರಣಗಳು'

1,800 ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ: ಶೋಭಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ 1,800 ಕ್ಕೂ ಹೆಚ್ಚು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ, ಅತ್ಯಾಚಾರಗಳು ನಡೆದಿವೆ. ಆದರೆ, ಸರ್ಕಾರ ಮಾತ್ರ ಮಹಿಳೆಯ ರಕ್ಷಣೆಯ ಬಗ್ಗೆ ಮೌನವಹಿಸಿದೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಕಚೇರಿಯಲ್ಲಿ ಶುಕ್ರವಾರ 'ಕಿಲ್ಲರ್ ಕಾಂಗ್ರೆಸ್ ಸರ್ಕಾರ' ಎಂಬ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಮುಖ್ಯಮಂತ್ರಿಯವರ ತವರು ಮೈಸೂರಿನಲ್ಲಿ ದಸರಾ ವೇಳೆ ಬಲೂನ್ ಮಾರುವ ಬಾಲಕಿಯ ಮೇಲೆ ಅತ್ಯಾಚಾರ ನಡೆಸಿ, ಹತ್ಯೆ ಮಾಡಿರುವ ಹೇಯ ಘಟನೆ ನಡೆದಿದೆ. ಸರ್ಕಾರಕ್ಕೆ ಸಂವೇದನೆಯೇ ಇಲ್ಲ ಎಂದು ದೂರಿದರು.

ಹುಬ್ಬಳ್ಳಿಯಲ್ಲಿ ನೇಹಾ ಹತ್ಯೆ, ಬೆಳಗಾವಿ ಅಧಿವೇಶನದ ಸಂದರ್ಭ ಮಹಿಳೆಯನ್ನು ವಿವಸ್ತ್ರಗೊಳಿಸಿ ದೌರ್ಜನ್ಯ, ಮೂಡುಬಿದಿರೆಯ ಉಪನ್ಯಾಸಕ ವಿದ್ಯಾರ್ಥಿಯನ್ನು ಬೆಂಗಳೂರಿಗೆ ಕರೆತಂದು ಅತ್ಯಾಚಾರ ಎಸಗಿದ ಘಟನೆಗಳು ನಾಡನ್ನು ತಲ್ಲಣಗೊಳಿಸಿವೆ. ಸರ್ಕಾರದಲ್ಲಿ ಯಾರು ಮುಖ್ಯಮಂತ್ರಿ ಆಗಬೇಕು, ಯಾರು ಉಪ ಮುಖ್ಯಮಂತ್ರಿ ಮತ್ತು ಸಚಿವಗಿರಿ ಉಳಿಸಿಕೊಳ್ಳಬೇಕು ಎಂಬ ಗುದ್ದಾಟದಲ್ಲಿ ತೊಡಗಿದ್ದಾರೆ ಎಂದು ಶೋಭಾ ಆರೋಪಿಸಿದರು.

'ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 20ಕ್ಕೂ ಹೆಚ್ಚು ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 15 ಕ್ಕೂ ಹೆಚ್ಚು ಗುತ್ತಿಗೆದಾರರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಸಾರ್ವಜನಿಕರ ಪ್ರಾಣಗಳಿಗೆ ಯಾರು ಗ್ಯಾರಂಟಿ?' ಎಂದು ಪ್ರಶ್ನಿಸಿದರು. 'ಬೆಂಗಳೂರಿನಲ್ಲಿ ಸ್ಕೂಟರ್‌ನಲ್ಲಿ ಹೊರಟವರು ಮನೆಗೆ ವಾಪಸ್ ಬರುತ್ತಾರೆ ಎಂಬ ಗ್ಯಾರಂಟಿ ಇಲ್ಲ. ರಸ್ತೆ ಗುಂಡಿಯಲ್ಲಿ ಬಿದ್ದು ಸಾಯುತ್ತಿದ್ದಾರೆ. ಯಾರನ್ನೋ ಧರ್ಮದ ಆಧಾರದಲ್ಲಿ, ಇನ್ನು ಯಾರನ್ನೊ ಜಾತಿ ಆಧಾರದಲ್ಲಿ ರಕ್ಷಿಸುವ ಮೂಲಕ ಪೊಲೀಸ್ ಇಲಾಖೆ ಹೆಸರನ್ನು ಕೆಡಿಸಿದ್ದೀರಿ' ಎಂದು ಅವರು ಕಿಡಿಕಾರಿದರು.

ಮುಖ್ಯಮಂತ್ರಿ ಪುತ್ರನಿಂದಲೇ ಭ್ರಷ್ಟಾಚಾರ: ಸಚಿವೆ ಶೋಭಾ

'ಮುಖ್ಯಮಂತ್ರಿಯವರ ಮನೆಯಿಂದಲೇ ಅವರ ಮೂಗಿನ ನೇರಕ್ಕೆ ಭ್ರಷ್ಟಾಚಾರ ನಡೆಯುತ್ತಿದೆ. ಮುಖ್ಯಮಂತ್ರಿ ಪುತ್ರ ಹಾಗೂ ವಿಧಾನಪರಿಷತ್ ಸದಸ್ಯ ಯತೀಂದ್ರ ಅವರು ಲಂಚ ತೆಗೆದುಕೊಂಡೇ ಕೆಲಸ ಮಾಡಿಕೊಡುತ್ತಿದ್ದಾರೆ' ಎಂದು ಶೋಭಾ ಕರಂದ್ಲಾಜೆ ಆರೋಪಿಸಿದರು.

'ವ್ಯಕ್ತಿಯೊಬ್ಬರು ತಮ್ಮ ಮಗಳ ಶವಪರೀಕ್ಷೆಗೂ ಲಂಚ ಕೊಡಬೇಕಾಯಿತು. ಈ ಘಟನೆಯಿಂದ ರಾಷ್ಟ್ರ ಮಟ್ಟದಲ್ಲಿ ರಾಜ್ಯದ ಮಾನ ಹರಾಜಾಗಿದೆ' ಎಂದರು.

1 ಕೋಟಿ ಉದ್ಯೋಗ, ಉಚಿತ ಶಿಕ್ಷಣ

ಬಿಹಾರ ವಿಧಾನಸಭಾ ಚುನಾವಣೆ: ಎನ್‌ಡಿಎ ಪ್ರಣಾಳಿಕೆಯಲ್ಲಿ ಹಲವು ಭರವಸೆ

ಪಟ್ನಾ (ಪಿಟಿಐ): ಬಿಹಾರದಲ್ಲಿ ಮತ್ತೆ ಅಧಿಕಾರಕ್ಕೇರುವ ಪ್ರಯತ್ನದಲ್ಲಿರುವ ಎನ್‌ಡಿಎ ಮೈತ್ರಿಕೂಟವು ಶುಕ್ರವಾರ ತನ್ನ ಪ್ರಣಾಳಿಕೆ ಬಿಡುಗಡೆ ಮಾಡಿದ್ದು, ಒಂದು ಕೋಟಿ ಉದ್ಯೋಗ ಸೃಷ್ಟಿ ಮತ್ತು 'ಲಖ್‌ಪತಿ ದೀದಿ' ಯೋಜನೆಯಡಿ ಒಂದು ಕೋಟಿ ಮಹಿಳೆಯರಿಗೆ ತರಬೇತಿ ಸೇರಿದಂತೆ ಹಲವು ಭರವಸೆ ನೀಡಿದೆ.

ರಾಜ್ಯದ ನಾಲ್ಕು ನಗರಗಳಲ್ಲಿ ಮೆಟ್ರೊ ರೈಲು ಸೇವೆ ಆರಂಭಿಸುವುದು ಮತ್ತು ಏಳು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ನಿರ್ಮಾಣ ಮಾಡುವ ಘೋಷಣೆ ಮಾಡಲಾಗಿದೆ.

ಏಳು ಎಕ್ಸ್‌ಪ್ರೆಸ್‌ವೇಗಳ ನಿರ್ಮಾಣ, 10 ಕೈಗಾರಿಕಾ ಪಾರ್ಕ್‌ಗಳ ಅಭಿವೃದ್ಧಿ, ಬಡ ಕುಟುಂಬಗಳ ಮಕ್ಕಳಿಗೆ ಕೆ.ಜಿಯಿಂದ ಪಿ.ಜಿವರೆಗೆ ಉಚಿತ ಶಿಕ್ಷಣ ಹಾಗೂ ಉನ್ನತ ಶಿಕ್ಷಣ ಪಡೆಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳಿಗೆ ತಿಂಗಳಿಗೆ ₹2000 ನೆರವು ನೀಡುವುದಾಗಿ ಪ್ರಕಟಿಸಿದೆ.

ಪ್ರಣಾಳಿಕೆ ಬಿಡುಗಡೆಯಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್, ಡಿಸಿಎಂ ಸಾಮ್ರಾಟ್ ಚೌಧರಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಸಚಿವರಾದ ಧರ್ಮೇಂದ್ರ ಪ್ರಧಾನ್, ಜಿತನ್ ರಾಮ್ ಮಾಂಝಿ, ಚಿರಾಗ್ ಪಾಸ್ವಾನ್, ಜೆಡಿಯು ಕಾರ್ಯಾಧ್ಯಕ್ಷ ಸಂಜಯ್ ಝಾ ಪಾಲ್ಗೊಂಡರು.

'ಸರ್ಕಾರಿ ಉದ್ಯೋಗಗಳು ಸೇರಿದಂತೆ ಒಂದು ಕೋಟಿಗೂ ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸಲಾಗುವುದು. ಪ್ರತಿ ಜಿಲ್ಲೆಯಲ್ಲೂ ಮೆಗಾ ಕೌಶಲ ಕೇಂದ್ರವನ್ನು ಸ್ಥಾಪಿಸಲಾಗುವುದು' ಎಂದು ಸಾಮ್ರಾಟ್ ಚೌಧರಿ ಹೇಳಿದರು.

ಮಹಿಳೆಯರ ಅಭಿವೃದ್ಧಿ ಮತ್ತು ಸ್ವಾವಲಂಬನೆಗಾಗಿ ಮುಖ್ಯಮಂತ್ರಿ ಮಹಿಳಾ ಉದ್ಯೋಗ ಯೋಜನೆಯಡಿ ₹2 ಲಕ್ಷದವರೆಗೆ ನೆರವು ನೀಡಲಾಗುವುದು ಎಂದು ತಿಳಿಸಿದರು.



ಪ್ರಣಾಳಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ (ಎಡದಿಂದ) ಚಿರಾಗ್ ಪಾಸ್ವಾನ್, ಸಂಜಯ್ ಝಾ, ನಿತೀಶ್ ಕುಮಾರ್, ಜೆ.ಪಿ.ನಡ್ಡಾ ಮತ್ತು ಜಿತನ್ ರಾಮ್ ಮಾಂಝಿ ಪಾಲ್ಗೊಂಡರು ಪಿಟಿಐ ಚಿತ್ರ

ಸುಳ್ಳಿನ ಸರಮಾಲೆ: ಕಾಂಗ್ರೆಸ್

ಎನ್‌ಡಿಎ ಪ್ರಣಾಳಿಕೆಯನ್ನು 'ಸುಳ್ಳಿನ ಸರಮಾಲೆ' ಎಂದು ಕಾಂಗ್ರೆಸ್ ಟೀಕಿಸಿದ್ದು, ಪ್ರಣಾಳಿಕೆ ಬಿಡುಗಡೆ ಮಾಡುವ ಪ್ರಕ್ರಿಯೆಯನ್ನು ಪತ್ರಕರ್ತರಿಗೆ ಹೆದರಿ ಕೇವಲ 26 ಸೆಕೆಂಡುಗಳಲ್ಲಿ ಮುಗಿಸಲಾಗಿದೆ ಎಂದು ವ್ಯಂಗ್ಯವಾಡಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ನಾಯಕ ಅಶೋಕ್ ಗೆಹಲೋತ್, 'ತಮ್ಮ ಆಡಳಿತದ ಬಗ್ಗೆ ವರದಿಗಾರರು ಕೇಳಬಹುದಾದ ಪ್ರಶ್ನೆಗಳಿಗೆ ಹೆದರಿ ಅವರು ಸುದ್ದಿಗೋಷ್ಠಿ ಬೇಗನೇ ಕೊನೆಗೊಳಿಸಿದ್ದಾರೆ' ಎಂದರು.

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ಘೋಷಣೆಗಳು...

- ಸೀತಾಮಢಿ ಜಿಲ್ಲೆಯಲ್ಲಿರುವ ಸೀತಾ ಮಾತೆಯ ಜನ್ಮಸ್ಥಳವನ್ನು ವಿಶ್ವದರ್ಜೆಯ ಆಧ್ಯಾತ್ಮಿಕ ತಾಣವಾಗಿ ಅಭಿವೃದ್ಧಿಪಡಿಸಿ, 'ಸೀತಾಪುರ' ಎಂದು ನಾಮಕರಣ ಮಾಡುವುದು
- ರಾಜ್ಯದ ಎಲ್ಲಾ ವಲಯಗಳಲ್ಲಿ 'ಬಿಹಾರ ಸ್ಪೋರ್ಟ್ಸ್ ಸಿಟಿ ಮತ್ತು ಸೆಂಟರ್ ಆಫ್ ಎಕ್ಸಲೆನ್ಸ್ ಫಾರ್ ಸ್ಪೋರ್ಟ್ಸ್' ಕೇಂದ್ರಗಳ ಸ್ಥಾಪನೆ

ವಿದ್ಯಾಗೆ ರೋಹಿಣಿ ನಯ್ಯರ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಾರಾಷ್ಟ್ರದ ಪುಣೆಯ ಯುವ ಉದ್ಯಮಿ ವಿದ್ಯಾ ಪರಶುರಾಮ್ಕರ್ ಅವರಿಗೆ 'ರೋಹಿಣಿ ನಯ್ಯರ್ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ರೋಹಿಣಿ ನಯ್ಯರ್ ಪ್ರತಿಷ್ಠಾನದ ಆಶ್ರಯದಲ್ಲಿ ಇಲ್ಲಿನ ಇಂಡಿಯಾ ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ, ಪ್ರಧಾನಮಂತ್ರಿಯವರ ಆರ್ಥಿಕ ಸಲಹಾ ಮಂಡಳಿಯ ಮುಖ್ಯಸ್ಥ ಪ್ರೊ. ಎಸ್. ಮಹೇಂದ್ರ ದೇವ್ ಪ್ರಶಸ್ತಿ ಪ್ರದಾನ ಮಾಡಿದರು. ಗ್ರಾಮೀಣ ಅಭಿವೃದ್ಧಿ ಕ್ಷೇತ್ರದಲ್ಲಿ ಮಾಡಿರುವ ಅನುಪಮ ಸೇವೆಗಾಗಿ ನೀಡುವ ಈ ಪ್ರಶಸ್ತಿಯು ₹10 ಲಕ್ಷ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

24ರ ಹರೆಯದ ವಿದ್ಯಾ ಅವರು ಖರಗ್‌ಪುರದ ಐಐಟಿಯ ಎಂ.ಟೆಕ್ (ಆಹಾರ ತಂತ್ರಜ್ಞಾನ) ಪದವೀಧರೆ. ಅವರು 'ಆಗ್ರೋಝೀ ಆರ್ಗಾನಿಕ್ಸ್–ಮಿಲೆಟ್ಸ್ ನೌ' ಕಂಪನಿಯ ಸಹ ಸಂಸ್ಥಾಪಕಿ.

ವಿಜ್ಞಾನ ಹಾಗೂ ಉದ್ಯಮದ ಮೂಲಕ ಗ್ರಾಮೀಣ ಭಾರತದಲ್ಲಿ ಪರಿವರ್ತನೆ ತರಬೇಕು ಎಂಬ ಸಂಕಲ್ಪದಿಂದ ಈ ಉದ್ಯಮ ಆರಂಭಿಸಿದರು. ಗ್ರಾಮೀಣಾಭಿವೃದ್ಧಿ, ಮಹಿಳಾ ಸಬಲೀಕರಣ ಹಾಗೂ ಪೌಷ್ಟಿಕಾಂಶಯುಕ್ತ ಆಹಾರ ಒದಗಿಸಲು ಈ ಕಂಪನಿ ಉತ್ತಮ ಕೊಡುಗೆ ನೀಡುತ್ತಿದೆ. ಕಂಪನಿಯು ಪೌಷ್ಟಿಕಾಂಶವರ್ಧಿತ, ಜೈವಿಕ ಬಲವರ್ಧಿತ ರಾಗಿಯ ಆಹಾರ ಉತ್ಪನ್ನಗಳನ್ನು ತಯಾರಿಸುತ್ತಿದೆ. ರಾಗಿಯಿಂದ ತಯಾರಿಸಿದ ಲಡ್ಡುಗಳು, ಕುಕೀಸ್ ಮತ್ತಿತರ ಉತ್ಪನ್ನಗಳನ್ನು ಶಾಲೆಗಳಿಗೆ ಒದಗಿಸಲಾಗುತ್ತಿದೆ. 7 ಸಾವಿರ ಸಣ್ಣ ಕೃಷಿಕರಿಗೆ ನೆರವು ನೀಡಿದೆ.



ವಿದ್ಯಾ ಪರಶುರಾಮ್ಕರ್ ಅವರಿಗೆ ರೋಹಿಣಿ ನಯ್ಯರ್ ಪ್ರಶಸ್ತಿಯನ್ನು ಪ್ರೊ. ಎಸ್. ಮಹೇಂದ್ರ ದೇವ್ ಪ್ರದಾನ ಮಾಡಿದರು. ರೋಹಿಣಿ ನಯ್ಯರ್ ಪ್ರತಿಷ್ಠಾನದ ಧೀರಜ್ ನಯ್ಯರ್, ಅಧ್ಯಕ್ಷ ದೀಪಕ್ ನಯ್ಯರ್ ಇದ್ದಾರೆ

'40 ವರ್ಷದೊಳಗಿನ ಸಾಧಕರಿಗೆ ಪ್ರಶಸ್ತಿ'

ಪ್ರತಿಷ್ಠಾನದ ಅಧ್ಯಕ್ಷ ದೀಪಕ್ ನಯ್ಯರ್ ಮಾತನಾಡಿ, '2021ರಲ್ಲಿ ನಿಧನರಾದ ಅರ್ಥಶಾಸ್ತ್ರಜ್ಞೆ ರೋಹಿಣಿ ನಯ್ಯರ್ ಅವರು ಗ್ರಾಮೀಣ ಅಭಿವೃದ್ಧಿ ಕ್ಷೇತ್ರದಲ್ಲಿ ಮಾಡಿರುವ ಮಹತ್ವದ ಕೆಲಸಗಳನ್ನು ಗೌರವಿಸುವ ದಿಸೆಯಲ್ಲಿ ಅವರ ಹೆಸರಿನಲ್ಲಿ ಪ್ರತೀವರ್ಷ ಪ್ರಶಸ್ತಿ ನೀಡಲಾಗುತ್ತಿದೆ. ಗ್ರಾಮೀಣ ಅಭಿವೃದ್ಧಿ ಕ್ಷೇತ್ರದಲ್ಲಿ ಮಹಿಳೆಯ ಹೆಸರಿನಲ್ಲಿ ನೀಡುತ್ತಿರುವ ಮೊದಲ ಪ್ರಶಸ್ತಿ ಇದಾಗಿದೆ. ಯುವ ಸಾಧಕರಿಗೆ ಗ್ರಾಮೀಣ ಕ್ಷೇತ್ರದಲ್ಲಿ ಕೆಲಸ ಮಾಡಲು ಈ ಪ್ರಶಸ್ತಿ ಇನ್ನಷ್ಟು ಉತ್ತೇಜನ ನೀಡಲಿದೆ. 40 ವರ್ಷದೊಳಗಿನ ಸಾಧಕರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ' ಎಂದರು.

ಸಚಿವರಾಗಿ ಅಜರ್ ಪ್ರಮಾಣವಚನ

ಹೈದರಾಬಾದ್ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ, ಕಾಂಗ್ರೆಸ್ ಮುಖಂಡ ಮೊಹಮ್ಮದ್ ಅಜರುದ್ದೀನ್ ಅವರು ತೆಲಂಗಾಣ ಸರ್ಕಾರದ ಸಚಿವರಾಗಿ ಶುಕ್ರವಾರ ಪ್ರಮಾಣವಚನ ಸ್ವೀಕರಿಸಿದರು.


ಅಜರುದ್ದೀನ್

ರಾಜಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಜ್ಯಪಾಲ ಜಿಷ್ಣು ದೇವ್ ವರ್ಮಾ ಅವರು ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಸೇರಿದಂತೆ ಪ್ರಮುಖ ನಾಯಕರ ಸಮ್ಮುಖದಲ್ಲಿ ಪ್ರಮಾಣವಚನ ಬೋಧಿಸಿದರು.

ತೆಲಂಗಾಣ ಸರ್ಕಾರದ ಏಕೈಕ ಮುಸ್ಲಿಂ ಸಚಿವ ಅಜರುದ್ದೀನ್. ಇವರ ಸೇರ್ಪಡೆಯೊಂದಿಗೆ ರೆಡ್ಡಿ ಸಂಪುಟದ ಸದಸ್ಯ ಬಲ 16ಕ್ಕೆ ಏರಿತು. ಇನ್ನೂ ಎರಡು ಸಚಿವ ಸ್ಥಾನ ಖಾಲಿಯಿವೆ.

ಜುಬಿಲಿ ಹಿಲ್ಸ್ ವಿಧಾನಸಭಾ ಕ್ಷೇತ್ರದ ಬಿಆರ್‌ಎಸ್ ಶಾಸಕ ಮಾಗಂಟಿ ಗೋಪಿನಾಥ್ ಅವರು ಕಳೆದ ಜೂನ್‌ನಲ್ಲಿ ಮೃತಪಟ್ಟಿದ್ದರಿಂದ, ಕ್ಷೇತ್ರದಲ್ಲಿ ಇದೀಗ ಉಪಚುನಾವಣೆ ನಡೆದಿದೆ. ಇಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮುಸ್ಲಿಂ ಮತದಾರರಿದ್ದು, ನಿರ್ಣಾಯಕ ಪಾತ್ರ ವಹಿಸಲಿದ್ದಾರೆ.

ನನ್ನ ಪ್ರತಿ ಹೆಜ್ಜೆಗೂ ಸ್ಫೂರ್ತಿ: ರಾಹುಲ್ ನಮನ

ನವದೆಹಲಿ(ಪಿಟಿಐ): ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಪುಣ್ಯತಿಥಿ ನಿಮಿತ್ತ ಕಾಂಗ್ರೆಸ್ ಪಕ್ಷವು ಅವರಿಗೆ ಶುಕ್ರವಾರ ಭಾವಪೂರ್ಣ ಗೌರವ ಸಲ್ಲಿಸಿದೆ. ಅವರ ಕಾರ್ಯಗಳನ್ನು ಸ್ಮರಿಸಿ ಪಕ್ಷದ ನಾಯಕರು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಹಾಗೂ ಇತರರು, ಇಂದಿರಾ ಗಾಂಧಿ ಅವರ ಸಮಾಧಿ ಇರುವ 'ಶಕ್ತಿ ಸ್ಥಳ'ಕ್ಕೆ ಭೇಟಿ ನೀಡಿ ಗೌರವ ಸಲ್ಲಿಸಿದರು. ಸಫ್ದರ್‌ಜಂಗ್ ರಸ್ತೆಯಲ್ಲಿರುವ ಇಂದಿರಾ ಗಾಂಧಿ ಸ್ಮಾರಕ ಮ್ಯೂಸಿಯಂಗೂ ಭೇಟಿ ನೀಡಿ, ಅಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

'ಇಂದಿರಾ ಗಾಂಧಿ ಒಬ್ಬ ಧೀಮಂತ, ಬದ್ಧತೆಯುಳ್ಳ ಹಾಗೂ ಬಲಿಷ್ಠರನ್ನು ಎದುರಿಸುವ ಛಾತಿ ಉಳ್ಳ ನಾಯಕಿಯಾಗಿದ್ದರು' ಎಂದು ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

'ಅಜ್ಜಿ, ಭಾರತದ ಅಸ್ಮಿತೆ ಹಾಗೂ ಸ್ವಾಭಿಮಾನಕ್ಕಿಂತ ಮಿಗಿಲಾದದ್ದು ಯಾವುದೂ ಇಲ್ಲ ಎಂಬುದನ್ನು ನೀವು ನಮಗೆ ಕಲಿಸಿದ್ದೀರಿ. ನಿಮ್ಮ ಧೈರ್ಯ, ಸಹಾನುಭೂತಿ ಹಾಗೂ ದೇಶಭಕ್ತಿ ನಾನಿಡುವ ಪ್ರತಿ ಹೆಜ್ಜೆಗೂ ಸ್ಫೂರ್ತಿ ನೀಡುತ್ತಿದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ದೇಶದ ಮೊದಲ ಮಹಿಳಾ ಪ್ರಧಾನಿ, ಭಾರತ ರತ್ನ ಇಂದಿರಾ ಗಾಂಧಿ ಅವರಿಗೆ ಪುಣ್ಯತಿಥಿಯಂದು ಹೃದಯತುಂಬಿದ ನಮನಗಳು. ಪ್ರಬಲ ನಾಯಕತ್ವ, ಅಸಾಧಾರಣ ಶಕ್ತಿ ಹಾಗೂ ಬದ್ಧತೆಯ ಪ್ರತಿರೂಪದಂತಿದ್ದ ಇಂದಿರಾ ಗಾಂಧಿ ಅವರು ಕೋಟ್ಯಂತರ ಭಾರತೀಯರಿಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ' ಎಂದು ಕಾಂಗ್ರೆಸ್ ಪಕ್ಷ ತನ್ನ 'ಎಕ್ಸ್' ಖಾತೆಯಲ್ಲಿ ಸ್ಮರಿಸಿದೆ.


ಇಂದಿರಾ ಗಾಂಧಿ ಅವರ ಪುಣ್ಯತಿಥಿ ಸಂದರ್ಭದಲ್ಲಿ ನವದೆಹಲಿಯಲ್ಲಿರುವ ಇಂದಿರಾ ಗಾಂಧಿ ಸ್ಮಾರಕ ಮ್ಯೂಸಿಯಂನಲ್ಲಿ ಇಂದಿರಾ ಗಾಂಧಿ ಅವರ ಭಾವಚಿತ್ರವೊಂದನ್ನು ರಾಹುಲ್ ಗಾಂಧಿ ಶುಕ್ರವಾರ ಕಣ್ತುಂಬಿಕೊಂಡರು ಪಿಟಿಐ ಚಿತ್ರ

> **ಚತುರ ನಾಯಕತ್ವ, ಕರ್ತೃತ್ವ ಶಕ್ತಿ ಮೂಲಕ ಭಾರತದ ಏಕತೆ ಮತ್ತು ಸಮಗ್ರತೆ ರಕ್ಷಿಸುವಲ್ಲಿ ಇಂದಿರಾ ಗಾಂಧಿ ಮಹತ್ವದ ಪಾತ್ರ ವಹಿಸಿದ್ದರು. ಸಶಕ್ತ ಹಾಗೂ ಅಭಿವೃದ್ಧಿ ಹೊಂದಿದ ಭಾರತ ನಿರ್ಮಾಣಕ್ಕೆ ಅವರ ಕೊಡುಗೆ ಅಪಾರ**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

> **ಇಂದಿರಾ ಗಾಂಧಿಯವರು ದೇಶದ ಸಮಗ್ರತೆ ಹಾಗೂ ಸಾರ್ವಭೌಮತೆಗಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿದರು**
> **ಕೆ.ಸಿ.ವೇಣುಗೋಪಾಲ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಸಂಪೂರ್ಣ ಕಾಶ್ಮೀರ ಭಾರತಕ್ಕೆ ಸೇರಿಸಲು ಬಯಸಿದ್ದ ಸರ್ದಾರ್ ವಲ್ಲಭಭಾಯಿ ಪಟೇಲ್

ಕಾಂಗ್ರೆಸ್ ತಪ್ಪಿನಿಂದ ಕಾಶ್ಮೀರ ವಿಭಜನೆ: ಮೋದಿ

ಏಕತಾ ನಗರ/ಗುಜರಾತ್ (ಪಿಟಿಐ): 'ಸಂಪೂರ್ಣ ಕಾಶ್ಮೀರವನ್ನು ಭಾರತಕ್ಕೆ ಸೇರಿಸಲು ಸರ್ದಾರ್ ವಲ್ಲಭಭಾಯಿ ಪಟೇಲ್ ಬಯಸಿದ್ದರು, ಆದರೆ, ನೆಹರೂ ಅವರು ಇದಕ್ಕೆ ಅವಕಾಶ ಕೊಡಲಿಲ್ಲ' ಎಂದು ಪ್ರಧಾನಿ ಮೋದಿ ಶುಕ್ರವಾರ ಇಲ್ಲಿ ಹೇಳಿದರು.

ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 150ನೇ ಜಯಂತಿ ಅಂಗವಾಗಿ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಇತಿಹಾಸ ಬರೆಯಲು ನಾವು ಸಮಯ ವ್ಯರ್ಥ ಮಾಡಬಾರದು, ಬದಲಿಗೆ ಇತಿಹಾಸ ನಿರ್ಮಿಸಲು ಶ್ರಮಿಸಬೇಕು' ಎನ್ನುವುದರಲ್ಲಿ ಸರ್ದಾರ್ ಪಟೇಲ್ ನಂಬಿಕೆ ಇರಿಸಿದ್ದರು. ಅವರು ರೂಪಿಸಿದ ನೀತಿ, ನಿರ್ಣಯಗಳು, ತೆಗೆದುಕೊಂಡ ದೃಢ ನಿರ್ಧಾರಗಳು ಹೊಸ ಇತಿಹಾಸವನ್ನು ನಿರ್ಮಿಸಿದವು. 'ಒಂದೇ ಭಾರತ; ಶ್ರೇಷ್ಠ ಭಾರತ'ದ ಕಲ್ಪನೆಯು ಅವರ ಪಾಲಿಗೆ ಸರ್ವಶ್ರೇಷ್ಠವಾಗಿತ್ತು' ಎಂದರು.

ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಮೋದಿ, 'ಕಾಂಗ್ರೆಸ್ ಮಾಡಿದ ತಪ್ಪಿಗೆ ದೇಶವು ದಶಕಗಳ ಕಾಲ ನೋವು ಅನುಭವಿಸಬೇಕಾಯಿತು. ಕಾಂಗ್ರೆಸ್‌ನ ದುರ್ಬಲ ನೀತಿಯಿಂದಲೇ ಕಾಶ್ಮೀರವು ಪಾಕಿಸ್ತಾನದ ಆಕ್ರಮಣಕ್ಕೆ ಒಳಗಾಯಿತು. ನಂತರ ಅಲ್ಲಿ ಪಾಕ್ ಪ್ರಾಯೋಜಿತ ಭಯೋತ್ಪಾದನೆ ಆರಂಭವಾಯಿತು. ಕಾಶ್ಮೀರ ವಿಷಯದಲ್ಲಿ ಮಾಡಿದ ತಪ್ಪುಗಳು, ಈಶಾನ್ಯ ರಾಜ್ಯಗಳಲ್ಲಿ ಉದ್ಭವಿಸಿರುವ ಸಮಸ್ಯೆಗಳು ಮತ್ತು ದೇಶದಾದ್ಯಂತ ವ್ಯಾಪಿಸಿದ ನಕ್ಸಲ್–ಮಾವೊವಾದಿ ಭಯೋತ್ಪಾದನೆಯು ದೇಶದ ಸಾರ್ವಭೌಮತೆಗೆ ಸವಾಲಾಗಿವೆ' ಎಂದರು.

ದೇಶದಲ್ಲಿ ರಾಜಕೀಯ ಅಸ್ಪೃಶ್ಯತೆಯನ್ನು ಒಂದು ಸಂಸ್ಕೃತಿಯನ್ನಾಗಿ ಮಾಡಲಾಯಿತು. ಸರ್ದಾರ್ ಪಟೇಲ್ ವಿಷಯದಲ್ಲಿ ಕಾಂಗ್ರೆಸ್ ಏನು ಮಾಡಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಅಂಬೇಡ್ಕರ್, ಸುಭಾಷ್ ಚಂದ್ರಬೋಸ್, ಲೋಹಿಯಾ, ಜಯಪ್ರಕಾಶ್ ನಾರಾಯಣ್ ಅವರ ವಿಷಯದಲ್ಲೂ ಕಾಂಗ್ರೆಸ್ ಏನು ಮಾಡಿದೆ ಎಂದು ಮೋದಿ ಪ್ರಶ್ನಿಸಿದರು. ಆರ್‌ಎಸ್‌ಎಸ್ ಕೂಡ ಇಂತಹ ಪಿತೂರಿ ಮತ್ತು ದಾಳಿಗೆ ತುತ್ತಾಯಿತು ಎಂದು ಅವರು ಹೇಳಿದರು.

'ಕಾಂಗ್ರೆಸ್‌ಗೆ 'ಗುಲಾಮ ಮನಸ್ಥಿತಿ' ಬ್ರಿಟಿಷರಿಂದ ಆನುವಂಶಿಕವಾಗಿ ಬಂದಿದೆ. ಈ ವಸಾಹತುಶಾಹಿ ಮನಸ್ಥಿತಿಯ ಎಲ್ಲ ಕುರುಹುಗಳನ್ನು ದೇಶ ಅಳಿಸಿ ಹಾಕಲಿದೆ' ಎಂದರು.


'ಸರ್ದಾರ್ ಪಟೇಲ್ ಭಾರತ'

370ನೇ ವಿಧಿಯ ಸಂಕೋಲೆಗಳನ್ನು ಮುರಿದು ಕಾಶ್ಮೀರವನ್ನು ಮುಖ್ಯ ವಾಹಿನಿಗೆ ಸಂಪೂರ್ಣವಾಗಿ ಸಂಯೋಜಿಸಲಾಗಿದೆ. ಈಗ ಪಾಕಿಸ್ತಾನ ಮತ್ತು ಇತರೆ ಭಯೋತ್ಪಾದಕರಿಗೆ ಭಾರತದ ನಿಜವಾದ ಶಕ್ತಿಯ ಅರಿವಿದೆ. ಯಾರಾದರೂ ಭಾರತದ ಮೇಲೆ ಕೆಟ್ಟ ದೃಷ್ಟಿ ಬೀರಿದರೆ, ನಾವು ಶತ್ರುವಿನ ಮನೆಗೇ ನುಗ್ಗಿ ಸದೆಬಡಿಯುತ್ತೇವೆ' ಎನ್ನುವುದಕ್ಕೆ ಆಪರೇಷನ್ ಸಿಂಧೂರ ಸಾಕ್ಷಿಯಾಗಿದೆ. ಇದು ಸರ್ದಾರ್ ಪಟೇಲ್ ಭಾರತ ಎಂದು ಹೇಳಿದರು.

ಕಾಂಗ್ರೆಸ್ ವಾಗ್ದಾಳಿ

ನವದೆಹಲಿ (ಪಿಟಿಐ): ಪಟೇಲ್ ಜಯಂತಿಯಂದು ಆರ್‌ಎಸ್‌ಎಸ್ ಮತ್ತು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್, 'ದೇಶದ ಸ್ವಾತಂತ್ರ್ಯ ಚಳವಳಿ ಮತ್ತು ಸಂವಿಧಾನ ರಚನೆಯಲ್ಲಿ ಯಾವುದೇ ಪಾತ್ರ ವಹಿಸದ ಸಿದ್ಧಾಂತವೊಂದು ಮಹಾತ್ಮಗಾಂಧಿ ಅವರ ಹತ್ಯೆಗೆ ಕಾರಣವಾದ ವಾತಾವರಣವನ್ನು ಸೃಷ್ಟಿಸಿತ್ತು ಎಂದು ಪಟೇಲ್ ಹಿಂದೆಯೇ ಹೇಳಿದ್ದರು' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಶ್ಯಾಮಾ ಪ್ರಸಾದ್ ಮುಖರ್ಜಿ ಅವರಿಗೆ 1948 ಜುಲೈ 1ರಂದು ಬರೆದಿರುವ ಪತ್ರದ ಆಯ್ದ ಭಾಗಗಳನ್ನೂ ಜೈರಾಂ ರಮೇಶ್ ತಮ್ಮ ಪೋಸ್ಟ್ ಜತೆಗೆ ಪ್ರಕಟಿಸಿದ್ದಾರೆ. '2014ರ ನಂತರ ಇತಿಹಾಸವು ಲಜ್ಜೆಗೆಟ್ಟ ತಪ್ಪು ನಿರೂಪಣೆಗೆ ಒಳಗಾಗಿದೆ' ಎಂದು ಹೇಳಿದ್ದಾರೆ.


ನರೇಂದ್ರ ಮೋದಿ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಕನ್ನಡವಲ್ಲ ತಿಂಗಳು ನಡೆಸುವ ಗುಲ್ಲಿನ ಕಾಮನಬಿಲ್ಲು. ಕವಿ ಶಶಿ ತಾರೆಯ ನಿತ್ಯೋತ್ಸವವದು ಸರಸತಿ ವೀಣೆಯ ಸೊಲ್ಲು.

-ಕೆ.ಎಸ್. ನಿಸಾರ್ ಅಹಮದ್

ಸಂಪಾದಕೀಯ

ಬೇಲದಕುಪ್ಪೆಯಲ್ಲಿ ಪ್ರವಾಸಿ ಕೇಂದ್ರ ಪರಿಸರ ಸಮತೋಲನಕ್ಕೆ ಅಪಾಯ

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಗೆ ಬರುವ ಬೇಲದಕುಪ್ಪೆ ಮಹದೇಶ್ವರಸ್ವಾಮಿ ದೇವಸ್ಥಾನವನ್ನು ಪ್ರವಾಸಿ ಕೇಂದ್ರ ಎಂದು ಘೋಷಿಸುವ ರಾಜ್ಯ ಸರ್ಕಾರದ ತೀರ್ಮಾನವು ಸರಿಯಾದುದಲ್ಲ. ಶ್ರದ್ಧೆ-ಭಕ್ತಿಯ ಸ್ಥಳವನ್ನು ಪ್ರವಾಸಿ ಸ್ಥಳವನ್ನಾಗಿಸುವ ಹುಮ್ಮಸ್ಸಿನಲ್ಲಿ ಇರುವ ಸರ್ಕಾರ, ದೇಶದ ಅತ್ಯಂತ ಸೂಕ್ಷ್ಮವಾದ ಪರಿಸರ ವಲಯವೊಂದು ಅಸ್ಥಿರಗೊಳ್ಳುವ ಅಪಾಯವನ್ನು ಗ್ರಹಿಸುತ್ತಿಲ್ಲ. ಮಹದೇಶ್ವರಸ್ವಾಮಿ ದೇವಸ್ಥಾನವು ಪ್ರಕೃತಿ ಮತ್ತು ದೈವದ ನಡುವಿನ ಸಾಮರಸ್ಯವನ್ನು ಸಂಕೇತಿಸುವಂತಿದೆ. ಆದರೆ, ಅದನ್ನು ಪ್ರವಾಸಿ ಕೇಂದ್ರವನ್ನಾಗಿ ಘೋಷಿಸುವ ನಡೆಯು, ಪ್ರಕೃತಿಗೂ ದೈವಕ್ಕೂ ಕೇಡು ಬಗೆಯುವಂತಿದೆ. ಈ ದೇವಸ್ಥಾನವು ದಟ್ಟ ಅರಣ್ಯದ ಹೃದಯಭಾಗದಲ್ಲಿ ಶತಮಾನಗಳಿಂದ ಇದೆ. ಮಹದೇಶ್ವರಸ್ವಾಮಿಯು ತನ್ನ ಏಕಾಂತಕ್ಕೆ ಈ ಸ್ಥಳವನ್ನು ಆಯ್ಕೆ ಮಾಡಿಕೊಂಡಿದ್ದ ಎಂಬ ನಂಬಿಕೆ ಇದೆ. ಹುಲಿಯು ಮಹದೇಶ್ವರನ ವಾಹನ ಎಂಬ ನಂಬಿಕೆಯೂ ಇದೆ. ಆದರೆ, ಈ ಪ್ರಾಣಿಯ ಉಳಿವು ಮನುಷ್ಯ ತೋರುವ ಸಂಯಮವನ್ನು ಆಧರಿಸಿ ನಿಂತಿದೆ.

ಮಹದೇಶ್ವರಸ್ವಾಮಿ ದೇವಸ್ಥಾನ ಪ್ರದೇಶವನ್ನು ಪ್ರವಾಸಿ ಕೇಂದ್ರ ಎಂದು ಸರ್ಕಾರವು ಘೋಷಿಸಿದ ಸಂದರ್ಭವೇ ವ್ಯಂಗ್ಯದಂತಿದೆ. ಈ ಘೋಷಣೆ ಮಾಡುವುದಕ್ಕೆ ಕೆಲವೇ ದಿನಗಳ ಹಿಂದೆ, ದೇವಸ್ಥಾನಕ್ಕೆ ಸನಿಹದ ಹಳ್ಳಿಯೊಂದರ ಮೇಲೆ ಹುಲಿಯೊಂದು ದಾಳಿ ನಡೆಸಿತ್ತು. ಅಂದರೆ, ಅರಣ್ಯ ಪ್ರದೇಶದಲ್ಲಿ ಇರುವ ಸ್ಥಳಗಳಲ್ಲಿ ಎಚ್ಚರಿಕೆಯ ಹೆಜ್ಜೆ ಇರಿಸಬೇಕೇ ವಿನಾ ಅಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಿಸುವ ಅಗತ್ಯವಿಲ್ಲ ಎಂಬುದನ್ನು ಈ ಘಟನೆ ನೆನಪಿಸುವಂತಿದೆ. ಹುಲಿಗಳು ಹಾಗೂ ಪ್ರವಾಸಿಗರ ದಂಡು ಒಂದಕ್ಕೊಂದು ಪೂರಕ ಅಲ್ಲ. ದೇವಸ್ಥಾನ ಇರುವ ಪ್ರದೇಶವನ್ನು ಪ್ರವಾಸಿ ಕೇಂದ್ರವನ್ನಾಗಿಸುವುದರಿಂದ ಮಾನವ-ವನ್ಯಜೀವಿ ಸಂಘರ್ಷವು ಇನ್ನಷ್ಟು ಹೆಚ್ಚಾಗುತ್ತದೆ. ವರ್ಷಗಳಿಂದ ನಡೆದುಬಂದಿರುವ ವನ್ಯಜೀವಿ ಸಂರಕ್ಷಣಾ ಕೆಲಸಗಳಿಗೆ ಹಿನ್ನಡೆ ಆದಂತಾಗುತ್ತದೆ. ಬಂಡೀಪುರದ ಕೇಂದ್ರ ಭಾಗವು ಅಭಿವೃದ್ಧಿಗಾಗಿ ಕಾದಿರುವ ಖಾಲಿ ಪ್ರದೇಶ ಅಲ್ಲ. ಅದು ದೇಶದಲ್ಲಿ ಹುಲಿಗಳಿಗೆ ಇರುವ ಅತ್ಯಂತ ಮುಖ್ಯವಾದ ಆವಾಸಸ್ಥಾನಗಳ ಪೈಕಿ ಒಂದು. ಅಲ್ಲಿನ ಕೆರೆಗಳು, ತೊರೆಗಳು ಹಾಗೂ ಸಸ್ಯಸಂಪತ್ತು ಬಹಳ ಸೂಕ್ಷ್ಮವಾದ ಸಮತೋಲನವೊಂದನ್ನು ಕಾಯ್ದುಕೊಂಡಿವೆ. ಈ ಪ್ರದೇಶವನ್ನು ವಾಹನಗಳ ನಿರಂತರ ಸದ್ದುಗದ್ದಲ ಹಾಗೂ ಪ್ಲಾಸ್ಟಿಕ್ ತ್ಯಾಜ್ಯಕ್ಕೆ ತೆರೆಯುವುದು ವನ್ಯಪ್ರಾಣಿಗಳು ಈಗಾಗಲೇ ಅನುಭವಿಸುತ್ತಿರುವ ಒತ್ತಡವನ್ನು ಹೆಚ್ಚಿಸುತ್ತದೆ. ಮುಖ್ಯವಾದ ಸಂಗತಿಯೆಂದರೆ, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ಅನುಮೋದನೆ ನೀಡಿರುವ ಹುಲಿ ಸಂರಕ್ಷಣಾ ಯೋಜನೆಯು ಹೇಳುವ ಪ್ರಕಾರ, ಹುಲಿ ಸಂರಕ್ಷಿತ ಪ್ರದೇಶದಲ್ಲಿ ಪ್ರವಾಸೋದ್ಯಮ ಅಥವಾ ನಿರ್ಮಾಣ ಚಟುವಟಿಕೆಗಳು ನಿಗದಿತ ಪ್ರವಾಸಿ ವಲಯಗಳಲ್ಲಿ ಮಾತ್ರ ಆಗಬೇಕು. ಬೇಲದಕುಪ್ಪೆಯು ಈ ಪ್ರವಾಸಿ ವಲಯದ ಒಳಗೆ ಇಲ್ಲ. ಬಂಡೀಪುರ ಹುಲಿ ಸಂರಕ್ಷಣಾ ಯೋಜನೆಯು ಇಲ್ಲಿ ಪ್ರವಾಸೋದ್ಯಮಕ್ಕೆ ಅವಕಾಶ ಕಲ್ಪಿಸುವುದಿಲ್ಲ. ಹೀಗಾಗಿ, ಈ ದೇವಸ್ಥಾನವನ್ನು ಪ್ರವಾಸಿ ಕೇಂದ್ರ ಎಂದು ಘೋಷಿಸುವುದು ಪರಿಸರದ ದೃಷ್ಟಿಯಿಂದ ಅಪಾಯಕಾರಿ ಮಾತ್ರವಲ್ಲದೆ, ಕಾನೂನಿನ ದೃಷ್ಟಿಯಿಂದಲೂ ತಪ್ಪು ನಡೆ. ಬಂಡೀಪುರದ ಕೋರ್ ವಲಯದಲ್ಲಿ ಮನುಷ್ಯನ ಹಸ್ತಕ್ಷೇಪ ಬೇಡ ಎಂಬ ಎಚ್ಚರಿಕೆಯ ಮಾತನ್ನು 'ಎನ್‌ಟಿಸಿಎ' ಹೇಳುತ್ತಲೇ ಇದೆ. ಅದರ ಕಿವಿಮಾತನ್ನು ಉಪೇಕ್ಷೆ ಮಾಡುವುದು ಪರಿಸರದ ನಿಯಮ ಹಾಗೂ ಕಾನೂನಿನ ಉದ್ದೇಶಪೂರ್ವಕ ಉಲ್ಲಂಘನೆ.



ಬಂಡೀಪುರದ ಮಹದೇಶ್ವರ ಸ್ವಾಮಿ ದೇವಸ್ಥಾನ ಪರಿಸರವನ್ನು ಪ್ರವಾಸಿಕೇಂದ್ರ ಆಗಿಸುವ ಸರ್ಕಾರದ ನಿರ್ಧಾರ ವಿವೇಕದಿಂದ ಕೂಡಿದ್ದಲ್ಲ. ಅದು ಕಾನೂನು ವಿರುದ್ಧವೂ ಹೌದು.

ದೇವಸ್ಥಾನದ ವಾರ್ಷಿಕ ಜಾತ್ರೆಯು ಅಲ್ಲಿನ ಪರಿಸರಕ್ಕೆ ಬಹಳಷ್ಟು ಧಕ್ಕೆ ತರುತ್ತಿದೆ. ಅಲ್ಲಿಗೆ ಸಹಸ್ರಾರು ಮಂದಿ ವಾಹನಗಳಲ್ಲಿ, ಎತ್ತಿನಬಂಡಿಗಳಲ್ಲಿ ಬರುತ್ತಾರೆ. ಅಲ್ಲಿ ಪ್ಲಾಸ್ಟಿಕ್ ಕಸ ಎಸೆಯುತ್ತಾರೆ; ಅಲ್ಲಿನ ಜೀವಸಂಕುಲದ ನೆಮ್ಮದಿಗೆ ಭಂಗ ತರುತ್ತಾರೆ. ಇಂತಹ ಚಟುವಟಿಕೆಗಳಿಗೆ ಒಂದು ಸಾಂಸ್ಥಿಕ ಸ್ವರೂಪವನ್ನು ಒದಗಿಸಿಕೊಡುವುದು ಬಹಳ ದೊಡ್ಡ ಪರಿಸರ ದುರಂತಕ್ಕೆ ನಾಂದಿಹಾಡಿದಂತೆ ಆಗುತ್ತದೆ. ರಾಜ್ಯದ ಅರಣ್ಯ ಪ್ರದೇಶವನ್ನು ರಕ್ಷಿಸುವ ವಿಚಾರದಲ್ಲಿ ಸಚಿವ ಈಶ್ವರ ಖಂಡ್ರೆ ಅವರು ಮುಂದಾಲೋಚನೆಯಿಂದ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ರಾಜ್ಯದ ಹುಲಿ ಕಾರಿಡಾರ್ ರಕ್ಷಣೆ ಹಾಗೂ ಅತಿಕ್ರಮಣಕ್ಕೆ ಒಳಗಾಗಿರುವ ಅರಣ್ಯಭೂಮಿಯನ್ನು ವಶಕ್ಕೆ ಪಡೆಯುವ ಅವರ ಪ್ರಯತ್ನಗಳನ್ನು ಪರಿಸರವಾದಿಗಳು ಶ್ಲಾಘಿಸಿದ್ದಾರೆ. ಅವರು ಅರಣ್ಯ ಸಂರಕ್ಷಣೆಗೆ ತೆಗೆದುಕೊಂಡಿರುವ ಕ್ರಮವನ್ನು ಮುಂದಕ್ಕೆ ಒಯ್ಯಬೇಕು. ಜನಪ್ರಿಯತೆಗಾಗಿ ಬಂಡೀಪುರವನ್ನು ಬಲಿಕೊಡಲು ಬಿಡಬಾರದು. ಮಹದೇಶ್ವರಸ್ವಾಮಿ ದಟ್ಟ ಕಾನನವನ್ನು ಪ್ರತಿನಿಧಿಸುವ ದೇವರೂ ಹೌದು. ಆ ಸ್ವಾಮಿಯ ನಿಜವಾದ ಅರ್ಚನೆಯೆಂದರೆ, ಅರಣ್ಯವನ್ನು ಕಾಪಾಡುವುದು; ಅದನ್ನು ಪ್ರವಾಸೋದ್ಯಮದ ಹೆಸರಿನಲ್ಲಿ ದುರ್ಬಳಕೆ ಮಾಡುವುದಲ್ಲ.

ಚಾಟಿ

ಮತ್ತೆ ಮತ್ತೆ ನೆನಪು



ಹೊಸ ಪೀಳಿಗೆಯ ಕೆಲ ಹುಡುಗರು ವಾಟ್ಸ್‌ಆ್ಯಪ್ ಯೂನಿವರ್ಸಿಟಿಯ ಸುಳ್ಳುಗಳನ್ನು ಸತ್ಯವೆಂದು ನಂಬಿ ಮಾತಾಡುತ್ತ ಹಳ್ಳಕ್ಕೆ ಬೀಳುತ್ತಿರುವಾಗ ಭಾರತಕ್ಕಾಗಿ ಜೀವತೆತ್ತ ಇಂದಿರಾಜಿ ಅಂಥವರ ಇತಿಹಾಸವನ್ನು ಅವರಿಗೆ ತಿಳಿಸಿ ಹೇಳಬೇಕಾಗಿದೆ. ಆದರೆ, ಸ್ವಲಾಭಕ್ಕಾಗಿ ಕಾಂಗ್ರೆಸ್ ಸೇರಿದ ಎಷ್ಟು ಜನರಿಗೆ ಇಂದಿರಾ ಗಾಂಧಿ ಅವರ ಬಗ್ಗೆ ಎಷ್ಟು ಗೊತ್ತಿದೆ?

ಸನತ್ ಕುಮಾರ್ ಬೆಳಗಲಿ, ಪತ್ರಕರ್ತ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಮರಣೋತ್ತರ ಪರೀಕ್ಷೆ ವರದಿ ಪಡೆಯಲು ಲಂಚ ನೀಡಬೇಕು. ಮರಣ ಪ್ರಮಾಣಪತ್ರ ಪಡೆಯಲು ಲಂಚ ಕೊಡಬೇಕು. ಅಂತ್ಯಸಂಸ್ಕಾರ ಮಾಡೋದಕ್ಕೂ ಲಂಚ ತೆರಬೇಕು. ನಿಮ್ಮ ಕುರ್ಚಿ ಆಸೆಗೆ ಜನಸಾಮಾನ್ಯರ ರಕ್ತ ಇನ್ನೆಷ್ಟು ಹೀರುತ್ತೀರಿ ಉಪಮುಖ್ಯಮಂತ್ರಿಗಳೇ?

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಬುಧವಾರ, 1-11-2000

• ಮೋಸದಾಟ: ಅಜರುದ್ದೀನ್, ಲಾರಾ, ಸ್ಟುವರ್ಟ್ ಹೆಸರು

ನವದೆಹಲಿ, ಅ. 31- ಭಾರತ ತಂಡದ ಮಾಜಿ ನಾಯಕ ಮಹಮದ್ ಅಜರುದ್ದೀನ್, ವೆಸ್ಟ್ ಇಂಡೀಸ್‌ನ ಬ್ರಿಯಾನ್ ಲಾರಾ, ಇಂಗ್ಲೆಂಡ್‌ನ ಅಲೆಕ್ ಸ್ಟುವರ್ಟ್ ಹಾಗೂ ಆಸ್ಟ್ರೇಲಿಯಾದ ಡೀನ್ ಜೋನ್ಸ್ ಮೋಸದಾಟದಲ್ಲಿ ಭಾಗಿಯಾಗಿದ್ದರು ಎಂಬ ಬುಕ್ಕಿಗಳ ಹೇಳಿಕೆಗಳು ಸಿಬಿಐ ಸಲ್ಲಿಸಿದ ವರದಿಯಲ್ಲಿ ಇವೆ ಎಂದು ಕೇಂದ್ರ ಕ್ರೀಡಾ ಸಚಿವ ಸುಖದೇವ್ ಸಿಂಗ್ ಧಿಂಡ್ಸಾ ಅವರು ತಿಳಿಸಿದ್ದಾರೆ.

ಲಾರಾ, ಸ್ಟುವರ್ಟ್, ಜೋನ್ಸ್ ಅವರೊಂದಿಗೆ ಪಾಕಿಸ್ತಾನದ ಸಲೀಮ್ ಮಲಿಕ್, ಆಸ್ಟ್ರೇಲಿಯಾದ ಮಾರ್ಕ್ ವಾ ಮತ್ತು ದಕ್ಷಿಣ ಆಫ್ರಿಕಾದ ಮಾಜಿ ನಾಯಕ ಹ್ಯಾನ್ಸಿ ಕ್ರೋನಿಯೆ ಅವರ ಹೆಸರುಗಳು ಸಿಬಿಐ ವರದಿಯಲ್ಲಿ ಇವೆ. ಇದರೊಂದಿಗೆ ಆಸ್ಟ್ರೇಲಿಯಾ, ವೆಸ್ಟ್ ಇಂಡೀಸ್ ಹಾಗೂ ಇಂಗ್ಲೆಂಡ್‌ನ ಇನ್ನೂ ಮೂವರು ಆಟಗಾರರ ಹೆಸರು ವರದಿಯಲ್ಲಿ ಇದೆ ಎನ್ನಲಾಗಿದೆ.

75 ವರ್ಷಗಳ ಹಿಂದೆ

ಬುಧವಾರ, 1-11-1950

• ಮೇ ತಿಂಗಳಿನಲ್ಲಿ ಮಹಾ ಚುನಾವಣೆ ಶತಸಿದ್ಧ

ದೆಹಲಿ, ಅ. 31- ಏನೇ ಆಗಲಿ ಭಾರತದ ಮಹಾ ಚುನಾವಣೆಗಳು 1951ರ ಮೇ ತಿಂಗಳ ಅಂತ್ಯದೊಳಗೆ ಮುಗಿಯಲೇಬೇಕು ಎಂಬುದಾಗಿ ಭಾರತದ ಪ್ರಧಾನಿ ಪಂಡಿತ್ ನೆಹರೂರವರು, ಇಂದು ದೆಹಲಿಯಲ್ಲಿ ನೆರೆದಿರುವ ಎಲ್ಲಾ ಸಂಸ್ಥಾನಗಳ ಮುಖ್ಯ ಚುನಾವಣಾಧಿಕಾರಿಗಳನ್ನು ಉದ್ದೇಶಿಸಿ ತಿಳಿಸಿದರು.

ಬೇಸಿಗೆ ಮತ್ತು ಸುಗ್ಗಿ ಕಾಲದಲ್ಲಿ ಚುನಾವಣೆಗಳನ್ನು ನಡೆಸುವುದು ಕಷ್ಟವೆಂದು ಕೆಲವರು ಸೂಚಿಸಿದ್ದ ಅಭಿಪ್ರಾಯವನ್ನು ಪ್ರಸ್ತಾಪಿಸಿದ ನೆಹರೂರವರು, ಹವಾಮಾನ ವೈವಿಧ್ಯತೆ ಮತ್ತು ಕಾಲದೋಷಗಳೊಂದಿಗೂ ಮಹಾಚುನಾವಣೆಗಳಿಗೆ ಅಡ್ಡಿಯಾಗಕೂಡದು ಎಂದು ತಿಳಿಸಿದರು.

ಕನ್ನಡವಾಗಿರುವುದು ಎಂದರೆ...



ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

> 'ಕನ್ನಡತನ' ಮತ್ತು 'ಕನ್ನಡವಾಗಿರುವುದು' ಪದೇ ಪದೇ ಬಳಕೆಯಾಗುವ ಮಾತುಗಳು. ಏನು ಹೀಗೆಂದರೆ? ಈ ಮಾತುಗಳ ಅರ್ಥ ತಿಳಿಯಲು ಕನ್ನಡ ಸಾಂಸ್ಕೃತಿಕ ಪರಂಪರೆ ಪ್ರತಿಪಾದಿಸಿದ ವಿವೇಕವನ್ನು ಎದುರುಗೊಳ್ಳಬೇಕು. ಆ ವಿವೇಕ, ಕನ್ನಡದ ಏಳಿಗೆಯ ಜೊತೆಗೆ ತರತಮಗಳಿಲ್ಲದ ಸಮಾಜವನ್ನು ಹಂಬಲಿಸುವಂತಹದ್ದು.

ಎಲ್ಲ ಏಳುಬೀಳುಗಳ ನಡುವೆಯೂ ಇಂದಿಗೂ ನಮ್ಮ ಕನ್ನಡ ಜೀವಂತವಾಗಿದೆ. ನಿಜ, ಕನ್ನಡಕ್ಕೆ ಸವಾಲುಗಳಿವೆ, ಸಾವಿಲ್ಲ. ಸಾಯಲು ಕನ್ನಡ ಜನರು ಬಿಡುವುದಿಲ್ಲ. ಬಹಳ ವರ್ಷಗಳ ಹಿಂದೆಯೇ ರಾಷ್ಟ್ರಕವಿ ಕುವೆಂಪು ಅವರು ಒಂದು ಪದ್ಯದಲ್ಲಿ ಹೀಗೆ ಬರೆದರು: 'ರಾಜನುಡಿಯೆಂದೊಂದು ರಾಷ್ಟ್ರನುಡಿಯೆಂದೊಂದು/ ದೇವನುಡಿಯೆಂದೊಂದು ಹತ್ತಿ ಜಗ್ಗಿ/ ನಿರಿನಿಟಿಲು ನಿಟಿಲೆಂದು ಮುದಿ ಮೂಳೆ ಮುರಿಯುತಿದೆ/ ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ'. ಈ ಸಾಲುಗಳು ಕನ್ನಡಕ್ಕೆ ಭಾಷಿಕವಾಗಿ ಎದುರಾದ ಇಂಗ್ಲಿಷ್, ಹಿಂದಿ ಮತ್ತು ಸಂಸ್ಕೃತಗಳ ಪರಿಣಾಮವನ್ನು ಪ್ರಸ್ತುತಪಡಿಸುತ್ತವೆ. ರಾಜನುಡಿ, ರಾಷ್ಟ್ರನುಡಿ, ದೇವನುಡಿ- ಎಂದು ಪ್ರಸ್ತಾಪ ಮಾಡುವಾಗ ಕುವೆಂಪು ಅವರು ಇಂಗ್ಲಿಷನ್ನು ರಾಜನುಡಿಯೆಂದೂ, ಹಿಂದಿಯನ್ನು ರಾಷ್ಟ್ರನುಡಿಯೆಂದೂ, ಸಂಸ್ಕೃತವನ್ನು ದೇವನುಡಿಯೆಂದೂ ಒಪ್ಪಿದ್ದಾರೆಂದು ಭಾವಿಸಬೇಕಿಲ್ಲ. 'ಯೆಂದೊಂದು' ಎಂದು ಹೇಳುವ ಮೂಲಕ 'ಹಾಗೆಂದು ಭಾವಿಸಿರುವುದು' ಎಂಬ ಅರ್ಥ ಹೊರಡುತ್ತದೆ. ಇರಲಿ; ಇಲ್ಲಿ ಮುಖ್ಯ ವಿಷಯವೆಂದರೆ, ಈ ಮೂರೂ ಭಾಷೆಗಳ ಹಿಡಿತದಿಂದ ವಿಮೋಚನೆಗೊಳ್ಳುತ್ತಲೇ ಕನ್ನಡ ಭಾಷೆ ಬದುಕಿದೆ. ಇದರರ್ಥ ಇಷ್ಟು: ಆಳಲು ಬಂದವರನ್ನು ಅರಗಿಸಿಕೊಳ್ಳುವ ಶಕ್ತಿ ಕನ್ನಡಕ್ಕಿದೆ.

ಎಲ್ಲ ಸಮಸ್ಯೆ ಮತ್ತು ಸವಾಲುಗಳ ನಡುವೆಯೂ ಕನ್ನಡವು ಜೀವಂತ ಭಾಷೆಯಾಗಿರುವುದಕ್ಕೆ ಕನ್ನಡಪರ ಹೋರಾಟಗಾರರು, ಸಾಹಿತಿಗಳು, ಚಿಂತಕರು ಕಾರಣರಾಗಿರುವಂತೆಯೇ ಸಾಮಾನ್ಯ ಕನ್ನಡಿಗರ ಪಾತ್ರ ಬಹು ದೊಡ್ಡದು. ಜನಸಾಮಾನ್ಯರು ಕನ್ನಡವನ್ನು ಬಳಸುತ್ತ, ಬೆಳೆಸುತ್ತ, ಬಂದಿರುವುದರಿಂದಲೇ ಅದು ಜೀವಂತ ಭಾಷೆಯಾಗಿದೆ. ಇಲ್ಲಿ, ಕ್ರಿ.ಶ. 850ರಲ್ಲಿ ರಚಿತವಾದ 'ಕವಿರಾಜಮಾರ್ಗ' ಕೃತಿಯ ಕರ್ತೃ ಶ್ರೀವಿಜಯ, ಸಾಮಾನ್ಯ ಕನ್ನಡಿಗರ ಪ್ರತಿಭೆಯ ಬಗ್ಗೆ ನುಡಿದ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್' ಎಂಬ ಮಾತು ತುಂಬಾ ಪ್ರಸ್ತುತವಾಗುತ್ತದೆ. ಉದ್ದೇಶಪೂರ್ವಕವಾಗಿ ವಿದ್ಯಾಭ್ಯಾಸ ಮಾಡದೆ ಇದ್ದರೂ ಸಾಮಾನ್ಯ ಕನ್ನಡಿಗರು ಕಾವ್ಯಪ್ರಯೋಗದಲ್ಲಿ ನಿಷ್ಣಾತರೆಂದು ಹೇಳುವಾಗ, ಜನಪದ ಕವಿಗಳು ಮನಸ್ಸಿನಲ್ಲಿದ್ದಿರಬಹುದು. ಇದಿಷ್ಟೇ ಅಲ್ಲ, 'ಕವಿರಾಜಮಾರ್ಗ'ದಲ್ಲಿ ಸಂದರ್ಭಾನುಸಾರ ಜನಸಾಮಾನ್ಯರ ಸೃಜನಶೀಲತೆಯನ್ನು ಗೌರವಿಸಲಾಗಿದೆ. ಅಂದಿನದು ಇರಲಿ, ಇಂದಿಗೆ ಬರೋಣ. ಜನಸಾಮಾನ್ಯರು ತಮ್ಮ ಬಳಕೆಯಲ್ಲಿ ಕನ್ನಡ ಪದಗಳಿಗೆ ವಿಶೇಷ ಅರ್ಥಜಿಗಿತವನ್ನೇ ತಂದುಕೊಡುವುದುಂಟು. ಅವರು ವಿಧಾನಸೌಧಕ್ಕೆ ಸೈಕಲ್ ತುಳಿದೂ ತುಳಿದು ಸಾಕಾಯ್ತು ಎಂದು ಹೇಳಿದಾಗ ಸೈಕಲ್ಲಿನ ಅರ್ಥವೂ ಬದಲಾಗುತ್ತದೆ, ಜಡಗೊಂಡ ಆಡಳಿತ ವ್ಯವಸ್ಥೆಯ ವ್ಯಾಖ್ಯಾನವೂ ಆಗುತ್ತದೆ. ಈ ಮನುಷ್ಯ ಬಾಳ ರೈಲು ಬಿಡ್ತಾನೆ ಎಂದಾಗ ರೈಲು ಎನ್ನುವುದಕ್ಕೆ 'ಸುಳ್ಳು' ಎಂಬ ಅರ್ಥ ಬರುತ್ತದೆ; ಸಂಬಂಧಿಸಿದ ವ್ಯಕ್ತಿಯ ಸ್ವಭಾವವೂ ತಿಳಿಯುತ್ತದೆ. ಹೀಗೆ ಸಾಂದರ್ಭಿಕ ಬಳಕೆಯಿಂದ ಭಾಷೆಯನ್ನು ಬೆಳೆಸುವುದು ಜನಸಾಮಾನ್ಯರ ಸೃಜನಶೀಲ ಶಕ್ತಿ.

ಹಾಗೆಂದು ಜನಸಾಮಾನ್ಯರಿಗೇ ಭಾಷೆಯ ಹೊಣೆ ಹೊರಿಸಿ ಸುಮ್ಮನಾಗುವಂತಿಲ್ಲ. ಕನ್ನಡವು ಶಿಕ್ಷಣ, ಉದ್ಯೋಗ ಮತ್ತು ಆಡಳಿತಗಳಲ್ಲಿ ಅನಿವಾರ್ಯವಾಗುವಂತಹ ನೀತಿ ನಿರೂಪಣೆಗಳು ಬೇಕು; ಹೋರಾಟಗಳು ಬೇಕು; ತಾತ್ವಿಕತೆ ಬೇಕು. ವಿಶೇಷವಾಗಿ, ಶಿಕ್ಷಣ ಕ್ಷೇತ್ರದಲ್ಲಿ ಕನ್ನಡವನ್ನು ಉಳಿಸದೆ ಇದ್ದರೆ ಅಪಾಯಗಳ ಕೂಪವೇ ಗತಿಯಾಗುತ್ತದೆ. ಇಂತಹ ಬಿಕ್ಕಟ್ಟುಗಳಿಂದ ಹೊರಬರಲು ಕನ್ನಡಕ್ಕೊಂದು ಸಾಮಾನ್ಯ ಕಾರ್ಯಸೂಚಿಯ ಅಗತ್ಯವಿದೆ. ಕನ್ನಡ ಭಾಷಾ ಕಲಿಕೆ, ಶಿಕ್ಷಣ ಮಾಧ್ಯಮ, ಉದ್ಯೋಗಕ್ಕೆ ಕನ್ನಡ ಮಾನದಂಡವಾಗುವುದು, ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕನ್ನಡಿಗರಿಗೆ ಆದ್ಯತೆ, ಇತ್ಯಾದಿಗಳನ್ನು ಕುರಿತಂತೆ ಒಮ್ಮತದ ಕಾರ್ಯಸೂಚಿಯೊಂದನ್ನು ರೂಪಿಸಿ, ಆ ನೆಲೆಯಲ್ಲಿ ಹಕ್ಕೊತ್ತಾಯ ಮಂಡಿಸುವ ಕೆಲಸ ಆಗಬೇಕಾಗಿದೆ. ತಂತಮ್ಮ ಸಂಘಟನೆಗಳ ಮೂಲಕ ಕನ್ನಡದ ಕೆಲಸ ಮಾಡುತ್ತಿರುವ ನೇತಾರರೂ ಚಿಂತಕರೂ ಸಾಹಿತಿಗಳೂ ಹೀಗೆ ಒಮ್ಮತದ ಕಾರ್ಯಸೂಚಿಯನ್ನು ರೂಪಿಸಲು ಸಾಧ್ಯವಾಗಬೇಕು. ಆದರೆ, ಇಂತಹ ಒಗ್ಗಟ್ಟಿನ ಚಿಂತನೆಗಳು ಸಾಧ್ಯವಾಗದಿರುವುದು ಕನ್ನಡಪರ ಚಿಂತನೆ ಮತ್ತು ಹೋರಾಟದ ಶಕ್ತಿ ಮತ್ತು ವ್ಯಾಪ್ತಿಯನ್ನು ಕುಗ್ಗಿಸುತ್ತಿದೆ. ಕನ್ನಡಕ್ಕಾಗಿ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಬೇಕಾಗಿದೆ.

ಇಲ್ಲಿ ಇನ್ನೊಂದು ಪ್ರಶ್ನೆಯೂ ಇದೆ: ಕನ್ನಡ ಪರ ನಿಲುವೆಂದರೆ ಅದು ಭಾಷಿಕವಾದದ್ದು ಮಾತ್ರವೆ? ಖಂಡಿತ ಅಲ್ಲ. 'ಕನ್ನಡ ಪರ' ಎನ್ನುವುದಕ್ಕೆ ಭಾಷಿಕ ನೆಲೆಯನ್ನು ಒಳಗೊಂಡಂತೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯಾತ್ಮಕ ಆಯಾಮಗಳಿವೆ. ಕನ್ನಡ ಪರಂಪರೆಯನ್ನು ಗಮನಿಸಿದಾಗ 'ಕನ್ನಡ ತಾತ್ವಿಕತೆ'ಯ ಆಳ ಅಗಲ ಅರ್ಥವಾಗುತ್ತದೆ. ಇಂದಿಗೂ ಈ ತಾತ್ವಿಕತೆ ಎಷ್ಟು ಪ್ರಸ್ತುತ ಎಂದು ಅರಿವಾಗುತ್ತದೆ.

ಹೆಚ್ಚು ದೂರ ಹೋಗುವುದು ಬೇಡ; ಕುವೆಂಪು ವಿರಚಿತ ನಮ್ಮ ನಾಡಗೀತೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಸಾಕು, ಜೊತೆಗೆ ಕುವೆಂಪು ಅವರು, 'ಎಲ್ಲಾದರೂ ಇರು/ ಎಂತಾದರು ಇರು/ ಎಂದೆಂದಿಗೂ ನೀ ಕನ್ನಡವಾಗಿರು' ಎಂದದ್ದು ಮತ್ತು 'ಕನ್ನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು' ಎಂದು ಪ್ರತಿಪಾದಿಸಿದ್ದನ್ನು ಗಮನಿಸಬೇಕು. 'ಕನ್ನಡವಾಗಿರು' ಮತ್ತು 'ಕನ್ನಡತನವೊಂದಿದ್ದರೆ' ಎಂಬ ಪದಗಳು ಕೇವಲ ಭಾಷೆಗೆ ಸಂಬಂಧಿಸಿದವಲ್ಲ. ಕನ್ನಡವಾಗುವುದು ಮತ್ತು ಕನ್ನಡತನ ಎಂಬ ಪ್ರಕ್ರಿಯೆಗಳು ಒಟ್ಟು ಕನ್ನಡ ಪರಂಪರೆಯನ್ನು ಪ್ರತಿನಿಧಿಸುತ್ತವೆ. ಹಾಗಾದರೆ, ಕನ್ನಡವಾಗುವುದು ಎಂದರೆ ಹೇಗೆ? ಕನ್ನಡತನವೆಂದರೆ ಯಾವುದು? ಉತ್ತರಕ್ಕಾಗಿ ನಾಡಗೀತೆಯನ್ನು ಅವಲೋಕಿಸಬಹುದು.

'ಭಾರತ ಜನನಿಯ ತನುಜಾತೆ/ ಜಯಹೇ ಕರ್ನಾಟಕ ಮಾತೆ' ಎಂಬ ಸಾಲಿನಲ್ಲೇ ರಾಜಕೀಯಾತ್ಮಕ ಒಕ್ಕೂಟ ಪದ್ಧತಿಯ ಅಂಶ ಅಂತರ್ಗತವಾಗಿದೆ. ಭಾರತವೆಂಬ ದೇಶದ ಒಂದು ರಾಜ್ಯವಾಗಿ ಕರ್ನಾಟಕವಿದೆ. ಇಲ್ಲಿ ದೇಶ ಮತ್ತು ರಾಜ್ಯಗಳ ಒಕ್ಕೂಟವನ್ನು ತಾಯಿ-ಮಗಳ ಕೌಟುಂಬಿಕ ಸಂಬಂಧದಲ್ಲಿ ಹೆಣೆಯಲಾಗಿದೆ. ಇದೇ ಸಂಬಂಧದ ಪರಿಭಾಷೆ ಬಳಸಿ ಕುವೆಂಪು ಅವರು ತಮ್ಮ ಒಂದು ಲೇಖನದಲ್ಲಿ ಹೀಗೆ ಬರೆದಿದ್ದಾರೆ: ಕರ್ನಾಟಕ, ಭಾರತ ಮಾತೆಯ ಒಬ್ಬ ಮಗಳು; ಆಂಧ್ರ, ತಮಿಳು, ಮಲಯಾಳ, ಮಹಾರಾಷ್ಟ್ರ, ಗುಜರಾತ್, ಬಂಗಾಳಿ ಮುಂತಾದವರು ಕರ್ನಾಟಕದ ಸೋದರಿಯರು; ಮಗಳು ಹಾಳಾಗಿ ತಾಯಿ ಬೆಳೆಯುವುದು ಸಾಧ್ಯವೇ ಇಲ್ಲ - ಕುವೆಂಪು ಒಕ್ಕೂಟ ಪದ್ಧತಿ ಮತ್ತು ರಾಜ್ಯಗಳ ಸ್ವಾಯತ್ತತೆಯನ್ನು ಎತ್ತಿ ಹಿಡಿದಿದ್ದಾರೆ. ಇದು ಕನ್ನಡತನದ ಒಂದು ಲಕ್ಷಣ.

ನಾಡಗೀತೆಯಲ್ಲಿರುವ 'ಕೃಷ್ಣ ಶರಾವತಿ ತುಂಗಾ/ ಕಾವೇರಿಯ ವರ ರಂಗ/ ಚೈತನ್ಯ, ಪರಮಹಂಸ, ವಿವೇಕರ/ ಭಾರತ ಜನನಿಯ ತನುಜಾತೆ' ಎಂಬ ಸಾಲುಗಳಲ್ಲಿ ರಾಜ್ಯದ ಪ್ರಾದೇಶಿಕ ಸಮತೋಲನ ಮತ್ತು ದೇಶಕ್ಕೆ ಬೇಕಾದ ಜಾತಿ ತಾರತಮ್ಯದಿಂದ ದೂರವಾದ ಅಧ್ಯಾತ್ಮ ಚಿಂತನೆಯ ಸಂಕೇತಗಳಿವೆ. ಇಲ್ಲಿ ಕಾವೇರಿ, ಕೃಷ್ಣ, ಶರಾವತಿ, ತುಂಗಾ ನದಿಗಳೆಲ್ಲವೂ ಮುಖ್ಯ. ಪ್ರಾದೇಶಿಕ ಸಮಾನತೆಯ ಚಲನಶೀಲ ಸಂಕೇತಗಳಾಗಿ ಈ ನದಿನಾಮಗಳು ಪ್ರಸ್ತುತವಾಗುತ್ತವೆ. ಇನ್ನು ಚೈತನ್ಯ, ಪರಮಹಂಸ, ವಿವೇಕಾನಂದರ ಪ್ರಸ್ತಾಪವು ಸಾಮಾಜಿಕ ಆಯಾಮದ ಅಧ್ಯಾತ್ಮಕ್ಕೆ ಸಂಕೇತವೆನ್ನಬಹುದು. ಇದು ಸಾಮಾಜಿಕ ಅಸಮಾನತೆಯ ವಿರೋಧಿಯೂ ಹೌದು. ವಿವೇಕಾನಂದರ ವಿಚಾರಧಾರೆಯಲ್ಲಿ ಜಾತಿ, ವರ್ಣ, ವರ್ಗ ವಿರೋಧಿ ನಿಲುವು ಕಾಣಬಹುದು.

'ಸರ್ವ ಜನಾಂಗದ ಶಾಂತಿಯ ತೋಟ/ ರಸಿಕರ ಕಂಗಳ ಸೆಳೆಯುವ ನೋಟ/ ಹಿಂದೂ ಕ್ರೈಸ್ತ ಮುಸಲ್ಮಾನ/ ಪಾರಸಿಕ ಜೈನರುದ್ಯಾನ' ಎಂಬ ಸಾಲುಗಳು ಇಂದಿಗೆ ತುಂಬಾ ಅಗತ್ಯವಾದ ಧಾರ್ಮಿಕ ಸೌಹಾರ್ದತೆಯ ಪ್ರತಿಪಾದನೆಯಾಗಿವೆ. ನಮ್ಮದು ಶಾಂತಿಯ ತೋಟ, ಉದ್ಯಾನ, ಎಂದು ಹೇಳುವಲ್ಲಿಯೇ ಸೌಹಾರ್ದತೆಯೆನ್ನುವುದು ನಿಸರ್ಗ ಸಹಜ ಅಸ್ತಿತ್ವವೆಂಬ ಪರಿಕಲ್ಪನೆಯಿದೆ. ಆದರೆ, ಇಂದು ಶಾಂತಿಯ ತೋಟದಲ್ಲಿ ಅರಳಿದ ಹೂವುಗಳನ್ನು ಹೊಸಕಿ ಹಾಕಲಾಗುತ್ತಿದೆ. ವಿವಿಧತೆಯ ಉದ್ಯಾನಕ್ಕೆ ಕಿಚ್ಚು ಹಚ್ಚಲಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ನಾಡಗೀತೆಯ ಈ ಸಾಲುಗಳು ಕನ್ನಡವಾಗಿರುವುದು ಹೇಗೆ, ಕನ್ನಡತನವೆಂದರೆ ಯಾವುದು, ಎಂಬುದಕ್ಕೆ ಉತ್ತರವಾಗಿವೆ.

ಅಷ್ಟೇಕೆ, ಕ್ರಿ.ಶ. 850ರಲ್ಲೇ 'ಕವಿರಾಜಮಾರ್ಗ'ದಲ್ಲೇ 'ಪರವಿಚಾರ ಮತ್ತು ಪರಧರ್ಮವನ್ನು ಸಹಿಸುವುದೇ ನಿಜವಾದ ಬಂಗಾರ' ಎಂದು ಇಂದಿಗೂ ತುಂಬಾ ಪ್ರಸ್ತುತವಾದ ಪ್ರಜಾಸತ್ತಾತ್ಮಕ ಪ್ರತಿಪಾದನೆಯಿದೆ. ಹತ್ತನೇ ಶತಮಾನದ ಪಂಪ ಮಹಾಕವಿ ಮೊಟ್ಟಮೊದಲಿಗೆ ಜನ್ಮಮೂಲ ಜಾತಿಯನ್ನು ವಿರೋಧಿಸಿ, ಸ್ವಾಭಿಮಾನವೊಂದೇ ಕುಲವೆಂದೂ, 'ಮನುಷ್ಯಜಾತಿ ತಾನೊಂದೆ ವಲಂ' ಎಂದು ಸಾರಿದ್ದೂ ಸಾಮಾನ್ಯ ಸಂಗತಿಯಲ್ಲ. ಬಸವಣ್ಣನವರ ನೇತೃತ್ವದ ವಚನ ಚಳವಳಿಯ ಭಾಷಿಕ ಮತ್ತು ಸಾಮಾಜಿಕ ಕೊಡುಗೆ ಅನನ್ಯ. 'ರಾಜರಿಗೆ ದಾಸರಲ್ಲ, ದೇವರಿಗೆ ದಾಸರು' ಎಂದ ದಾಸ ಪರಂಪರೆಯೂ ಉಲ್ಲೇಖನೀಯ. ಸೂಫಿ ಸಂತರು, ತತ್ವಪದಕಾರರು, ಧಾರ್ಮಿಕ ಸಾಮರಸ್ಯದ ಶಾಂತಿಸೌಧ ಕಟ್ಟಿದ್ದು ವಿಶೇಷ ಅಧ್ಯಾಯ. ಕನ್ನಡವನ್ನು ಎಲ್ಲಾ ಜಾತಿ-ಧರ್ಮದವರೂ ಕಟ್ಟಿ ಬೆಳೆಸಿದ ಪರಂಪರೆ ನಮ್ಮದು. ಕರ್ನಾಟಕ ಏಕೀಕರಣ ಚಳವಳಿಯ ಏಕೈಕ ಹುತಾತ್ಮ ಬಳ್ಳಾರಿಯ ರಂಜಾನ್ ಸಾಬ್ ಎಂಬುದೂ ಇಲ್ಲಿ ಸ್ಮರಣೀಯ. ಅಂದರೆ, ಕರ್ನಾಟಕವೆನ್ನುವುದು ಸಮಾನತೆ, ಸೌಹಾರ್ದತೆಗಳ ಪರಂಪರೆಯುಳ್ಳ ನಾಡು. 'ಕನ್ನಡವಾಗಿರುವುದು' ಮತ್ತು 'ಕನ್ನಡತನ' ಹೊಂದಿರುವುದೆಂದರೆ, ಭಾಷೆಯ ಜೊತೆಗೆ ಈ ಪರಂಪರೆಯನ್ನು ಹೃದಯಸ್ಥ ಮಾಡಿಕೊಂಡು ಬೆಳೆಸಬೇಕು. ಇಲ್ಲದಿದ್ದರೆ, ಕನ್ನಡಪರ ಪ್ರತಿಪಾದನೆಯು ಅಪೂರ್ಣವಾಗುತ್ತದೆ.



ವಾಚಕರ ವಾಣಿ

ಭ್ರಷ್ಟಾಚಾರದ ಮೂಲಬೇರು ನಾವೇ!

ರಾಜ್ಯದಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರಕ್ಕೆ ನಾವೇ ಕಾರಣ ಎಂಬುದು ಕಠಿಣ ಸತ್ಯ. ಮದ್ಯ, ಹಣ, ಜಾತಿ, ಧರ್ಮ ನೋಡಿಕೊಂಡು ಮತ ಹಾಕುವ ಜನರು ಲಂಚಮುಕ್ತ ಆಡಳಿತ ಕೇಳುವುದು ವ್ಯಂಗ್ಯವೇ ಸರಿ. ಚುನಾವಣೆಯಲ್ಲಿ ತಮ್ಮ ಮತ ಮಾರಿಕೊಂಡ ಬಳಿಕ ಅಧಿಕಾರಿಗಳಿಂದ ನೀತಿವಂತಿಕೆ ನಿರೀಕ್ಷಿಸುವುದು ಪಾಪಕಾರ್ಯದ ನಂತರ ಪ್ರಾರ್ಥನೆ ಮಾಡುವಂತಾಗಿದೆ. ಭ್ರಷ್ಟ ರಾಜಕಾರಣಿಗಳು ಜನರಿಂದಲೇ ಹುಟ್ಟುತ್ತಾರೆ. ಇಂಥವರಿಂದ ಒಳ್ಳೆಯ ಅಧಿಕಾರಿಗಳನ್ನು ನಿರೀಕ್ಷಿಸಲು ಸಾಧ್ಯವೆ? ಈ ದುಃಸ್ಥಿತಿಯನ್ನು ಬದಲಾಯಿಸಲು ಮೊದಲ ಹೆಜ್ಜೆ ನಮ್ಮಿಂದಲೇ ಆರಂಭವಾಗಬೇಕಿದೆ. ನೈತಿಕತೆ ಮತ್ತು ಜಾಗೃತ ನಾಗರಿಕತೆಯ ಅರಿವು ಮೂಡಿದಾಗ ಸಮಾಜವು ಭ್ರಷ್ಟಾಚಾರಮುಕ್ತವಾಗುತ್ತದೆ. ಈ ಬದಲಾವಣೆ ಜನರ ಮನಸ್ಸಿನಿಂದಲೇ ಆರಂಭವಾಗಬೇಕಿದೆ.

ದರ್ಶನ್ ಎಂ.ಜಿ., ಕಡೂರು

ಸಾರ್ವಜನಿಕ ಪ್ರತಿಜ್ಞೆ: ದುರಭ್ಯಾಸ ಸಲ್ಲದು

ಎದುರಾಳಿಗಳ ವಿರುದ್ಧ ರಾಜಕಾರಣಿಗಳು ಏಕವಚನ ಪದ ಪ್ರಯೋಗಿಸುವುದು ಮಾಮೂಲಾಗಿದೆ. ಆ ಮೂಲಕ ಅವರ ಬೌದ್ಧಿಕಮಟ್ಟದ ಪರಿಚಯ ಮತದಾರರಿಗೂ ಆಗುತ್ತಿದೆ. ಈ ನಡುವೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಜೋಡಿ ಸುರಂಗ ರಸ್ತೆ ಯೋಜನೆ ನಿಲ್ಲಿಸಲು ದೇವರ ಹೊರತು ಯಾರಿಂದಲೂ ಸಾಧ್ಯವಿಲ್ಲ' ಎಂದಿದ್ದಾರೆ. ಅಕಸ್ಮಾತ್ ರಾಹುಲ್ ಗಾಂಧಿ ಹೇಳಿದರೆ ಸ್ಥಗಿತಗೊಳ್ಳುವುದಿಲ್ಲವೆ ಎಂದು ಹೇಳುವ ಎದೆಗಾರಿಕೆ ಕಾಂಗ್ರೆಸ್‌ನಲ್ಲಿ ಯಾರಿಗಾದರೂ ಇದೆಯೇ? ಕಾಂತರಾಜ ಆಯೋಗದ ಜಾರಿಗೆ ರಾಹುಲ್ ಅವರು ತಡೆಯೊಡ್ಡಿ ಪುನಃ ಸರ್ವೆಗೆ ಸೂಚಿಸಿದರು. ಈಗ ಹೊಸದಾಗಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಯುತ್ತಿದೆ. ಹಾಗಾಗಿ, ರಾಜಕಾರಣಿಗಳು ಸಾರ್ವಜನಿಕವಾಗಿ ಪ್ರತಿಜ್ಞೆ ಮಾಡುವ ದುರಭ್ಯಾಸವನ್ನು ಬಿಡುವುದು ಒಳಿತಲ್ಲವೆ?

ಕೃಷ್ಣ ಭಟ್ ಗೋಸಾಡ, ಬೆಂಗಳೂರು

ಸುಳ್ಳಿನ ಮುಖವಾಡದ ಅನಾವರಣ

'ಆರ್‌ಎಸ್‌ಎಸ್: ಸುಳ್ಳು ಸೃಷ್ಟಿಸುವ ಬ್ರಹ್ಮ' ಲೇಖನವು (ಲೇ: ಕಾಶ್ಯಪ ಪರ್ಣಕುಟಿ, ಪ್ರ.ವಾ., ಅ. 31) ಸುಳ್ಳಿನ ಮುಖವಾಡ ತೊಟ್ಟವರ ನಿಜಬಣ್ಣವನ್ನು ಕಳಚಿಟ್ಟಿದೆ. ಸಭೆ, ಸಮಾರಂಭದಲ್ಲಿ ಸುಳ್ಳನ್ನು ಕರಾರುವಕ್ಕಾಗಿ ಸೃಷ್ಟಿಸಿ ಹೇಳಿದರೆ ಅದನ್ನು ಆಹ್ಲಾದಿಸುವವರ ಸಂಖ್ಯೆ ಹೆಚ್ಚಾಗುತ್ತದೆ. ಈ ಸತ್ಯ ಅರಿತಿರುವ ಉಪೇಂದ್ರ ಶೆಣೈರಂತಹ ಪರಿವಾರ ಘೋಷಿತ ಬ್ರಹ್ಮಸಂಭೂತರ ಮಾತುಗಳನ್ನು ಎಲ್ಲಿಯವರೆಗೆ ಕೇಳುಗರು ಆಹ್ಲಾದಿಸುತ್ತಾರೋ ಅಲ್ಲಿಯವರೆಗೂ ಬಾರ್ಹಸ್ಪತ್ಯದಂತಹ ಗ್ರಂಥಗಳು ಸೃಷ್ಟಿಯಾಗುತ್ತಲೇ ಇರುತ್ತವೆ. ಈಗಲೂ ಕಾಣಬಹುದಾದ ದೇವದಾಸಿ ಪದ್ಧತಿ, ಅಸ್ಪೃಶ್ಯತೆ, ಸಿಡಿ ಉತ್ಸವದಂತಹ ಅನಿಷ್ಟ ಆಚರಣೆಯ ಸೃಷ್ಟಿಕರ್ತರು ಯಾರು? ಈ ಪದ್ಧತಿಗಳು ಸನಾತನ ಧರ್ಮದ ಭಾಗವೇ ಎಂದು ಪರ್ಣಕುಟಿಯವರಂತೆ ನಾವೂ ಸಮಾಧಾನದಿಂದಲೇ ಪ್ರಶ್ನಿಸಬೇಕಿದೆ. ಹಾಗೆಯೇ, ಬ್ರಹ್ಮ ಸಂಭೂತರು ಇದಕ್ಕೆ ಉತ್ತರಿಸಬೇಕಿದೆ.

ಆರ್. ಕುಮಾರ್, ಬೆಂಗಳೂರು

ವಿದ್ಯಾರ್ಥಿನಿಯರಿಗೆ 'ಶುಚಿತ್ವ' ಸೌಲಭ್ಯ ನೀಡಿ

ವಿದ್ಯಾರ್ಥಿನಿಯರು ಸ್ಯಾನಿಟರಿ ಪ್ಯಾಡ್ ಕೊಳ್ಳಲು ಹಣವಿಲ್ಲದೆ ಅಥವಾ ಸೂಕ್ತ ತಿಳಿವಳಿಕೆ ಕೊರತೆಯಿಂದ ಮುಟ್ಟಿನ ಸಮಯದಲ್ಲಿ ಅಸುರಕ್ಷಿತ ಬಟ್ಟೆ ಬಳಸುವುದರಿಂದ ಸೋಂಕಿಗೆ ತುತ್ತಾಗುತ್ತಾರೆ. ಕೆಲವರು ಪ್ಯಾಡ್ ಉಪಯೋಗಿಸಿದರೂ, ಅವುಗಳ ವಿಲೇವಾರಿಗೆ ಸೂಕ್ತ ವ್ಯವಸ್ಥೆ ಇಲ್ಲ. ಮುಟ್ಟಿನ ತ್ಯಾಜ್ಯವು ಶಾಲಾ, ಕಾಲೇಜಿನ ಶೌಚಾಲಯ, ಕಮೋಡ್‌ಗಳಲ್ಲಿ ತುಂಬಿ ಸಮಸ್ಯೆಯಾದ ಉದಾಹರಣೆಗಳಿವೆ. ಸರ್ಕಾರವು ಕೆಲವು ಶಾಲೆಗಳಲ್ಲಿ ಪ್ಯಾಡ್ ವಿಲೇವಾರಿ ಯಂತ್ರಗಳನ್ನು ಅಳವಡಿಸಿದೆ. ಸೂಕ್ತ ನಿರ್ವಹಣೆ ಕೊರತೆಯಿಂದ ಆ ಯಂತ್ರಗಳು ನಿಷ್ಕ್ರಿಯಗೊಂಡಿರುವ ದೂರುಗಳಿವೆ. ಎಲ್ಲಾ ಶಾಲಾ-ಕಾಲೇಜುಗಳಲ್ಲೂ ಪ್ಯಾಡ್ ವಿತರಣಾ ಯಂತ್ರ ಹಾಗೂ ಸುಡುವ ಯಂತ್ರ ಅಳವಡಿಸಿ, ನಿರ್ವಹಣೆಗೆ ಸೂಕ್ತ ಕ್ರಮಕೈಗೊಂಡರೆ ವಿದ್ಯಾರ್ಥಿನಿಯರ ವೈಯಕ್ತಿಕ ಸ್ವಚ್ಛತೆ ಹಾಗೂ ಶಾಲಾ-ಕಾಲೇಜುಗಳ ನೈರ್ಮಲ್ಯಕ್ಕೆ ಅನುಕೂಲವಾಗಲಿದೆ.

ತಾನ್ಸಿಯಾ ಬಾನು, ಅಜ್ಜಂಪುರ

ಪ್ರಶಸ್ತಿ: ಹೊಸ ಪರಂಪರೆಗೆ ಮುನ್ನುಡಿ

2025ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಯು ಎಲೆಮರೆಯ ಕಾಯಿಗಳ ಪ್ರತಿಭಾನ್ವೇಷಣೆಯ ವಿಧಾನಕ್ಕೆ ಮಾದರಿಯಾಗಿದೆ. ಈ ಬಾರಿ ಪ್ರಶಸ್ತಿಗೆ ಅರ್ಜಿ ಕರೆಯದೆ ಆಯ್ಕೆ ಸಮಿತಿಯು ಪ್ರಾಮಾಣಿಕವಾಗಿ ಅರ್ಹರನ್ನು ಆಯ್ಕೆ ಮಾಡಿದೆ. ಆಯ್ಕೆಯಾಗಿರುವ 70 ಸಾಧಕರಲ್ಲಿ ಹೊಸ ಮುಖಗಳು ಸಾಕಷ್ಟಿವೆ. ಸಾಮಾಜಿಕ ನ್ಯಾಯ, ಪ್ರಾದೇಶಿಕ ಸಮಾನತೆ, ಲಿಂಗ ಸಮಾನತೆಯಂತಹ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಮಿತಿಯು ಸಮಗ್ರ ಕರ್ನಾಟಕಕ್ಕೆ ನ್ಯಾಯ ಒದಗಿಸಿರುವುದು ಪ್ರಶಂಸನೀಯ.

ಬೀರಪ್ಪ ಡಿ. ಡಂಬಳಿ, ಬೆಳಗಾವಿ

ರೀಲ್ಸ್ ಹಾವಳಿಗೆ ಹಾಕಬೇಕಿದೆ ಕಡಿವಾಣ

ಕೆಲವು ತಿಂಗಳ ಹಿಂದೆ ರಿಯಾಲಿಟಿ ಶೋವೊಂದರಲ್ಲಿ ನಿರೂಪಕಿಯೊಬ್ಬರು ಅಲ್ಲಿದ್ದ ಬಾಲಕನಿಗೆ 'ದೊಡ್ಡವನಾದ ಮೇಲೆ ಏನಾಗುತ್ತೀಯ?' ಎಂದು ಕೇಳಿದಳು. 'ಯೂಟ್ಯೂಬರ್ ಆಗ್ತೀನಿ' ಎಂದು ಬಾಲಕ ಉತ್ತರಿಸಿದ. ಈ ಉತ್ತರವೇ ಸಾಮಾಜಿಕ ಜಾಲತಾಣದ ಪ್ರಭಾವ ಮಕ್ಕಳ ಮೇಲೆ ಎಷ್ಟರಮಟ್ಟಿಗೆ ಇದೆ ಎನ್ನುವುದಕ್ಕೆ ಉದಾಹರಣೆಯಂತಿದೆ. ಇತ್ತೀಚೆಗೆ ಸಾಮಾಜಿಕ ಜಾಲತಾಣವೊಂದರಲ್ಲಿ ಬಾಲಕ ಮತ್ತು ಬಾಲಕಿ ಶಾಲಾ ಸಮವಸ್ತ್ರ ಧರಿಸಿ ಶಾಲಾ ಆವರಣದಲ್ಲಿ ಕನ್ನಡದ ಸಿನಿಮಾವೊಂದರ ಯುಗಳಗೀತೆಗೆ ಹೆಜ್ಜೆ ಹಾಕಿರುವುದನ್ನು ನೋಡಿ ಮುಜುಗರವಾಯಿತು. ವಿದ್ಯೆ ಕಲಿಸುವ ವಿದ್ಯಾಲಯದಲ್ಲಿ ಈ ರೀತಿಯ ರೀಲ್ಸ್ ಮಾಡಲು ಅವಕಾಶ ನೀಡುವುದು ಸರಿಯಲ್ಲ. ಇದಕ್ಕೆ ಕಡಿವಾಣ ಹಾಕಬೇಕಿದೆ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಚುರುಮುರಿ



ಕನ್ನಡ ಹಣೆಬರಹ!

• ಚಂದ್ರಕಾಂತ ವಡ್ಡು

'ಈ ಬಾರಿಯಾದರೂ ನಮ್ಮ ಈರಪ್ಪಗೆ ರಾಜ್ಯೋತ್ಸವ ಪ್ರಶಸ್ತಿ ಸಿಗಬೇಕಿತ್ತು...' ಬೈಟು ಬಳಗದಲ್ಲಿ ಬದ್ರಿ ಅನುಕಂಪ ಸೂಚಿಸಿದ.

'ಪಾಪ, ಮಂತ್ರಿಯ ಡ್ರೈವರ್‌ನಿಂದ ಮುಖ್ಯಮಂತ್ರಿ ಅಡ್ವೈಸರ್‌ವರೆಗೆ ವಶೀಲಿ ಹಚ್ಚಿದರೂ ಕನ್ನಡಾಂಬೆ ಒಲಿಯಲಿಲ್ಲ'.

'ಹೌದು, ಆತನ ದೊಡ್ಡಮಟ್ಟದ ಪ್ರಭಾವವೂ ಸಹಾಯಕ್ಕೆ ಬರಲಿಲ್ಲ ನೋಡು...'

'ಯಾವುದೇ ಪದವಿ, ಪ್ರಶಸ್ತಿ, ಹುದ್ದೆಗೆ ಬೇಕಿರುವುದು ದೊಡ್ಡ ಪ್ರಭಾವ ಅಲ್ಲ, ದೊಡ್ಡ ಹಣೆ'- ಥೇಟ್ ಮಧುಗಿರಿ ರಾಜಣ್ಣ ಥರ ಅದೇನೋ ಹುಳ ಬಿಟ್ಟ ಕೊಟ್ರ. ಎಲ್ಲರೂ ಮುಖಮುಖ ನೋಡಿಕೊಂಡರು. ಕೊನೆಗೆ ಕೊಟ್ರಯೇ ವಿವರಣೆ ಕೊಟ್ಟ:

'ದಾನೆ ದಾನೆ ಪೆ ಲಿಖಾ ಹೈ ಖಾನೆ ವಾಲೆ ಕಾ ನಾಮ್ ಅಂತಾರೆ. ಹಾಗೇ ಹಣೆ ಹಣೆ ಮೇಲೆ ಹುದ್ದೆಯ, ಪ್ರಶಸ್ತಿಯ ಹೆಸರು ಬರೆದಿರುತ್ತದೆ'.

'ದೊಡ್ಡ ಹಣೆಯ ಮೇಲೆ ದೊಡ್ಡಕ್ಷರದಲ್ಲಿ ಬರೆದರಷ್ಟೇ ಸಾಲದು, ಬರಹದ ಭಾಷೆಯೂ ಮುಖ್ಯವಾಗುತ್ತದೆ'.

'ಬ್ರಹ್ಮ ದೊಡ್ಡ ಹುದ್ದೆಯನ್ನೇ ಬರೆದಿರಬಹುದು, ಕಿತಾಪತಿ ಚಿತ್ರಗುಪ್ತ ಚಿಕ್ಕದಾಗಿ ಓದಿಕೊಂಡರೇ...'

'ಹಾಗೇ ಆದಂತಿದೆ, ಈರಪ್ಪನ ಹಣೆಯ ಮೇಲೆ ಸಂಸ್ಕೃತದಲ್ಲಿ ಬರೆದ ಪ್ರಶಸ್ತಿ ಹೆಸರು ಓದುವಲ್ಲಿ ಸಂಸ್ಕೃತಿ ಸಚಿವ ತಂಗಡಗಿ ತಡವರಿಸಿದ್ದಾರೆ!'

'ಅದರಲ್ಲಿ ಅಚ್ಚರಿಯೇನಿಲ್ಲ. ಬಂಡೆಯಣ್ಣನ ಹಣೆಯ ಮೇಲಿನ ದೆಹಲಿ ಬ್ರಹ್ಮನ ಬರಹ ಹಿಂದಿಯಲ್ಲಿ ಇರೋದೇ ಈಗಿನ ರಾಜಕೀಯ ಫಜೀತಿಗೆ ಕಾರಣ. ಅಪ್ಪಟ ಕನ್ನಡ ಕುವರ ಯತೀಂದ್ರ ಅದನ್ನು 'ಉಪಮುಖ್ಯಮಂತ್ರಿ' ಎಂದು ಓದಿಕೊಂಡರೆ, ಮಾಗಡಿ ಬಾಲಕೃಷ್ಣಗೆ ಅದು 'ಮುಖ್ಯಮಂತ್ರಿ' ಅಂತ ಕಾಣಿಸುತ್ತಿದೆ'.

'ಒಕ್ಕೂಟ ವಿರೋಧಿ ಹಿಂದಿ ಹಣೆಬರಹ ಸಾಕು, ಕನ್ನಡ ಹಣೆಬರಹ ಬೇಕು' ತಿಂಗಳೇಶ ರಾಜ್ಯೋತ್ಸವಕ್ಕೆ ಹೊಸ ಘೋಷಣೆ ಸಿದ್ಧಪಡಿಸಿದ!

ಸಂಗತ

ಕಾಸರಗೋಡು ಕನ್ನಡಿಗರ ಅನಾಥಪ್ರಜ್ಞೆ!

ಕನ್ನಡನಾಡೂ ಒಪ್ಪಿಕೊಳ್ಳದ, ಕೇರಳವೂ ಅಪ್ಪಿಕೊಳ್ಳದ ಕಾಸರಗೋಡಿನ ಕನ್ನಡಿಗರದು ತ್ರಿಶಂಕುಸ್ಥಿತಿ. ಅವರ ಅನಾಥಪ್ರಜ್ಞೆಯನ್ನು ಸರ್ಕಾರ ಗಮನಿಸುತ್ತಿಲ್ಲವೇಕೆ?

• ರಮಾನಂದ ಬನಾರಿ, ಮಂಜೇಶ್ವರ

ಎಂದಿನಂತೆ ಈ ಬಾರಿಯ ರಾಜ್ಯೋತ್ಸವವೂ ಕಾಸರಗೋಡಿನ ಕನ್ನಡಿಗರಲ್ಲಿ ಸಂಭ್ರಮ-ಪುಲಕ ಹುಟ್ಟಿಸುತ್ತಿಲ್ಲ.

ರಾಜ್ಯೋತ್ಸವವನ್ನು ಕಾಸರಗೋಡಿನ ಕನ್ನಡಿಗರಾದ ನಾವು ಕರಾಳ ದಿನವಾಗಿ ಅನೇಕ ವರ್ಷಗಳಿಂದ ಆಚರಿಸುತ್ತಾ ಬಂದಿದ್ದೇವೆ. ರಾಜ್ಯ ಪುನರ್ ವಿಂಗಡಣೆ ಆಗಿ 63 ವರ್ಷಗಳಿಗೂ ಹೆಚ್ಚಿನ ಕಾಲ ಕಳೆದಿದೆ. ಬೇರೆ ಬೇರೆ ರೀತಿಯಲ್ಲಿ ಗರಿಷ್ಠ ಪ್ರಮಾಣದ ಹೋರಾಟ ನಡೆದಿವೆ. ಪರಿಣಾಮ ಮಾತ್ರ ಶೂನ್ಯವೇ ಹೊರತು ನಮ್ಮ ಉದ್ದೇಶ ಯಾವ ರೀತಿಯಿಂದಲೂ ಮಾನ್ಯವಾಗಲಿಲ್ಲ.

ಈಗಾಗಲೇ, 'ಕರ್ನಾಟಕದೊಂದಿಗೆ ಸಾಂಸ್ಕೃತಿಕ ವಿಲೀನೀಕರಣ' ಎನ್ನುವ ಸೂತ್ರವನ್ನು ಸರ್ಕಾರಗಳ ಗಮನಕ್ಕೆ ತಂದಿದ್ದೇವೆ. ಕನ್ನಡಿಗರ, ಕನ್ನಡ ಭಾಷೆಯ, ಸಂಸ್ಕೃತಿಯ ಹಿತದೃಷ್ಟಿಯಿಂದ ಶುಭವನ್ನು ಹಾರೈಸುವ ಎಲ್ಲರ ಗಮನಕ್ಕೂ ಈ ಸೂತ್ರವನ್ನು ವಿವಿಧ ಸಂವಹನ ಮಾಧ್ಯಮಗಳ ಮೂಲಕ ತರಲಾಗಿದೆ.

ಸೂತ್ರದ ಬಗ್ಗೆ ಮಾತಾಡುವುದಕ್ಕೆ ಮೊದಲು ಒಂದು ಪ್ರಸ್ತುತವಾದ ಪ್ರಶ್ನೆಯನ್ನು ನಾವು ಎತ್ತಬೇಕು. ಭಾಷಾ ನೆಲೆಯಲ್ಲಿ ಅಥವಾ ಸಂಸ್ಕೃತಿಯ ನೆಲೆಯಲ್ಲಿ ಕಾಸರಗೋಡಿನ ಸ್ಥಾನಮಾನ ಏನು ಎನ್ನುವುದಕ್ಕೆ ಕರ್ನಾಟಕ ಸರ್ಕಾರದ ದೃಷ್ಟಿಯಿಂದ ಸ್ಪಷ್ಟೀಕರಣ ಇನ್ನೂ ನಮಗೆ ದೊರೆತಿಲ್ಲ. ಕಾಸರಗೋಡನ್ನು ಗಡಿನಾಡು ಎನ್ನುವ ವಿಭಾಗಕ್ಕೆ ಸೇರಿಸಿ (ವಿವಾದಿತ ಪ್ರದೇಶ) ಬೇರೆ ಬೇರೆ ಸೌಲಭ್ಯಗಳನ್ನು ಕಲ್ಪಿಸಲಾಗಿದ್ದು, ಕೇಂದ್ರ ಸರ್ಕಾರವೂ ಆಂಶಿಕವಾಗಿಯಾದರೂ ಇದನ್ನು ಒಪ್ಪಿಕೊಂಡಿದೆ ಎನ್ನುವುದಕ್ಕೆ ಇತ್ತೀಚೆಗಿನ ಒಂದು ಜ್ವಲಂತ ನಿದರ್ಶನ ಹೇಳುವುದಾದರೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕಾಸರಗೋಡಿಗೆ ಆದ ಅನ್ಯಾಯವನ್ನು ತಿದ್ದುವಲ್ಲಿ ತಕ್ಷಣ ತಮ್ಮದೇ ಆದ ರೀತಿಯಿಂದ ಸ್ಪಂದಿಸಿದ್ದಾರೆ.

ಒಳನಾಡು, ಹೊರನಾಡು, ಗಡಿನಾಡು ಎಂಬ ವಿಭಾಗೀಕರಣ ಇದೆ. ಇದರಲ್ಲಿ ನಿಜವಾದ ಅರ್ಥದಲ್ಲಿ ಗಡಿನಾಡು ಯಾವುದು? ನಾನು ತಿಳಿದಂತೆ ಕಾಸರಗೋಡು ಮತ್ತು ಇನ್ನೂ ಒಂದೆರಡು ಪ್ರದೇಶಗಳು ಗಡಿನಾಡು ಎಂದರೆ ವಿವಾದಾಸ್ಪದ ಆದಂತಹ ಪ್ರದೇಶಗಳಾಗಿ ಗುರುತಿಸಲ್ಪಟ್ಟಿವೆ. ಈ ಗಡಿನಾಡಿಗೆ ಪ್ರತ್ಯೇಕವಾದಂತಹ ಕೆಲವು ನಿಯಮಾವಳಿಗಳು ಇವೆ ಎನ್ನುವುದನ್ನು ಸರ್ಕಾರವೂ ಒಪ್ಪಿಕೊಂಡಿದೆ ಎಂಬ ಕಾರಣದಿಂದಾಗಿಯೇ ವರ್ಷಗಳ ಅಂತರದಲ್ಲಿ ಅಲ್ಪಸಂಖ್ಯಾತರ ಆಯೋಗ ಈ ಪ್ರದೇಶಕ್ಕೆ ಬಂದು ಇಲ್ಲಿನ ಜನರ ಯೋಗಕ್ಷೇಮ ವಿಚಾರಿಸುತ್ತಿರುವುದನ್ನು ನಾವು ನೋಡಿದ್ದೇವೆ.



ಆದರೆ, ಗಡಿನಾಡು ಎನ್ನುವ ಪ್ರತ್ಯೇಕವಾದ ಅಸ್ತಿತ್ವ ಇರುವುದೇ ಹೌದಾದರೆ, ಕೇರಳ ಸರ್ಕಾರ ಕೂಡ ಈ ಸತ್ಯವನ್ನು ಅಂಗೀಕರಿಸಬೇಕಾಗುತ್ತದೆ. ಕೇರಳ ಸರ್ಕಾರ ಈಗ ಇದನ್ನು ಗಡಿನಾಡು ಎಂದು ಗುರುತಿಸಿದ ಚಿಹ್ನೆಗಳು ಮಾತ್ರ ಕಾಣಿಸುತ್ತಿಲ್ಲ. ಅದರ ಬದಲು, ಇದನ್ನು ಒಳನಾಡು ಎಂಬಂತೆ ಅವರು ನಡೆಸಿಕೊಂಡಿದ್ದಾರೆ. ಇದರಿಂದ ಗಡಿನಾಡಿನ ಭಾಷೆ, ಸಂಸ್ಕೃತಿಯ ಅಸ್ತಿತ್ವಕ್ಕೆ, ಅದರ ಸಂರಕ್ಷಣೆಗೆ ತುಂಬಾ ಅಪಾಯದ ವಿದ್ಯಮಾನಗಳು ಸಂಭವಿಸುತ್ತಿವೆ. ಮುಖ್ಯವಾಗಿ, ಶಿಕ್ಷಣ ಕ್ಷೇತ್ರದಲ್ಲಿ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ. ಅಭಿವೃದ್ಧಿ ಕ್ಷೇತ್ರದಲ್ಲೂ ಈ ಪ್ರದೇಶ ಅವಗಣನೆಗೆ ಒಳಗಾಗಿದೆ.

ಕೇರಳದ ಒಳನಾಡಿಗೆ ನಾವು ಸಂಬಂಧಿಸಿದವರಾದರೆ, ಇಲ್ಲಿನ ಕನ್ನಡಿಗರ ಅರ್ಥಾತ್ ಸಮಸ್ತ ಕೇರಳಿಗರೊಂದಿಗೆ ವಿಲೀನಗೊಂಡಿರುವ ಕನ್ನಡಿಗರ ಸುಖ-ದುಃಖವನ್ನು ಸಂಪೂರ್ಣವಾಗಿ ನಿರ್ವಹಿಸಬೇಕಾದ ಹೊಣೆಗಾರಿಕೆ ಕೇರಳ ಸರ್ಕಾರಕ್ಕಿದೆ. ಅದರೊಂದಿಗೆ ಗಡಿನಾಡು ಎಂಬ ನೆಲೆಯಲ್ಲಿ ವಿವಾದಿತ ಪ್ರದೇಶಕ್ಕೆ ಏನೆಲ್ಲಾ ವಿಶೇಷ ಸೌಲಭ್ಯಗಳನ್ನು ಕೊಡಬೇಕೋ ಅದೆಲ್ಲವನ್ನು ನೀಡುವುದು ಕೇರಳ ಸರ್ಕಾರದ ಕರ್ತವ್ಯ. ಇಲ್ಲಿನ ಸಂಸ್ಕೃತಿಗೆ ಬಾಧಕವಾಗದ ಹಾಗೆ ಸರ್ಕಾರದ ಸುತ್ತೋಲೆಗಳನ್ನು ಒಳಗೊಂಡಂತೆ ಎಲ್ಲವನ್ನು ಕನ್ನಡದಲ್ಲಿ ಅಥವಾ ಇಂಗ್ಲಿಷ್‌ನಲ್ಲಾದರೂ ಒದಗಿಸಬೇಕಾದ್ದೂ ಈ ಕರ್ತವ್ಯದಲ್ಲಿ ಒಳಗೊಳ್ಳುತ್ತದೆ. ಕರ್ನಾಟಕ ಸರ್ಕಾರ ಈ ಬಗ್ಗೆ ಏನು ನಿಲುವು ಹೊಂದಿದೆ ಎನ್ನುವುದು ಅತ್ಯಂತ ಪ್ರಸ್ತುತವಾದ ಪ್ರಶ್ನೆ. ಆದರೆ, ಇದಕ್ಕೆ ಸ್ಪಷ್ಟವಾದ ಉತ್ತರವು ಕರ್ನಾಟಕ ಸರ್ಕಾರದ ಪರವಾಗಿ ನಮಗೆ ಸಿಗುವುದಿಲ್ಲ.

ಒಳನಾಡು ಎಂದು ಗುರುತಿಸಿದ್ದರೆ, ಒಳನಾಡಿಗೆ ಸಿಗಬೇಕಾದ ಎಲ್ಲಾ ಸೌಲಭ್ಯಗಳು ನಮಗೆ ಸಿಗಬೇಕು. ಅದು ಸಾಧ್ಯವೂ ಅಲ್ಲ ಮತ್ತು ಅದನ್ನು ಭಾಷಾವಾರು ರಾಜ್ಯ ರಚನೆಯ ಸಂದರ್ಭದಲ್ಲಿ ಶಾಸನಬದ್ಧವಾಗಿ ಯಾರೂ ಒಪ್ಪಿಕೊಳ್ಳುವ ಹಾಗಿಲ್ಲ. ಹಾಗಾದರೆ ಇದನ್ನು ಹೊರನಾಡು ಎಂದು ಗುರುತಿಸಿರುವರೆ ಅಥವಾ ಗಡಿನಾಡು ಎಂದು ಗುರುತಿಸಿರುವರೆ? ಇಲ್ಲಿಗೆ ಕರ್ನಾಟಕ ಸರ್ಕಾರ ಕೊಡಬೇಕಾದ ಸೌಲಭ್ಯಗಳು ಯಾವುವು? ಅಥವಾ ಕರ್ನಾಟಕ ಸರ್ಕಾರ ಇಲ್ಲಿ ವಾಸಿಸುತ್ತಿರುವ ಕನ್ನಡಿಗರ ಪರವಾಗಿ, ಸಮಸ್ತ ಕಾಸರಗೋಡು ಪ್ರಶ್ನೆಯ ಪರವಾಗಿ ಯಾವ ಧೋರಣೆ ಹೊಂದಿದೆ? ಮಹಾಜನ ಆಯೋಗ ಇದು ಕರ್ನಾಟಕಕ್ಕೆ ಸೇರಬೇಕಾದ ಭೂಪ್ರದೇಶ ಎಂದು ತನ್ನ ವರದಿಯಲ್ಲಿ ಹೇಳಿದೆ. ಆ ವರದಿ ಇಂದಿಗೂ ಕಡತದಲ್ಲಿ ಹಾಗೇ ಉಳಿದಿದೆ. ನೇರವಾಗಿ ನಾವು ಪ್ರಶ್ನಿಸಬಯಸುವುದು, ನಮ್ಮಲ್ಲಿಂದ ಚುನಾಯಿತರಾಗಿ ಹೋದ ಜನಪ್ರತಿನಿಧಿಗಳು ಯಾವ ಕಾರಣಕ್ಕೆ ಮಹಾಜನ ಆಯೋಗದ ವರದಿಯನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಲಿಲ್ಲ? ಇದು ಅತ್ಯಂತ ಗಂಭೀರ ಪ್ರಶ್ನೆ. ಕಾಸರಗೋಡಿನ ಕನ್ನಡಿಗರನ್ನು ಅನಾಥಪ್ರಜ್ಞೆ ಬಾಧಿಸುತ್ತಿದೆ. ಹೀಗಾಗುವುದು ಪ್ರಜಾಸತ್ತೆಗೆ ಯಾವ ದೃಷ್ಟಿಯಿಂದಲೂ ಆರೋಗ್ಯಕರವಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕನ್ನಡ ಭಾಷೆಯನ್ನು ಹರಡುವುದಕ್ಕೆ ಹಲವು ಮಾರ್ಗಗಳಿವೆ. ಅನ್ಯಭಾಷಿಕರಿಗೆ ಕನ್ನಡ ಕಲಿಸುವುದು ಅದರಲ್ಲಿ ಒಂದು. ಅದು, ರಾಜ್ಯಕ್ಕೆ ಬಂದ 'ಹೊರಗಿನ'ವರನ್ನು 'ಒಳಗಿನ'ವರನ್ನಾಗಿ ಮಾಡಿಕೊಳ್ಳುವ ಅತ್ಯುತ್ತಮ ವಿಧಾನವಾಗಿದೆ. ಬೆಂಗಳೂರಿನಲ್ಲಿ ಮತ್ತು ಮೈಸೂರಿನಲ್ಲಿ ಅನ್ಯಭಾಷಿಕರಿಗೆ ಕನ್ನಡ ನುಡಿಯ ಜೇನನ್ನು ಹಂಚುತ್ತಿರುವ ಸಂಸ್ಥೆ–ವ್ಯಕ್ತಿಗಳ ಪರಿಚಯ ಇಲ್ಲಿದೆ. ಜತೆಗೆ, ಕೃತಕ ಬುದ್ಧಿಮತ್ತೆಯ ಕಾಲದಲ್ಲೂ ವಿವಿಧ ಬಣ್ಣ, ವಿನ್ಯಾಸಗಳಲ್ಲಿ ಕನ್ನಡದಲ್ಲಿ ವಿಪುಲವಾಗಿ ಮೈದಳೆಯುತ್ತಿರುವ ಮಕ್ಕಳ ಸಾಹಿತ್ಯದ ಬಗೆಗಿನ ನೋಟವಿದೆ. ಕನ್ನಡದ ಸಮೃದ್ಧ ನಾಳೆಗಳಿಗಾಗಿ ಕನ್ನಡಿಗರು ಏನು ಮಾಡಬೇಕು ಎನ್ನುವುದರ ಹೊಳಹು ಇಲ್ಲಿದೆ

ಎಳೆಯರ ಎದೆ ಬಾನಿನೊಳು ಮಕ್ಕಳ ಸಾಹಿತ್ಯದ ಮಳೆಬಿಲ್ಲು

• ರಘುನಾಥ ಚ.ಹ.



ಕನ್ನಡದ ನಾಳೆಗಳ ಬಗ್ಗೆ ಕಾಳಜಿಯುಳ್ಳವರು ಬಿಡುಗಣ್ಣಾಗಿರಬೇಕಾದುದು ಎಳೆಯ ಮನಸ್ಸುಗಳ ಬಗ್ಗೆ. ಎಳೆಯರಿಲ್ಲದೆ ನಾಳೆಗಳೂ ಇಲ್ಲ, ಕನ್ನಡವೂ ಇಲ್ಲ. ಹಾಗಾಗಿ, ಕನ್ನಡದ ನಾಳೆಗಳೆಂದರೆ ಮಕ್ಕಳ ಇಂದುಗಳು. ಈ ಇಂದುಗಳನ್ನು ಕನ್ನಡಮಯಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುವಂತಹದ್ದು ಮಕ್ಕಳ ಸಾಹಿತ್ಯ.

ಕನ್ನಡಕ್ಕೆ ಸಂಬಂಧಿಸಿದಂತೆ ಸಿನಿಮಾ, ರಂಗಭೂಮಿ, ವಿಜ್ಞಾನ ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಏನಾಗುತ್ತಿದೆ ಎನ್ನುವ ಕುತೂಹಲದ ಅವಲೋಕನಗಳು ಆಗಾಗ ನಡೆಯುತ್ತಿರುತ್ತವೆ. ಸಾಹಿತ್ಯದಲ್ಲಿನ ಹೊಸತನದ ಹುಡುಕಾಟವೂ ವಿರಳವೇನಲ್ಲ. ಆದರೆ, ಮಕ್ಕಳ ಸಾಹಿತ್ಯದಲ್ಲಿ ಏನಾಗುತ್ತಿದೆ ಎನ್ನುವ ಬಗ್ಗೆ ಚರ್ಚೆಗಳು ಅಪರೂಪ. ಕನ್ನಡ ಸಾಹಿತ್ಯದಲ್ಲಿ 'ಮಕ್ಕಳ ಸಾಹಿತ್ಯ' ಅಪೌಷ್ಟಿಕ ಶಿಶು; ಬೀದಿಯಲ್ಲಾಡುವ ಮಗು. ಆದರೆ, ಇತ್ತೀಚಿನ ವರ್ಷಗಳಲ್ಲಿ ಕನ್ನಡದ ಮಕ್ಕಳ ಸಾಹಿತ್ಯ ಹೊಸ ಟಿಸಿಲೊಂದನ್ನು ಕಂಡಿದೆ; ಅದರ ಫಲವಾಗಿಯೇ, ಚಿಣ್ಣರ ಮನಸ್ಸನ್ನು ಥಟ್ಟನೆ ಸೆಳೆಯುವಂಥ ಪುಸ್ತಕಗಳು ರೂಪುಗೊಳ್ಳುತ್ತಿವೆ.

ಪುಸ್ತಕವೊಂದು ಎಳೆಯರ ಗಮನಸೆಳೆಯುವ ನಿಟ್ಟಿನಲ್ಲಿ ವಿಷಯದ ಜೊತೆಗೆ ವಿನ್ಯಾಸದ ಪಾತ್ರವೂ ಮುಖ್ಯ. ಇಂಗ್ಲಿಷ್‌ನಲ್ಲಿ ನೋಡಿ: ನುಣ್ಣನೆ ಕಾಗದದಲ್ಲಿ ಮುದ್ರಣಗೊಳ್ಳುವ ಮಕ್ಕಳ ಕಥೆ–ಪದ್ಯ ಪುಸ್ತಕಗಳಲ್ಲಿ ಬಣ್ಣದ ಚಿತ್ರಗಳಿರುತ್ತವೆ. ವಿವಿಧ ಆಕಾರಗಳಲ್ಲಿ, ಸ್ವರೂಪದಲ್ಲಿ ಪುಸ್ತಕಗಳು ರೂಪುಗೊಳ್ಳುತ್ತವೆ. ಅಕ್ಷರಗಳು ಗೌಣವಾಗಿ, ಬಿಂಬಗಳ ಮೂಲಕವೇ ಮಕ್ಕಳ ಮನಸ್ಸಿಗೆ ವಿಷಯವನ್ನು ಮುಟ್ಟಿಸುವ ಪ್ರಯತ್ನಗಳು ನಡೆಯುತ್ತವೆ. ಇಂಗ್ಲಿಷ್ ಸಾಹಿತ್ಯದಲ್ಲಿ ಸಹಜ ಎನ್ನುವಂತಹದ್ದು ಕನ್ನಡ ಮಕ್ಕಳಿಗೆ ಐಷಾರಾಮಿ ಎನ್ನುವ ಅಭಿಪ್ರಾಯ ಕಳೆದ ಮೂರ್ನಾಲ್ಕು ವರ್ಷಗಳ ಹಿಂದಿನವರೆಗೂ ಇತ್ತು. ಬಹುವರ್ಣದ ಮುದ್ರಣ ಕನ್ನಡದಲ್ಲಿ ಗಿಟ್ಟುವುದಿಲ್ಲ ಎನ್ನುವ ಕಾರಣಕ್ಕೆ ಕಪ್ಪುಬಿಳುಪಿನ ಉತ್ಪನ್ನವೇ ಗತಿ ಎನ್ನುವ ಸ್ಥಿತಿಯಿತ್ತು. ಅಕ್ಷರಗಳ ಗಾತ್ರ ಸ್ವಲ್ಪ ದೊಡ್ಡದಾಗಿರುವುದು ಬಿಟ್ಟರೆ, ಮಕ್ಕಳ ಪುಸ್ತಕಗಳಿಗೂ ಉಳಿದ ಪುಸ್ತಕಗಳಿಗೂ ವ್ಯತ್ಯಾಸವಿಲ್ಲದಂತೆ ಕನ್ನಡ ಪುಸ್ತಕೋದ್ಯಮವಿತ್ತು. ಈಗ, ಹೊಳೆಯಲ್ಲಿ ನೀರು ಸಾಕಷ್ಟು ಹರಿದಿದೆ; ಎಳೆಯರ ಪುಸ್ತಕದ ಪುಟಗಳು ನವಿಲುಗರಿಗಳಂತಾಗಿವೆ.

ಏನೆಲ್ಲಾ ಆಗಿದೆ ನೋಡಿ: ಈ ಕಾಲದ ಮಕ್ಕಳಿಗೆ ಏನೆಲ್ಲ ಬೇಕು ಎನ್ನುವುದರ ಬಗ್ಗೆ ಪ್ರಕಾಶಕರು ಯೋಚಿಸುತ್ತಿದ್ದಾರೆ. ಮಕ್ಕಳ ಸಾಹಿತ್ಯದಲ್ಲಿ ಸಮಕಾಲೀನ ಸಂಗತಿಗಳನ್ನು ತರುವುದು ಹೇಗೆ ಎನ್ನುವ ಚಿಂತನೆ ಶುರುವಾಗಿದೆ. ಈ ಚಿಂತನೆಗಳು ಪ್ರಯತ್ನವಾಗಿಯೂ ಪ್ರಯೋಗವಾಗಿಯೂ ಪುಸ್ತಕಗಳ ರೂಪದಲ್ಲಿ ಮೈದಳೆಯುತ್ತಿವೆ. ಈ ನಿಟ್ಟಿನಲ್ಲಿ ತಕ್ಷಣ ನೆನಪಿಸಿಕೊಳ್ಳಬಹುದಾದುದು: 'ಬಹುರೂಪಿ', 'ನವಕರ್ನಾಟಕ' ಹಾಗೂ 'ಅಭಿನವ' ಪ್ರಕಾಶನ ಸಂಸ್ಥೆಗಳ ಪುಸ್ತಕಗಳನ್ನು.

'ಬಹುರೂಪಿ' ಪ್ರಕಾಶನದ ಇತ್ತೀಚಿನ ಸುಮಾರು ಮೂವತ್ತು ಪುಸ್ತಕಗಳು ಚಿಣ್ಣರ ಭಾವಜಗತ್ತನ್ನು ಮುದಗೊಳಿಸುವಂತಿವೆ. ಆಕಾರ ಹಾಗೂ ಆಶಯ, ಎರಡು ಕಾರಣಗಳಿಂದಲೂ ಗಮನಸೆಳೆಯುವಂತಿರುವ ಈ ಪುಸ್ತಕಗಳು, ಹೊಳಪು ಕಾಗದ ಹಾಗೂ ಬಣ್ಣದ ಚಿತ್ರಗಳ ಮೂಲಕ ನಳನಳಿಸುತ್ತಿರುವ ಹೂಗಳಂತಿವೆ. ಮಕ್ಕಳ ಪುಸ್ತಕಗಳ ಪ್ರಕಟಣೆಯಲ್ಲಿ ಸದಾ ಮುಂದಿರುವ 'ನವಕರ್ನಾಟಕ' ಪ್ರಕಾಶನದ ಪುಸ್ತಕಗಳು ಕೂಡ ಆಧುನಿಕತೆಗೆ ತೆರೆದುಕೊಂಡಿವೆ, ಹೊಸಗಾಲದ ಮಕ್ಕಳ ನಿರೀಕ್ಷೆಗಳಿಗೆ ಸ್ಪಂದಿಸುವಂತಿವೆ. ಈ ಎರಡೂ ಸಂಸ್ಥೆಗಳ ಕೆಲವು ಪ್ರಕಟಣೆಗಳಿಗೆ 'ಟಾಟಾ ಟ್ರಸ್ಟ್‌'ನ ಭಾಗವಾದ 'ಪರಾಗ್' ಸಂಸ್ಥೆಯ ಸಹಯೋಗ ದೊರೆತಿದೆ. ದೇಶದಲ್ಲಿ ಮಕ್ಕಳ ಸಾಹಿತ್ಯವನ್ನು ಮುನ್ನೆಲೆಗೆ ತರುತ್ತಿರುವ ಪ್ರಯೋಗಗಳಿಗೆ ಬೆಂಬಲವಾಗಿ ನಿಂತಿರುವ 'ಪರಾಗ್', ಕನ್ನಡದಲ್ಲೂ ಮಕ್ಕಳ ಸಾಹಿತ್ಯದ ಭಿನ್ನ ಪ್ರಯತ್ನಗಳ ಕೈಕುಲುಕುತ್ತಿದೆ.

ಮಕ್ಕಳ ಸಾಹಿತ್ಯದಲ್ಲಿ 'ಅಭಿನವ' ಪ್ರಕಾಶನದ್ದು ಮಹತ್ವದ ಹೆಜ್ಜೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲಸಾಹಿತ್ಯ ಪುರಸ್ಕಾರಗಳು ಕನ್ನಡದಲ್ಲಿ ಹೆಚ್ಚು ದೊರಕಿರುವುದು 'ಅಭಿನವ'ದ ಪ್ರಕಟಣೆಗಳಿಗೆ. ಕೆ.ವಿ.ತಿರುಮಲೇಶರ ಮಕ್ಕಳ ಪದ್ಯಗಳ ಹತ್ತು ಕೃತಿಗಳನ್ನು ಒಮ್ಮೆಗೇ ಇಡುಗಂಟಿನಂತೆ ಪ್ರಕಟಿಸಿದ್ದು 'ಅಭಿನವ'ದ ಹೆಗ್ಗಳಿಕೆ. ಈ ಬಳಗ, ಇತ್ತೀಚೆಗೆ 'ಜಿಬಿ ಹೊಂಬಳ ಪುಸ್ತಕಮಾಲಿಕೆ'ಯಲ್ಲಿ ಮಕ್ಕಳಿಗಾಗಿ ಏಳು ಚಿತ್ರ–ಕಥನ ಪುಸ್ತಕಗಳನ್ನು ಪ್ರಕಟಿಸಿದೆ; ಹೊಸ ಹಾದಿಗೆ ಹೊರಳಿಕೊಂಡಿದೆ.

ಪುಟಾಣಿಗಳ ಸುಂದರ ಪುಸ್ತಕಗಳಿಗೆ ಹೆಸರಾದ ಮತ್ತೊಂದು ಪ್ರಕಾಶನ 'ಹರಿವು ಬುಕ್ಸ್'. ಹರಿವಿನ ಪ್ರಕಟಣೆಗಳಾದ 'ಚಿಕ್ಕು ಬುಕ್ಕು', 'ಪುಟಾಣಿ ಪಂಟರ್ಸ್', 'ಜಿಪ್ಸಿ ಜೀತು' ಸೇರಿದಂತೆ ಬಹುತೇಕ ಪುಸ್ತಕಗಳು ಆಕರ್ಷಕ ಚಿತ್ರಗಳು ಹಾಗೂ ಗುಣಮಟ್ಟದ ನುಣುಪು ಕಾಗದದಲ್ಲಿ ರೂಪುಗೊಂಡಿವೆ. ಕವಿ ಎಚ್‌.ಎಸ್. ವೆಂಕಟೇಶ ಮೂರ್ತಿ ಅವರ ಸಂಪಾದಕತ್ವದಲ್ಲಿ 'ವಸಂತ ಪ್ರಕಾಶನ' ಪ್ರಕಟಿಸಿದ 'ವಸಂತ ಬಾಲಸಾಹಿತ್ಯ ಮಾಲೆ'ಯ ಹನ್ನೆರಡು ಪುಸ್ತಕಗಳು, ಇತ್ತೀಚಿನ ವರ್ಷಗಳಲ್ಲಿ ಕನ್ನಡದ ಮಕ್ಕಳ ಸಾಹಿತ್ಯಕ್ಕೆ ಸೇರ್ಪಡೆಯಾಗಿರುವ ಉತ್ತಮ ಕೃತಿಗಳಾಗಿವೆ.



ಎಳೆಯರಿಗಾಗಿ ಬರೆಯುತ್ತಿರುವವರಲ್ಲಿ ಸಾಹಿತ್ಯ ರಚನೆಗೆ ಸಂಬಂಧಿಸಿದ ಗ್ರಹಿಕೆ ಬದಲಾಗುತ್ತಿರುವುದು, ಮಕ್ಕಳ ಸಾಹಿತ್ಯದಲ್ಲಿನ ಇತ್ತೀಚಿನ ದಿನಗಳ ಪ್ರಮುಖ ಬದಲಾವಣೆ. ಲೇಖಕ ಬರೆಯುವುದು ತನಗಾಗಿ, ತನ್ನ ತೃಪ್ತಿಗಾಗಿ ಎನ್ನುವ ಗ್ರಹಿಕೆ ಈ ಮೊದಲಿತ್ತು. ಈಗ, ಬರವಣಿಗೆಯ ಕೇಂದ್ರದಲ್ಲಿ ಮಕ್ಕಳನ್ನು ತಲಪುವ ಉದ್ದೇಶವಿದೆ

ಆನಂದ ಪಾಟೀಲ, ಹಿರಿಯ ಸಾಹಿತಿ

ಕನ್ನಡದ ಪ್ರಕಾಶಕರ ಜೊತೆಗೆ, ದೇಶದ ವಿವಿಧ ಭಾಷೆಗಳಲ್ಲಿ ಮಕ್ಕಳ ಸಾಹಿತ್ಯದ ದಿಕ್ಕುದೆಸೆ ಬದಲಿಸುವ ಪ್ರಯತ್ನದಲ್ಲಿ ತೊಡಗಿರುವ 'ಪ್ರಥಮ್' ಸಂಸ್ಥೆ ಕನ್ನಡದಲ್ಲೂ ಹಲವು ಪುಸ್ತಕಗಳನ್ನು ಪ್ರಕಟಿಸುತ್ತಿದೆ. 'ಪ್ರಥಮ್' ಪ್ರಕಟಣೆಗಳಿಗೆ ಮುದ್ರಣದ ಗುಣಮಟ್ಟದಲ್ಲಿ ಸದಾ ಪ್ರಥಮದರ್ಜೆ.

ಏಕವ್ಯಕ್ತಿ ಸಾಹಸದ ರೂಪದಲ್ಲೂ ಕೆಲವರು ಉತ್ತಮ ಪುಸ್ತಕಗಳನ್ನು ಪ್ರಕಟಿಸಿರುವುದಿದೆ. ಅವರಲ್ಲಿ ಮುಖ್ಯರಾದವರು, ಬೆಳಗಾವಿ ಮೂಲದ ಅನುಪಮಾ ಬೆಣಚಿನಮರ್ಡಿ. 'ಅವ್ವ ಪುಸ್ತಕ'ದ ಮೂಲಕ ಅವರು ಪ್ರಕಟಿಸಿರುವ 'ಪತ್ತೇದಾರ ಪ್ರಣವ', 'ಕೊಂಚಿಗೆಯ ಸಾಹಸ', 'ಇರುವೆಗಳು ಮತ್ತು ಆಗಂತುಕ', 'ಕೆಂಪಿ' ಮುಂತಾದ ಪುಸ್ತಕಗಳು ಎಳೆಯರಲ್ಲಿ ಪುಸ್ತಕಪ್ರೀತಿಯನ್ನು ಮೂಡಿಸುವಂತಿವೆ. ಮುಖ್ಯವಾಗಿ, 'ಕನ್ನಡ ವರ್ಣಮಾಲೆ' ಕೃತಿ, ಬಿಂಬದ ಜೊತೆಗೆ ಅಕ್ಷರವನ್ನು ಪರಿಚಯಿಸುವ, ಇಂಗ್ಲಿಷ್ ಅಕ್ಷರಗಳ ಮೂಲಕ ಉಚ್ಚಾರಣೆ ತಿಳಿಸುವ ವಿಶಿಷ್ಟ ಪ್ರಯತ್ನ; ಕನ್ನಡದಲ್ಲಿ ಇಂಥ ಪ್ರಯತ್ನಗಳು ಇಲ್ಲವೇ ಇಲ್ಲವೆನ್ನುವಷ್ಟು ಅಪರೂಪ. ಶಿವಲಿಂಗಪ್ಪ ಹಂದಿಹಾಳ್ ಅವರ 'ನೋಟ್‌ಬುಕ್' (ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲಸಾಹಿತ್ಯ ಪುರಸ್ಕೃತ) ಭಿನ್ನಸಾಧ್ಯತೆಗಳ ಮೂಲಕ ಮಕ್ಕಳನ್ನು ಸೆಳೆಯಲು ಪ್ರಯತ್ನಿಸಿರುವ ಮಕ್ಕಳ ಕಥೆಗಳ ಸಂಕಲನ. ಉತ್ತಮ ಮುದ್ರಣದ ಜೊತೆಗೆ, ಕ್ಯುಆರ್ ಕೋಡ್‌ಗಳ ಮೂಲಕ ಕಥೆಗಳನ್ನು ಕೇಳುವ ಅವಕಾಶ ಪುಸ್ತಕದಲ್ಲಿದೆ. ಇಂಥ 'ಕೇಳು ಪುಸ್ತಕ'ಗಳು ಮಕ್ಕಳಿಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕಾಗಿದೆ.

ಗುಣಮಟ್ಟದ ಪ್ರಕಟಣೆಗಳಷ್ಟೇ ಅಲ್ಲ, ಮಕ್ಕಳ ಸಾಹಿತ್ಯದ ಸ್ವರೂಪದ ಬಗೆಗಿನ ಚಿಂತನೆಗಳೂ ಕನ್ನಡದಲ್ಲಿ ನಡೆಯುತ್ತಿವೆ. ಎಳೆಯರಿಗಾಗಿ ಬರೆಯುವವರಿಗೆ ಹಾಗೂ ಮಕ್ಕಳ ಸಾಹಿತ್ಯದ ಕುತೂಹಲಿಗಳಿಗಾಗಿ 'ಬಹುರೂಪಿ' ಕಮ್ಮಟಗಳನ್ನು ನಡೆಸಿದೆ. 'ಪರಾಗ್' ಸಂಸ್ಥೆಯ ಸಹಯೋಗದಲ್ಲೂ ಮಾತುಕತೆ ಕೂಟಗಳು ನಡೆದಿವೆ.

ಮಕ್ಕಳ ಸಾಹಿತ್ಯಕ್ಕೆ ಜೀವನವನ್ನು ತೆತ್ತುಕೊಂಡಿರುವ ಆನಂದ ಪಾಟೀಲರು ಹಿಂದೊಮ್ಮೆ ಶಾಲಾಮಕ್ಕಳಿಗಾಗಿ ಕಮ್ಮಟಗಳನ್ನು ನಡೆಸಿದ್ದರು. ಈಗಲೂ ಎಳೆಯರ ಲೋಕದಲ್ಲಿ ಅವರದು ದಣಿವರಿಯದ ವಿಹಾರ. ಅದೇ ಹಾದಿಯಲ್ಲಿ, ಸ.ರಘುನಾಥ ಮೇಷ್ಟ್ರು ಮಕ್ಕಳಿಗಾಗಿ ಇತ್ತೀಚೆಗಷ್ಟೇ ಸರಣಿ ಕಮ್ಮಟಗಳನ್ನು ನಡೆಸಿದ್ದಾರೆ. ಮಕ್ಕಳಿಗೆ ಓದುವ, ಬರೆಯುವ ಗುಟ್ಟನ್ನು ಪರಿಚಯಿಸುವುದರ ಜೊತೆಗೆ, ಕಮ್ಮಟಾರ್ಥಿಗಳ ಬಾಲಪಲುಕುಗಳನ್ನು ಪುಸ್ತಕ ಆಗಿಸುತ್ತಿದ್ದಾರೆ. ಪಾಟೀಲರು ಹಾಗೂ ರಘುನಾಥರು ತಂತಮ್ಮ ನೆಲೆಯಲ್ಲಿ ಮಕ್ಕಳ ಸೃಜನಶೀಲತೆಗೆ ಹೊಳಪು ನೀಡುವ ಕೆಲಸದಲ್ಲಿ ತೊಡಗಿಕೊಂಡಿದ್ದರೆ, ಇಂಥ ಕೆಲಸಗಳನ್ನು ಮಾಡಲೆಂದೇ ಇರುವ ಧಾರವಾಡದ 'ಬಾಲ ವಿಕಾಸ ಅಕಾಡೆಮಿ' ಮಂಕಾಗಿದೆ.

ಆಧುನಿಕತೆಯ ಜೊತೆಗಿನ ಓಟದಲ್ಲಿ ಸೇರಿಕೊಂಡಿರುವ ಕನ್ನಡದ ಮಕ್ಕಳ ಸಾಹಿತ್ಯದಲ್ಲಿ ಹೊಸ ಭಾವ–ಬಣ್ಣ ಕಾಣಿಸುತ್ತಿರುವುದು ನಿಜ. ಇದು ಸ್ವಾಗತಾರ್ಹ ಬೆಳವಣಿಗೆ. ಪ್ರಶ್ನೆ ಇರುವುದು, ಮಕ್ಕಳ ಸಾಹಿತ್ಯ ಸಂಕ್ರಮಣದ ಫಸಲು ಮಕ್ಕಳನ್ನು ಮುಟ್ಟುತ್ತಿದೆಯೇ ಎನ್ನುವುದರಲ್ಲಿ. ಕನ್ನಡದ ಮಕ್ಕಳಿಗೆ ಪಠ್ಯೇತರ ಪುಸ್ತಕ ಹಿಡಿಯುವಷ್ಟು ವ್ಯವಧಾನವನ್ನು ಪೋಷಕರು ಹಾಗೂ ಶೈಕ್ಷಣಿಕ ವ್ಯವಸ್ಥೆ ಉಳಿಸಿದೆಯೆ? ಮಕ್ಕಳ ಎದೆಗೆ ಸಾಹಿತ್ಯದ ಬಿತ್ತಗಳು ಬೀಳುತ್ತಿವೆಯೆ? ಕನ್ನಡ ಶಾಲೆಗಳೇ ಮುಳುಗುವ ಹಡಗುಗಳಾಗಿರುವಾಗ, ಮಕ್ಕಳ ಸಾಹಿತ್ಯವೆಂಬ ನಾವೆಗಳ ಭವಿಷ್ಯವೇನು? ❖

ಎಚ್ಚರಗೊಳ್ಳಲಿ ಗ್ರಂಥಾಲಯ ಇಲಾಖೆ

ಪುಸ್ತಕ ಸಂಸ್ಕೃತಿಯ ಬೆಳವಣಿಗೆಯಲ್ಲಿ ಗ್ರಂಥಾಲಯ ಇಲಾಖೆಯದ್ದು ಮಹತ್ವದ ಪಾತ್ರ. ಖರೀದಿ ಪ್ರಕ್ರಿಯೆಗೆ ಪರಿಗಣಿಸಲು ಬಯಸುವ ಪ್ರತಿ ಪುಸ್ತಕ ಗ್ರಂಥಾಲಯ ಇಲಾಖೆಯಲ್ಲಿ ನೋಂದಣಿ ಆಗುವುದು ಕಡ್ಡಾಯ. ನೋಂದಣಿಗೆ ಸಂಬಂಧಿಸಿದಂತೆ ಗ್ರಂಥಾಲಯ ಇಲಾಖೆ ಪುಸ್ತಕದ ಸ್ವರೂಪ ಮತ್ತು ಗುಣಮಟ್ಟಕ್ಕೆ ಸಂಬಂಧಿಸಿದಂತೆ ಕೆಲವು ಮಾನದಂಡಗಳನ್ನು ಗೊತ್ತುಪಡಿಸಿಕೊಂಡಿದೆ. ಹೊಸಗಾಲದ ಮಕ್ಕಳ ಪುಸ್ತಕಗಳ ಸ್ವರೂಪ ತನ್ನ ಮಾನದಂಡಗಳಿಗೆ ಹೊಂದದೆ ಹೋದಾಗ, ಅವುಗಳನ್ನು ನೋಂದಣಿ ಮಾಡಿಕೊಳ್ಳಲು ಇಲಾಖೆ ನಿರಾಕರಿಸುತ್ತಿದೆ. 'ಇಲಾಖೆ 'ಮಕ್ಕಳ ಸಾಹಿತ್ಯ'ಕ್ಕೆ ಸಂಬಂಧಿಸಿದಂತೆ ಅಪ್‌ಡೇಟ್ ಆಗಬೇಕು' ಎನ್ನುವುದು 'ಬಹುರೂಪಿ' ಜಿ.ಎನ್.ಮೋಹನ್ ಅವರ ಒತ್ತಾಯ. ಅಲ್ಲದೆ, ಇಲಾಖೆಯ ದರನೀತಿಯೂ ಮಕ್ಕಳ ಸಾಹಿತ್ಯಕ್ಕೆ ಉತ್ತೇಜನಕಾರಿಯಾಗಿಲ್ಲ. ಸಾಮಾನ್ಯ ಪುಸ್ತಕವೊಂದರ ಖರೀದಿಗೆ ಸಂಬಂಧಿಸಿದಂತೆ ಇಲಾಖೆ ಗೊತ್ತುಪಡಿಸಿರುವ ದರ, ಉತ್ಕೃಷ್ಟ ಗುಣಮಟ್ಟದ ಮಕ್ಕಳ ಸಾಹಿತ್ಯ ಕೃತಿಗಳಿಗೂ ಅನ್ವಯಿಸಲಾಗದು. ಮಕ್ಕಳ ಸಾಹಿತ್ಯದ ಕೃತಿಗಳ ನೋಂದಣಿ ಮತ್ತು ಖರೀದಿಗೆ ಸಂಬಂಧಿಸಿದಂತೆ ಗ್ರಂಥಾಲಯ ಇಲಾಖೆ ವಿಶೇಷ ನೀತಿಯೊಂದನ್ನು ರೂಪಿಸಿಕೊಳ್ಳುವುದು ಅನಿವಾರ್ಯ.

ವಿದೇಶಿಯರು ಕಲೀತಾರೆ 'ಅ ಆ ಇ ಈ'

• ಕೆ.ನರಸಿಂಹಮೂರ್ತಿ

ಇದು ಕನ್ನಡಿಗರಿಗೆ ಕನ್ನಡ ಕಲಿಸುವ ಸಾಮಾನ್ಯ ಕಾಯಕವಲ್ಲ. ವಿದೇಶಿಯರಿಗೆ ಕನ್ನಡವನ್ನು ಕಲಿಸುವ ವಿಶಿಷ್ಟ ಕಾಯಕ. ಎರಡೂವರೆ ದಶಕಗಳಿಂದ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ಇದು ಸದ್ದಿಲ್ಲದೆ ನಡೆಯುತ್ತಿದೆ ಎಂಬುದೇ ವಿಶೇಷ.

ಇದಕ್ಕೆ ನೀರೆರೆಯುತ್ತಿರುವುದು ಅಮೆರಿಕನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್. ಈ ಸಂಸ್ಥೆಯು ಅಮೆರಿಕದ ವಿದ್ಯಾರ್ಥಿಗಳಿಗೆ ಭಾರತೀಯ ಭಾಷೆಗಳಾದ ಹಿಂದಿ, ಮಲಯಾಳ, ಮರಾಠಿ, ಪಂಜಾಬಿ, ಸಂಸ್ಕೃತ, ತಮಿಳು, ಉರ್ದು, ತೆಲುಗು ಮತ್ತು ಕನ್ನಡ ಕಲಿಯಲು ಶಿಷ್ಯವೇತನ ನೀಡುತ್ತದೆ. ಅದನ್ನು ಬಳಸಿಕೊಂಡು 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕರ್ನಾಟಕಕ್ಕೆ ಬಂದು ಕನ್ನಡ ಕಲಿತಿದ್ದಾರೆ. ಅಷ್ಟೇ ಅಲ್ಲ, ಇಲ್ಲಿನ ವಿದ್ವಾಂಸರೊಂದಿಗೆ ಸೇರಿ, ಪೆನ್ಸಿಲ್ವೇನಿಯಾ ವಿವಿಯ ಅಮ್ಮೆಲ್ ಶರೋನ್ ರನ್ನನ ಗದಾಯುದ್ಧವನ್ನು, ಸೌತ್ ಫ್ಲಾರಿಡಾ ವಿವಿಯ ಗಿಲ್ ಬೆನ್ ಹೀರತ್ ಅವರು ಹರಿಹರನ ರಗಳೆಗಳನ್ನು ಅನುವಾದಿಸಿದ್ದಾರೆ. ಕೆಲವರು ಕನ್ನಡದಲ್ಲೇ ಪಿಎಚ್‌ಡಿ ಮಾಡಿದ್ದಾರೆ.

ವಿದೇಶಿಯರಿಗೆ ಕನ್ನಡದ ಜೊತೆಗೆ, ಕರ್ನಾಟಕದ ಸಾಹಿತ್ಯ, ಜನ ಸಂಸ್ಕೃತಿ, ಸಮಾಜ, ಚರಿತ್ರೆಯ ಅರಿವನ್ನು ದಾಟಿಸುವಲ್ಲಿ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯೂ ಪರೋಕ್ಷವಾಗಿ ಭಾಗಿಯಾಗಿದೆ. ಏಕೆಂದರೆ ಇಲ್ಲಿ ಪ್ರಾಧ್ಯಾಪಕರಾಗಿದ್ದವರೇ ಕನ್ನಡವನ್ನು ಇಂಗ್ಲಿಷ್ ಮೂಲಕ ಹೇಳಿಕೊಡುವ ಸಾಹಸಮಯ ಮತ್ತು ಸೃಜನಶೀಲ ಹೊಣೆಗಾರಿಕೆಗೆ ಹೆಗಲು ಕೊಟ್ಟಿದ್ದಾರೆ. ವಿದೇಶಿಯರಿಗೆ ಕನ್ನಡ ಕಲಿಸುವ ಸಲುವಾಗಿಯೇ ದ್ವಿಭಾಷಿಕ ಸಂವಹನ–ಬೋಧನಾ ಸಾಮರ್ಥ್ಯವನ್ನು ಗಳಿಸಿಕೊಳ್ಳಲು ಇವರೆಲ್ಲ ಪಟ್ಟ ಪರಿಶ್ರಮ, ಮಾಡಿದ ಪ್ರಯೋಗಗಳಿಗೆ ಲೆಕ್ಕವಿಲ್ಲ.

ಈ ಯೋಜನೆಯಡಿ ತೆರೆಯಲಾಗಿದ್ದ ಕಲಿಕಾ ಕೇಂದ್ರದ ಮೊದಲ ಬೋಧಕ ಪ್ರೊ.ಆರ್.ವಿ.ಎಸ್.ಸುಂದರಂ. ಅವರೊಂದಿಗೆ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದ ಪ್ರೊ.ಎಚ್.ಎಸ್.ಹರಿಶಂಕರ್, ಪ್ರೊ.ಎನ್.ಎಸ್.ತಾರಾನಾಥ್, ಪ್ರೊ.ಲಕ್ಷ್ಮಿನಾರಾಯಣ ಅರೋರ, ಪ್ರೊ.ಅಕ್ಕಮಹಾದೇವಿ ಇದ್ದಾರೆ. ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಪ್ರೊ.ಜ್ಯೋತಿ ಶಂಕರ್, ಮಹಾರಾಜ ಕಾಲೇಜಿನ ಪ್ರೊ. ಆಶಾಕುಮಾರಿ ಈ ಸಾಲಿನಲ್ಲಿದ್ದಾರೆ. ಅಧ್ಯಯನ ಸಂಸ್ಥೆಯಲ್ಲಿ ಪ್ರಸ್ತುತ ಭಾಷಾಂತರಕಾರರಾಗಿರುವ ಸಿ.ಎಸ್.ಪೂರ್ಣಿಮ ಈ ಪರಂಪರೆಯನ್ನು ಮುಂದುವರಿಸಿದ್ದಾರೆ.

'ಕನ್ನಡ ಮಾತನಾಡುವುದನ್ನು ಹೇಳಿಕೊಟ್ಟರೆ ಸಾಕು ಎನ್ನುತ್ತದೆ ಇನ್‌ಸ್ಟಿಟ್ಯೂಟ್. ಆಗ, ಬರಹದ ಭಾಷೆ ಮತ್ತು ಮಾತನಾಡುವ ಭಾಷೆಯನ್ನು ಹೇಳಿಕೊಟ್ಟರೆ ಸಾಕು. ಆದರೆ ಕೆಲವು ಯುವಕ–ಯುವತಿಯರು ಕ್ಲಾಸಿಕಲ್ ಕನ್ನಡವನ್ನು ಹೇಳಿಕೊಡಿ ಎನ್ನುತ್ತಾರೆ. ಅವರಿಗೆ ಹಳೆಗನ್ನಡವನ್ನೂ ಹೇಳಿಕೊಡಬೇಕಾಗುತ್ತದೆ. ಹರಿಹರನ ರಗಳೆಗಳ ಬಗ್ಗೆ ಅಧ್ಯಯನ ಮಾಡಿರುವ ಗಿಲ್ ಅವರು ನಡುಗನ್ನಡವನ್ನೂ ಶ್ರದ್ಧೆಯಿಂದ ಕಲಿತರು' ಎಂದು ಪ್ರೊ.ಸುಂದರಂ ಸ್ಮರಿಸಿದರು.

ಅಧ್ಯಯನ ಸಂಸ್ಥೆಗೂ ಅಮೆರಿಕದ ಸಂಸ್ಥೆಗೂ ನೇರ ಸಂಬಂಧವಿಲ್ಲ. ಆದರೆ ಅಮೆರಿಕದ ಸಂಸ್ಥೆ ಈ ವಿದ್ವಾಂಸರ ಸೇವೆಯನ್ನು ಬಳಸಿಕೊಳ್ಳುತ್ತದೆ. ನವದೆಹಲಿಯ ಜೆಎನ್‌ಯುನ ಕನ್ನಡ ವಿಭಾಗದಲ್ಲಿದ್ದಾಗ ಪ್ರೊ.ಪುರುಷೋತ್ತಮ ಬಿಳಿಮಲೆಯವರು ಇನ್‌ಸ್ಟಿಟ್ಯೂಟ್ ಅನ್ನು ಮುನ್ನಡೆಸಿದ್ದರು.



ಮೈಸೂರಿನಲ್ಲಿ ಕನ್ನಡ ಕಲಿಯಲು ಬಂದಿದ್ದ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ ಕಮಲಿನಿ ಹೆಗಡೆ ಮತ್ತು ಲಡ್ವಿಗ್ ಮ್ಯಾಕ್ಸಿಮಿಲಿಯನ್ ವಿಶ್ವವಿದ್ಯಾಲಯದ ಅನ್ನೆ ಕ್ಯಾಥರಿನ ಅವರೊಂದಿಗೆ ಶಿಕ್ಷಕಿ ಸಂಘಮಿತ್ರೆ

90ರ ದಶಕದಲ್ಲಿ ಸೇರಿಕೊಂಡ ಕನ್ನಡ

'ಅಮೆರಿಕನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್‌ನಲ್ಲಿ ಒಂದು ವರ್ಷ ಹಾಗೂ ಮೂರು ತಿಂಗಳ ಕಲಿಕಾ ಕಾರ್ಯಕ್ರಮಗಳಿದ್ದು, 90ರ ದಶಕದಲ್ಲಿ ದಶಕದಲ್ಲಿ ಹಿಂದಿ, ಉರ್ದು, ಬಂಗಾಳ, ತಮಿಳು, ಸಂಸ್ಕೃತ ಜೊತೆಗೆ ಕನ್ನಡವೂ ಸೇರಿಕೊಂಡಿತು. ದಕ್ಷಿಣ ಭಾರತ ಎಂದರೆ ತಮಿಳು ಎಂದು ಮಾತ್ರ ತಿಳಿದಿದ್ದ ವಿದೇಶಿಯರಿಗೆ ಕನ್ನಡದ ಮೇಲೆ ಆಸಕ್ತಿ ಹುಟ್ಟಲು ಇದು ಕಾರಣವಾಯಿತು' ಎಂಬುದು ಪ್ರೊ.ಪುರುಷೋತ್ತಮ ಬಿಳಿಮಲೆ ಅವರ ಪ್ರತಿಪಾದನೆ.

ಮಕರಂದ: ಕನ್ನಡ ಕಲಿಸುವ ಸಂಕಲ್ಪ

ಕನ್ನಡಕ್ಕಾಗಿ ಏನಾದರೂ ಮಾಡಬೇಕು ಎನ್ನುವ ತುಡಿತದಿಂದ ಹುಟ್ಟಿಕೊಂಡ ಸಂಸ್ಥೆ ಅದು. ಹೆಸರು ಮಕರಂದ. ಹೊರ ರಾಜ್ಯದವರಿಗೆ ಕನ್ನಡ ಕಲಿಸುವ ಸಂಕಲ್ಪ ಹೊಂದಿರುವ ಈ ಸಂಸ್ಥೆ ಹುಟ್ಟಿಕೊಂಡದ್ದು, ಬೆಂಗಳೂರು ಉತ್ತರದಲ್ಲಿರುವ ಭಾರತೀಯ ಸಿಟಿಯ 'ನಿಕು ಹೋಮ್ಸ್' ಎನ್ನುವ ವಸತಿಸಮುಚ್ಚಯದಲ್ಲಿ 200 ಮಂದಿಗೆ ಕನ್ನಡ ಕಲಿಸುವುದರ ಮೂಲಕ.

ಈಗ 100 ಮಂದಿ ಸ್ವಯಂಸೇವಕರು ಕನ್ನಡ ಕಲಿಸುವ ಕಾಯಕದಲ್ಲಿ ನಿರತರಾಗಿದ್ದಾರೆ. ಬೇರೆ ಬೇರೆ ವೃತ್ತಿಗಳಲ್ಲಿರುವವರು ತಮ್ಮ ಬಿಡುವಿನ ವೇಳೆಯಲ್ಲಿ ಕನ್ನಡ ಪಾಠ ಮಾಡುತ್ತಿದ್ದಾರೆ. ಸಂಸ್ಥೆಯಲ್ಲಿ 18 ವರ್ಷದಿಂದ 70 ವಯಸ್ಸಿನವರೆಗಿನ ಶಿಕ್ಷಕರಿದ್ದಾರೆ. ವಿದ್ಯಾರ್ಥಿಗಳೂ ಇದೇ ವಯಸ್ಸಿನವರಿದ್ದಾರೆ.

ಮೊದಲು ಎರಡು ಆವೃತ್ತಿಗಳಲ್ಲಿ ಮುಖಾಮುಖಿ ತರಗತಿಗಳನ್ನು ನಡೆಸಲಾಯಿತು. ಆದರೆ, ಸಮಯ ಹೊಂದಾಣಿಕೆಯೂ ಸೇರಿದಂತೆ ಕೆಲವು ಸಮಸ್ಯೆಗಳು ಉದ್ಭವಿಸಿದವು. ಈಗ ಕನ್ನಡ ತರಗತಿಗಳನ್ನು ಆನ್‌ಲೈನ್‌ನಲ್ಲಿ ಮಾತ್ರ ನಡೆಸಲಾಗುತ್ತಿದೆ. ಕರ್ನಾಟಕ, ಭಾರತ ಹಾಗೂ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿರುವವರು ಆನ್‌ಲೈನ್ ಮೂಲಕ ಅನ್ಯಭಾಷಿಕರಿಗೆ ಕನ್ನಡ ಕಲಿಸುತ್ತಿದ್ದಾರೆ. ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಕಜಕಿಸ್ತಾನ, ಅಮೆರಿಕದಿಂದ ಪಾಠ ಮಾಡುವವರಿದ್ದಾರೆ. ತರಗತಿ ಒಂದು ಗಂಟೆಯದ್ದಾಗಿರುತ್ತದೆ; ಪರೀಕ್ಷೆಗಳೂ ಇರುತ್ತವೆ. ಘಟಿಕೋತ್ಸವ ಕಾರ್ಯಕ್ರಮ ಮಾಡಿ 'ನನಗೆ ಕನ್ನಡ ಗೊತ್ತು' ಎಂದು ಸಾರುವ ಕನ್ನಡ ಕಲಿಕೆಯ ಪ್ರಮಾಣ ಪತ್ರ ವಿತರಿಸಲಾಗುತ್ತಿದೆ.

ಪ್ರಸ್ತುತ 2,000 ಮಂದಿ ಕನ್ನಡ ಕಲಿಯುತ್ತಿದ್ದಾರೆ. ಇದುವರೆಗೆ 6,000 ಮಂದಿ ಕನ್ನಡ ಕಲಿತಿದ್ದಾರೆ. ಕಾಶ್ಮೀರದಿಂದ ಕನ್ಯಾಕುಮಾರಿ, ಗುಜರಾತ್‌ನಿಂದ ಬಂಗಾಳದವರೆಗೆ ಎಲ್ಲ ರಾಜ್ಯಗಳಿಂದ ಬಂದವರೂ ಕನ್ನಡ ಕಲಿಯುತ್ತಿದ್ದಾರೆ.

ನಾಡನುಡಿಯ ಕಲಿಕಾ ಕೇಂದ್ರಗಳು

'ಹೊರರಾಜ್ಯದವರಿಗೆ ತನ್ನ ರಾಜ್ಯದ ಮಾತೃಭಾಷೆಯನ್ನು ಕಲಿಸುವುದಕ್ಕೆ ಯಾವ ರಾಜ್ಯ ಸರ್ಕಾರವೂ ಪ್ರಯತ್ನಿಸಿದ ಉದಾಹರಣೆ ಇಲ್ಲ. ಆದರೆ ಕರ್ನಾಟಕ ಸರ್ಕಾರವು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಅದನ್ನು ಮಾಡುತ್ತಿದೆ. ದೇಶದ ಇತರ ರಾಜ್ಯಗಳಿಂದ ಬಂದು ಇಲ್ಲಿ ನೆಲಸಿರುವವರಿಗೆ ಕನ್ನಡ ಕಲಿಕಾ ಕೇಂದ್ರಗಳ ಮೂಲಕ ಕನ್ನಡ ಕಲಿಸಲಾಗುತ್ತಿದೆ. ಸಾವಿರಾರು ಜನರು ಇದರ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಇದೊಂದು ಶ್ಲಾಘನೀಯ ಪ್ರಯತ್ನ'

–ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಅನ್ಯಭಾಷಿಕರಿಗೆ ಕನ್ನಡ ಕಲಿಸುತ್ತಿರುವ ಸುಷ್ಮಾ ಅವರ ಮಾತಿದು. ಮೂಲತಃ ಕೇರಳದವರಾದ ಅವರು ವರ್ತೂರು ರಸ್ತೆಯ ಅಪಾರ್ಟ್‌ಮೆಂಟ್‌ನಲ್ಲಿ 100 ಜನರಿಗೆ ಅವರು ಕನ್ನಡದಲ್ಲಿ ಅ, ಆ, ಇ, ಈ... ಹೇಳಿಕೊಡುತ್ತಿದ್ದಾರೆ.


ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಆಶ್ರಯದಲ್ಲಿ ಮೈಸೂರಿನಲ್ಲಿ ಒಂದು ಮತ್ತು ಬೆಂಗಳೂರಿನಲ್ಲಿ 34 ಕನ್ನಡ ಕಲಿಕಾ ಕೇಂದ್ರಗಳು ನಡೆಯುತ್ತಿವೆ. ಸುಷ್ಮಾ ಅವರು ಶಿಕ್ಷಕಿಯಾಗಿರುವ ಕೇಂದ್ರವು ಅವುಗಳಲ್ಲೊಂದು.

'ಕನ್ನಡೇತರರಿಗೆ ಕನ್ನಡ ಕಲಿಸುವ ಯೋಜನೆ' ಎಂಬುದು ಪ್ರಾಧಿಕಾರದ ಮಹತ್ವಾಕಾಂಕ್ಷೆಯ ಕಾರ್ಯಕ್ರಮ. ರಾಜ್ಯದಲ್ಲಿರು ವಿವಿಧ ಕೇಂದ್ರ ಸರ್ಕಾರಿ ಕಚೇರಿಗಳು, ಶಿಕ್ಷಣ ಸಂಸ್ಥೆಗಳು, ಬ್ಯಾಂಕುಗಳು, ವಸತಿ ಸಮುಚ್ಚಯಗಳು... ಹೀಗೆ ಬೇರೆ ಬೇರೆ ಕಡೆಗಳಲ್ಲಿರುವ ಅನ್ಯಭಾಷಿಕರಿಗೆ ರಾಜ್ಯದ ಜನರೊಂದಿಗೆ ಮಾತನಾಡಲು ಬೇಕಾದಷ್ಟು ಕನ್ನಡ ಕಲಿಸಲು ರೂಪಿಸಲಾಗಿರುವ ಕಾರ್ಯಕ್ರಮ ಇದು. ಮೂರು ತಿಂಗಳಲ್ಲಿ 36 ತರಗತಿಗಳನ್ನು (ವಾರಕ್ಕೆ ಮೂರು, ತಿಂಗಳಿಗೆ 12) ಮಾಡಲಾಗುತ್ತದೆ. ಕನ್ನಡ ಕಲಿಯಲು ಆಸಕ್ತಿ ಇರುವವವರು ಯಾವುದಾದರೂ ಸಂಸ್ಥೆಯ ಮೂಲಕ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದರೆ ಸಾಕು. ಪ್ರಾಧಿಕಾರವು ಅಂತಹ ಸಂಘಕ್ಕೆ ತರಬೇತುದಾರರನ್ನು ಕಳುಹಿಸಿ ಆಸಕ್ತರಿಗೆ ಕನಿಷ್ಠ ಮಾತನಾಡಲು ಸಾಧ್ಯವಾಗುವಷ್ಟು ಕನ್ನಡ ಕಲಿಸುತ್ತಾರೆ. ಪಾಠ ಮಾಡಿದವರಿಗೆ ಪ್ರಾಧಿಕಾರ ಗೌರವಧನವನ್ನು ನೀಡುತ್ತದೆ. ಇದೇ ಉದ್ದೇಶಕ್ಕಾಗಿ ಪ್ರಾಧಿಕಾರವು ಪಠ್ಯಕ್ರಮವನ್ನೂ ರೂಪಿಸಿದೆ. ತರಬೇತುದಾರರನ್ನು ನಿಯೋಜಿಸಲು ಸಾಧ್ಯವಾಗದ ಕಡೆಗಳಲ್ಲಿ ಪ್ರಾಧಿಕಾರವು ಈ ಪಠ್ಯಕ್ರಮ ನೀಡಿ, ಕನ್ನಡ ಕಲಿಸುವುದಕ್ಕೆ ಪ್ರೇರೇಪಿಸುತ್ತದೆ.

ಬೆಂಗಳೂರಿನ ಎಚ್‌ಎಎಲ್‌ನಲ್ಲಿ ಮೂರು ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಇದೇ ರೀತಿ ನಿಮ್ಹಾನ್ಸ್, ಆರ್‌ಬಿಐ ಸೇರಿದಂತೆ ವಿವಿಧ ಕಡೆಗಳಲ್ಲಿ ಕೇಂದ್ರಗಳು ಕಾರ್ಯಾಚರಿಸುತ್ತಿವೆ. ಮೈಸೂರಿನ ರೈಲ್ವೆ ಇಲಾಖೆಯಲ್ಲಿ ಒಂದು ಕೇಂದ್ರವಿದ್ದು, 130 ಮಂದಿ ಕನ್ನಡ ಕಲಿಯುತ್ತಿದ್ದಾರೆ. ಅಲ್ಲಿ ಎರಡು ಬ್ಯಾಚ್‌ಗಳಲ್ಲಿ ತರಗತಿಗಳನ್ನು ನಡೆಸಲಾಗುತ್ತಿದೆ.

ಉತ್ತಮ ಸ್ಪಂದನೆ: 'ನಮ್ಮ ಪ್ರಯತ್ನಕ್ಕೆ ಉತ್ತಮ ಸ್ಪಂದನೆ ದೊರಕಿದೆ. ಹೊರರಾಜ್ಯದ 3,000 ಜನರು ಕನ್ನಡ ಕಲಿಯುತ್ತಿದ್ದಾರೆ. ಇವರಲ್ಲಿ ಕೇರಳದವರು 1,500 ಮಂದಿ ಇದ್ದಾರೆ. ಹಿಂದಿ ಭಾಷಿಕರು ನಂತರದ ಸ್ಥಾನದಲ್ಲಿದ್ದಾರೆ. ಸದ್ಯಕ್ಕೆ ನಮ್ಮ ಕಾರ್ಯಕ್ರಮ ಬೆಂಗಳೂರಿಗಷ್ಟೇ ಸೀಮಿತವಾಗಿದೆ. ನಮಗೆ ಇರುವ ಬಜೆಟ್‌ನಲ್ಲಿ ಯೋಜನೆಯನ್ನು ನಿರ್ವಹಿಸುತ್ತಿದ್ದೇವೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಮದ್ರಸಾಗಳಲ್ಲೂ ಕನ್ನಡ




ಪುರುಷೋತ್ತಮ ಬಿಳಿಮಲೆ

ಕನ್ನಡ ಕಲಿಕಾ ಯೋಜನೆಯನ್ನು ಇನ್ನಷ್ಟು ವಿಸ್ತರಿಸಿರುವ ಪ್ರಾಧಿಕಾರ, ಮದ್ರಸಾಗಳಲ್ಲೂ ಕನ್ನಡ ಕಲಿಸಲು ಮುಂದಾಗಿದೆ. ಈ ಉದ್ದೇಶಕ್ಕಾಗಿ ಉರ್ದುವಿನಲ್ಲಿ ಸೂಚನೆಗಳನ್ನು ನೀಡುವ ಪಠ್ಯವನ್ನು ಸಿದ್ಧಪಡಿಸಿದೆ.

'ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಕನ್ನಡ ಕಲಿಸುವ ಮದ್ರಸಾ ಶಿಕ್ಷಕರಿಗೆ ತರಬೇತಿ ನೀಡಲಾಗಿದೆ. ನವೆಂಬರ್ ಮಧ್ಯಭಾಗದಲ್ಲಿ 180 ಮದ್ರಸಾಗಳಲ್ಲಿ ಕನ್ನಡ ಕಲಿಕೆ ಆರಂಭವಾಗಲಿದೆ. ವರ್ಷಾಂತ್ಯದಲ್ಲಿ ಇದನ್ನು 1,500 ಮದ್ರಸಾಗಳಿಗೆ ವಿಸ್ತರಿಸುವ ಗುರಿ ಹೊಂದಿದ್ದೇವೆ' ಎಂದು ಪುರುಷೋತ್ತಮ ಬಿಳಿಮಲೆ ತಿಳಿಸಿದರು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

01 ನವೆಂಬರ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ದಶಮಿ ಗಂ. 9-12 ನಕ್ಷತ್ರ: ಶತಭಿಷ ಗಂ 18-21 ಯೋಗ: ಧ್ರುವ ಗಂ 26-09 ಕರಣ: ಗರ ಗಂ. 9-12 ತುಲಾ ಮಾಸದ 15 ನೇ ದಿನ. ಮಳೆ ನಕ್ಷತ್ರ : ಸ್ವಾತಿ 3 ನೇ ಪಾದ. **ರಾಹುಕಾಲ :** ಬೆಳಿಗ್ಗೆ 09-00 - 10-30 , **ಸೂರ್ಯೋದಯ :** 06-28 ಸೂರ್ಯಾಸ್ತ : 06-00 ಮುಸ್ಲಿಂ ದಿನಾಂಕ : 09 ಜುಮಾದುಲ್ಲಾವಲ್ , ಅದೃಷ್ಟ ಸಂಖ್ಯೆ : 6, 10

ಮೇಷ: ಆತುರದಲ್ಲಿ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳದಂತೆ ಮಗನಿಗೆ ತಿಳಿಸುವುದು ಉತ್ತಮ. ರಕ್ತದಾನ ಮಾಡಲು ಬಯಸುವ ವ್ಯಕ್ತಿಗಳು ಅನಗತ್ಯ ಸಲಹೆಗಳಿಗೆ ತಲೆಕೊಡಲು ಹೋಗದಿರಿ. ಕ್ರೀಡಾ ಚಟುವಟಿಕೆಗಳು ಹೆಚ್ಚುವುದು.

ವೃಷಭ: ಬಹುಕಾಲದ ಬಳಿಕ ವೃತ್ತಿ ಕ್ಷೇತ್ರದಿಂದ ಮರಳಿ ಬಂದು ಪಾಲಕ, ಪೋಷಕ ಹಾಗೂ ಸಂಬಂಧಿಗಳನ್ನು ಭೇಟಿಯಾಗುವ ಭಾಗ್ಯ ಸಿಗಲಿದೆ. ನಿರುದ್ಯೋಗಿಗಳಿಗೆ ಕೆಲವು ಸಂಘ ಸಂಸ್ಥೆಗಳ ಸಹಾಯದಿಂದ ಉದ್ಯೋಗ ಫಲವಿದೆ.

ಮಿಥುನ: ಹೆಂಡತಿಯನ್ನು ಉದ್ದೇಶಿಸಿ ಇತರರು ಹೇಳುವ ದೂರಿನ ಮಾತುಗಳನ್ನು ಕೇಳುವುದು ಸಹಿಸಲಾರದ ವಿಷಯವಾಗುತ್ತದೆ. ಯೋಜನೆಯ ಮೇಲೆ ಗಮನ ಹರಿಸಿ ಆದ ಆಯಾಸವು ಕಡಿಮೆ ಆಗುವುದು.

ಕರ್ಕಾಟಕ: ಮದುವೆಯ ವಿಚಾರದಲ್ಲಿ ಪದೇ ಪದೇ ಬರುತ್ತಿದ್ದ ವಿಘ್ನಗಳು ಸ್ನೇಹಿತನ ಸಹಾಯದಿಂದ ನಿವಾರಣೆಯಾಗುವುದು. ಗಡಿಬಿಡಿಯ ದಿನಚರಿಯಲ್ಲಿ ಶುಭ ಸಮಾಚಾರಗಳನ್ನು ಕೇಳುವಷ್ಟು ವ್ಯವಧಾನ ಇಲ್ಲದಂತೆ ಆಗುತ್ತದೆ.

ಸಿಂಹ: ಯೋಗಾಭ್ಯಾಸದಿಂದ ಏಕಾಗ್ರತೆ ಹಾಗು ಚಿತ್ತ ಶುದ್ಧಿಯನ್ನು ಮಾಡಿಕೊಳ್ಳುವುದು ಉತ್ತಮ. ಕೊಡುವುದಕ್ಕಿಂತ ಹೆಚ್ಚಿನ ಸ್ವಾತಂತ್ರ್ಯವನ್ನು ಮಕ್ಕಳು ಬಯಸುವುದು ತೀರ ಕೋಪವನ್ನು ಉಂಟುಮಾಡಬಹುದು.

ಕನ್ಯಾ: ಎಲ್ಲರಿಗಿಂತ ಕಡಿಮೆ ಪರಿಶ್ರಮದಲ್ಲಿ ಇತರರಿಗಿಂತ ಒಳ್ಳೆಯ ಫಲಿತಾಂಶ ಬರುವುದು ಉಳಿದವರಿಗೆ ಆಶ್ಚರ್ಯ ಚಕಿತ ವಿಷಯವಾಗಿ ತೋರುವುದು. ಅಬಕಾರಿ ಮತ್ತು ಪೊಲೀಸ್ ಸಿಬ್ಬಂದಿಗೆ ಕೆಲಸದ ಒತ್ತಡ ಹೆಚ್ಚಲಿದೆ.

ತುಲಾ: ಅನ್ಯರ ಸಮಸ್ಯೆಗಳಿಗೆ ಮಾತುಗಳಿಂದಾಗಿ ಪರಿಹಾರ ದೊರೆತಿರುವುದು ಸಂತೋಷಕ್ಕೆ ಕಾರಣವಾಗುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಲು ಅಧ್ಯಯನ ಅಗತ್ಯ. ಸಂತಾನ ಅಪೇಕ್ಷಿಗಳಿಗೆ ಸತ್ಫಲಗಳು ದೊರಕಲಿವೆ.

ವೃಶ್ಚಿಕ: ಮಕ್ಕಳನ್ನು ಅವರ ಸಂಗಡಿಗರು ವಂಚನೆಯ ಕಡೆಗೆ ಕರೆದೊಯ್ಯದಂತೆ ಮೇಲ್ವಿಚಾರಣೆ ನಡೆಸುವುದು ಉತ್ತಮ. ತನು, ಮನ, ಧನವನ್ನು ಅರ್ಪಿಸಿ ನೀವು ಮಾಡಿದಂಥ ಸಮಾಜಕಾರ್ಯವು ಜನಮನ್ನಣೆಗೊಳಗಾಗುವುದು.

ಧನು: ಸಕುಟುಂಬ ಸಮೇತರಾಗಿ ಮನೆದೇವರ ದರ್ಶನ ಮಾಡುವ ಆಸೆ ಮತ್ತೊಮ್ಮೆ ಕನಸಾಗಿ ಉಳಿಯುತ್ತದೆ. ಅಭೀಷ್ಟಗಳನ್ನು ನೆರವೇರಿಸಿಕೊಳ್ಳಲು ದೇವರ ಪ್ರಾರ್ಥನೆಯ ಜತೆಗೆ ನಿಮ್ಮ ಪ್ರಯತ್ನವಿರಲಿ.

ಮಕರ: ಬರಬೇಕಾದ ಹಣವೆಲ್ಲವೂ ಕೈ ಸೇರಿದರೂ ಈಗಿನ ಪರಿಸ್ಥಿತಿಗೆ ಹೆಚ್ಚಿನ ಧನಸಂಪತ್ತು ಬೇಕಾಗುವುದು. ದಿನನಿತ್ಯದ ಕೆಲಸಗಳಲ್ಲಿ ಅನಪೇಕ್ಷಿತವಾದ ತೊಡಕುಗಳು ಉಂಟಾಗುತ್ತವೆ.

ಕುಂಭ: ಉದ್ಯೋಗದಲ್ಲಿ ಮೇಲಧಿಕಾರಿಗಳ ಕಿರುಕುಳ ಸಂಗಡಿಗರನ್ನು ರೋಸಿಹೋಗುವಂತೆ ಮಾಡುತ್ತದೆ. ನಿಮ್ಮ ಭಾವನೆಗಳಿಗೆ ಕುಟುಂಬದವರು ಬೆಲೆ ಕೊಡದಿರುವುದು ಮಾನಸಿಕವಾಗಿ ನೊಂದುಕೊಳ್ಳುವಂತೆ ಮಾಡುತ್ತದೆ.

ಮೀನ: ಆಪ್ತರು ಹಲವು ಸಲಹೆಗಳನ್ನು ನೀಡಿದರೂ ಅದು ಸರಿ ಹೋಗದೆ ಕ್ಷಿಪ್ರ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಹಳೆಯ ಮಿತ್ರರ ಕೆಲವು ಮಾತುಗಳು ಸಂದರ್ಭಕ್ಕನುಸಾರವಾಗಿ ನೆನಪಾಗುತ್ತದೆ.

ಪದಬಂಧ 6210


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬಾಣಗಳನ್ನಿಡುವ ಕೋಶ (4)
3.ಮರದಲ್ಲಿಜೇನನ್ನು ಅರಸುತ್ತಿರುವ ತುಂಬಿ (4)
5.ಜೂಜಿನಲ್ಲಿ ಒಡ್ಡುವ ಪಣ (3)
7.ಮಂದಿರದಲ್ಲಿರುವ ಜನ (2)
8.ಗರತಿಗೆ ಒದಗಿರುವ ಸ್ಥಿತಿ! (2)
10.ದೇವರನ್ನಿಡುವ ವಿಶೇಷ ಗೂಡಿನ ರಚನೆ (3)
11. ಮುನಿ ತೋರಿದ ಸಿಟ್ಟು! (3)
13.ಬೆಸವಲ್ಲದ ಸಂಖ್ಯೆ! (2)
15.ಪಕ್ಷದ ನಾಲ್ಕನೆಯ ತಿಥಿ (2)
16.ಬಿಡುಗಡೆ ಹೊಂದಿದವನಿಂದಾದ ಬಿಡಿ ಪದ್ಯ! (3)
18.ರಾಜ್ಯವನ್ನಾಳುವ ವ್ಯವಸ್ಥೆ (4)
19.ಕೊಳ್ಳೆ ಹೊಡೆಯುವಾತ (4)

ಮೇಲಿಂದ ಕೆಳಕ್ಕೆ

1. ಏನೂ ಮುಚ್ಚಿಟ್ಟುಕೊಳ್ಳದೆ ಪ್ರಕಟಿಸುವುದು (4)
2.ಕೆರಳಿದಾತ ತೋರಿಸುತ್ತಿರುವ ಮೆಟ್ಟು (2)
3.ತೂಕದ ಒಂದು ಪ್ರಮಾಣ (2)
4.ಸಲಿಕೆಯ ಚೀಟಿ (3)
6.ಪಟದಲ್ಲಿಯೇ ಬದಲಾವಣೆ! (3)
7.ನಿಧಾನವಾಗಿಯೇ ಮೆಲುನಗೆ ಮೂಡಿದೆಯಲ್ಲಾ! (4)
9.ತಿಮ್ಮಪ್ಪನ ನೆಲೆನಾಡು (4)
12.ಯುಕ್ತ ಕೆಲಸಕ್ಕಾಗಿಯೇ ನಿಯೋಗಿಸಲ್ಪಟ್ಟವನು! (3)
14. ಸಂಪ್ರದಾಯವನ್ನು ಆಚರಿಸುವವನು (4)
15.ಚಚ್ಚೌಕ ಇಲ್ಲಿ ಕಾಣುತ್ತಿದೆ (3)
16.ಮುಕುರ ನೋಡಿ ಧರಿಸಿರುವ ಕಿವಿ ಆಭರಣ (2)
17.ಕರುನಾಡಲ್ಲಿ ದೊರೆತಿರುವ ಸಾಲ (2)



6209ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಭಯದಾನ 3.ಸರ್ಗ
4.ಅಡವಿ 5.ಕಸ್ತಮ 7.ಕರ
8.ರಸ 10.ವಿದುರ
11.ಸುಮ 13.ಕಾಲ
14.ಣಿಮರ 15.ಕರುಣೆ 16.ದರಿ
17.ಆಮ್ಲಜನಕ

ಮೇಲಿಂದ ಕೆಳಕ್ಕೆ:
2.ಭಯಂಕರ 3.ಸವಿಸ್ತಾರ
4.ಅಧಿಕಾರವಾಣಿ
6.ಮನೋವಿಶ್ಲೇಷಣೆ
7.ಕಡಸು 9.ಸತ್ಕುಲ
12.ಮಧುಕರಿ 13.ಕಾರಸ್ಥಾನ

ಸುಡೊಕು 6594


ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

1		3	5		6		4	7
				4			8	
7		4	9			5		3
	1				5			
		7		9		6	1	5
5	2		6		3			
8		1		5			6	
			1		4	8		9
4		9		6			5	

6593 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,877
ಇಂದಿನ ಅಂತ್ಯ:	25,722
ದಿನದ ಕನಿಷ್ಠ:	25,711
	▼ 155

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹595
	12 ಕ್ಕೆ	₹80
ಮೈಸೂರು:	100 ಕ್ಕೆ	₹595

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹184
ಆರ್‌ಎಸ್‌ಎಸ್-5	₹178
ಗುಡ್ ಲಾಟ್	₹166

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1405 (1405)
ಸೋಯಾ (ರಿಫೈನ್ಡ್)	₹1265 (1270)
ಸೂರ್ಯಕಾಂತಿ (ರಿಫೈನ್ಡ್)	₹1480 (1480)
ಪಾಮೋಲಿನ್	₹1265 (1275)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹29750
ಎಸಿ	₹15400
ಆರ್‌ಪಿ	₹19500
ಆರ್‌ಸಿ	₹11050

ಅಡಿಕೆ ಧಾರಣೆ

ಚಿತ್ರದುರ್ಗ		ಹೊಸತು	26000-37000	ಕೋಕ	23219-34609
ಬೆಟ್ಟೆ	38100-38500	ಹಳತು	44000-53500	ಕೆಂಪುಗೋಟು	32099-33600
ರಾಶಿ	30600-31000	**ಶಿವಮೊಗ್ಗ**		ರಾಶಿ	46899-58999
ಕುಮಟಾ		ಬೆಟ್ಟೆ	50600-76799	ತಟ್ಟಿಬೆಟ್ಟೆ	33000-57899
ಚಾಲಿ	42129-48699	ಗೊರಬಲು	20090-41709	**ಶಿರಸಿ**	
ಚಿಪ್ಪು	26909-36769	ಹೊಸತು	40669-62599	ಬೆಟ್ಟೆ	48508-54099
ಕೋಕ	12109-31996	ರಾಶಿ	41666-66101	ಬಿಳಿಗೋಟು	33333-40499
ಫ್ಯಾಕ್ಟರಿ	7109-26829	ಸರಕು	61599-93996	ಚಾಲಿ	44129-50999
ಹಳೆಚಾಲಿ	42909-47700	**ಸಿದ್ದಾಪುರ**		ಕೆಂಪುಗೋಟು	35199-37899
ಪುತ್ತೂರು		ಬಿಳಿಗೋಟು	26909-37089	ರಾಶಿ	51699-59689
ಕೋಕ	20000-31500	ಚಾಲಿ	40089-49019		

ಜಿಎಸ್‌ಟಿ ರಿಟರ್ನ್ಸ್: 3 ವರ್ಷ ಹಿಂದಿನ ಬಾಕಿ ಸಲ್ಲಿಕೆಗೆ ಅವಕಾಶವಿಲ್ಲ

ನವದೆಹಲಿ (ಪಿಟಿಐ): ಮೂರು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಜಿಎಸ್‌ಟಿ ರಿಟರ್ನ್ಸ್ ಸಲ್ಲಿಸಲು ಬಾಕಿ ಇರುವವರಿಗೆ ನವೆಂಬರ್ ತೆರಿಗೆ ಅವಧಿಯ ಬಳಿಕ ರಿಟರ್ನ್ಸ್ ಸಲ್ಲಿಸಲು ಅವಕಾಶವಿಲ್ಲ ಎಂದು ಜಿಎಸ್‌ಟಿ ನೆಟ್‌ವರ್ಕ್(ಜಿಎಸ್‌ಟಿಎನ್) ತಿಳಿಸಿದೆ.

ಜಿಎಸ್‌ಟಿ ನೋಂದಾಯಿತ ವ್ಯವಹಾರಗಳು ಮಾಸಿಕ, ತ್ರೈಮಾಸಿಕ ಮತ್ತು ವಾರ್ಷಿಕ ಜಿಎಸ್‌ಟಿ ರಿಟರ್ನ್ಸ್ ಅನ್ನು ನಿಗದಿತ ಅವಧಿಗಿಂತ ಮೂರು ವರ್ಷಗಳ ಬಳಿಕ ಸಲ್ಲಿಸಲು ಸಾಧ್ಯವಿಲ್ಲ ಎಂದು ಜಿಎಸ್‌ಟಿಎನ್ ಬಿಡುಗಡೆಗೊಳಿಸಿರುವ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ. 'ನವೆಂಬರ್ ತೆರಿಗೆ ಅವಧಿಯಿಂದಲೇ ಜಿಎಸ್‌ಟಿ ಪೋರ್ಟಲ್‌ನಲ್ಲಿ ಈ ನಿರ್ಬಂಧ ಹೇರಲಾಗುತ್ತದೆ' ಎಂದು ಜಿಎಸ್‌ಟಿಎನ್ ಹೇಳಿದೆ.

2022 ಅಕ್ಟೋಬರ್‌ನಿಂದ ಬಾಕಿ ಇರುವ ಜಿಎಸ್‌ಟಿಆರ್-1 ಮತ್ತು ಜಿಎಸ್‌ಟಿಆರ್-3ಬಿಯ ಮಾಸಿಕ ಹಾಗೂ 2020-21ನೇ ಸಾಲಿನ ವಾರ್ಷಿಕ ಜಿಎಸ್‌ಟಿ ರಿಟರ್ನ್ ಸಲ್ಲಿಸಲು ಡಿಸೆಂಬರ್ 1ರಿಂದ ಅವಕಾವಿಲ್ಲ ಎಂದು ಜಿಎಸ್‌ಟಿಎನ್ ಮಾರ್ಗಸೂಚಿ ತಿಳಿಸಿದೆ.

ದ್ರಾಕ್ಷಿ: ಕೈಸೇರದ ವಿಮೆ ಪರಿಹಾರ

ಫಸಲ್ ಬಿಮಾ ಯೋಜನೆ: 31,470 ರೈತರಿಂದ ₹39 ಕೋಟಿ ಪ್ರೀಮಿಯಂ ಪಾವತಿ

● ಇಮಾಮ್‌ಹುಸೇನ್ ಗೂಡುನವರ



ಬೆಳಗಾವಿ: ಬೆಳೆ ವಿಮೆ (ಫಸಲ್ ಬಿಮಾ) ಯೋಜನೆಯಡಿ 2024ರ ಏಪ್ರಿಲ್‌ನಿಂದ 2025ರ ಮಾರ್ಚ್ ಅವಧಿಯಲ್ಲಿ ದ್ರಾಕ್ಷಿ ಬೆಳೆಗೆ ವಿಮೆ ಮಾಡಿಸಿದ್ದ ರಾಜ್ಯದ 31,470 ಬೆಳೆಗಾರರಿಗೆ ಇನ್ನೂ ಪರಿಹಾರ ಸಿಕ್ಕಿಲ್ಲ.

ದ್ರಾಕ್ಷಿಯನ್ನು ವಿಜಯಪುರ, ಬೆಳಗಾವಿ, ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ತುಮಕೂರು, ಕಲಬುರಗಿ, ಕೊಪ್ಪಳ, ಯಾದಗಿರಿ, ಬೀದರ್, ಕೋಲಾರ ಜಿಲ್ಲೆಗಳಲ್ಲಿ ಹವಾಮಾನ ಆಧಾರಿತ ಬೆಳೆಯಾಗಿ ಬೆಳೆಯಲಾಗುತ್ತದೆ. ರಾಜ್ಯದಲ್ಲಿ 42 ಸಾವಿರ ಹೆಕ್ಟೇರ್‌ಗಿಂತ ಹೆಚ್ಚಿನ ಪ್ರದೇಶದಲ್ಲಿ ಬೆಳೆ ಇದೆ. ಮಳೆ, ಪ್ರತಿಕೂಲ ಹವಾಮಾನದಿಂದ ಕಳೆದ ವರ್ಷ ಅಪಾರ ಪ್ರಮಾಣದಲ್ಲಿ ಬೆಳೆ ಹಾನಿಯಾಗಿತ್ತು.

> **ದ್ರಾಕ್ಷಿ ಬೆಳೆಗಾರರ ಬದುಕಿನೊಂದಿಗೆ ವಿಮೆ ಕಂಪನಿಯವರು ಚೆಲ್ಲಾಟವಾಡಬಾರದು. ಪರಿಹಾರ ಪಾವತಿ ವಿಳಂಬ ಮಾಡಬಾರದು**
> **ಅಭಯಕುಮಾರ್ ನಾಂದ್ರೇಕರ,** ಅಧ್ಯಕ್ಷ, ಕರ್ನಾಟಕ ದ್ರಾಕ್ಷಿ ಬೆಳೆಗಾರರ ಸಂಘ

> **ವಿಮೆ ಪರಿಹಾರ ಪಡೆಯಲು ಕೆಲ ರೈತರು ಅಕ್ರಮವೆಸಗಿದ ಆರೋಪವಿದೆ. ಈ ಬಗ್ಗೆ ಪರಿಶೀಲಿಸುತ್ತೇವೆ. ಈ ಗೊಂದಲದಿಂದ ಪರಿಹಾರ ಪಾವತಿ ವಿಳಂಬವಾಗಿರುವುದು ನಿಜ**
> **ವಿಮೆ ಅಧಿಕಾರಿ** ಅಗ್ರಿಕಲ್ಚರ್ ಇನ್ಶುರೆನ್ಸ್ ವಿಮೆ ಕಂಪನಿ

> **ವಿಮೆ ಮಾಡಿಸಿದ ರೈತರಿಗೆ ಪರಿಹಾರ ಕೊಡಲು ಪ್ರಕ್ರಿಯೆ ಆರಂಭಿಸಲಾಗಿದೆ. 15 ದಿನಗಳಲ್ಲಿ ಪರಿಹಾರ ಲಭಿಸಲಿದೆ**
> **ಮಹಾಂತೇಶ ಮುರಗೋಡ,** ಜಂಟಿ ನಿರ್ದೇಶಕ, ತೋಟಗಾರಿಕೆ ಇಲಾಖೆ, ಬೆಳಗಾವಿ

ಬೆಳೆ ವಿಮೆ ಯೋಜನೆಯಡಿ 31,470 ರೈತರು ಹೆಕ್ಟೇರ್‌ಗೆ ₹14 ಸಾವಿರ ಕಂತು (ಪ್ರೀಮಿಯಂ) ಪಾವತಿಸಿದ್ದರು. 27,953 ಹೆಕ್ಟೇರ್ ವಿಮೆ ಯೋಜನೆಗೆ ಒಳಪಟ್ಟಿತ್ತು. ₹39.13 ಕೋಟಿ ವಿಮೆ ಮೊತ್ತ ಪಾವತಿಯಾಗಿತ್ತು.

ಬೆಳೆ ಹಾನಿಯಾದರೆ ಪ್ರತಿ ಹೆಕ್ಟೇರ್‌ಗೆ ₹2.80 ಲಕ್ಷ ಪರಿಹಾರ ಬರಬೇಕಿತ್ತು. ಆದರೆ, ವಿಮೆ ಅವಧಿ ಮುಗಿದರೂ ಹಣ ಕೈಸೇರಿಲ್ಲ. ಪ್ರಕ್ರಿಯೆ ವಿಳಂಬವಾಗಿದ್ದರಿಂದ ರೈತರು ಇಕ್ಕಟ್ಟಿಗೆ ಸಿಲುಕಿದ್ದಾರೆ.

'ನಾನು ನಾಲ್ಕು ಎಕರೆಯಲ್ಲಿ ದ್ರಾಕ್ಷಿ ಬೆಳೆದಿದ್ದು, ವಿಮೆಯನ್ನೂ ಮಾಡಿಸಿದ್ದೆ. ಹವಾಮಾನ ವೈಪರೀತ್ಯದಿಂದ ಬೆಳೆ ಕೈಕೊಟ್ಟಿತು. ಈಗ ವಿಮೆ ಪರಿಹಾರವೂ ಸಿಗದೆ ತೊಂದರೆಯಾಗಿದೆ' ಎಂದು ಅಥಣಿ ತಾಲ್ಲೂಕಿನ ತೆಲಸಂಗದ ರೈತ ರವಿ ಕಾರಿಮನಿ 'ಪ್ರಜಾವಾಣಿ'ಗೆ ತಿಳಿಸಿದರು.

'ಅಕ್ರಮವಾಗಿ ವಿಮೆ ಪರಿಹಾರ ಪಡೆಯಲು ಕೆಲ ರೈತರು ಯತ್ನಿಸಿದ್ದಾರೆ. ದ್ರಾಕ್ಷಿ ಬೆಳೆಯದಿದ್ದರೂ ವಿಮೆ ಮಾಡಿಸಿದ್ದಾರೆ ಎಂಬ ಆರೋಪವಿದೆ. ಪರಿಶೀಲನೆ ನಂತರ ಪರಿಹಾರ ಕೊಡುತ್ತೇವೆ ಎಂದು ವಿಮೆ ಕಂಪನಿ ಅಧಿಕಾರಿಗಳು ಹೇಳುತ್ತಾರೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

ಎಂಜಿನಿಯರಿಂಗ್ ಸರಕುಗಳ ರಫ್ತು ಹೆಚ್ಚಳ: ಇಇಪಿಸಿ

ಕೋಲ್ಕತ್ತ (ಪಿಟಿಐ): ಸೆಪ್ಟೆಂಬರ್ ತಿಂಗಳಿನಲ್ಲಿ ದೇಶದ ಎಂಜಿನಿಯರಿಂಗ್ ಸರಕುಗಳ ರಫ್ತು ಮೌಲ್ಯ ₹89,726 ಕೋಟಿಯಷ್ಟಾಗಿದೆ ಎಂದು ಎಂಜಿನಿಯರಿಂಗ್ ರಫ್ತು ಉತ್ತೇಜನ ಮಂಡಳಿ (ಇಇಪಿಸಿ) ಶುಕ್ರವಾರ ತಿಳಿಸಿದೆ.

ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ರಫ್ತು ಪ್ರಮಾಣದಲ್ಲಿ ಶೇ 2.93ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ. ಆದರೆ, ಇದೇ ಅವಧಿಯಲ್ಲಿ ಅಮೆರಿಕಕ್ಕೆ ರಫ್ತು ಶೇ 9.4ರಷ್ಟು ಇಳಿಕೆಯಾಗಿದೆ ಎಂದು ತಿಳಿಸಿದೆ.

ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಅಮೆರಿಕಕ್ಕೆ ₹13,755 ಕೋಟಿ ಮೌಲ್ಯದ ಎಂಜಿನಿಯರಿಂಗ್ ಸರಕುಗಳ ರಫ್ತಾಗಿದ್ದವು. ಈ ಬಾರಿ ₹12,424 ಕೋಟಿಗೆ ಇಳಿಕೆಯಾಗಿದೆ. ಅಮೆರಿಕದ ಆಡಳಿತವು ಭಾರತದ ಸರಕುಗಳ ಆಮದು ಮೇಲೆ ಹೆಚ್ಚುವರಿ ಸುಂಕ ವಿಧಿಸಿದ್ದರಿಂದ ರಫ್ತು ಇಳಿಕೆ ಆಗಿದೆ. ಆದರೂ, ಅಮೆರಿಕವು ಈಗಲೂ ದೇಶದ ಸರಕುಗಳಿಗೆ ದೊಡ್ಡ ಮಾರುಕಟ್ಟೆಯಾಗಿ ಮೊದಲ ಸ್ಥಾನದಲ್ಲಿದೆ ಎಂದು ಹೇಳಿದೆ.

ಯುಎಇಗೆ ₹5,652 ಕೋಟಿ ಮೌಲ್ಯದ ಸರಕುಗಳು ರಫ್ತಾಗಿವೆ. ಚೀನಾ ರಫ್ತಿನಲ್ಲಿ ಶೇ 14.4ರಷ್ಟು ಹೆಚ್ಚಳವಾಗಿದ್ದು, ₹2,682 ಕೋಟಿಯಷ್ಟಾಗಿದೆ.

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ ಎಂಜಿನಿಯರಿಂಗ್ ಸರಕುಗಳ ರಫ್ತು ಶೇ 5.35ರಷ್ಟು ಹೆಚ್ಚಳವಾಗಿದ್ದು, ₹5.26 ಲಕ್ಷ ಕೋಟಿಯಷ್ಟಾಗಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹5 ಲಕ್ಷ ಕೋಟಿಯಷ್ಟಾಗಿತ್ತು ಎಂದು ತಿಳಿಸಿದೆ.



ಸೆಪ್ಟೆಂಬರ್‌ನಲ್ಲಿ ದೇಶದ ಒಟ್ಟು ಸರಕುಗಳ ರಫ್ತಿನಲ್ಲಿ ಎಂಜಿನಿಯರಿಂಗ್ ಸರಕುಗಳ ರಫ್ತು ಶೇ 27.8ರಷ್ಟು ಪಾಲು ಹೊಂದಿದೆ.

ಮಾರುತಿ ಸುಜುಕಿಗೆ ₹3,349 ಕೋಟಿ ಲಾಭ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ವಾಹನ ತಯಾರಿಕಾ ಕಂಪನಿ ಮಾರುತಿ ಸುಜುಕಿ ಇಂಡಿಯಾ ₹3,349 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಕಂಪನಿ ₹3,102 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 8ರಷ್ಟು ಹೆಚ್ಚಳವಾಗಿದೆ. ವಾಹನಗಳ ರಫ್ತಿನಲ್ಲಿನ ಹೆಚ್ಚಳದಿಂದ ಲಾಭದ ಪ್ರಮಾಣ ಏರಿಕೆಯಾಗಿದೆ ಎಂದು ಕಂಪನಿ ಷೇರುಪೇಟೆಗೆ ಶುಕ್ರವಾರ ತಿಳಿಸಿದೆ.

ವರಮಾನವು ₹42,344 ಕೋಟಿಗೆ ಏರಿಕೆಯಾಗಿದೆ. ವೆಚ್ಚವು ₹39,018 ಕೋಟಿಯಷ್ಟಾಗಿದ್ದು, ಕಳೆದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ವೆಚ್ಚವು ₹33,879 ಕೋಟಿಯಷ್ಟಾಗಿತ್ತು ಎಂದು ತಿಳಿಸಿದೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ 4.40 ಲಕ್ಷ ವಾಹನಗಳು ದೇಶೀಯ ಮಾರುಕಟ್ಟೆಯಲ್ಲಿ ಮಾರಾಟವಾಗಿದ್ದು, ಕಳೆದ ಸೆಪ್ಟೆಂಬರ್ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇ 5.1ರಷ್ಟು ಇಳಿಕೆ ಆಗಿದೆ. ಇದೇ ಅವಧಿಯಲ್ಲಿ ರಫ್ತು ಪ್ರಮಾಣ ಶೇ 42ರಷ್ಟು ಏರಿಕೆಯಾಗಿದ್ದು, 1.10 ಲಕ್ಷ ವಾಹನಗಳು ಮಾರಾಟವಾಗಿವೆ. ಒಟ್ಟಾರೆ ಮಾರಾಟದಲ್ಲಿ ಶೇ 1.7ರಷ್ಟು ಹೆಚ್ಚಳವಾಗಿದ್ದು, 5.50 ಲಕ್ಷ ವಾಹನಗಳು ಮಾರಾಟವಾಗಿವೆ.

ಏಪ್ರಿಲ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ ಕಂಪನಿಯ 10.78 ಲಕ್ಷ ವಾಹನಗಳು ಮಾರಾಟವಾಗಿದೆ. ಈ ಪೈಕಿ ದೇಶೀಯವಾಗಿ 8.71 ಲಕ್ಷ ವಾಹನಗಳು ಮಾರಾಟವಾಗಿದ್ದರೆ, ರಫ್ತು 2.07 ಲಕ್ಷವಾಗಿದೆ ಎಂದು ತಿಳಿಸಿದೆ.

ವಿತ್ತೀಯ ಕೊರತೆ ₹5.73 ಲಕ್ಷ ಕೋಟಿ

ಕೇಂದ್ರದಿಂದ ರಾಜ್ಯಗಳಿಗೆ ₹6.31 ಲಕ್ಷ ಕೋಟಿ ತೆರಿಗೆ ಪಾಲು ವರ್ಗಾವಣೆ: ಸಿಜಿಎ



ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್-ಸೆಪ್ಟೆಂಬರ್ ಅವಧಿಯಲ್ಲಿ ಕೇಂದ್ರ ಸರ್ಕಾರದ ವರಮಾನ ಮತ್ತು ವೆಚ್ಚದ ನಡುವಿನ ಅಂತರವಾದ ವಿತ್ತೀಯ ಕೊರತೆಯು ಇಡೀ ವರ್ಷದ ಗುರಿಯ ಶೇ 36.5ರಷ್ಟಾಗಿದೆ.

ಹಣಕಾಸಿನ ಮೌಲ್ಯದ ಲೆಕ್ಕದಲ್ಲಿ ಇದು ₹5.73 ಲಕ್ಷ ಕೋಟಿಯಾಗಿದೆ ಎಂದು ಲೆಕ್ಕಪತ್ರಗಳ ಮಹಾನಿಯಂತ್ರಕರ (ಸಿಜಿಎ) ವರದಿ ಶುಕ್ರವಾರ ತಿಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ವಿತ್ತೀಯ ಕೊರತೆಯು ₹4.7 ಲಕ್ಷ ಕೋಟಿಯಷ್ಟು (ಶೇ 29) ಇತ್ತು. 2025-26ರಲ್ಲಿ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ 4.4ಕ್ಕೆ (ಹಣಕಾಸಿನ ಮೌಲ್ಯದ ಲೆಕ್ಕದಲ್ಲಿ ₹15.69 ಲಕ್ಷ ಕೋಟಿ) ತಗ್ಗಿಸಲು ಸರ್ಕಾರ ಬಜೆಟ್‌ನಲ್ಲಿ ಗುರಿ ನಿಗದಿಪಡಿಸಲಾಗಿದೆ.

ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ ಸರ್ಕಾರವು ₹17.3 ಲಕ್ಷ ಕೋಟಿ (ಶೇ 49.5) ವರಮಾನ ಸ್ವೀಕರಿಸಿದೆ. ಒಟ್ಟು ವೆಚ್ಚವು ₹23 ಲಕ್ಷ ಕೋಟಿ ಆಗಿದೆ. ಇದು ಬಜೆಟ್ ಅಂದಾಜಿನ ಶೇ 45ರಷ್ಟಾಗಿದೆ.

ಕೇಂದ್ರ ಸರ್ಕಾರ ಸ್ವೀಕರಿಸಿದ ಒಟ್ಟು ಮೊತ್ತದ ಪೈಕಿ ₹12.29 ಲಕ್ಷ ಕೋಟಿ ತೆರಿಗೆ ವರಮಾನದಿಂದ ಸಂಗ್ರಹಿಸಿದೆ. ₹4.66 ಲಕ್ಷ ಕೋಟಿ ತೆರಿಗೆಯೇತರ ವರಮಾನ ಮತ್ತು ಇತರೆ ಮೂಲಗಳಿಂದ ₹34,770 ಕೋಟಿ ಸಂಗ್ರಹಿಸಿದೆ.

ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರಗಳಿಗೆ ₹6.31 ಲಕ್ಷ ಕೋಟಿಯನ್ನು ತೆರಿಗೆ ಪಾಲಾಗಿ ವರ್ಗಾಯಿಸಿದೆ. ಇದು ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ₹86,948 ಕೋಟಿಯಷ್ಟು ಅಧಿಕವಾಗಿದೆ ಎಂದು ತಿಳಿಸಿದೆ.

ವಿದೇಶಿ ವಿನಿಮಯ ಸಂಗ್ರಹ ಇಳಿಕೆ

ಮುಂಬೈ (ಪಿಟಿಐ): ಅಕ್ಟೋಬರ್ 24ಕ್ಕೆ ಅಂತ್ಯಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹದ ಪ್ರಮಾಣವು ₹61,434 ಕೋಟಿಯಷ್ಟು ಕಡಿಮೆ ಆಗಿದೆ.

ಪ್ರಸ್ತುತ ಒಟ್ಟು ಮೀಸಲು ಸಂಗ್ರಹ ₹61.69 ಲಕ್ಷ ಕೋಟಿಯಷ್ಟಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ತಿಳಿಸಿದೆ.

ವಿದೇಶಿ ಕರೆನ್ಸಿಗಳ ಸಂಪತ್ತಿನ ಮೌಲ್ಯ ₹34,266 ಕೋಟಿಯಷ್ಟು ಕಡಿಮೆಯಾಗಿದ್ದು, ₹50.26 ಲಕ್ಷ ಕೋಟಿಯಾಗಿದೆ. ಚಿನ್ನದ ಮೀಸಲು ಸಂಗ್ರಹದಲ್ಲಿ ₹26,706 ಕೋಟಿ ಇಳಿಕೆಯಾಗಿದ್ದು, ₹9.36 ಲಕ್ಷ ಕೋಟಿಯಾಗಿದೆ. ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ₹1.65 ಲಕ್ಷ ಕೋಟಿ ಆಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿ ಭಾರತದ ಪಾಲು ₹40,887 ಕೋಟಿಯಾಗಿದೆ ಎಂದು ತಿಳಿಸಿದೆ.

ಆ್ಯಪಲ್‌ಗೆ ₹9 ಲಕ್ಷ ಕೋಟಿ ವರಮಾನ

ನವದೆಹಲಿ (ಪಿಟಿಐ): ಐಫೋನ್ ತಯಾರಕ ಕಂಪನಿ ಆ್ಯಪಲ್, ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹9 ಲಕ್ಷ ಕೋಟಿ ವರಮಾನ ಗಳಿಸಿದೆ. ಇದು ಕಂಪನಿಯು ಭಾರತದಲ್ಲಿ ಗಳಿಸಿದ ಸಾರ್ವಕಾಲಿಕ ದಾಖಲೆಯ ವರಮಾನವಾಗಿದೆ.

ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ವರಮಾನದಲ್ಲಿ ಶೇ 8ರಷ್ಟು ಹೆಚ್ಚಳವಾಗಿದೆ. ಐಫೋನ್‌ಗಳ ಮಾರಾಟದಲ್ಲಿನ ಹೆಚ್ಚಳದಿಂದ ವರಮಾನ ಏರಿಕೆಯಾಗಿದೆ ಎಂದು ಕಂಪನಿ ಶುಕ್ರವಾರ ತಿಳಿಸಿದೆ. ಡಿಸೆಂಬರ್ ತ್ರೈಮಾಸಿಕದಲ್ಲೂ ವರಮಾನವು ಹೆಚ್ಚಳವಾಗಲಿದೆ ಎಂದು ಅಂದಾಜಿಸಿದೆ.

ಅಮೆರಿಕ, ಕೆನಡಾ, ಜಪಾನ್, ಕೊರಿಯಾ, ದಕ್ಷಿಣ ಏಷ್ಯಾ ಸೇರಿದಂತೆ ಹಲವಾರು ಮಾರುಕಟ್ಟೆಗಳಲ್ಲಿ ಸೆಪ್ಟೆಂಬರ್ ತ್ರೈಮಾಸಿಕದ ಆದಾಯವು ದಾಖಲೆ ಹೊಂದಿದೆ ಎಂದು ತಿಳಿಸಿದೆ. ಸೆಪ್ಟೆಂಬರ್‌ನಲ್ಲಿ ಕಂಪನಿಯು ಐಫೋನ್ 17 ಸೀರೀಸ್ ಬಿಡುಗಡೆ ಮಾಡಿತ್ತು.

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹320-644
ದ್ವಿತಳಿ (ಬಿ.ವಿ)	₹501-801

ಎಸಿಸಿ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಸಿಮೆಂಟ್ ತಯಾರಿಕಾ ಕಂಪನಿ ಎಸಿಸಿ ಲಿಮಿಟೆಡ್, ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹1,119 ಕೋಟಿ ತೆರಿಗೆ ನಂತರದ ಲಾಭ (ಪಿಎಟಿ) ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಕಂಪನಿ ₹199 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಐದು ಪಟ್ಟು ಹೆಚ್ಚಳವಾಗಿದೆ. ಸಿಮೆಂಟ್ ಮಾರಾಟದಲ್ಲಿನ ಹೆಚ್ಚಳವೇ ಲಾಭದ ಪ್ರಮಾಣ ಏರಿಕೆಗೆ ಕಾರಣ ಎಂದು ಕಂಪನಿ ಶುಕ್ರವಾರ ಷೇರುಪೇಟೆಗೆ ತಿಳಿಸಿದೆ.

ಕಳೆದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ವರಮಾನವು ₹4,542 ಕೋಟಿಯಷ್ಟಿತ್ತು. ಈ ಬಾರಿ ₹5,896 ಕೋಟಿಗೆ ಹೆಚ್ಚಳವಾಗಿದೆ. ಒಟ್ಟು ವೆಚ್ಚವು ₹5,393 ಕೋಟಿಗೆ ಏರಿಕೆಯಾಗಿದೆ ಎಂದು ತಿಳಿಸಿದೆ.

ಸೆನ್ಸೆಕ್ಸ್ 465 ಅಂಶ ಇಳಿಕೆ



ಮುಂಬೈ (ಪಿಟಿಐ): ಖಾಸಗಿ ಬ್ಯಾಂಕ್‌ಗಳ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 465 ಅಂಶ ಇಳಿಕೆಯಾಗಿ, 83,938ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 155 ಅಂಶ ಕಡಿಮೆಯಾಗಿ, 25,722ಕ್ಕೆ ಕೊನೆಗೊಂಡಿದೆ.

ವಿದೇಶಿ ಬಂಡವಾಳದ ಹೊರಹರಿವು, ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಾರ್ಪೊರೇಟ್ ಕಂಪನಿಗಳ ಗಳಿಕೆಯಲ್ಲಿ ಮಿಶ್ರ ಫಲಿತಾಂಶ, ಅಮೆರಿಕದ ಫೆಡರಲ್ ರಿಸರ್ವ್‌ನ ಮುಂದಿನ ಬಡ್ಡಿ ದರ ಕಡಿತದ ಬಗ್ಗೆ ಇರುವ ಸ್ಪಷ್ಟತೆಯ ಕೊರತೆಯು ಹೂಡಿಕೆದಾರರ ಭಾವನೆ ಮೇಲೆ ಪರಿಣಾಮ ಬೀರಿದೆ. ಇದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಎಟರ್ನಲ್, ಎನ್‌ಟಿಪಿಸಿ, ಕೋಟಕ್ ಮಹೀಂದ್ರ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಬಜಾಜ್ ಫಿನ್‌ಸರ್ವ್, ಪವರ್ ಗ್ರಿಡ್, ಟ್ರೆಂಟ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ಭಾರತ್ ಎಲೆಕ್ಟ್ರಾನಿಕ್ಸ್, ಲಾರ್ಸನ್ ಆ್ಯಂಡ್ ಟೂಬ್ರೊ, ಟಿಸಿಎಸ್, ಐಟಿಸಿ ಮತ್ತು ಭಾರತೀಯ ಸ್ಟೇಟ್ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಹೆಚ್ಚಳವಾಗಿದೆ.

ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾ ಮತ್ತು ಜಪಾನ್ ಸಕಾರಾತ್ಮಕ ವಹಿವಾಟು ಕಂಡಿವೆ. ಶಾಂಘೈ ಮತ್ತು ಹಾಂಗ್‌ಕಾಂಗ್ ಇಳಿಕೆ ಕಡಿವೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ₹3,077 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಇದೇ ವೇಳೆ ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹2,469 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.31ರಷ್ಟು ಇಳಿಕೆಯಾಗಿದೆ. ಪ್ರತೀ ಬ್ಯಾರಲ್ ದರವು 64.80 ಡಾಲರ್ ಆಗಿದೆ.

ಚಿನ್ನ ₹2,200 ಏರಿಕೆ, ಬೆಳ್ಳಿ ₹2 ಸಾವಿರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನದ ಬೆಲೆ ಏರಿಕೆ ಆಗಿದ್ದರೆ, ಬೆಳ್ಳಿ ದರ ಇಳಿದಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹2,200 ಹೆಚ್ಚಳವಾಗಿ, ₹1,25,600ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5ರಷ್ಟು ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹1.25 ಲಕ್ಷವಾಗಿದೆ. ಬೆಳ್ಳಿ ದರವು ಕೆ.ಜಿಗೆ ₹2 ಸಾವಿರ ಕಡಿಮೆಯಾಗಿ ₹1.53 ಲಕ್ಷವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ದಾಸ್ತಾನುಗಾರರು ಮತ್ತು ಆಭರಣ ತಯಾರಕರಿಂದ ಚಿನ್ನದ ಖರೀದಿ ಹೆಚ್ಚಳವಾಗಿದೆ. ಹೀಗಾಗಿ, ಹಳದಿ ಲೋಹದ ಬೆಲೆಯಲ್ಲಿ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

31-10-2025	
ಜಾವಾ 70/80(ಹೊಸ)	10300-10400
ಜಾವಾ 80/90(ಹೊಸ)	9600-9700
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1415 (1415)
ಒಂದು ವಾರದ ಡೆಲಿವರಿ	1410 (1410)
ಪಾಮ್ ವಾರದ ಡೆಲಿವರಿ	1263 (1273)
ಸೂರ್ಯಕಾಂತಿ ಎಣ್ಣೆ ಕಚ್ಚಾ	1410 (1415)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,21,000 (1,19,500)
ಬೆಳ್ಳಿ ಕೆ.ಜಿಗೆ	1,49,400 (1,47,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

30 ಪ್ಯಾಲಿಸ್ಟೀನಿಯರ ಮೃತದೇಹ ಹಸ್ತಾಂತರಿಸಿದ ಇಸ್ರೇಲ್

ಜೆರುಸಲೇಂ (ಎಪಿ): ಇಸ್ರೇಲ್ ಸೇನೆಯು ಶುಕ್ರವಾರ 30 ಪ್ಯಾಲಿಸ್ಟೀನಿಯರ ಮೃತದೇಹಗಳನ್ನು ಹಸ್ತಾಂತರಿಸಿದೆ ಎಂದು ಗಾಜಾಪಟ್ಟಿಯ ರೆಡ್‌ಕ್ರಾಸ್ ಆಸ್ಪತ್ರೆ ಸಿಬ್ಬಂದಿ ತಿಳಿಸಿದ್ದಾರೆ.

ಹಮಾಸ್ ಬಂಡುಕೋರರು, ಬಾಕಿ ಉಳಿದಿದ್ದ ಇಬ್ಬರು ಇಸ್ರೇಲ್ ಒತ್ತೆಯಾಳುಗಳ ಮೃತದೇಹವನ್ನು ಗುರುವಾರ ಹಸ್ತಾಂತರಿಸಿದ್ದರು. ಆಸ್ಪತ್ರೆಯಿಂದ ಮೃತದೇಹಗಳ ಅವಶೇಷಗಳನ್ನು ಪಡೆದು, ಇಸ್ರೇಲ್‌ನ ರಾಷ್ಟ್ರೀಯ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದು ಇಸ್ರೇಲ್ ಸೇನೆ ಹೇಳಿದೆ.

'ಕಾಂಗ್ರೆಸ್ ಭರವಸೆ 134, ಈಡೇರಿಕೆ 9'

ಒಂದನೇ ಪುಟದಿಂದ...

ಸರ್ಕಾರವು ಈಡೇರಿಸಿರುವ ಒಂಬತ್ತು ಭರವಸೆಗಳ ಪೈಕಿ ಐದು ಗ್ಯಾರಂಟಿ ಯೋಜನೆಗಳೇ ಇವೆ. ಜತೆಗೆ ಶಾಲಾ ಪಠ್ಯಕ್ರಮ ಬದಲಾವಣೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆ, ಮೆಟ್ರೊ ಮತ್ತು ಬಸ್ ನಿಲ್ದಾಣಗಳಲ್ಲಿ ಚಾರ್ಜಿಂಗ್ ಸ್ಟೇಷನ್‌ಗಳ ಸ್ಥಾಪನೆ ಹಾಗೂ ಆಟೊ-ಟ್ಯಾಕ್ಸಿ ಚಾಲಕರ ಕಲ್ಯಾಣ ಮಂಡಳಿ ಸ್ಥಾಪನೆ ಭರವಸೆಗಳನ್ನು ಮಾತ್ರ ಈಡೇರಿಸಿದೆ ಎನ್ನುತ್ತದೆ ವರದಿ.

'ಅಧಿಕಾರಕ್ಕೆ ಬಂದ ಒಂದು ವರ್ಷದಲ್ಲಿ ಬೆಂಗಳೂರು ಮೆಟ್ರೊವಿನ 2, 2ಎ, 2ಬಿ ಹಂತಗಳನ್ನು ಪೂರ್ಣಗೊಳಿಸುತ್ತೇವೆ' ಎಂದು ಕಾಂಗ್ರೆಸ್ ಹೇಳಿತ್ತು. ತಾನೇ ಹಾಕಿಕೊಂಡಿದ್ದ ಗಡುವಿನೊಳಗೆ ಕಾಮಗಾರಿ ಪೂರ್ಣಗೊಳಿಸುವಲ್ಲಿ ವಿಫಲವಾಗಿದೆ. ಸರ್ಕಾರಿ ಶಾಲೆಗಳಲ್ಲಿ 62,000 ಶಿಕ್ಷಕರ ಮತ್ತು ಇತರ ಸಿಬ್ಬಂದಿ ಹುದ್ದೆ ಖಾಲಿ ಇವೆ. ಅವುಗಳಿಗೆ ನೇಮಕಾತಿ ಮಾಡುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ವರದಿ ಬೊಟ್ಟುಮಾಡಿದೆ.

'ಡಿಸಿಎಂ ಆರ್‌ಎಸ್‌ಎಸ್ ಗೀತೆ: ಜಾತ್ಯತೀತತೆಗೆ ಧಕ್ಕೆ'

ಒಂದನೇ ಪುಟದಿಂದ...

- ಒಳ ಮೀಸಲಾತಿ ಜಾರಿ, ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಸಂವಿಧಾನದ ಪ್ರಸ್ತಾವನೆ ಓದಿಸುವ ಕಾರ್ಯಕ್ರಮ ಶ್ಲಾಘನೀಯ
- ಕಟ್ಟಡ ನಿರ್ಮಾಣ ಕಾರ್ಮಿಕರ ಸಬಲೀಕರಣಕ್ಕಾಗಿ ಉತ್ತಮ ಯೋಜನೆಗಳನ್ನು ರೂಪಿಸಲಾಗಿದೆ. ಆದರೆ ಅನರ್ಹರು ತಾವು ಕಟ್ಟಡ ಕಾರ್ಮಿಕರೆಂದು ನೋಂದಣಿ ಮಾಡಿಸಿಕೊಂಡು ಯೋಜನೆಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ
- ಶರಾವತಿ ಪಂಪ್ಡ್ ಸ್ಟೋರೇಜ್, ಕಾಳಿ ರೈಲು ಮಾರ್ಗ, ಶೆಟ್ಟಿಹಳ್ಳಿ ಅಭಯಾರಣ್ಯ ಡಿನೋಟಿಫಿಕೇಷನ್, ಅವೈಜ್ಞಾನಿಕವಾಗಿ ಸೋಲಾರ್ ಪಾರ್ಕ್‌ಗಳ ಸ್ಥಾಪನೆಯಿಂದ ಪರಿಸರಕ್ಕೆ ಹಾನಿ
- ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಹಿನ್ನಡೆ. ಧರ್ಮಸ್ಥಳದ ಅಸಹಜ ಸಾವು ಪ್ರಕರಣಗಳ ತನಿಖೆ ನಿರ್ವಹಣೆಯಲ್ಲಿ ವಿಳಂಬ. ಮಹಿಳಾ ಆಯೋಗವು ಇನ್ನಷ್ಟು ಚುರುಕಾಗಿ ಕೆಲಸ ಮಾಡಬೇಕು
- ನಗರಾಭಿವೃದ್ಧಿಯಲ್ಲಿ ವಿಫಲ. ಬೆಂಗಳೂರಿಗೆ ಹೊರೆಯಾಗುವ ಮತ್ತು ಜನರಿಗೆ ಉಪಯೋಗವಿಲ್ಲದ ಯೋಜನೆಗಳಿಗೆ ಒಲವು. ಮೂಲಸೌಕರ್ಯ ನಿರ್ವಹಣೆಯಲ್ಲಿ ವಿಫಲ

ಇಬ್ಬರು ಹಿರಿಯ ವಕೀಲರಿಗೆ ಇ.ಡಿ ನೀಡಿದ್ದ ಸಮನ್ಸ್ ರದ್ದು

'ಸಮನ್ಸ್: ಎಸ್‌ಪಿ ಅನುಮೋದನೆ ಕಡ್ಡಾಯ'



ನವದೆಹಲಿ(ಪಿಟಿಐ): ಕ್ರಿಮಿನಲ್ ಪ್ರಕರಣಗಳ ತನಿಖೆ ಸಂದರ್ಭದಲ್ಲಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಅನುಮೋದನೆ ಇಲ್ಲದ ಹೊರತು ತನಿಖಾಧಿಕಾರಿಗಳು (ಐಒಗಳು) ವಕೀಲರಿಗೆ ಸಮನ್ಸ್ ನೀಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಮಹತ್ವದ ತೀರ್ಪು ನೀಡಿದೆ.

ತನ್ನ ಕಕ್ಷಿದಾರರಿಗೆ ಕಾನೂನು ಸಲಹೆ ನೀಡುವ ವಕೀಲರಿಗೆ ತನಿಖಾ ಸಂಸ್ಥೆಗಳು ಮನಸ್ಸಿಗೆ ತೋಚಿದಂತೆ ಸಮನ್ಸ್ ನೀಡುವುದಕ್ಕೆ ಕಡಿವಾಣ ಹಾಕುವುದಕ್ಕಾಗಿ ಸುಪ್ರೀಂ ಕೋರ್ಟ್, ಹಲವು ನಿರ್ದೇಶನಗಳನ್ನೂ ನೀಡಿದೆ.

ಪ್ರಕರಣವೊಂದರ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ (ಇ.ಡಿ), ಹಿರಿಯ ವಕೀಲರಾದ ಅರವಿಂದ ದಾತಾರ್ ಮತ್ತು ಪ್ರತಾಪ್ ವೇಣುಗೋಪಾಲ್ ಅವರಿಗೆ ನೀಡಿದ್ದ ಸಮನ್ಸ್‌ಗಳನ್ನು ರದ್ದುಪಡಿಸಿ ತೀರ್ಪು ನೀಡಿದ ವೇಳೆ ಸುಪ್ರೀಂ ಕೋರ್ಟ್ ಈ ನಿರ್ದೇಶನ ನೀಡಿದೆ.

ಸುಪ್ರೀಂ ಕೋರ್ಟ್‌ನ ಈ ತೀರ್ಪು ವಕೀಲರು ಹಾಗೂ ಕಕ್ಷಿದಾರರ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿ ಮಹತ್ವದ ಕ್ರಮ ಎಂದು ವಿಶ್ಲೇಷಿಸಲಾಗುತ್ತಿದೆ.

ಹಣ ಅಕ್ರಮ ವರ್ಗಾವಣೆ ಕುರಿತು ನಡೆಸುತ್ತಿರುವ ತನಿಖೆ ಭಾಗವಾಗಿ ಜಾರಿ ನಿರ್ದೇಶನಾಲಯವು ದಾತಾರ್ ಹಾಗೂ ಪ್ರತಾಪ್ ವೇಣುಗೋಪಾಲ್ ಅವರಿಗೆ ಸಮನ್ಸ್ ನೀಡಿತ್ತು. ಈ ವಿಚಾರವಾಗಿ ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿತ್ತು.

ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ, ನ್ಯಾಯಮೂರ್ತಿಗಳಾದ ಕೆ.ವಿನೋದಚಂದ್ರನ್ ಹಾಗೂ ಎನ್.ವಿ.ಅಂಜಾರಿಯಾ ಅವರು ಇದ್ದ ನ್ಯಾಯಪೀಠ ಪ್ರಕರಣದ ವಿಚಾರಣೆ ನಡೆಸಿತ್ತು.

ಆಗಸ್ಟ್ 12ರಂದು ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಪೀಠ ಪ್ರಕಟಿಸಿದ್ದು, ಆದೇಶದ ವಿಸ್ತೃತ ಪ್ರತಿ ಇನ್ನಷ್ಟೆ ಲಭಿಸಬೇಕಿದೆ.

ದಾತಾರ್ ಹಾಗೂ ಪ್ರತಾಪ್ ಅವರಿಗೆ ಸಮನ್ಸ್ ನೀಡಿದ ಇ.ಡಿ ಕ್ರಮಕ್ಕೆ ಸುಪ್ರೀಂ ಕೋರ್ಟ್ ವಕೀಲರ ಸಂಘ (ಎಸ್‌ಸಿಬಿಎ) ಹಾಗೂ ಸುಪ್ರೀಂ ಕೋರ್ಟ್‌ನಲ್ಲಿ ವಕಾಲತ್ತು ವಹಿಸುವ ವಕೀಲರ ಸಂಘದಿಂದ (ಎಸ್‌ಸಿಎಒಆರ್‌ಎ) ವ್ಯಾಪಕ ಟೀಕೆ ವ್ಯಕ್ತವಾಗಿತ್ತು.

ಇದು ವಿವಾದದ ಸ್ವರೂಪ ಪಡೆದ ನಂತರ, ತನ್ನ ಅಧಿಕಾರಿಗಳಿಗೆ ಕೆಲ ನಿರ್ದೇಶನಗಳನ್ನು ನೀಡಿ ಜಾರಿ ನಿರ್ದೇಶನಾಲಯ ಜೂನ್ 20ರಂದು ಸುತ್ತೋಲೆ ಹೊರಡಿಸಿತ್ತು. ಇ.ಡಿ ನಿರ್ದೇಶಕರಿಂದ ಪೂರ್ವಾನುಮತಿ ಮತ್ತು ಬಿಎಸ್‌ಎ ಸೆಕ್ಷನ್ 132ಕ್ಕೆ ಅನುಗುಣವಾಗಿ ಇಲ್ಲದ ಹೊರತು, ಹಣ ಅಕ್ರಮ ವರ್ಗಾವಣೆ ಪ್ರಕರಣಗಳಲ್ಲಿ ವಕೀಲರಿಗೆ ಸಮನ್ಸ್ ನೀಡದಂತೆ ತನ್ನ ಅಧಿಕಾರಿಗಳಿಗೆ ಸೂಚಿಸಿತ್ತು.

'ಅಣ್ವಸ್ತ್ರ ಪರೀಕ್ಷೆ: ಮಾನವೀಯತೆಗೆ ದೊಡ್ಡ ಅಪಾಯ'

ಮೆಲ್ಬರ್ನ್ (ಪಿಟಿಐ): ಇತರೆ ರಾಷ್ಟ್ರಗಳ ಸಮಾನ ಆಧಾರದ ಮೇಲೆ ದೇಶದಲ್ಲಿರುವ ಪರಮಾಣು ಶಸ್ತ್ರಾಸ್ತ್ರಗಳ ಪರೀಕ್ಷೆಯನ್ನು ತಕ್ಷಣವೇ ಆರಂಭಿಸುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ರಕ್ಷಣಾ ಇಲಾಖೆಯ ಕೇಂದ್ರ ಕಚೇರಿ 'ಪೆಂಟಗಾನ್'ಗೆ ಸೂಚನೆ ನೀಡಿದ್ದಾರೆ.

ಟ್ರಂಪ್ ಅವರು ಪರಮಾಣು ಸ್ಫೋಟ ಪರೀಕ್ಷೆ ಕುರಿತು ಉಲ್ಲೇಖಿಸಿದ್ದರೆ, ಅದು ಅಮೆರಿಕದ ಪಾಲಿಗೆ ದುರದೃಷ್ಟಕರ ಹಾಗೂ ವಿಷಾದನೀಯ ಹೆಜ್ಜೆಯಾಗಿರಲಿದೆ ಎಂದು ವಿಶ್ಲೇಷಿಸಲಾಗಿದೆ. ಪರಮಾಣು ಶಸ್ತ್ರಾಸ್ತ್ರ ಹೊಂದಿರುವ ರಾಷ್ಟ್ರಗಳು ಪ್ರತೀಕಾರದ ಘೋಷಣೆಗಳು ಮಾಡುತ್ತಿವೆ. ಅದರಲ್ಲೂ ವಿಶೇಷವಾಗಿ ರಷ್ಯಾ- ಚೀನಾವು ಅತ್ಯಂತ ವೇಗದಲ್ಲಿ ಶಸ್ತ್ರಾಸ್ತ್ರಗಳ ವೃದ್ಧಿಯಲ್ಲಿ ತೊಡಗಿದೆ. ಇದರ ಬೆನ್ನಲ್ಲೇ, ಟ್ರಂಪ್ ಸೂಚನೆಯು ಜಾಗತಿಕ ಮಟ್ಟದಲ್ಲಿ ಹೆಚ್ಚಿನ ಕಳವಳಕ್ಕೆ ಕಾರಣವಾಗಿದೆ.

ನಾಯಕತ್ವ ಬದಲು: ಮತ್ತಷ್ಟು ಗೋಜಲು

ಡಿಸಿಎಂ ಎಂದಾಕ್ಷಣ ಮುತ್ತಿಕ್ಕಿದ ಜಮೀರ್

ಚಿತ್ರದುರ್ಗದ ಕಾರ್ಯಕ್ರಮವೊಂದರಲ್ಲಿ ಯುವಕರೊಬ್ಬರು ಮುಂದಿನ ಡಿಸಿಎಂ (ಉಪ ಮುಖ್ಯಮಂತ್ರಿ) ಜಮೀರ್ ಅಹಮದ್ ಎಂದು ಕೂಗಿದ್ದಾರೆ. ತಕ್ಷಣವೇ ಖುಷಿಗೊಂಡ ಜಮೀರ್, ಘೋಷಣೆ ಕೂಗಿದವರ ಗಲ್ಲಕ್ಕೆ ಮುತ್ತು ಕೊಟ್ಟಿದ್ದಾರೆ.

ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸದ್ಯ ರಾಜ್ಯದಲ್ಲಿ ನವೆಂಬರ್‌ನಲ್ಲಿ ಯಾವ ಕ್ರಾಂತಿಯೂ ಆಗುವುದಿಲ್ಲ. ಸಂಪುಟ ಪುನರ್ ರಚಿಸುವ ಚಿಂತನೆ ಇದ್ದು, ಅದನ್ನು ಹೈಕಮಾಂಡ್ ನಿರ್ಧಾರಿಸುತ್ತದೆ' ಎಂದರು.

> **ಮುಖ್ಯಮಂತ್ರಿ ಬದಲಾವಣೆ ವಿಷಯ ಹೈಕಮಾಂಡ್‌ಗೆ ಬಿಟ್ಟ ವಿಷಯ. ಇದರ ಬಗ್ಗೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಏನು ಹೇಳಿದ್ದಾರೋ, ಅದೇ ನನ್ನ ಹೇಳಿಕೆ**
> **ರಾಮಲಿಂಗಾರೆಡ್ಡಿ,** ಸಾರಿಗೆ ಸಚಿವ

ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ. 2028ರವರೆಗೂ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿರುತ್ತಾರೆ.

'ಡಿ.ಕೆ.ಶಿವಕುಮಾರ್ ಅವರು ಕಾಂಗ್ರೆಸ್ ತೊರೆದು ಬಿಜೆಪಿ ಸೇರುತ್ತಾರೆ ಎಂಬುದು ಊಹಾ ಪೋಹ. ನಾನಾದರೂ ಜೆಡಿಎಸ್‌ನಿಂದ ಬಂದಿದ್ದೇನೆ. ಆದರೆ, ಶಿವಕುಮಾರ್ ಅವರದ್ದು ಕಾಂಗ್ರೆಸ್ ರಕ್ತ, ರಕ್ತವನ್ನು ಬದಲಾಯಿಸಲು ಸಾಧ್ಯವಿಲ್ಲ. ಅವರು ಪಕ್ಷ ತೊರೆಯುವ ಪ್ರಶ್ನೆಯೇ ಇಲ್ಲ' ಎಂದರು.

'ಇದೇ ತಿಂಗಳು ಸಂಪುಟ ಪುನರ್‌ರಚನೆ'

ಒಂದನೇ ಪುಟದಿಂದ...

ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಶಾಸಕಾಂಗ ಪಕ್ಷದ ನಾಯಕನನ್ನಾಗಿ ನಾವು ಸಿದ್ದರಾಮಯ್ಯ ಅವರನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಪ್ರಜಾಪ್ರಭುತ್ವದಲ್ಲಿ ಏನು ಬೇಕಾದರೂ ಆಗಬಹುದು. ಆದರೆ, ವರಿಷ್ಠರ ನಿರ್ಧಾರಕ್ಕೆ ನಮ್ಮ ಬೆಂಬಲ ಇರಲಿದೆ. ಸಚಿವ ಸ್ಥಾನಕ್ಕಾಗಿ ನಾನೂ ಕಾಯುತ್ತಿದ್ದೇನೆ' ಎಂದರು.

'ದಲಿತ ಸಿ.ಎಂ ಅಸಾಧ್ಯವಲ್ಲ'

ಒಂದನೇ ಪುಟದಿಂದ...

'ಅಸ್ಪೃಶ್ಯರ ನೋವು ಅಸ್ಪೃಶ್ಯರಿಗೆ ಮಾತ್ರ ಅರ್ಥವಾಗುತ್ತದೆ. ಅವರ ನೋವು-ಸಂಕಟ ಬೇರೆಯವರಿಗೆ ಅರ್ಥವಾಗುವುದಿಲ್ಲ. ದಲಿತರ ಪರವಾಗಿ ಮಾಡಬಾರದು ಅಂತ ಯಾರು ಹೇಳುವುದಿಲ್ಲ. ನಮ್ಮ ಹೈಕಮಾಂಡ್ ದಲಿತರ ಪರ ಇದೆ. ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಬಗ್ಗೆ ಹೆಮ್ಮೆ ಇದೆ' ಎಂದರು.

'ಸಿಎಂ ಬದಲಾವಣೆ; ಹೈಕಮಾಂಡ್ ನಿರ್ಧಾರ'

ಕಾರವಾರ/ವಿಜಯಪುರ: 'ಪಕ್ಷದ ಹೈಕಮಾಂಡ್ ಒಪ್ಪಿದರೆ ಪೂರ್ಣಾವಧಿ ಹುದ್ದೆ ನಿಭಾಯಿಸುವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಹೇಳಿದ್ದಾರೆ. ಅವರನ್ನು ಹುದ್ದೆಯಲ್ಲಿ ಮುಂದುವರಿಸುವುದು ಅಥವಾ ಬದಲಿಸುವುದು ಪಕ್ಷದ ಹೈಕಮಾಂಡ್‌ಗೆ ಬಿಟ್ಟ ನಿರ್ಣಯ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ ಹೇಳಿದರು.

'ನವೆಂಬರ್ ಕ್ರಾಂತಿ ಎಂಬುದೇ ಒಂದು ಭ್ರಾಂತಿ. ರಾಜಕೀಯ ನಾಯಕರ ಮಾತು ಕೇಳಿ ಮಾಧ್ಯಮದವರೂ ಸುದ್ದಿ ಮಾಡುತ್ತಿದ್ದೀರಿ. ಅಂತಹ ಯಾವುದೇ ಕ್ರಾಂತಿ ಆಗದು. ದಲಿತ ಮುಖ್ಯಮಂತ್ರಿ ಆಗಬೇಕೊ, ಬೇರೆಯವರು ಆಗಬೇಕೊ ಅಥವಾ ಈಗಿರುವವರೇ ಮುಂದುವರಿಯಬೇಕೊ ಎಂಬುದನ್ನು ವರಿಷ್ಠರು ನಿರ್ಧರಿಸುತ್ತಾರೆ' ಎಂದು ಅವರು ತಿಳಿಸಿದರು.

ಬೆಟ್ಟಿಂಗ್ ಲೋಕದ ಕಥೆ, ವ್ಯಥೆ

‘ಕೌಸಲ್ಯಾ ಸುಪ್ರಜಾ ರಾಮ’ದಲ್ಲಿ ಅಪ್ಪ-ಮಗನ ಒಂದು ಬಗೆಯ ಸೈದ್ಧಾಂತಿಕ ಸಂಘರ್ಷವನ್ನು ತೆರೆಗೆ ತಂದಿದ್ದ ನಿರ್ದೇಶಕ ಶಶಾಂಕ್, ‘ಬ್ರ್ಯಾಟ್’ನಲ್ಲಿ ಪ್ರಾಮಾಣಿಕ ಅಪ್ಪ-ಅಪ್ರಾಮಾಣಿಕ ಮಗನ ನಡುವೆ ನಡೆಯುವ ಸೈದ್ಧಾಂತಿಕ ಸಂಘರ್ಷವನ್ನು ಹೇಳಿದ್ದಾರೆ. ಬೆಟ್ಟಿಂಗ್ ಲೋಕ ಪ್ರವೇಶಿಸುವ ನಿರ್ದೇಶಕರು ಚಿತ್ರಕಥೆಯಲ್ಲಿ ತಿರುವುಗಳಿಗೆ ಪ್ರಾಧಾನ್ಯತೆ ನೀಡಿದ್ದಾರೆ. ಆದರೆ ಸಿನಿಮಾ ಮೂಲಕ ಯುವ ಸಮಾಜಕ್ಕೆ ಹೋಗುವ ಸಂದೇಶದ ಬಗ್ಗೆ ಹೆಚ್ಚು ಚಿಂತಿಸಿದಂತಿಲ್ಲ. ಹೀಗಾಗಿ ಕ್ರಿಕೆಟ್ ಬೆಟ್ಟಿಂಗ್ ಎನ್ನುವುದೇ ಚಿತ್ರದುದ್ದಕ್ಕೂ ತುಂಬಿಕೊಂಡಿದೆ.

ಪ್ರಾಮಾಣಿಕವಾಗಿ ದುಡಿಯುವ ಹೆಡ್‌ಕಾನ್‌ಸ್ಟೆಬಲ್ ‘ಮಹಾದೇವಯ್ಯ’(ಅಚ್ಯುತ್ ಕುಮಾರ್) ಹಾಗೂ ರೇಣುಕಾ(ಮಾನಸಿ ಸುಧೀರ್) ದಂಪತಿಯ ಪುತ್ರ ಕೃಷ್ಣ ಅಲಿಯಾಸ್ ಕ್ರಿಸ್ಟಿ (ಡಾರ್ಲಿಂಗ್ ಕೃಷ್ಣ). ಬಾಲ್ಯದಲ್ಲೇ ಇಸ್ಪಿಟ್ ಆಡಿ ಹಣ ಮಾಡಿದ ಚಾಲಾಕಿ. ಅಜ್ಜಿಯ ಮಾತಿಗೆ ಕಟ್ಟುಬಿದ್ದು ಬೆಟ್ಟಿಂಗ್ ಸಹವಾಸ ಬಿಡುವ ಕ್ರಿಸ್ಟಿ, ಓದಿನ ಬಳಿಕ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿರುತ್ತಾನೆ. ಈ ವೇಳೆ ನಡೆದ ಘಟನೆಯೊಂದು ಆತನನ್ನು ಹಣವಿದ್ದರೇ ಎಲ್ಲ ಎನ್ನುವ ಮನಃಸ್ಥಿತಿಗೆ ದೂಡಿ, ಮತ್ತೆ ಬೆಟ್ಟಿಂಗ್ ಲೋಕಕ್ಕೆ ಕಾಲಿಡುವಂತೆ ಮಾಡುತ್ತದೆ. ಇಲ್ಲಿಂದ ಕಥೆ ತೆರೆದುಕೊಳ್ಳುತ್ತದೆ.

ಬೆಟ್ಟಿಂಗ್‌ನಿಂದ ಲಕ್ಷಾಂತರ ಹಣ ಕಳೆದುಕೊಂಡು ಆತ್ಮಹತ್ಯೆ ಮಾಡಿಕೊಂಡ ಸುದ್ದಿಗಳು ಪದೇ ಪದೇ ಕೇಳಿಬರುತ್ತಿರುವ ಸಂದರ್ಭದಲ್ಲೇ ಯುವಜನತೆಯನ್ನು ಆಫ್‌ಲೈನ್ ಬೆಟ್ಟಿಂಗ್‌ಗೆ ಪ್ರಚೋದಿಸುವ ರೀತಿಯಲ್ಲಿ ಸಿನಿಮಾವನ್ನು ಕಟ್ಟಿಕೊಡಲಾಗಿದೆ. ಬೆಟ್ಟಿಂಗ್‌ನಲ್ಲಿ ತೊಡಗಿಸಿಕೊಂಡರೆ ಕ್ಷಣಮಾತ್ರದಲ್ಲೇ ಲಕ್ಷಾಂತರ ರೂಪಾಯಿ ಮಾಡಬಹುದು, ಬೆಟ್ಟಿಂಗ್ ಮಾಡುತ್ತಾ ತನ್ನೊಳಗಿನ ಕೌಶಲ ಉಪಯೋಗಿಸಿದರೆ ಪ್ರಾಮಾಣಿಕವಾಗಿರುವ ಅಪ್ಪನನ್ನೂ ಒಳಗೊಂಡಂತೆ ಯಾರನ್ನಾದರೂ ಯಾಮಾರಿಸಬಹುದು ಎನ್ನುವ ಅಂಶವೇ ಸಿನಿಮಾದಲ್ಲಿ ಪ್ರಧಾನವಾಗಿದೆ. ‘ಕೌಸಲ್ಯಾ ಸುಪ್ರಜಾ ರಾಮ’ ಸಿನಿಮಾದಲ್ಲಿ ಯುವಜನತೆಗೆ ಮಾದರಿಯಾಗುವಂಥ ‘ರಾಮ’ನ ಕಥೆಯನ್ನು ಹೇಳಿದ್ದ ಶಶಾಂಕ್ ಇಲ್ಲಿ ಆದರ್ಶವಾಗಲೇಬಾರದಾದ ‘ಕೃಷ್ಣ’ನನ್ನು ಕೆತ್ತಿದ್ದಾರೆ!

ಕಥೆ ರಚನೆಯಲ್ಲಿ ಶಶಾಂಕ್ ಅವರ ಯೋಚನೆ, ಪ್ರಯೋಗ ಭಿನ್ನವಾಗಿದೆ. ‘ಲಕ್ಕಿ ಭಾಸ್ಕರ್’, ‘ಸ್ಪೆಷಲ್ 26’ ಮುಂತಾದ ಸಿನಿಮಾಗಳಲ್ಲಿ ಹಣ ಮಾಡುವ ತಂತ್ರಗಾರಿಕೆ, ಮೋಸಗಾರಿಕೆಯ ಪ್ಲಾಟ್ ಬಳಸಲಾಗಿತ್ತು. ಈ ಸಿನಿಮಾದಲ್ಲೂ ಇಂಥ ಅಂಶಗಳಿವೆ. ಹೆಡ್‌ಕಾನ್‌ಸ್ಟೆಬಲ್ ಹುದ್ದೆಗೇರಿದ ‘ಮಹಾದೇವಯ್ಯ’ನಿಗೆ ಒಂದು ಗನ್ ಹೇಗೆ ಕೆಲಸ ಮಾಡುತ್ತದೆ ಎನ್ನುವುದೇ ತಿಳಿದಿಲ್ಲ ಎನ್ನುವುದು ಹಾಸ್ಯಾಸ್ಪದವಾಗಿ ಕಾಣುತ್ತದೆ. ಅನಗತ್ಯವಾದ ಫೈಟ್ ಸೀಕ್ವೆನ್ಸ್ ತಾಳ್ಮೆ ಪರೀಕ್ಷಿಸುತ್ತವೆ. ಕಥೆಗೆ ಅಗತ್ಯವೇ ಇಲ್ಲದಿರುವಾಗ ಖಳನಾಯಕನ ಬಾಯಿಗೆ ಇಂಗ್ಲಿಷ್ ತುರುಕಿದ್ಯಾಕೆ ಎನ್ನುವುದೇ ತಿಳಿಯುವುದಿಲ್ಲ. ನಟನೆಯಲ್ಲಿ ಡಾರ್ಲಿಂಗ್ ಕೃಷ್ಣ ತಮ್ಮ ಪಾತ್ರವನ್ನು ಚೆನ್ನಾಗಿ ನಿಭಾಯಿಸಿದ್ದಾರೆ. ರಮೇಶ್ ಇಂದಿರಾ ಎಂದಿನಂತೆ ತಮ್ಮ ಹಾವಭಾವ, ಸಂಭಾಷಣೆ ಹೇಳುವ ಶೈಲಿಯಿಂದ ಗಮನಸೆಳೆಯುತ್ತಾರೆ. ‘ನಾನೇ ನೀನಂತೆ’ ಹಾಡು ಇಂಪಾಗಿದೆ. ‘ಬ್ರ್ಯಾಟ್’-2 ಬರುವ ಮುನ್ಸೂಚನೆಯೂ ಇದೆ.

-ಅಭಿಲಾಷ್ ಪಿ.ಎಸ್

ನಾವು ನೋಡಿದ ಸಿನಿಮಾ

ಬ್ರ್ಯಾಟ್ (ಕನ್ನಡ)

- ನಿರ್ಮಾಣ: ಮಂಜುನಾಥ್ ಕಂದಕೂರ
- ನಿರ್ದೇಶನ: ಶಶಾಂಕ್
- ತಾರಾಗಣ: ಡಾರ್ಲಿಂಗ್ ಕೃಷ್ಣ, ಮನಿಶಾ ಕಂದಕೂರ್, ಅಚ್ಯುತ್ ಕುಮಾರ್, ರಮೇಶ್ ಇಂದಿರಾ, ಡ್ರ್ಯಾಗನ್ ಮಂಜು ಮತ್ತಿತರರು.



‘ಬಾಸ್’ ಚಿತ್ರೀಕರಣ ಮುಕ್ತಾಯ


ಮೋನಿಕಾ ಗೌಡ

ಸಿರಿ ಪ್ರೊಡಕ್ಷನ್ಸ್ ನಿರ್ಮಾಣದ, ವಿ.ಲವ ನಿರ್ದೇಶನದ ‘ಬಾಸ್’ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ಡಿಸೆಂಬರ್‌ನಲ್ಲಿ ಸಿನಿಮಾವನ್ನು ರಿಲೀಸ್ ಮಾಡುವ ಯೋಜನೆ ಹಾಕಿಕೊಂಡಿದೆ ಚಿತ್ರತಂಡ.

ತನುಷ್ ಶಿವಣ್ಣ ನಾಯಕನಾಗಿ ನಟಿಸಿರುವ ಈ ಚಿತ್ರದಲ್ಲಿ ಮೋನಿಕಾ ಗೌಡ ನಾಯಕಿಯಾಗಿ ನಟಿಸಿದ್ದಾರೆ.

‘ಈ ಸಿನಿಮಾ ಕ್ರೈಮ್ ಥ್ರಿಲ್ಲರ್ ಆಧಾರಿತ ಚಿತ್ರ. ನಾನೇ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದೇನೆ. ಬೆಂಗಳೂರಿನಲ್ಲಿ ಒಂದೇ ಹಂತದಲ್ಲಿ ಚಿತ್ರೀಕರಣ ನಡೆದಿದೆ. ಕೆಲವೇ ದಿನಗಳಲ್ಲಿ ಟೀಸರ್ ಬಿಡುಗಡೆಯಾಗಲಿದೆ. ಚಿತ್ರಕ್ಕೆ ‘ಸತ್ಯಮೇವ ಜಯತೇ’ ಎಂಬ ಅಡಿಬರಹವಿದೆ. ಡೆವಿ ಸುರೇಶ್ ಸಂಗೀತ ನಿರ್ದೇಶನ, ಶರತ್ ಎನ್.ಆರ್.ಪುರ ಛಾಯಾಚಿತ್ರಗ್ರಹಣ, ಮಹೇಶ್ ರೆಡ್ಡಿ ಸಂಕಲನ ಸಿನಿಮಾಗಿದೆ’ ಎಂದರು ವಿ.ಲವ.

‘ಇದು ನಾನು ನಾಯಕನಾಗಿ ನಟಿಸಿರುವ ಐದನೇ ಚಿತ್ರ’ ಎಂದು ಮಾತು ಆರಂಭಿಸಿದ ತನುಷ್ ಶಿವಣ್ಣ, ‘ನಿರ್ದೇಶಕರು ಒಳ್ಳೆಯ ಕಥೆ ಮಾಡಿಕೊಂಡಿದ್ದಾರೆ. ನಾನು ಈ ಚಿತ್ರದಲ್ಲಿ ಸೆಲೆಬ್ರಿಟಿ ಪಾತ್ರ ನಿರ್ವಹಣೆ ಮಾಡಿದ್ದೇನೆ. ಚಿತ್ರದಲ್ಲಿ ಎಲ್ಲರೂ ನನ್ನನ್ನು ‘ಬಾಸ್’ ಎನ್ನುತ್ತಾರೆ. ಹೀಗಾಗಿಯೇ ಈ ಶೀರ್ಷಿಕೆ’ ಎಂದರು. ‘ಶೀಲಾ’ ಎನ್ನುವ ಪಾತ್ರದಲ್ಲಿ ಮೋನಿಕಾ ಗೌಡ ನಟಿಸಿದ್ದಾರೆ. ಸಂದೀಪ್, ವೀರೇನ್ ಕೇಶವ್, ಸುಜನ್ ಶೆಟ್ಟಿ, ದುನಿಯಾ ಮಹೇಶ್, ಜೋಶ್ ಅಕ್ಷಯ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ನ.28ಕ್ಕೆ ಆಪರೇಷನ್ ಲಂಡನ್ ಕೆಫೆ ತೆರೆಗೆ


ಮೇಘಾ ಶೆಟ್ಟಿ

ಸಡಗರ ರಾಘವೇಂದ್ರ ನಿರ್ದೇಶನದ ಚೊಚ್ಚಲ ಸಿನಿಮಾ ‘ಆಪರೇಷನ್ ಲಂಡನ್ ಕೆಫೆ’ ನ.28ರಂದು ತೆರೆಕಾಣುತ್ತಿದ್ದು, ಚಿತ್ರವು ಕನ್ನಡ, ಮರಾಠಿ ಹಾಗೂ ಹಿಂದಿ ಭಾಷೆಯಲ್ಲಿ ಏಕಕಾಲದಲ್ಲಿ ಬಿಡುಗಡೆಯಾಗಲಿದೆ.

ಉಡುಪಿ ಮೂಲದ ಇಂಡಿಯನ್ ಫಿಲಂ ಫ್ಯಾಕ್ಟರಿ, ಮರಾಠಿಯ ದೀಪಕ್ ರಾಣೆ ಫಿಲಂಸ್ ಲಾಂಛನದ ಅಡಿಯಲ್ಲಿ ವಿಜಯ್ ಕುಮಾರ್ ಶೆಟ್ಟಿ ಹವರಾಲ್, ರಮೇಶ್ ಕೊಠಾರಿ, ದೀಪಕ್ ರಾಣೆ ಮತ್ತು ವಿಜಯ್ ಪ್ರಕಾಶ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ.

‘ಜಿಲ್ಕಾ’ ಸಿನಿಮಾದಲ್ಲಿ ನಟಿಸಿದ್ದ ಕವೀಶ್ ಶೆಟ್ಟಿ ಈ ಸಿನಿಮಾದ ನಾಯಕನಾಗಿ ನಟಿಸಿದ್ದಾರೆ. ಕಿರುತೆರೆಯಲ್ಲಿ ‘ಜೊತೆ ಜೊತೆಯಲಿ’ ಧಾರಾವಾಹಿ ಮೂಲಕ ಗುರುತಿಸಿಕೊಂಡು, ಬಳಿಕ ‘ತ್ರಿಬಲ್ ರೈಡಿಂಗ್’, ‘ದಿಲ್‌ಪಸಂದ್’, ‘ಕೈವ’ ಸಿನಿಮಾಗಳ ಮೂಲಕ ಚಂದನವನದಲ್ಲಿ ಸದ್ದು ಮಾಡಿದ ನಟಿ ಮೇಘಾ ಶೆಟ್ಟಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಅಪ್ಪಟ ಹಳ್ಳಿ ಸೊಗಡಿನ ಹೈಸ್ಕೂಲು ಹುಡುಗಿಯಾಗಿ ಅವರಿಲ್ಲಿ ಕಾಣಿಸಿಕೊಂಡಿದ್ದಾರೆ. ಶಿವಾನಿ ಸುರ್ವೆ, ವಿರಾಟ್ ಮಡ್ಕೆ, ಅರ್ಜುನ್ ಕಾಪಿಕಾಡ್, ಬಿ.ಸುರೇಶ್, ಧರ್ಮೇಂದ್ರ ಅರಸ್, ಕೃಷ್ಣ ಹೆಬ್ಬಾಳೆ, ನೀನಾಸಂ ಅಶ್ವತ್ಥ್, ಅಶ್ವಿನಿ ಚವರೇ ಮುಂತಾದ ಕನ್ನಡ ಮತ್ತು ಮರಾಠಿಯ ಹೆಸರಾಂತ ಕಲಾವಿದರು ತಾರಾಬಳಗದಲ್ಲಿದ್ದಾರೆ.

ಚಿತ್ರಕ್ಕೆ ಆರ್.ಡಿ.ನಾಗಾರ್ಜುನ್ ಛಾಯಾಚಿತ್ರಗ್ರಹಣ, ಪ್ರಾಂಶು ಝಾ ಸಂಗೀತ, ವರದರಾಜ್ ಕಾಮತ್ ಕಲಾ ನಿರ್ದೇಶನ, ವಿಕ್ರಂ ಮೋರ್, ಮಾಸ್ ಮಾದ, ಅರ್ಜುನ್ ರಾಜ್ ಸಾಹಸ ನಿರ್ದೇಶನವಿದೆ. ಕವಿರಾಜ್ ಮತ್ತು ನಾಗೇಂದ್ರ ಪ್ರಸಾದ್ ಅವರು ಹಾಡುಗಳಿಗೆ ಸಾಹಿತ್ಯ ರಚಿಸಿದ್ದಾರೆ. ಶೀಘ್ರದಲ್ಲೇ ಟ್ರೇಲರ್ ಬಿಡುಗಡೆಯಾಗಲಿದೆ ಎಂದಿದೆ ಚಿತ್ರತಂಡ.

ವೇಗದ ದಾಳಿಗೆ ಕುಸಿದ ಸೂರ್ಯ ಪಡೆ

ಅಭಿಷೇಕ್ ಶರ್ಮಾ ಏಕಾಂಗಿ ಹೋರಾಟ • ಹ್ಯಾಜಲ್‌ವುಡ್‌ಗೆ 3 ವಿಕೆಟ್ • ಮಿಚೆಲ್ ಮಾರ್ಷ್ ಪಡೆಗೆ ಸುಲಭ ಜಯ

ಮೆಲ್ಬರ್ನ್ (ಪಿಟಿಐ): ಜೋಶ್ ಹ್ಯಾಜಲ್‌ವುಡ್ (4-0-13-3) ಅವರು ತಮ್ಮ ವೇಗದ ದಾಳಿಯಿಂದ ಭಾರತದ ಅಗ್ರ ಆಟಗಾರರನ್ನು ಕಂಗೆಡಿಸಿದರು. ಅವರ ಅಮೋಘ ಬೌಲಿಂಗ್ ನೆರವಿನಿಂದ ಆಸ್ಟ್ರೇಲಿಯಾ ತಂಡ ಶುಕ್ರವಾರ ನಡೆದ ಎರಡನೇ ಟಿ20 ಪಂದ್ಯದಲ್ಲಿ ಭಾರತ ತಂಡವನ್ನು ನಾಲ್ಕು ವಿಕೆಟ್‌ಗಳಿಂದ ಸೋಲಿಸಿತು.

ಎಂಸಿಜಿಯ ಸೇರಿದ್ದ 82,000 ಪ್ರೇಕ್ಷಕರಲ್ಲಿ ಬಹುತೇಕರು ಭಾರತೀಯರಾಗಿದ್ದು ಹ್ಯಾಜಲ್‌ವುಡ್ ಬಿರುಗಾಳಿ ಬೌಲಿಂಗ್‌ನಿಂದ ಮೌನಕ್ಕೆ ಶರಣಾದರು. ನಾಯಕ ಸೂರ್ಯಕುಮಾರ್, ಉಪ ನಾಯಕ ಗಿಲ್ ಸೇರಿ ಒಂಬತ್ತು ಆಟಗಾರರು ಒಂದಂಕಿ ಮೊತ್ತಕ್ಕೇ ನಿರ್ಗಮಿಸಿದರು. ಭಾರತ 18.4 ಓವರುಗಳಲ್ಲಿ 125 ರನ್‌ಗಳಿಗೆ ಪತನಗೊಂಡಿತು.

ಅಮೋಘ ಲಯದಲ್ಲಿರುವ ಅಭಿಷೇಕ್ ಶರ್ಮಾ ಮಾತ್ರ ಈ ಪರಿಸ್ಥಿತಿಯಲ್ಲೂ ಎಂದಿನಂತೆ ಬೀಸಾಟವಾಡಿ 37 ಎಸೆತಗಳಲ್ಲಿ 68 ರನ್ ಬಾಚಿದರು. ಹ್ಯಾಜಲ್‌ವುಡ್ ದಾಳಿಯಿಂದ ತಂಡದ ಅರ್ಧದಷ್ಟು ಮಂದಿ 49 ರನ್‌ಗಳಾಗುವಷ್ಟರಲ್ಲಿ ಪೆವಿಲಿಯನ್ ಸೇರಿದ್ದರು. ಅವರು 15 ಡಾಟ್‌ಬಾಲ್‌ಗಳನ್ನು ಮಾಡಿದ್ದರು. 20 ನಿಮಿಷಗಳಲ್ಲೇ ಪಂದ್ಯದ ಫಲಿತಾಂಶ ಬಹುತೇಕ ನಿರ್ಧಾರವಾಗಿತ್ತು.

ಎರಡಂಕಿ ಮೊತ್ತ ಗಳಿಸಿದ ಇನ್ನೊಬ್ಬ ಆಟಗಾರ ಹರ್ಷಿತ್ ರಾಣಾ (35, 33ಎ) ಜೊತೆ ಅಭಿಷೇಕ್ ಅವರು ಆರನೇ ವಿಕೆಟ್‌ಗೆ 56 ರನ್ ಸೇರಿಸಿದ್ದರಿಂದ ತಂಡ 100ರ ಗಡಿ ದಾಟಲು ಸಾಧ್ಯವಾಯಿತು.

ಇದಕ್ಕೆ ಉತ್ತರವಾಗಿ, ಆಸ್ಟ್ರೇಲಿಯಾ ತಂಡವು ನಾಯಕ ಮಿಚೆಲ್ ಮಾರ್ಷ್ (46, 26ಎ) ಆಟದ ನೆರವಿನಿಂದ 13.2 ಓವರುಗಳಲ್ಲೇ 6 ವಿಕೆಟ್ ನಷ್ಟದಲ್ಲಿ ಗುರಿತಲುಪಿತು. ಹೆಚ್ಚಿನ ಬ್ಯಾಟರ್‌ಗಳು ಭರ್ಜರಿ ಹೊಡೆತಗಳಿಗೆ ಯತ್ನಿಸಿ ವಿಕೆಟ್ ಒಪ್ಪಿಸಿದರು.


ಆಸ್ಟ್ರೇಲಿಯಾದ ಜೋಶ್ ಹ್ಯಾಜಲ್‌ವುಡ್ ಎಪಿ ಚಿತ್ರ

ಇದ್ದುದರಲ್ಲಿ ಕೊಂಚ ಸಮಾಧಾನ ಮೂಡಿಸಿದ್ದು ವರುಣ್ ಚಕ್ರವರ್ತಿ (23ಕ್ಕೆ2) ಅವರ ಬಿಗು ಸ್ಪೆಲ್. ಬೂಮ್ರಾ (26ಕ್ಕೆ2) ತಮ್ಮ ಕೊನೆಯ ಓವರಿನಲ್ಲಿ ಕರಾರುವಾಕ್ ಯಾರ್ಕರ್‌ನಲ್ಲಿ ಮ್ಯಾಥ್ಯೂ ಶಾರ್ಟ್ ಅವರನ್ನು ಬೌಲ್ಡ್ ಮಾಡಿದರು.

ಆಸ್ಟ್ರೇಲಿಯಾ ಬೌಲರ್‌ಗಳ ನೇರ ಮತ್ತು ಎಕ್ಸ್‌ಟ್ರಾ ಬೌನ್ಸ್‌ನಿಂದ ಪ್ರವಾಸಿ ತಂಡದ ಬ್ಯಾಟರ್‌ಗಳು ತಡಬಡಾಯಿಸಿದರು. ಹ್ಯಾಜಲ್‌ವುಡ್ ಆರಂಭದಲ್ಲಿ ಶುಭಮನ್ ಗಿಲ್, ಸೂರ್ಯಕುಮಾರ್ ಮತ್ತು ತಿಲಕ್ ವರ್ಮಾ ಅವರ ವಿಕೆಟ್‌ಗಳನ್ನು ಕಬಳಿಸಿದರು. ಇನ್ನೊಂದೆಡೆ ನಥಾನ್ ಎಲಿಸ್ (21ಕ್ಕೆ2), ಸಂಜು ಸ್ಯಾಮ್ಸನ್ ವಿಕೆಟ್ ಪಡೆದರು. ಕ್ಸೇವಿಯರ್ ಬಾರ್ಟ್ಲೆಟ್ (39ಕ್ಕೆ2) ಕೊನೆಯಲ್ಲಿ ವಿಕೆಟ್‌ಗಳನ್ನು ಪಡೆದರು.

ಒಂದೆಡೆ ವಿಕೆಟ್‌ಗಳು ಸಾಲಾಗಿ ಉರುಳಿದರೂ, ವಿಶ್ವದ ಅಗ್ರಮಾನ್ಯ ಟಿ20 ಬ್ಯಾಟರ್ ಅಭಿಷೇಕ್ ಆಕ್ರಮಣದ ಹಾದಿಯಿಂದ ಹಿಂದೆಸರಿಯಲಿಲ್ಲ. ಅವರ ಆಟದಲ್ಲಿ ಎಂಟು ಬೌಂಡರಿ, ಎರಡು ಸಿಕ್ಸರ್‌ಗಳಿದ್ದವು.

ಸ್ಕೋರ್ ಕಾರ್ಡ್

ಭಾರತ: 125 (18.4 ಓವರುಗಳಲ್ಲಿ)
ಶುಭಮನ್ ಗಿಲ್ ಸಿ ಮಾರ್ಷ್ ಬಿ ಹ್ಯಾಜಲ್‌ವುಡ್ 5 (10ಎ)
ಅಭಿಷೇಕ್ ಶರ್ಮಾ ಎಲ್‌ಬಿಡಬ್ಲ್ಯು ಬಿ ಎಲ್ಲಿಸ್ 68 (37ಎ, 4x8, 6x2)
ಸಂಜು ಸ್ಯಾಮ್ಸನ್ ಎಲ್‌ಬಿಡಬ್ಲ್ಯು ಬಿ ಎಲ್ಲಿಸ್ 2 (4ಎ)
ಸೂರ್ಯಕುಮಾರ್ ಯಾದವ್ ಸಿ ಇಂಗ್ಲಿಸ್ ಬಿ ಹ್ಯಾಜಲ್‌ವುಡ್ 1 (4ಎ)
ತಿಲಕ್ ವರ್ಮಾ ಸಿ ಇಂಗ್ಲಿಸ್ ಬಿ ಹ್ಯಾಜಲ್‌ವುಡ್ 0 (2ಎ)
ಅಕ್ಷರ್ ಪಟೇಲ್ ರನೌಟ್ (ಡೇವಿಡ್/ಇಂಗ್ಲಿಸ್) 7 (12ಎ)
ಹರ್ಷಿತ್ ರಾಣಾ ಸಿ ಡೇವಿಡ್ ಬಿ ಬಾರ್ಟ್ಲೆಟ್ 35 (33, 4x3, 6x1)
ಶಿವಂ ದುಬೆ ಸಿ ಇಂಗ್ಲಿಸ್ ಬಿ ಬಾರ್ಟ್ಲೆಟ್ 4 (2ಎ, 4x1)
ಕುಲದೀಪ್ ಯಾದವ್ ಸಿ ಸಬ್ (ಅಬೋಟ್) ಬಿ ಸ್ಟೊಯಿನಿಸ್ 0 (6ಎ)
ವರುಣ್ ಚಕ್ರವರ್ತಿ ಔಟಾಗದೇ 0 (1ಎ)
ಜಸ್‌ಪ್ರೀತ್ ಬೂಮ್ರಾ ರನೌಟ್ 0 (1ಎ)
ಇತರೆ: 3 (ಬೈ 1, ವೈಡ್ 2)
ವಿಕೆಟ್ ಪತನ: 1-20 (ಶುಭಮನ್ ಗಿಲ್, 2.4), 2-23 (ಸಂಜು ಸ್ಯಾಮ್ಸನ್, 3.3), 3-32 (ಸೂರ್ಯಕುಮಾರ್ ಯಾದವ್, 4.3), 4-32 (ತಿಲಕ್ ವರ್ಮಾ, 4.5), 5-49 (ಅಕ್ಷರ್ ಪಟೇಲ್, 7.3), 6-105 (ಹರ್ಷಿತ್ ರಾಣಾ, 15.2), 7-109 (ಶಿವಂ ದುಬೆ, 15.4), 8-110 (ಕುಲದೀಪ್ ಯಾದವ್, 16.5), 9-125 (ಅಭಿಷೇಕ್ ಶರ್ಮಾ, 18.3), 10-125 (ಜಸ್‌ಪ್ರೀತ್ ಬೂಮ್ರಾ, 18.4)
ಬೌಲಿಂಗ್: ಜೋಶ್ ಹ್ಯಾಜಲ್‌ವುಡ್ 4-0-13-3; ಜೇವಿಯರ್ ಬಾರ್ಟ್ಲೆಟ್ 4-0-39-2; ನಥಾನ್ ಎಲಿಸ್ 3.4-0-21-2; ಮಾರ್ಕಸ್ ಸ್ಟೊಯಿನಿಸ್ 4-0-24-1; ಮಿಚೆಲ್ ಓವೆನ್ 1-0-13-0; ಮ್ಯಾಥ್ಯೂ ಕುನ್ಹೆಮನ್ 2-0-14-0.

ಆಸ್ಟ್ರೇಲಿಯಾ: 6 ವಿಕೆಟ್‌ಗೆ 126 (13.2 ಓವರುಗಳಲ್ಲಿ)
ಮಿಚೆಲ್ ಮಾರ್ಷ್ ಸಿ ಅಭಿಷೇಕ್ ಬಿ ಕುಲದೀಪ್ 46 (26ಎ, 4x2, 6x4)
ಟ್ರಾವಿಸ್ ಹೆಡ್ ಸಿ ತಿಲಕ್ ಬಿ ವರುಣ್ 28 (15ಎ, 4x3, 6x1)
ಜೋಶ್ ಇಂಗ್ಲಿಸ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 20 (20ಎ, 4x1)
ಟಿಮ್ ಡೇವಿಡ್ ಸಿ ಮತ್ತು ಬಿ ವರುಣ್ 1 (2ಎ)
ಮಿಚೆಲ್ ಓವೆನ್ ಸಿ ಸ್ಯಾಮ್ಸನ್ ಬಿ ಬೂಮ್ರಾ 14 (10ಎ, 6x1)
ಮಾರ್ಕಸ್ ಸ್ಟೊಯಿನಿಸ್ ಔಟಾಗದೇ 6 (6ಎ)
ಮ್ಯಾಥ್ಯೂ ಶಾರ್ಟ್ ಬಿ ಬೂಮ್ರಾ 0 (1ಎ)
ಜೇವಿಯರ್ ಬಾರ್ಟ್ಲೆಟ್ ಔಟಾಗದೇ 0 (1ಎ)
ಇತರೆ: 11 (ಬೈ4, ಲೆಗ್ ಬೈ 1, ನೋಬಾಲ್ 1, ವೈಡ್ 5)
ವಿಕೆಟ್ ಪತನ: 1-51 (ಟ್ರಾವಿಸ್ ಹೆಡ್, 4.3), 2-87 (ಮಿಚೆಲ್ ಮಾರ್ಷ್, 7.6), 3-90 (ಟಿಮ್ ಡೇವಿಡ್, 8.4), 4-113 (ಜೋಶ್ ಇಂಗ್ಲಿಸ್, 11.3), 5-124 (ಮಿಚೆಲ್ ಓವೆನ್, 12.4), 6-124 (ಮ್ಯಾಥ್ಯೂ ಶಾರ್ಟ್, 12.5).
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 4-0-26-2; ಹರ್ಷಿತ್ ರಾಣಾ 2-0-27-0; ವರುಣ್ ಚಕ್ರವರ್ತಿ 4-0-23-2; ಕುಲದೀಪ್ ಯಾದವ್ 3.2-0-45-2
ಪಂದ್ಯದ ಆಟಗಾರ: ಜೋಶ್ ಹ್ಯಾಜಲ್‌ವುಡ್.

ಫಲಿತಾಂಶ: ಆಸ್ಟ್ರೇಲಿಯಾಗೆ 4 ವಿಕೆಟ್ ಜಯ, ಸರಣಿ 1-0 ಮುನ್ನಡೆ



ಪ್ರಶಸ್ತಿ ಗೆದ್ದ ದಬಂಗ್ ಡೆಲ್ಲಿ ತಂಡದ ಆಟಗಾರರ ಸಂಭ್ರಮ ‘ಎಕ್ಸ್’ ಚಿತ್ರ

ಪ್ರೊ ಕಬಡ್ಡಿ ಲೀಗ್: ಪುಣೇರಿ ಪಲ್ಟನ್ ತಂಡಕ್ಕೆ ನಿರಾಸೆ

ದಬಂಗ್ ಡೆಲ್ಲಿ ಚಾಂಪಿಯನ್

ನವದೆಹಲಿ (ಪಿಟಿಐ): ತವರಿನಂಗಳದಲ್ಲಿ ಸಾಂಘಿಕ ಆಟ ಪ್ರದರ್ಶಿಸಿದ ದಬಂಗ್ ಡೆಲ್ಲಿ ತಂಡವು ಶುಕ್ರವಾರ ಪ್ರೊ ಕಬಡ್ಡಿ ಲೀಗ್‌ನ 12ನೇ ಆವೃತ್ತಿಯ ಫೈನಲ್‌ನಲ್ಲಿ ಪುಣೇರಿ ಪಲ್ಟನ್ ತಂಡವನ್ನು 31-28ರಿಂದ ಮಣಿಸಿ ಚಾಂಪಿಯನ್ ಪಟ್ಟಕ್ಕೇರಿತು.

ಆಶು ಮಲಿಕ್ ನಾಯಕತ್ವದ ಡೆಲ್ಲಿ ತಂಡಕ್ಕೆ ಇದು ಎರಡನೇ ಪಿಕೆಎಲ್ ಪ್ರಶಸ್ತಿ. ತಂಡದ ಮುಖ್ಯ ಕೋಚ್ ಜೋಗಿಂದರ್ ನರ್ವಾಲ್ ಅವರು ನಾಯಕರಾಗಿದ್ದಾಗ ಎಂಟನೇ ಆವೃತ್ತಿಯಲ್ಲಿ (2021-22) ಮೊದಲ ಬಾರಿ ಕಿರೀಟ ಮುಡಿಗೇರಿಸಿಕೊಂಡಿತ್ತು.

ದಬಂಗ್, ತವರಿನಂಗಳದಲ್ಲಿ ಪ್ರಶಸ್ತಿ ಗೆದ್ದ ಎರಡನೇ ತಂಡ ಎನಿಸಿತು. ಎರಡನೇ ಆವೃತ್ತಿಯಲ್ಲಿ (2014) ಯು ಮುಂಬಾ ತಂಡವು ಮೊದಲ ಬಾರಿ ತನ್ನ ತವರಿನಲ್ಲೇ ಚಾಂಪಿಯನ್ ಆಗಿತ್ತು.

ತ್ಯಾಗರಾಜ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ರೋಚಕ ಹಣಾಹಣಿಯಲ್ಲಿ ಡೆಲ್ಲಿ ತಂಡವು ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿತು. ಮೊದಲಾರ್ಧದಲ್ಲಿ 6 ಅಂಕಗಳ (20-14)ಮುನ್ನಡೆ ಪಡೆದ ಡೆಲ್ಲಿ ತಂಡಕ್ಕೆ ಉತ್ತರಾರ್ಧದಲ್ಲಿ ಪುಣೇರಿ ಪ್ರಬಲ ಸ್ಪರ್ಧೆಯೊಡ್ಡಿತು. ಅಂತಿಮವಾಗಿ 2023ರ ಚಾಂಪಿಯನ್ ಪುಣೇರಿ ತಂಡವು 3 ಅಂಕಗಳಿಂದ ಸೋತಿತು.

ರೇಡರ್‌ಗಳಾದ ನೀರಜ್ ನರ್ವಾಲ್ (9 ಅಂಕ) ಮತ್ತು ಅಜಿಂಕ್ಯಾ ಪವಾರ್ (6) ಅವರು ದಬಂಗ್ ಗೆಲುವಿನಲ್ಲಿ ಮಿಂಚಿದರು. ಪುಣೇರಿ ಪರ ಅದಿತ್ಯ ಶಿಂಧೆ ‘ಸೂಪರ್ ಟೆನ್’ ಸಾಧನೆ ಮಾಡಿದರೂ ಗೆಲುವಿಗೆ ಸಾಕಾಗಲಿಲ್ಲ.

- **ಟೂರ್ನಿಯ ಅತ್ಯಂತ ಮೌಲ್ಯಯುತ ಆಟಗಾರ:** ಫಜಲ್ ಅತ್ರಾಚಲಿ (ದಬಂಗ್ ಡೆಲ್ಲಿ)
- **ಬೆಸ್ಟ್ ರೇಡರ್:** ಅಯಾನ್ ಲೋಚಬ್ (ಪಟ್ನಾ ಪೈರೇಟ್ಸ್)
- **ಬೆಸ್ಟ್ ಡಿಫೆಂಡರ್:** ನವದೀಪ್ (ಪಟ್ನಾ ಪೈರೇಟ್ಸ್)
- **ಉದಯೋನ್ಮುಖ ಆಟಗಾರ:** ದೀಪಕ್ ಶಂಕರ್ (ಬೆಂಗಳೂರು ಬುಲ್ಸ್)

ನಾಲ್ಕರ ಘಟ್ಟಕ್ಕೆ ಸತೀಶ್, ತನ್ವಿ

ಪ್ರಜಾವಾಣಿ ವಾರ್ತೆ

ಮಂಗಳೂರು: ವಯೋಮಾನ ವಿಭಾಗದ ಏಷ್ಯನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದು ಕಳೆದ ವರ್ಷ ಗಮನ ಸೆಳೆದಿದ್ದ ಯುವ ಆಟಗಾರ್ತಿ, ಒಡಿಶಾದ ತನ್ವಿ ಪತ್ರಿ ಮತ್ತೊಮ್ಮೆ ತಮ್ಮ ಸಾಮರ್ಥ್ಯ ಸಾಬೀತು ಮಾಡಿದರು. ಚೀಫ್ ಮಿನಿಸ್ಟರ್ಸ್ ಮಂಗಳೂರು ಇಂಡಿಯಾ ಇಂಟರ್‌ನ್ಯಾಷನಲ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಅವರು ಸೆಮಿಫೈನಲ್ ಪ್ರವೇಶಿಸಿದರು.

ಉರ್ವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಶುಕ್ರವಾರ ಎಂಟರ ಘಟ್ಟದ ರೋಚಕ ಪಂದ್ಯದಲ್ಲಿ ತನ್ವಿ, ಅಗ್ರ ಶ್ರೇಯಾಂಕದ ಆಟಗಾರ್ತಿ, ಅಮೆರಿಕದ ಇಶಿಕಾ ಜೈಸ್ವಾಲ್ ಅವರನ್ನು 21-19, 21-18ರಲ್ಲಿ ಮಣಿಸಿದರು. ಪುರುಷರ ವಿಭಾಗದ ಅಗ್ರ ಶ್ರೇಯಾಂಕದ ಋತ್ವಿಕ್ ಸತೀಶ್ ಕುಮಾರ್ 16-21, 21-15, 21-12ರಲ್ಲಿ ಎಂಟನೇ ಶ್ರೇಯಾಂಕದ ಸನೀತ್ ದಯಾನಂದ್ ವಿರುದ್ಧ ಗೆದ್ದು ನಾಲ್ಕರ ಘಟ್ಟಕ್ಕೆ ಲಗ್ಗೆ ಇಟ್ಟರು.


ಋತ್ವಿಕ್ ಸತೀಶ್ ಕುಮಾರ್

ಬೆಂಗಳೂರಿನ ಪ್ರಕಾಶ್ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿಯಲ್ಲಿ ತರಬೇತಿಯಲ್ಲಿರುವ 14 ವರ್ಷ ವಯಸ್ಸಿನ ತನ್ವಿ, ಸೆಮಿಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ಮಾನಸಿ ಸಿಂಗ್ ವಿರುದ್ಧ ಸೆಣಸುವರು. ಮಾನಸಿ ಮತ್ತೊಂದು ಪಂದ್ಯದಲ್ಲಿ ಕರ್ನಾಟಕದ ರುಜುಲಾ ರಾಮು ವಿರುದ್ಧ 21-18, 19-21, 21-13ರಲ್ಲಿ ಜಯ ಸಾಧಿಸಿದರು. ಅಸ್ಮಿತಾ 21-19, 21-13ರಲ್ಲಿ ಮೇಘನಾ ರೆಡ್ಡಿ ವಿರುದ್ಧ ಗೆದ್ದರು.

ಹೈಲೊ ಓಪನ್: ಉನ್ನತಿ ಹೂಡಾ ಸೆಮಿಗೆ

ಸಾರ್‌ಬ್ರುಕೆನ್ (ಜರ್ಮನಿ), (ಪಿಟಿಐ): ಭಾರತದ ಉದಯೋನ್ಮುಖ ಆಟಗಾರ್ತಿ ಉನ್ನತಿ ಹೂಡಾ ಅವರು ಹೈಲೊ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಹ್ಸಿಯಾಂಗ್ ಟಿ ಲಿನ್ ಅವರಿಗೆ ಆಘಾತ ನೀಡಿ ಸೆಮಿಫೈನಲ್ ಪ್ರವೇಶಿಸಿದರು.

ವಿಶ್ವ ಕ್ರಮಾಂಕದಲ್ಲಿ 34ನೇ ಸ್ಥಾನದಲ್ಲಿರುವ 18ನೇ ವರ್ಷದ ಹೂಡಾ ಕ್ವಾರ್ಟರ್ ಫೈನಲ್‌ನಲ್ಲಿ 22-20, 21-13ರಿಂದ ತೈವಾನ್‌ನ ಆಟಗಾರ್ತಿಯನ್ನು ಹಿಮ್ಮೆಟ್ಟಿಸಿದರು. ಈ ಮೂಲಕ ಭಾರತ ಆಟಗಾರ್ತಿಯು ಮೇ ತಿಂಗಳಲ್ಲಿ ಮಲೇಷ್ಯಾ ಮಾಸ್ಟರ್ಸ್‌ನಲ್ಲಿ ಹ್ಸಿಯಾಂಗ್ ವಿರುದ್ಧದ ಸೋಲಿಗೆ ಇಲ್ಲಿ ಸೇಡು ತೀರಿಸಿಕೊಂಡರು.

ಪುರುಷರ ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್ ಮತ್ತು ಆಯುಷ್ ಶೆಟ್ಟಿ ಕ್ವಾರ್ಟರ್ ಫೈನಲ್‌ನಲ್ಲಿ ಅಭಿಯಾನ ಮುಗಿಸಿದರು. ಸೇನ್ 17-21, 21-14, 15-21ರಿಂದ ನಾಲ್ಕನೇ ಶ್ರೇಯಾಂಕದ ಅಲೆಕ್ಸ್ ಲ್ಯಾನಿಯರ್ (ಫ್ರಾನ್ಸ್) ವಿರುದ್ಧ; ಆಯುಷ್ 21-19, 12-21, 20-22ರಿಂದ ಫಿನ್ಲೆಂಡ್‌ನ ಕಲ್ಲೆ ಕೊಲ್ಜೊನೆನ್ ವಿರುದ್ಧ ಸೋಲುಂಡರು.

ವಿಐಟಿ ಚೆನ್ನೈ ಕ್ಯಾಂಪಸ್‌ನಲ್ಲಿ ಟೆಕ್ನೋವಿಐಟಿ ೧೦ನೇ ವಾರ್ಷಿಕ ಆವೃತ್ತಿಯಲ್ಲಿ ಥಾಯ್ ಕಾನ್ಸುಲ್ ಜನರಲ್ ಶ್ರೀ ರಾಚಾ ಅರಿಬರ್ಗ್ ಸಲಹೆ, ಸಾಮಾಜಿಕವಾಗಿ ಕಾಡುತ್ತಿರುವ ಅಪರಾಧಗಳ ತಡೆಗೆ ತಂತ್ರಜ್ಞಾನ ಬಳಕೆಗೆ ಮನವಿ!


ಅಪರಾಧಗಳ ತಡೆಗೆ ನೆರವಾಗಲಿ ತಂತ್ರಜ್ಞಾನ!

ಬೆಂಗಳೂರು : ಪ್ರಸ್ತುತ ಜಗತ್ತು ಎದುರಿಸುತ್ತಿರುವ ಅಪರಾಧಗಳ ತಡೆಗೆ ಪೂರಕವಾಗಿ ತಂತ್ರಜ್ಞಾನಗಳನ್ನು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಅಭಿ ವೃದ್ಧಿಪಡಿಸಬೇಕು. ಎಂದುಚೆನ್ನೈನ ರಾಯಲ್ ಥಾಯ್ ಕಾನ್ಸುಲೇಟ್ ಜನರಲ್‌ನ ಕಾನ್ಸುಲ್ ಜನರಲ್ ಶ್ರೀರಾಚಾ ಅರಿಬರ್ಗ್ ಹೇಳಿದರು.

ವಿಐಟಿ ಚೆನ್ನೈ ಕ್ಯಾಂಪಸ್‌ನಲ್ಲಿ ನಡೆಯುತ್ತಿರುವ ಟೆಕ್ನೋವಿಐಟಿ ೧೦ನೇ ವಾರ್ಷಿಕ ಆವೃತ್ತಿಯನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿ, ಪ್ರಪಂಚದಾದ್ಯಂತ ಡಿಜಿಟಲ್ ವಿಕೇಂದ್ರೀಕರಣ ನಡೆಯುತ್ತಿದ್ದು, ಇದರ ಗಂಭೀರತೆಯನ್ನು ಪ್ರತಿಯೊಬ್ಬರು ಅರಿತುಕೊಳ್ಳಬೇಕಿದೆ. ಜತೆಗೆ, ಯುವಕರು ಹಿರಿಯರೊಂದಿಗೆ ಸಮಯ ಕಳೆಯಬೇಕಿದೆ. ಆ ಮೂಲಕ ಪ್ರಸ್ತುತ ತಂತ್ರಜ್ಞಾನವನ್ನು ಹಿರಿಯರು ಸಹ ಬಳಸುವ ಪರಿಯನ್ನು ಕಲಿಯುತ್ತಾರೆ. ಇದು ಸಮಾಜಕ್ಕೆ ಅನಿವಾರ್ಯವಾಗಿದೆ ಎಂದು ಹೇಳಿದರು.

ವಿಐಟಿಯುನ ಉಪಾಧ್ಯಕ್ಷರಾದ ಡಾ.ಜಿ.ವಿ.ಸೆಲ್ವಂ, ಮಾತನಾಡಿ ಅಮೆರಿಕಾ ಮತ್ತು ಭಾರತದ ನಡುವಿನ ಇತ್ತೀಚಿನ ಬೆಳವಣಿಗೆಗಳಿಂದಾಗಿ ಯುಎಸ್‌ಎನಲ್ಲಿ ಉನ್ನತ ಶಿಕ್ಷಣಕ್ಕೆಂದು ತೆರಳುವವರ ಸಂಖ್ಯೆ ಶೇ.೪೪ರಷ್ಟು ಇಳಿಕೆಯಾಗಿದೆ. ಆ ಮೂಲಕ ಸ್ಟಡಿ ಇನ್ ಇಂಡಿಯಾ, ಮೇಕ್ ಇನ್ ಇಂಡಿಯಾ ಸಾಧ್ಯವಾಗುತ್ತಿದೆ ಎಂದರು.

ಎಚ್‌ಸಿಎಲ್ ಟೆಕ್‌ನ ಕಾರ್ಯನಿರ್ವಾಹಕ ಉಪಾಧ್ಯಕ್ಷರಾದ ಶ್ರೀ ಪ್ರಿನ್ಸ್ ಜಯಕುಮಾರ್.ಡಿ, ಮಾತನಾಡಿ ಆಧುನಿಕತೆ ಬೆಳವಣಿಗೆಯಾದಂತೆ ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿಯಾಗುತ್ತಿದೆ. ವಿಶೇಷವಾಗಿ ಕೃತಕ ಬುದ್ಧಿಮತ್ತೆ(ಎಐ), ಕ್ಯಾಂಟಮ್ ಕಂಪ್ಯೂಟಿಂಗ್ ಕ್ಷೇತ್ರದಲ್ಲಿ ಸಾಕಷ್ಟು ಬೆಳವಣಿಗೆಯಾಗುತ್ತಿದೆ ಎಂದರು.



೧೦ದೇಶ - ೧೦,೦೦೦ ವಿದ್ಯಾರ್ಥಿಗಳು!: ೩ದಿನಗಳ ಟೆಕ್ನೋವಿಐಟಿ-೨೫ನಲ್ಲಿ ಬರೋಬ್ಬರಿ ೧೫೦ಕ್ಕೂ ಅಧಿಕ ಟೆಕ್ ಸ್ಪರ್ಧೆಗಳು, ರೋಬೋ ರೇಸ್, ರೋಬೋ ಸುಮೋ, ರೋಬೋ ಟಗ್ ಆಫ್ ವಾರ್, ರೂಜ್ ರೂಟ್ ಮತ್ತು ರೋಟರ್ ರಶ್ ಮತ್ತು ಇನ್ನೂ ಅನೇಕ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ೧೦ಲಕ್ಷಕ್ಕೂ ಅಧಿಕ ಮೊತ್ತದ ನಗದು ಬಹುಮಾನವಿರಲಿದೆ. ಇದೇ ಟೆಕ್ ಹಬ್ಬದಲ್ಲಿ ವಿದ್ಯಾರ್ಥಿಗಳು ತಮ್ಮ ಟೆಕ್ ಐಡಿಯಾಗಳನ್ನು ಪ್ರಸ್ತುತಪಡಿಸಲು ೪೦ಕ್ಕೂ ಅಧಿಕ ಭಾರತ, ಥಾಯ್‌ಲ್ಯಾಂಡ್, ಪೋಲೆಂಡ್, ಆಸ್ಟ್ರೇಲಿಯಾ, ಫಿಲಿಪೈನ್ಸ್, ಮಾಯನ್ಮಾರ್, ತೈವಾನ್ ಮತ್ತು ಉಜ್ಬೇಕಿಸ್ತಾನ್ ಸೇರಿದಂತೆ 10 ವಿದೇಶಗಳಿಂದ 10,000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಾರೆ.

ಕಾರ್ಯಕ್ರಮದಲ್ಲಿ ವಿಐಟಿ ಚೆನ್ನೈನ ಪ್ರೊ-ವೈಸ್-ಚಾನ್ಸಲರ್ ಡಾ.ಟಿ. ತ್ಯಾಗರಾಜನ್, ವಿಐಟಿ ಚೆನ್ನೈನ ನಿರ್ದೇಶಕ ಡಾ.ಕೆ.ಸತ್ಯನಾರಾಯಣನ್ ಮತ್ತು ವಿಐಟಿ ಚೆನ್ನೈನ ಹೆಚ್ಚುವರಿ ರಿಜಿಸ್ಟ್ರಾರ್ ಡಾ.ಪಿ.ಕೆ.ಮನೋಹರನ್ ಇದ್ದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ತಲ್ಲಣ, ಅವಮಾನ ಮೆಟ್ಟಿನಿಂತ ತಾರೆ....

ನವಿ ಮುಂಬೈ (ಎಎಫ್‌ಪಿ/ ಪಿಟಿಐ): ಸತತ ವೈಫಲ್ಯಗಳಿಂದ ಅಸುರಕ್ಷಿತ ಭಾವನೆ ಕಾಡುವುದು ಸಹಜ. ಕ್ರಿಕೆಟ್ ಜೀವನದಲ್ಲಿ ಇಂಥ ತಲ್ಲಣಗಳನ್ನು ಎದುರಿಸಿದವರು ಜೆಮಿಮಾ ರಾಡ್ರಿಗಸ್. ಏಕದಿನ ವಿಶ್ವಕಪ್ ಪ್ರವಾಸದಲ್ಲೂ ಅವರು ವೈಫಲ್ಯ, ಅವಮಾನಗಳಿಂದ ಉದ್ವೇಗಕ್ಕೆ ಒಳಗಾಗಿ ನಿತ್ಯವೂ ಏಕಾಂಗಿಯಾಗಿ ಕಣ್ಣೀರುಹಾಕಿದ್ದರು.

ಈ ಎಲ್ಲ ದುಗುಡಗಳ ನಡುವೆಯೇ 25 ವರ್ಷ ವಯಸ್ಸಿನ ಮುಂಬೈ ಬ್ಯಾಟರ್, ಏಳು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ತಂಡವನ್ನು ಗುರುವಾರ ಸೆಮಿಫೈನಲ್ ಪಂದ್ಯದಲ್ಲಿ ಸೋಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಭಾರತ ತಂಡ ತವರು ನೆಲದಲ್ಲಿ ಕುಸಿತದ ಆತಂಕದಲ್ಲಿದ್ದಾಗಲೇ ಅಜೇಯ ಶತಕದ (127*, 134ಎ) ಮೂಲಕ ಚೆಂದದ ಇನಿಂಗ್ಸ್ ಕಟ್ಟಿದರು. ತಂಡವನ್ನು ದಡ ಸೇರಿಸಿದರು.

ಡಿ.ವೈ.ಪಾಟೀಲ ಕ್ರೀಡಾಂಗಣದಲ್ಲಿ ಶತಕ ಬಾರಿಸಿದ ತಕ್ಷಣ ಅವರು ಸಂಭ್ರಮಿಸಲಿಲ್ಲ. ಪಂದ್ಯ ಮುಗಿದ ನಂತರ ಭಾವುಕರಾದರು. 'ಶತಕ ಹೊಡೆದಾಗ ನನ್ನ ಕೆಲಸ ಮುಗಿದಿರಲಿಲ್ಲ. ಈ ನಿರ್ಣಾಯಕ ಪಂದ್ಯದಲ್ಲಿ ತಂಡವನ್ನು ಗೆಲ್ಲಿಸಬೇಕಿತ್ತು' ಎಂದು ಪಂದ್ಯದ ನಂತರ ಪ್ರತಿಕ್ರಿಯಿಸಿದರು.

2022ರ ವಿಶ್ವಕಪ್ ತಂಡದಿಂದ ಅವರನ್ನು ಕೈಬಿಡಲಾಗಿತ್ತು. ಈ ಬಾರಿ ತಂಡಕ್ಕೆ ಆಯ್ಕೆಯಾಗಿದ್ದು ಅನುಭವದ ಕಾರಣದಿಂದ. ಆದರೆ ಮೊದಲ ನಾಲ್ಕು ಪಂದ್ಯಗಳಲ್ಲಿ (0, 32, 0 ಮತ್ತು 33) ವಿಫಲರಾದಾಗ ಇಂಗ್ಲೆಂಡ್ ವಿರುದ್ಧ ಇಂದೋರ್‌ನಲ್ಲಿ ನಡೆದ ಪಂದ್ಯಕ್ಕೆ ಅವರನ್ನು ಕೈಬಿಡಲಾಯಿತು. ನ್ಯೂಜಿಲೆಂಡ್ ವಿರುದ್ಧ ಪಂದ್ಯದಲ್ಲಿ ಅವಕಾಶ ದೊರೆತಾಗ ಮೂರನೇ ಕ್ರಮಾಂಕದಲ್ಲಿ ಅರ್ಧ ಶತಕದೊಡನೆ ಸಾಮರ್ಥ್ಯ ತೋರಿದ್ದರು.

'ತಂಡದಿಂದ ಕೈಬಿಟ್ಟಾಗ ನಮ್ಮ ಸಾಮರ್ಥ್ಯದ ಬಗ್ಗೆಯೇ ಅನುಮಾನಗಳು ಹುಟ್ಟಿಕೊಳ್ಳುತ್ತವೆ. ಟೂರ್ನಿಯುದ್ದಕ್ಕೂ ಮಾನಸಿಕ ಯಾತನೆಗೆ ಒಳಗಾಗಿದ್ದೆ. ಈ ಪ್ರವಾಸದಲ್ಲಿ ಹೆಚ್ಚೂಕಮ್ಮಿ ಪ್ರತಿದಿನವೂ ನಾನು ಅತ್ತಿದ್ದಿದೆ. ಚೆನ್ನಾಗಿ ಆಡುತ್ತಿಲ್ಲವೆಂಬ ನೋವು ನನ್ನನ್ನು ಕಾಡುತ್ತಿತ್ತು' ಎಂದು ಅವರು ಭಾವನೆಗಳನ್ನು ಹಂಚಿಕೊಂಡರು.


ಜೆಮಿಮಾ ರಾಡ್ರಿಗಸ್ ಪಿಟಿಐ ಚಿತ್ರ

'ಪಂದ್ಯ ಆರಂಭಕ್ಕೆ ಐದು ನಿಮಿಷಗಳ ಮೊದಲಷ್ಟೇ ಮೂರನೇ ಕ್ರಮಾಂಕದಲ್ಲಿ ಆಡಬೇಕೆಂದು ನನಗೆ ತಿಳಿಸಲಾಯಿತು' ಎಂದು ಹೇಳಿದ್ದಾರೆ.

ನಾಯಕಿ ಹರ್ಮನ್‌ಪ್ರೀತ್ ಕೌರ್ (89) ಜೊತೆ ಅವರು ಮೂರನೇ ವಿಕೆಟ್‌ಗೆ 167 ರನ್ ಸೇರಿಸಿದ್ದು, ಪಂದ್ಯದ ಚಿತ್ರಣವನ್ನು ಬದಲಿಸಿತು. ಪಂದ್ಯದ ಮೇಲೆ ಆಸ್ಟ್ರೇಲಿಯಾ ಹೊಂದಿದ್ದ ಹಿಡಿತವನ್ನು ಸಡಿಲಿಸಿತು.

36ನೇ ಓವರಿನಲ್ಲಿ ಹರ್ಮನ್‌ಪ್ರೀತ್ ನಿರ್ಗಮಿಸಿದ್ದರು. ಜೊತೆಗೆ ಸ್ವತಃ ಒಂದು ಜೀವದಾನ ಪಡೆದಿದ್ದರೂ, ವಿಚಲಿತರಾಗದೇ, ಮುಂಬೈನ ತೀವ್ರ ಸೆಕೆಯ ವಾತಾವರಣದಲ್ಲಿ ಅವರು ದಿಟ್ಟ ಹೋರಾಟ ನಡೆಸಿದರು.

ಅಮನ್ಜೋತ್ ಕೌರ್ ಗೆಲುವಿನ ಬೌಂಡರಿ ಸಿಡಿಸಿದ ಬಳಿಕ, ಪಿಚ್‌ನಲ್ಲಿ ಮಂಡಿಯೂರಿ ಬಾಗಿದ ಅವರು ಕಣ್ಣೀರಾದರು.

ಕ್ರೀಡಾಂಗಣದಾಚೆಗೆ ಬಂದು ತಮ್ಮಷ್ಟೇ ಭಾವುಕರಾಗಿದ್ದ ಪೋಷಕರನ್ನು ಆಲಂಗಿಸಿಕೊಂಡರು. ಜೆಮಿಮಾ ತಂದೆ ಐವನ್ ರಾಡ್ರಿಗಸ್ ಮಂಗಳೂರು ಮೂಲದವರು.

2024ರ ಅಕ್ಟೋಬರ್‌ನಲ್ಲಿ ಖಾರ್ ಜಿಮ್ಖಾನಾ ಕ್ಲಬ್ ಆವರಣವನ್ನು ಜೆಮಿಮಾ ಅವರ ತಂದೆ ಐವನ್ ಅವರು ಧರ್ಮಪ್ರಚಾರ ಸಭೆಗೆ ಬಳಸುತ್ತಿದ್ದಾರೆ ಎಂಬ ಆರೋಪ ಎದುರಾಗಿತ್ತು. ಇದರಿಂದ ಜೆಮಿಮಾ ಅವರ ಕ್ಲಬ್ ಸದಸ್ಯತ್ವವನ್ನು ರದ್ದುಗೊಳಿಸಲಾಗಿತ್ತು.

2018ರಲ್ಲಿ ಪದಾರ್ಪಣೆ ಮಾಡಿದ್ದ ಮಧ್ಯಮ ಕ್ರಮಾಂಕದ ಆಟಗಾರ್ತಿ ಜೆಮಿಮಾ, ಏಕದಿನ ಮಾದರಿಯಲ್ಲಿ 35ಕ್ಕಿಂತ ಹೆಚ್ಚಿನ ಸರಾಸರಿಯಲ್ಲಿ 1,725 ರನ್ ಪೇರಿಸಿದ್ದಾರೆ.

'ತಂಡಕ್ಕೆ ಸದಾ ಉತ್ತಮವಾಗಿ ಆಡಬೇಕೆಂಬ ತುಡಿತ ಉಳ್ಳವರು ಜೆಮಿಮಾ. ಅವರ ಮೇಲಿನ ನಂಬಿಕೆಯನ್ನು ಎಂದೂ ಕಳೆದುಕೊಂಡಿರಲಿಲ್ಲ. ಗುರುವಾರ ಅವರ ಆಟ ತುಂಬಾ ಸ್ಮರಣೀಯವಾದುದು' ಎಂದು ನಾಯಕಿ ಹರ್ಮನ್‌ಪ್ರೀತ್ ಹೇಳಿದರು. 'ವಿದೇಶಿ ಲೀಗ್‌ಗಳಲ್ಲಿ ಆಡಿದ ಅನುಭವ ಜೆಮಿಮಾಗೆ ನೆರವಾಯಿತು. ಇನಿಂಗ್ಸ್‌ಗೆ ವೇಗ ಹೆಚ್ಚಿಸುವ ಕಲೆ ಅವರಿಗೆ ಸಿದ್ಧಿಸಿದೆ' ಎಂದು ಭಾರತ ತಂಡದ ಮಾಜಿ ನಾಯಕ ಸುನಿಲ್ ಗಾವಸ್ಕರ್ ಅಭಿಪ್ರಾಯಪಟ್ಟರು.

ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತು ನ್ಯೂಜಿಲೆಂಡ್ ಬಿಟ್ಟರೆ, ಬೇರಾವುದೇ ತಂಡ ಮಹಿಳಾ ಏಕದಿನ ವಿಶ್ವಕಪ್ ಗೆದ್ದಿಲ್ಲ. ಭಾನುವಾರ ನಡೆಯುವ ಫೈನಲ್‌ನಲ್ಲಿ ಭಾರತ ಮತ್ತು ದಕ್ಷಿಣ ಆಫ್ರಿಕಾ ಮುಖಾಮುಖಿಯಾಗಲಿದ್ದು, ಯಾರೇ ಗೆದ್ದರೂ ಅದು ಆ ತಂಡಕ್ಕೆ ಮೊದಲ ಕಿರೀಟವಾಗಲಿದೆ.



ಚೆಸ್ ವಿಶ್ವಕಪ್ ಟ್ರೋಫಿಗೆ ಆನಂದ್ ಹೆಸರು

ಪಣಜಿ (ಪಿಟಿಐ): ಫಿಡೆ ವಿಶ್ವಕಪ್‌ನ ಹೊಸ ಟ್ರೋಫಿಯನ್ನು ಶುಕ್ರವಾರ ಇಲ್ಲಿ ಅನಾವರಣಗೊಳಿಸಲಾಯಿತು. ಐದು ಬಾರಿಯ ವಿಶ್ವಚಾಂಪಿಯನ್ ವಿಶ್ವನಾಥನ್ ಆನಂದ್ ಅವರಿಗೆ ಗೌರವ ಸಲ್ಲಿಸಲು ಈ ಟ್ರೋಫಿಗೆ ಅವರ ಹೆಸರಿಡಲಾಗಿದೆ.

ಫಿಡೆ ವಿಶ್ವಕಪ್‌ನ ವರ್ಣರಂಜಿತ ಉದ್ಘಾಟನಾ ಸಮಾರಂಭದಲ್ಲಿ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ, ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ಫಿಡೆ ಅಧ್ಯಕ್ಷ ಅರ್ಕಾಡಿ ದ್ವೊರಕೊವಿಚ್ ಮೊದಲಾದ ಗಣ್ಯರ ಸಮ್ಮುಖದಲ್ಲಿ ಟ್ರೋಫಿ ಅನಾವರಣ ನಡೆಯಿತು. ಮಹಿಳಾ ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್ ಅವರೂ ಹಾಜರಿದ್ದರು.

'ಫಿಡೆ ವಿಶ್ವಕಪ್ (ಓಪನ್) ವಿಜೇತ ತಂಡಕ್ಕೆ ನೀಡುವ ಟ್ರೋಫಿಗೆ, ಭಾರತದ ಮೊದಲ ಗ್ರ್ಯಾಂಡ್‌ಮಾಸ್ಟರ್ ವಿಶ್ವನಾಥನ್ ಆನಂದ್ ಹೆಸರು ಇಡಲು ಹೆಮ್ಮೆಯೆನಿಸುತ್ತದೆ' ಎಂದು ಅಖಿಲ ಭಾರತ ಚೆಸ್ ಫೆಡರೇಷನ್ ಅಧ್ಯಕ್ಷ ನಿತಿನ್ ನಾರಂಗ್ ಹೇಳಿದರು. ಟೂರ್ನಿಯು ಶನಿವಾರ ಆರಂಭವಾಗಲಿದೆ.

ರಣಜಿ ಟ್ರೋಫಿ: ಕೇರಳ ತಂಡದ ವಿರುದ್ಧ ಪಂದ್ಯ ಇಂದಿನಿಂದ

ಕರ್ನಾಟಕಕ್ಕೆ ಮೊದಲ ಜಯದ ಕನಸು


ಪ್ರಜಾವಾಣಿ ವಾರ್ತೆ

ಮಂಗಳಪುರಂ (ಕೇರಳ): ಕರ್ನಾಟಕ ರಾಜ್ಯೋತ್ಸವ ದಿನವಾದ ಶನಿವಾರ ಮಯಂಕ್ ಅಗರವಾಲ್ ಬಳಗವು ರಣಜಿ ಟ್ರೋಫಿ ಟೂರ್ನಿಯ ಮೂರನೇ ಪಂದ್ಯದಲ್ಲಿ ಋತುವಿನ ಮೊದಲ ಗೆಲುವಿನ ಕನಸಿನೊಂದಿಗೆ ಕಣಕ್ಕಿಳಿಯಲಿದೆ. ಕೇರಳ ತಂಡವನ್ನು ಎದುರಿಸಲಿದೆ.

ಬಿ ಗುಂಪಿನಲ್ಲಿ ಕರ್ನಾಟಕ ತಂಡವು ಆಡಿರುವ ಮೊದಲೆರಡು ಪಂದ್ಯಗಳೂ ಡ್ರಾ ಆಗಿದ್ದವು. ರಾಜ್‌ಕೋಟ್‌ನಲ್ಲಿ ನಡೆದಿದ್ದ ಮೊದಲ ಪಂದ್ಯದಲ್ಲಿ 4 ರನ್‌ಗಳ ಇನಿಂಗ್ಸ್ ಹಿನ್ನಡೆ ಅನುಭವಿಸಿದ್ದು ಒಂದು ಅಂಕ ಮಾತ್ರ ಪಡೆದಿತ್ತು. ಶಿವಮೊಗ್ಗದಲ್ಲಿ ಗೋವಾ ವಿರುದ್ಧ ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿದ್ದ ಆತಿಥೇಯ ತಂಡವು ಮೂರು ಪಾಯಿಂಟ್ ಪಡೆದಿತ್ತು. ಆದ್ದರಿಂದ ಮಯಂಕ್ ಬಳಗವು ಟೂರ್ನಿಯಲ್ಲಿ ಇನ್ನೂ ಜಯದ ಖಾತೆ ತೆರೆದಿಲ್ಲ.

ಅನುಭವಿ ಬ್ಯಾಟರ್ ಕರುಣ್ ನಾಯರ್ ಮತ್ತು ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಅವರಿಬ್ಬರೂ ಎರಡೂ ಪಂದ್ಯಗಳಲ್ಲಿ ತಮ್ಮ ಸಾಮರ್ಥ್ಯ ಮೆರೆದಿದ್ದಾರೆ. ಶಿವಮೊಗ್ಗದಲ್ಲಿ ಕರುಣ್ ಅಮೋಘ ಶತಕ ದಾಖಲಿಸಿದ್ದರು. ಶ್ರೇಯಸ್ ಬೌಲಿಂಗ್ ಮತ್ತು ಬ್ಯಾಟಿಂಗ್ ಎರಡರಲ್ಲೂ ಉಪಯುಕ್ತ ಕಾಣಿಕೆ ನೀಡಿದ್ದಾರೆ. ಆದರೆ ಉಳಿದ ಬ್ಯಾಟರ್ ಮತ್ತು ಬೌಲರ್‌ಗಳ ಪ್ರದರ್ಶನ ಸ್ಥಿರವಾಗಿಲ್ಲ.

ಮೊದಲ ಪಂದ್ಯದಲ್ಲಿ ಮಯಂಕ್ ಅರ್ಧಶತಕ ಹೊಡೆದಿದ್ದರು. ಅದು ಬಿಟ್ಟರೆ ದೊಡ್ಡ ಇನಿಂಗ್ಸ್ ಆಡುವಲ್ಲಿ ಅವರು ಯಶಸ್ವಿಯಾಗಿಲ್ಲ. ನಿಕಿನ್ ಜೋಸ್ ಕೂಡ ಲಯಕ್ಕೆ ಮರಳಲು ಪರದಾಡುತ್ತಿದ್ದಾರೆ. ಮಯಂಕ್ ಮತ್ತು ನಿಕಿನ್ ದೀರ್ಘ ಜೊತೆಯಾಟದ ಮೂಲಕ ಉತ್ತಮ ಆರಂಭ ನೀಡಿದರೆ ನಂತರದ ಕ್ರಮಾಂಕದ ಬ್ಯಾಟರ್‌ಗಳ ಮೇಲಿನ ಒತ್ತಡ ಕಡಿಮೆಯಾಗುತ್ತದೆ. ಏಕೆಂದರೆ, ಅನುಭವಿ ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ ಅವರು ಭಾರತ 'ಎ' ತಂಡದಲ್ಲಿ ಆಡುತ್ತಿದ್ದಾರೆ. ಇದರಿಂದಾಗಿ ಕರುಣ್ ಅವರ ಮೇಲೆ ಒತ್ತಡ ಹೆಚ್ಚಿದೆ.


ಶ್ರೇಯಸ್ ಗೋಪಾಲ್

ಯುವಪೀಳಿಗೆಯ ಬ್ಯಾಟರ್‌ಗಳಾದ ಕೆ.ಎಲ್. ಶ್ರೀಜಿತ್ ಮತ್ತು ಆರ್. ಸ್ಮರಣ್ ಅವರು ಮಧ್ಯಮ ಕ್ರಮಾಂಕಕ್ಕೆ ಬಲ ತುಂಬಲು ಲಯಕ್ಕೆ ಮರಳಬೇಕಿದೆ. ಹೋದ ವರ್ಷದ ರಣಜಿ ಋತುವಿನಲ್ಲಿ ಸ್ಮರಣ್ 'ಸ್ಮರಣೀಯ' ಆಟವಾಡಿದ್ದರು. ಅಭಿನವ್ ಮನೋಹರ್ ಕೂಡ ತಮಗೆ ಲಭಿಸಿರುವ ಅವಕಾಶವನ್ನು ಬಳಸಿಕೊಂಡರೆ ತಂಡದ ಬ್ಯಾಟಿಂಗ್ ಬಲ ಇಮ್ಮಡಿಸುವುದು ಖಚಿತ.

ಶಿವಮೊಗ್ಗದಲ್ಲಿ ಐದು ವಿಕೆಟ್ ಪಡೆದು ಮಿಂಚಿದ ವಿದ್ವತ್ ಕಾವೇರಪ್ಪ ಮಂಗಳಪುರಂ ಅಂಗಳದಲ್ಲಿಯೂ ತಮ್ಮ ಭುಜಬಲ ಮೆರೆಯುವ ನಿರೀಕ್ಷೆ ಮೂಡಿಸಿದ್ದಾರೆ. ಎಡಗೈ ವೇಗಿ ಅಭಿಲಾಷ್ ಶೆಟ್ಟಿ ಮತ್ತು ವೈಶಾಖ ವಿಜಯಕುಮಾರ್ ಅವರು ವಿದ್ವತ್ ಜೊತೆಗೆ ಹೊಣೆ ಹಂಚಿಕೊಳ್ಳಲು ಸಿದ್ಧರಾಗಿದ್ದಾರೆ. ವೇಗದ ಬೌಲಿಂಗ್ ಆಲ್‌ರೌಂಡರ್ ಯಶೋವರ್ಧನ್ ಪರಂತಾಪ್ ಸ್ಥಾನ ಪಡೆದರೆ ಸ್ಪಿನ್ ವಿಭಾಗವನ್ನು ಶ್ರೇಯಸ್ ಏಕಾಂಗಿಯಾಗಿ ಮುನ್ನಡೆಸುವ ಸಾಧ್ಯತೆ ಇದೆ. ಒಂದೊಮ್ಮೆ ಎರಡನೇ ಸ್ಪಿನ್ನರ್ ಸ್ಥಾನ ಪಡೆದರೆ ಯಶೋವರ್ಧನ್ ವಿಶ್ರಾಂತಿ ಪಡೆಯಬಹುದು.

ಕೇರಳ ತಂಡದ ಬ್ಯಾಟರ್‌ಗಳಾದ ಸಲ್ಮಾನ್ ನಜೀರ್, ಮೊಹಮ್ಮದ್ ಅಜರುದ್ದೀನ್, ಅಂಕಿತ್ ಶರ್ಮಾ ಮತ್ತು ರೋಹನ್ ಕುನ್ನುಮಾಳ್ ಅವರನ್ನು ಕಟ್ಟಿಹಾಕುವುದು ಬೌಲರ್‌ಗಳ ಮುಂದಿರುವ ಪ್ರಮುಖ ಸವಾಲು. ತಂಡದ ವಿಕೆಟ್‌ಕೀಪರ್–ಬ್ಯಾಟರ್ ಸಂಜು ಸ್ಯಾಮ್ಸನ್ ಅವರು ಆಸ್ಟ್ರೇಲಿಯಾ ಎದುರಿನ ಸರಣಿಯಲ್ಲಿ ಆಡುತ್ತಿರುವ ಭಾರತ ತಂಡದಲ್ಲಿದ್ದಾರೆ. ಆದ್ದರಿಂದ ಕೇರಳ ಬ್ಯಾಟಿಂಗ್ ಸ್ವಲ್ಪ ಮಂಕಾಗಿದೆ. ಅಲ್ಲದೇ ಈ ವರ್ಷ ಜಲಜ್ ಸಕ್ಸೆನಾ ಇಲ್ಲದ ಕಾರಣ ತಂಡದ ಬೌಲಿಂಗ್ ವಿಭಾಗವೂ ಕಠಿಣ ಸವಾಲು ಎದುರಿಸುತ್ತಿದೆ.

ಕೇರಳ ತಂಡವು ಮಹಾರಾಷ್ಟ್ರ ಮತ್ತು ಪಂಜಾಬ್ ತಂಡಗಳ ಎದುರಿನ ಪಂದ್ಯಗಳನ್ನು ಡ್ರಾ ಮಾಡಿಕೊಂಡು ಕೇವಲ ಎರಡು ಅಂಕ ಪಡೆದಿದೆ. ಅದರಿಂದಾಗಿ ಮೇಲ್ನೋಟಕ್ಕೆ ಕರ್ನಾಟಕವು ಕೇರಳಕ್ಕಿಂತ ಬಲಾಢ್ಯವಾಗಿ ಕಾಣುತ್ತಿದೆ.

ಪಂದ್ಯ ಆರಂಭ: ಬೆಳಿಗ್ಗೆ 9.30

ಪಂತ್ ಪಡೆಗೆ ಸುಬ್ರಾಯನ್ ಪೆಟ್ಟು

ಭಾರತ 'ಎ' ತಂಡದ ವಿರುದ್ಧ ದಕ್ಷಿಣ ಆಫ್ರಿಕಾ 'ಎ'ಗೆ ಮುನ್ನಡೆ

• ಗಿರೀಶ ದೊಡ್ಡಮನಿ

ಬೆಂಗಳೂರು: ಮೂರು ತಿಂಗಳ ನಂತರ ಕ್ರಿಕೆಟ್ ಕಣಕ್ಕೆ ಮರಳಿರುವ ರಿಷಭ್ ಪಂತ್ ನಾಯಕತ್ವದ ಭಾರತ 'ಎ' ತಂಡವು ಶುಕ್ರವಾರ ಅಂದುಕೊಂಡಿದ್ದು ಒಂದಾದರೆ, ಆಗಿದ್ದು ಇನ್ನೊಂದು. ಅತಿ ಆತ್ಮವಿಶ್ವಾಸ ಮತ್ತು ಎದುರಾಳಿಗಳನ್ನು ಹಗುರವಾಗಿ ಪರಿಗಣಿಸಿದ್ದು ಆತಿಥೇಯರಿಗೆ 'ತಿರುಗುಬಾಣ'ವಾಯಿತು.

ಇದರ ಫಲವಾಗಿ ದಕ್ಷಿಣ ಆಫ್ರಿಕಾ 'ಎ' ತಂಡವು ಇಲ್ಲಿ ನಡೆಯುತ್ತಿರುವ 'ಟೆಸ್ಟ್'ನ (ಚತುರ್ಥ ದಿನಗಳ ಪಂದ್ಯ) ಮೊದಲ ಇನಿಂಗ್ಸ್‌ನಲ್ಲಿ 75 ರನ್‌ಗಳ ಮುನ್ನಡೆ ಸಾಧಿಸಿತು. ಭಾರತದ ದಿಗ್ಗಜ ಸ್ಪಿನ್ನರ್ ಆರ್. ಅಶ್ವಿನ್ ಅವರ ಅಭಿಮಾನಿ ದಕ್ಷಿಣ ಆಫ್ರಿಕಾ 'ಎ' ತಂಡದ ಆಫ್‌ಸ್ಪಿನ್ನರ್ ಪ್ರೆನೆಲನ್ ಸುಬ್ರಾಯನ್ (61ಕ್ಕೆ5) ಆತಿಥೇಯ ತಂಡದ ದಿಂಡುರುಳಿಸಿದರು. 18 ವರ್ಷದ ಆಯುಷ್ ಮ್ಹಾತ್ರೆ (65;76ಎ, 4X10) ಬಿಟ್ಟರೆ, ಭಾರತ ತಂಡದ ಉಳಿದವರಿಂದ ದೊಡ್ಡ ಇನಿಂಗ್ಸ್ ಬರಲಿಲ್ಲ. ರಿಷಭ್ ಕೂಡ ಪರಿಸ್ಥಿತಿಗೆ ತಕ್ಕಂತೆ ಬ್ಯಾಟಿಂಗ್ ಮಾಡುವ ಬದಲು ಮೊದಲ ಎಸೆತದಿಂದಲೇ ಆಕ್ರಮಣಕಾರಿ ಬ್ಯಾಟಿಂಗ್ ಮಾಡಲು ಪ್ರಯತ್ನಿಸಿದರು. ಒಂದೆರಡು ಬೌಂಡರಿ ಹೊಡೆದರೂ, ಬೇಗನೆ ಪೆವಿಲಿಯನ್‌ಗೆ ಮರಳಿದರು.

ದಕ್ಷಿಣ ಆಫ್ರಿಕಾ 'ಎ' ತಂಡದ 309 ರನ್‌ಗಳ ಮೊತ್ತಕ್ಕೆ ಉತ್ತರವಾಗಿ ಪಂತ್ ಪಡೆ 58 ಓವರ್‌ಗಳಲ್ಲಿ 234 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಎರಡನೇ ಇನಿಂಗ್ಸ್ ಆರಂಭಿಸಿರುವ ಪ್ರವಾಸಿ ತಂಡವು ಎರಡನೇ ದಿನದಾಟದ ಅಂತ್ಯಕ್ಕೆ ವಿಕೆಟ್ ನಷ್ಟವಿಲ್ಲದೇ 28 ರನ್ ಗಳಿಸಿದೆ.

ಗುರುವಾರ ದಿನದಾಟದ ಮುಕ್ತಾಯಕ್ಕೆ ಪ್ರವಾಸಿ ಬಳಗವು 9 ವಿಕೆಟ್‌ಗಳಿಗೆ 299 ರನ್ ಗಳಿಸಿತ್ತು. ಶುಕ್ರವಾರ ಈ ಮೊತ್ತಕ್ಕೆ ಇನ್ನೂ 10 ರನ್ ಸೇರಿಸಿ ಆಲೌಟ್ ಆಯಿತು. ಊಟದ ವಿರಾಮಕ್ಕೆ ಸುಮಾರು ಒಂದು ಗಂಟೆ ಬಾಕಿಯಿದ್ದಾಗ ಭಾರತ ಎ ತಂಡ ಇನಿಂಗ್ಸ್ ಆರಂಭಿಸಿತು. ಆಯುಷ್ ಹಾಗೂ ಸಾಯಿ ಸುದರ್ಶನ್ (32; 94ಎ, 4X3) ಮೊದಲ ವಿಕೆಟ್ ಜೊತೆಯಾಟದಲ್ಲಿ 90 ರನ್ ಸೇರಿಸಿದರು. ಇದರಿಂದಾಗಿ ದೊಡ್ಡ ಇನಿಂಗ್ಸ್ ಕಟ್ಟುವ ವಿಶ್ವಾಸ ಮೂಡಿತ್ತು. ಆದರೆ ಸುದರ್ಶನ್ ಆಟದಲ್ಲಿ ಆತ್ಮವಿಶ್ವಾಸದ ಕೊರತೆ ಕಾಣುತ್ತಿತ್ತು.


ಭಾರತ ಎ ತಂಡದ ಆಯುಷ್ ಮ್ಹಾತ್ರೆ ಬ್ಯಾಟಿಂಗ್
ಚಿತ್ರಗಳು: ಕೃಷ್ಣ ಕುಮಾರ್ ಪಿ.ಎಸ್


ಸುಬ್ರಾಯನ್

22ನೇ ಓವರ್‌ನಲ್ಲಿ ಸುಬ್ರಾಯನ್‌ಗೆ ಆಯುಷ್ ಮೊದಲ ಬಲಿಯಾದರು. ನಂತರ ದೇವದತ್ತ ಪಡಿಕ್ಕಲ್, ಈಚೆಗೆ ಇದೇ ಕ್ರೀಡಾಂಗಣದಲ್ಲಿ ದುಲೀಪ್ ಟ್ರೋಫಿ ಪಂದ್ಯದಲ್ಲಿ ಶತಕ ಬಾರಿಸಿದ್ದ ರಜತ್ ಪಾಟೀದಾರ್ (19 ರನ್), ತನುಷ್ ಕೋಟ್ಯಾನ್ ಹಾಗೂ ಖಲೀಲ್ ಅಹಮದ್ ಅವರ ವಿಕೆಟ್‌ಗಳೂ ಸುಬ್ರಾಯನ್ ಪಾಲಾದವು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ ಎ: 91.2 ಓವರ್‌ಗಳಲ್ಲಿ 309. ಭಾರತ ಎ: 58 ಓವರ್‌ಗಳಲ್ಲಿ 234 (ಸಾಯಿ ಸುದರ್ಶನ್ 32, ಆಯುಷ್ ಮ್ಹಾತ್ರೆ 65, ರಜತ್ ಪಾಟೀದಾರ್ 19, ರಿಷಭ್ ಪಂತ್ 17, ಆಯುಷ್ ಬಡೋನಿ 38, ತನುಷ್ ಕೋಟ್ಯಾನ್ 13, ಪ್ರೆನೆಲನ್ ಸುಬ್ರಾಯನ್ 61ಕ್ಕೆ5, ಲುಥೊ ಸಿಪಾಮ್ಲಾ 35ಕ್ಕೆ2) ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ ಎ: 11.5 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 28 (ಜೊರ್ಡಾನ್ ಹರ್ಮನ್ ಬ್ಯಾಟಿಂಗ್ 12, ಲೆಸೆಗೊ ಸೆನೊಕ್ವಾನೆ ಬ್ಯಾಟಿಂಗ್ 9)

ಭಾರತೀಯ ಹಾಕಿ ಕ್ರೀಡೆಯ 'ಗೋಡೆ' ಮ್ಯಾನ್ಯುವೆಲ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಭಾರತದ ಹಾಕಿ ಕ್ರೀಡೆಯ 'ಗೋಡೆ'ಯಂತಹ ಗೋಲ್‌ಕೀಪರ್‌ಗಳಲ್ಲಿ ಮ್ಯಾನ್ಯುವೆಲ್ ಫ್ರೆಡರಿಕ್ ಅವರೂ ಒಬ್ಬರು. ಅವರು 1972ರಲ್ಲಿ ನಡೆದಿದ್ದ ಮ್ಯೂನಿಕ್ ಒಲಿಂಪಿಕ್ ಕೂಟದಲ್ಲಿ ಕಂಚಿನ ಪದಕ ಜಯಿಸಿದ್ದ ಭಾರತ ತಂಡದ ಗೋಲ್‌ಕೀಪರ್ ಆಗಿದ್ದವರು. ಭಾರತದ ಹಾಕಿ ಕ್ರೀಡೆಗೆ ಮಹತ್ವದ ಕಾಣಿಕೆಗಳನ್ನು ನೀಡಿದ ಮ್ಯಾನ್ಯುವೆಲ್ ಇನ್ನು ನೆನಪು ಮಾತ್ರ.

ವೃಷಣದ ಕ್ಯಾನ್ಸರ್‌ನಿಂದ ಬಳಲಿದ್ದ ಮ್ಯಾನ್ಯುವೆಲ್ (78) ಶುಕ್ರವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರಿಯರಿದ್ದಾರೆ.

'ತಂದೆಯವರ ಅಂತ್ಯಸಂಸ್ಕಾರವು ಭಾನುವಾರ ಮಧ್ಯಾಹ್ನ 3 ಗಂಟೆಗೆ ಹೊಸೂರು ರಸ್ತೆಯ ಇಂಡಿಯನ್ ಕ್ರಿಶ್ಚಿಯನ್ ಸಿಮೆಟ್ರಿಯಲ್ಲಿ ನಡೆಯಲಿದೆ' ಎಂದು ಮ್ಯಾನ್ಯುವೆಲ್ ಅವರ ಮಗಳು ಫ್ರೆಷಿನಾ ತಿಳಿಸಿದ್ದಾರೆ.

ಕೇರಳದ ಕಣ್ಣೂರು ಜಿಲ್ಲೆಯಲ್ಲಿ (20 ಅಕ್ಟೋಬರ್ 1947) ಮ್ಯಾನ್ಯುವೆಲ್ ಜನಿಸಿದ್ದರು. ಆರ್ಮಿ ಸರ್ವಿಸ್ ಕಾಪ್ಸ್ (ಜಲಂಧರ್) ಮತ್ತು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಬೆಂಗಳೂರು) ತಂಡಗಳ ಪರ ಆಡಿದ್ದರು. 1960 ಮತ್ತು 70ರ ದಶಕದಲ್ಲಿ ಎದುರಾಳಿ ತಂಡದ ಆಟಗಾರರಿಗೆ ಸಿಂಹಸ್ವಪ್ನವಾಗಿದ್ದ ಗೋಲ್‌ಕೀಪರ್ ಅವರಾಗಿದ್ದರು.

ಒಲಿಂಪಿಕ್ಸ್ ಪದಕ ಜಯಿಸಿದ ಕೇರಳದ ಮೊದಲ ಕ್ರೀಡಾಪಟುವೆಂಬ ಹೆಗ್ಗಳಿಕೆ ಅವರದ್ದು. ಕೇರಳದಲ್ಲಿ ಹಾಕಿ ಕ್ರೀಡೆಯನ್ನು ಆಡುವವರು ತೀರಾ ಕಡಿಮೆಯಿದ್ದ ಕಾಲವದು. ಆದರೂ ಮ್ಯಾನ್ಯುವೆಲ್ ಅವರಲ್ಲಿ ಹಾಕಿ ಆಟದ ಕುರಿತು ಆಸಕ್ತಿ ಗರಿಗೆದರಿತ್ತು. ಜಲಂಧರ್‌ನಲ್ಲಿ ಸೇನೆ ಸೇರಿದಾಗ ಅವರ ಕನಸು ನನಸಾಯಿತು. ಅವರ ಕೌಶಲಗಳಿಗೆ ಅಲ್ಲಿದ್ದವರೆಲ್ಲರೂ ಮನಸೋತರು. ಅಲ್ಲಿಂದ ಮುಂದೆ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾದರು. 70ರ ದಶಕದಲ್ಲಿ ಎಚ್‌ಎಎಲ್ ಸೇರ್ಪಡೆಯಾದರು. ನಿವೃತ್ತಿಯ ನಂತರವೂ ಅವರು ಹಾಕಿ ಕ್ರೀಡೆಯೊಂದಿಗಿನ ನಂಟು ಉಳಿಸಿಕೊಂಡಿದ್ದರು.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Flat

Abbigere

2 BHK Flat Semi Furnished Vastu Compliant for Sale at Abbigere 65 Lakhs contact 9591867762

Kanakapura Road

BRAND NEW 3 BHK FLAT FOR SALE. NEAR METRO STATION, KANAKAPURA ROAD. 1.20 CRORES: 9663676464

3BHK APARTMENT for`Sale 40x60, 2400.Sqft. Individual Floor near Vajarahalli and Raghuvanahalli Metro Station 1`KM. Call 9740148870 9341050991.

Basavanagudi

FOR SALE OR RENT 2BHK COMFORT FLAT ALL AMENITIES CLEAR TITTLE READY OCPN: 9886019240/ 08026603673

Sites

Anjanapura

ANJANAPURA BDA Site For Sale, 1ST Block 20x30, W/F Price 65 Lakhs Negotioble 9740150364/8884707773

SITE FOR Sale Anjanapura 10 Block BDA 50X80 - 4000 sqft South Facing Contact 9844274211

Banashankari

BANASHANKARI 6TH Stage 10th Block 40x60 West Facing. And 30x40 West Facing. More Details Call: 9148914809, 9993959099.

BDA SITE for Sale. B.S.K. 5th stage 30x40 East face, near N.P.S. School. Contact: 9590366791.

Chamarajpet

30X40 WEST facing Residential Site 20000/= Psft. 110x77.5 Commercial Corner Site 22500/= Psft. Negotiable. 9886044313.

Electronic City

KHB Sites in Surya City Near Jigani
STRRA & BMRDA APPROVED PLOTS
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

Hebbal

HEBBAL 30X35 House Sale, Ground 1 BHK, Two Carparking, 1st 2 BHK, 2nd 2 BHK 9845623970/ 9739400838

ಎಮ್ & ಎನ್ ಇನ್ಫ್ರಾ — M & N INFRHA

Everything you need is now just a short drive away...

HOME FOR YOU & YOUR FAMILY

Project at: Magadi Road Tavarekere-Big banyan Tree Road (100 feet proposal road)



Handpicked Amenities & Facilities to complement the exclusive lifestyle.
Under Ground Cable (Electrical) | Over Head Tank Water Supply | All Round Compound 30 feet Road with Foot Path | Park with Green Environment | LED Street Lights | Water, Sanitary, & Electrical Connections for individual units | Units Ready for Registration | Located on Proposed 100 feet road.

ENQUIRE NOW BOOK YOUR PLOT!

M & N INFRHA #10, Vimala Enclave, Chowlugalli, Cubbonpet, Bangalore – 560002.

DEVELOPED & MARKETED BY M. V. MARKETING, Office #144, Bhavanarushi Mahasamsthan Road, 3rd Block, SMV Layout, Bangalore – 560110.

PROJECT ADDRESS
M & N INFRHA Survey. No. 144/16A, 146/1, Tavarekere Village, Bangalore South Taluk.

SITE LOCATION

CONTACT : +91 97419 29567 | +91 9743012555 | Email - muralidharjs@gmail.com

---

CONSTRUCTION MATERIALS FOR SALE

Large quantity of used construction materials in good conditions. Such as Shuttering Plate, Jacks, Spans, Cuplock scafolding & Machinery such as 1Bag, 2, 3 & 4 Bag Mixers, Mini Batching plant and D.G.Sets of Capacity 40 KVA, 82.50 KVA & 160 KVA. Tractor Mounted 16 KVA D.G. set, passenger hoist 40 mts height for sale.

Contact:
6360605636 / 8431164733

WANTED COMMERCIAL BUILDING FOR RENT

1. MINIMUM BUA 20,000 SQFT AND ABOVE
2. MINIMUM LIFT SIZE (3X7)
3. NO PART RENTAL
4. WITH OR WITHOUT OC/CC (A KHATHA AS PER CDP)
5. PERMANENT BASIC AMENITIES

NOTE: 1. ONLY UNDER GREATER BANGALORE AUTHORITY LIMITS ON MAIN ROADS ONLY
2. LONG TERM AGREEMENT
3. REAL ESTATE BROKERS EXCUSE

CONTACT: +91 8762493355

REALTY INVESTMENT EXPO — 18th EDITION

WALK THE PATH TO YOUR DREAM HOME

Find Your Perfect Property at the Ultimate Property Expo in Bengaluru

PLATINUM SPONSOR: Assetz
GOLD SPONSOR: NVG LIFESTYLE

100+ RERA APPROVED PROJECTS
25+ REPUTED DEVELOPERS
CHOOSE FROM 1000+ APARTMENTS, VILLAS AND PLOTS

FREE ENTRY

APARTMENTS VILLAS PLOTS

OPENS TODAY
1ST & 2ND NOVEMBER

ZUARI INFRAWORLD — EXCLUSIVE MYSORE PROPERTIES

TIME: 11AM TO 7PM
VENUE: HILTON HOTEL & CONVENTION CENTRE, MANYATA TECH PARK, HEBBAL

BRIGADE | Goyal & Co. Hariyana Group | CASAGRAND | ARATT | DeFINER | SMR HOLDINGS | DS MAX
MSR Infraa | ELEGANT Builders & Developers | SB URBAN SCAPES | CASATRANCE | DSO JAKS | ishtaa | SAMMY'S DREAMLAND
JADE INFRA | DRK | VMAKS | NS BROTHERS SLV | KRISHI VISHWA HOUSING CO-OPERATIVE SOCIETY LTD

CONTACT US: +91 99864 42255

BANKING PARTNER: Union Bank of India — A Government of India Undertaking

---

(Byrathi)

BYRATHI KANAKASHREE Housing Co-Operative Society, BDA Katha 30x40 N/F Site Sale Near Narayan PU College 11,400/- PSft: 9986999802

J P Nagar

"J.P.NAGAR, SRINIDHI LAYOUT 30x51 Residential Site, East Facing, BBMP A Katha, Full White. Owner: 9845088449/ 9845249799"

Kengeri

"30X40 BDA W/F" SITE SALE, Kengeri Satellite Town, SEMI COMMERCIAL/ RESIDENTIAL, near Surana College. 9886634578

Multiple Locations

SELLING/ BUYING HOUSES, SITES:30x40 40x60 FLATS, COMMERCIAL, Jayanagar, JP.Nagar BASAVANAGUDI Kanakapura Road, BANASHANKARI, BTM HSR. CALL 7760019494

Nagarabhavi

40X60 EAST FACING BDA APPROVED SITE, RHCS LAYOUT 2nd Stage OPPOSITE PARK 13000/- PSFT: 9845488488

Outer Ring Road

ORR(SUMANAHALLI-LAGGERE BRIDGE) direct facing Corner Commercial Site 2,800 Sft. in Chowdeshwarinagar "A" Khata Call: 9980555558

Seshadripuram

SITE SALE, 40'x50' West Facing, Seshadripuram Platform Road, Jawahar Street, Behind Swathi Hotel and Apollo Hospital: 9343368313/ 9844009086

Tumkur



Shimoga Tumkur Ring Road coming 500 meter away

TUDA APPROVED A Khata sites in Hirehalli Tumkur ,1.9 kms B'lore-Tumkur Highway , Rs 2,100/- sqft call- 7899028881 / 9964705451

Vijayanagar

1.40X60 SITE for sale North with old House BCC Layout, Vijayanagar, 5 Minutes to Metro. 2. 50x80 West, 4th Blk, Viswesraya Layout. Contact: 9449003331.

SITE FOR SALE: 60X90 WEST FACING WOC ROAD RPC LAYOUT ONLY GENUINE BUYERS CONTACT: 6363250343

Vishweshwariah Layout

BDA SITE SALE VISHWESHWARAIAH LAYOUT 1ST BLOCK 30X40 WEST 12500 NEGOTIABLE. 40X60 WEST 11500 NEGOTIABLE. CONTACT: 8892901567

DIRECT OWNER Commercial, Vishweshwaraiah Layout, 30x40, 40x60 Near RTO Office, Very Good Location: 9620696913/ 9980781399

BUYING/ SELLING 20x30, 30x40, 40x60, 50x80 BDA Sites VISHWESHWARAIAH LAYOUT, KEMPEGOWDA LAYOUT. Contact: 9035470616

FOR SALE

BDA SITE No. 90, BTM 1 st stage, North facing 40 X 60, 60ft. road opp: Income tax tribunal, Adjacent to JALA BHAVAN, Approx 100 mtr to Bannerghatta Main Road.

Genuine Buyers Call: Muralidhar
9845301599

"AVAILABLE 40X60, 20x30 BDA Sites close to 100 feet Road Vishveshwaraiah Layout, Good Location. 9379776189"

VISHWESHWARAIAH LAYOUT 6th Block, BDA 30x40, WF, Near KLE Law College. Direct Owner Meeting: 9980860138

***BUYING/SELLING* 20X30** 30x40,40x60,50X80 BDA SITES VISHWESHWARAIAH KEMPEGOWDA LAYOUT. Contact:SREENIDHI PROPERTY JUNCTION. 9742681666

'DIRECT OWNER 'No.1628, 30x40 NF BDA Site Sale, VISHVESWARAIAHLAYOUT BLOCK-4, Contact: 8496030007/ 8310885235

Mysore

MYSORE DISTRICT ILAVALA HOBLI 30x40 Site Sale, 18 Lakhs, E-Katha "Sun City Homes" Excellent Property Buyers Contact: 9844603127

House

Mysore

GERMAN DESIGN Studio Apartments to be developed on Mysore Express Highway near Mysore requires Builders for JV Contact Land Owner. 9741019028

Vishweshwariah Layout

5BHK TRIPLEX House 30x40 BDA For Sale Vishweshwaraiah layout 3rd Block Owner only: 9342874483, 9844333109

Yelahanka

HOUSE FOR Sale. Triplex 36x60 N/F. Judicial Layout, near GKVK, Bangalore-65. Contact:- 9845042454.

MORE Classifieds IN MAIN ISSUE

Nagarabhavi

20X40 3BHK Duplex House Annapoorneshwari Nagar NF Nagarbhavi Near BDA Complex @1.75Cr: 9980409820

Thyagaraja Nagar

PROPERTY SALE. 48x28' 4 units G + 1 CarParking. Rs. 45000/- Rental income. 24,000 sqft. Negotiable. No Brokers. 9945348535.

PROPERTY SALE. 48x28' 4 units G + 1 CarParking. Rs. 45000/- Rental income. 24,000 sqft. Negotiable. No Brokers. 9945348535.

Rajarajeshwari Nagar

SALE- TWO Independent duplex 3 BHK House with car parking. Serious Buyers Only Contact:- 8762018445.

Agricultural Land

General

FOR SALE HAROHALLI TOWN 18 GUNTAS AGRICULTURE STATUS, YELLOW ZONE, WITH 30 COCONUT TREES, BOREWELL WITH GOOD WATER, 150 METERS FROM HAROHALLI- KANAKAPURA BYPASS AND WITHIN TOWN, EXCELLENT PROPERTY, VICTORY PROPERTIES, CONTACT: 7411692219/ 8618576685/ 9482303339/ 9686894972, www.victoryproperties.in, info@victoryproperties.in

South

FOR SALE, AGRICULTURE FARM PLOTS OF 5.5 GUNTAS, AT PRIME LOCATION NELGULLI/ SOMANAHALLI, BANGALORE SOUTH, 2.5 KMS FROM BANGALORE-KANAKAPURA NATIONAL HIGHWAY, WITHIN GREATER BANGALORE AUTHORITY, 28 KMS FROM BANGALORE-560082 PIN CODE, CONTACT VICTORY PROPERTIES. 7411692219/ 8618576685/ 9482303339/ 9686894972. www.victoryproperties.in, info@victoryproperties.in

Farm House/ Land/ Resorts

South

AGRICULTURE FARM VILLA PLOTS 6 GUNTAS IN GREATER BANGALORE AUTHORITY LIMITS, BANGALORE SOUTH TALUK, NELAGULI VILLAGE, UTTARAHALLI HOBLI, 32 KMS FROM VIDHANA SOUDHA, ATTACHED TO ACTOR DHRUVA SARJA FARM HOUSE, 1.5 KMS FROM BANGALORE- KANAKAPURA- DINDIGUL NATIONAL HIGHWAY, 3 KMS FROM SOMNHALLI TOLL, CONTACT VICTORY PROPERTIES CONTACT: 7411692219/ 8618576685/ 9482303339/ 9686894972. www.victoryproperties.in, info@victoryproperties.in

Commercial Building

J C Road

2000 SQFT, Commercial property for Sale. Near Mantri Appartment, Lalbagh.Contact : 9741591591

Industrial & Factory

Intl Airport Road

SALE MULTIPLE Industrial properties from Rs.299 to 359/- sft in Hindupur APIIC, Red Zone, Clear Titles with multiple roads, measuring from half acre to 10 acres. Call Verna Developers, Barton Centre, MG Road. 9916310226.

Out-Station

INDUSTRIAL LAND FOR SALE

10/5 - acre Corner Plot Located in APIIC Industrial Area Gollapuram Village, Hindupur, Andhra Pradesh

Enquiries:
948 083 4451
944 828 6981

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Kanakapura Road

WANTED SITE 30X40 Any Facing Anjanapura, BCMC, Narayan Nagar, BCCHS, Direct Registration, Agents Excuse. Call 9663454878

House

Banashankari

BANASHANKARI 6TH Stage 1st`Block Brand New Duplex House For Sale 20x30 N/E Corner Fully furnished. Rs.2cr.Nego SHIVU: 98800-04149

RENTAL PROPERTIES

Accommodation Available

Commercial

RENT PREMIUM 3600sqft furnished office at 4th Flr Vishnupriya Towers Beside Srirampura Metro Station. 6 Cabins, 45 Workstations,Lift, Pantry, Parking. Contact: 9900029200

Bareshell 5000 Sqft Office Space For Rent
available in 2nd Floor, in Majestic Terraces Building in Electronic city Phase-1. Contact : 9844023523

BTM- SILK Board (Near Metro Station) OFFICE SPACE, SHOWROOM, GYM 5400 sft 1st Floor Rent: 100/ sft. 9945689847.

COMMERCIAL PROPERTY RENT Grnd flr, 2750 sqft Beml layout 3rd stage Rajarajeshwari nagar Bangalore 9945479966

Flats

FOR RENT 3 Bedroom Apartment JP Nagar 7th Phase
1750 Sqft Flat Newly Furnished in Majestic Fortune Apartment in JP Nagar, 7th Phase Call : 9341228681

BOUTIQUE FULLY furnished 2 Bhk Flat (1.10L) Studio (50k) in upmarket area, immediate occupancy for bachelor/s. Placify Ph: 9844051181.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business to Business

Business

PROPERTY COLLATERALS/ Joint Ventures/ Takeovers/ Training/ New Ideas/ Finance for Big Projects. Dr. Swamy Naidu, Vamshadhara Projects & Services:- 9342247637.

PUBLIC NOTICE

PUBLIC NOTICE

Notice is hereby given that the Certificate(s) for Larsen & Toubro Limited bearing Equity Share certificates No (s) 231285, 352390, 449033, 1367149 and Distinctive Nos. 142132042 to 142132091 (50 Shares), 577215477 to 577215576 (100 Shares, 618955564 to 618955663 (100 Shares), 1397209218 to 1397209367 (150 Shares) under the folio No. 07579110 of Larsen & Toubro Limited standing in the name (s) of B.R. Vishwanath have been **lost or mislaid** and the undersigned has applied to the Company to issue duplicate Certificate (s) for the said shares. Any person who has any claim in respect of the said shares should write to our Registrar, KFin Technologies Limited. Selenium, Tower B, Plot 31-32, Gachibowli Financial District, Hyderabad-500032 within one month from this date else the company will proceed to issue duplicate Certificate (s).

Name(s) of Shareholder(s)
B.R. VISHWANATH
No.5, 4th Cross, RK Gardens RMV 2nd Stage, Bangalore-560054. Mob: 9845027558
Dated: 01.11.2025, Bangalore

---

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಡಿಎಸ್-ಮ್ಯಾಕ್ಸ್ ಪ್ರಾಪರ್ಟೀಸ್

JOY OF LIVING

DS MAX®



LUXURIOUS 2, 3 & 4-BHK APARTMENTS

Where every home is a perfect blend of Ambience, Aesthetic, and Assurance

₹60 L - 2 Cr*

Visit our website or talk to our advisors for the complete portfolio.

www.dsmaxproperties.com

+91 8880 758 758



ನಾಡಿನ ಸಮಸ್ತ ಜನತೆಗೆ ಡಿಎಸ್-ಮ್ಯಾಕ್ಸ್ ವತಿಯಿಂದ
ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು!

2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1250/304/PR/251024/007179 G+14 WHITEFIELD 10 MINS HOPEFARM METRO ₹ 72.34 L - 1.30 Cr*	PRM/KA/RERA/1250/301/PR/251024/007178 G+14 YELAHANKA 5 MINS. RAJANUKUNTE ₹ 49.36 - 88.53 Lakhs*	PRM/KA/RERA/1251/308/PR/160824/006972 G+4 ELECTRONIC CITY 10 MINS. HOSA ROAD METRO ₹ 67.92 L - 1.34 Cr*	PRM/KA/RERA/1251/310/PR/210324/006724 G+14 SILKBOARD NEAR SINGASANDRA METRO ₹ 83.97 L - 1.31 Cr*	PRM/KA/RERA/1251/472/PR/250225/007524 G+14 AIRPORT ROAD NAVARATHNA AGRAHARA ₹ 72.02 L - 1.21 Cr*	PRM/KA/RERA/1251/308/PR/160824/006973 G+14 BANNERGHATTA RD NEAR KOPPA GATE ₹ 56.64 - 82.18 Lakhs*
PRM/KA/RERA/1251/310/PR/150223/005721 G+14 MYSORE ROAD NEAR CHALLAGHATTA METRO ₹ 61.76 - 87.47 Lakhs*	PRM/KA/RERA/1251/309/PR/060923/006244 G+9 TUMKUR ROAD 10 MINS. MADAVARA METRO ₹ 71.43 L- 1.10 Cr*	PRM/KA/RERA/1251/308/PR/280222/004739 G+3 CHANDAPURA 10 MINS. ELECTRONIC CITY ₹ 60.30 - 98.70 Lakhs*	PRM/KA/RERA/1251/308/PR/290122/004660 G+4 SARJAPURA SARJAPUR - ATTIBELE RD ₹ 63.60 - 83.25 Lakhs*	PRM/KA/RERA/1250/304/PR/150224/006622 G+14 WHITEFIELD ON SOUKYA ROAD ₹ 60.84 L - 1.06 Cr*	PRM/KA/RERA/1251/310/PR/151223/006489 G+3 BANASHANKARI OPP. NPS SCHOOL (3 & 4-BHK) ₹ 1.34 - 2.17 Cr*

ಡಿಎಸ್ ಮ್ಯಾಕ್ಸ್

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

*T & C Apply

CREDAI BENGALURU

FACILITY MANAGEMENT SERVICES



We Manage and Maintain Your Apartment

9164 022 000

INTERIORS



We design and style your home.

9164 056 000

REFER A DS-MAX HOME



Refer a buyer to earn big

9164 043 000

REFER A LAND TO DS-MAX



Offer a Land, Get a Home.

8880 463 463

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331



